# ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962

(ಕರ್ನಾಟಕ ರಾಜ್ಯಪತ್ರ, ಗುರುವಾರ ಜೂನ್ 15, 2006, ಭಾಗ – IVಎ ಯಲ್ಲಿ 910 ರಿಂದ 1000ದ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ-I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ-II
### ಮಂಡಲಿಯ ಸ್ಥಾಪನೆ

3. ಮಂಡಲಿಯ ರಚನೆ
4. ಅಧ್ಯಕ್ಷನ ಗೈರುಹಾಜರಿ ರಜೆ
5. ಮಂಡಲಿಯಲ್ಲಿ ನೇಮಕಾತಿಗೆ ಅನರ್ಹತೆ
6. ಪದಾವಧಿ ಮತ್ತು ಸೇವಾ ಷರತ್ತುಗಳು
7. ಸದಸ್ಯರ ಸ್ಥಾನ ತೆರವಾಗುವುದು
8. ಖಾಲಿಸ್ಥಾನವನ್ನು ಸಾಧ್ಯವಾದಷ್ಟು ಬೇಗನೆ ಭರ್ತಿಮಾಡುವುದು
9. ವ್ಯವಹರಣೆಗಳು ಸರಿಯೆಂದು ಮತ್ತು ಸಿಂಧುವಾಗಿರುವುದಾಗಿ ಪೂರ್ವಭಾವನೆ ಮಾಡುವುದು
10. ಗೃಹನಿರ್ಮಾಣ ಆಯುಕ್ತರು, ಮುಖ್ಯ ಇಂಜಿನಿಯರ್ ಮತ್ತು ಕಾರ್ಯದರ್ಶಿಯ ನೇಮಕಾತಿ ಮತ್ತು ಅವರ ಅಧಿಕಾರಗಳು

10ಎ. ಮಂಡಲಿಯ ಅಧಿಕಾರಿಗಳು ಮತ್ತು ನೌಕರರು

11. ಎಲ್ಲಾ ಅಧಿಕಾರಿಗಳ ಮತ್ತು ನೌಕರರ ಸಾಮಾನ್ಯ ಅನರ್ಹತೆ
12. ಸಮಿತಿಗಳ ನೇಮಕಾತಿ
13. ಮಂಡಲಿಯ ಸಭೆಗಳು
14. ಕರಾರುಗಳನ್ನು ಮಾಡಿಕೊಳ್ಳುವ ಅಧಿಕಾರ
15. ಕರಾರುಗಳನ್ನು ಕಾರ್ಯಗತಗೊಳಿಸುವುದು
16. ಪ್ರತ್ಯಾಯೋಜನೆ

### ಅಧ್ಯಾಯ-III
### ಗೃಹನಿರ್ಮಾಣ ಯೋಜನೆಗಳು ಮತ್ತು ಭೂ ಅಭಿವೃದ್ಧಿ ಯೋಜನೆಗಳು

17. ಗೃಹನಿರ್ಮಾಣ ಯೋಜನೆಗಳನ್ನು ಮತ್ತು ಭೂ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವುದು ಮಂಡಲಿಯ ಕರ್ತವ್ಯವಾಗಿರುವುದು
18. ಗೃಹನಿರ್ಮಾಣ ಯೋಜನೆಗಳ ಮೂಲಕ ವ್ಯವಸ್ಥೆ ಮಾಡಬೇಕಾದ ವಿಷಯ

18ಎ. ಭೂ ಅಭಿವೃದ್ಧಿ ಯೋಜನೆಗಳ ಮೂಲಕ ವ್ಯವಸ್ಥೆಗೊಳಿಸಬೇಕಾದ ವಿಷಯಗಳು

19. ವಾರ್ಷಿಕ ಗೃಹನಿರ್ಮಾಣ ಕಾರ್ಯಕ್ರಮ ಮತ್ತು ಭೂ ಅಭಿವೃದ್ಧಿ ಕಾರ್ಯಕ್ರಮ, ಬಜೆಟ್ಟು ಮತ್ತು ಸಿಬ್ಬಂದಿ ವಿವರ ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು
20. ಕಾರ್ಯಕ್ರಮ, ಬಜೆಟ್ಟು ಮತ್ತು ಸಿಬ್ಬಂದಿ ವಿವರ ಇವುಗಳಿಗೆ ಮಂಜೂರಾತಿ
21. ಮಂಜೂರು ಮಾಡಲಾದ ಕಾರ್ಯಕ್ರಮದ ಪ್ರಕಟಣೆ
22. ಪೂರಕ ಕಾರ್ಯಕ್ರಮ ಮತ್ತು ಬಜೆಟ್
23. ಕಾರ್ಯಕ್ರಮ ಮಂಜೂರಾದ ತರುವಾಯ ಮಂಡಲಿಯು ಅದನ್ನು ಮಾರ್ಪಾಟುಗೊಳಿಸುವುದು
24. ಮಂಜೂರಾದ ಗೃಹನಿರ್ಮಾಣ ಯೋಜನೆಗಳನ್ನು ಮತ್ತು ಭೂ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು
25. ಗೃಹ ನಿರ್ಮಾಣ ಯೋಜನೆಯ ಅಥವಾ ಭೂ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ನಿಗಮದಲ್ಲಿ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಅಥವಾ ಮಂಡಲ ಪಂಚಾಯತಿಯಲ್ಲಿ ನಿಹಿತವಾದ ಜಮೀನನ್ನು ಮಂಡಲಿಗೆ ವರ್ಗಾಯಿಸುವುದು
26. ಮಂಡಲಿಯಲ್ಲಿ ನಿಹಿತವಾಗಿರುವ ಜಮೀನಿಗೆ ಸಂಬಂಧಪಟ್ಟಂತೆ ನಷ್ಟ ಪರಿಹಾರ
27. ಮಂಡಲಿಯಲ್ಲಿ ನಿಹಿತವಾಗಿರುವ ಸಾರ್ವಜನಿಕ ಬೀದಿಯನ್ನು ತಿರುಗಿಸಲು ಅಥವಾ ಮುಚ್ಚಲು ಅದರ ಅಧಿಕಾರ
28. 26ನೇ ಪ್ರಕರಣದ ಅಥವಾ 27ನೇ ಪ್ರಕರಣದ ಮೇರೆಗಿನ ವಿವಾದದ ಸಂದರ್ಭದಲ್ಲಿ ನ್ಯಾಯಾಧಿಕರಣಕ್ಕೆ ಉಲ್ಲೇಖ

29. ಗೃಹ ನಿರ್ಮಾಣ ಯೋಜನೆಯ ಅಥವಾ ಭೂ ಅಭಿವೃದ್ಧಿ ಯೋಜನೆಯ ಮೇರೆಗೆ ಮಂಡಲಿಯು ವಿನ್ಯಾಸಗೊಳಿಸಿದ ಅಥವಾ ವ್ಯತ್ಯಾಸಗೊಳಿಸಿದ ಬೀದಿಗಳು ಮತ್ತು ಒದಗಿಸಿದ ಬಹಿರಂಗ ಸ್ಥಳವು ಪೌರ ನಿಗಮದಲ್ಲಿ, ಪುರಸಭಾ ಪರಿಷತ್ತಿನಲ್ಲಿ, ಪುರಸಭಾ ಸಮಿತಿಯಲ್ಲಿ ಅಥವಾ ಇತರ ಪುರಸಭಾ ನಿಕಾಯದಲ್ಲಿ, [xxx] ಪಟ್ಟಣ ಮಂಡಲಿಯಲ್ಲಿ, ನೈರ್ಮಲ್ಯ ಮಂಡಲಿಯಲ್ಲಿ ಅಥವಾ ಮಂಡಲ ಪಂಚಾಯಿತಿಯಲ್ಲಿ ನಿಹಿತವಾಗುವುದು
30. ಮಂಡಲಿಯ ಇತರ ಕರ್ತವ್ಯಗಳು
31. ಪ್ಲಾಟುಗಳ ಪುನರ್‌ರಚನೆ
32. ಸರ್ಕಾರವು ಮಂಡಲಿಗೆ ವಹಿಸಿಕೊಟ್ಟ ಯೋಜನೆಗಳು, ಇತ್ಯಾದಿ
32ಎ. ಮಂಡಲಿಯು ಮತ್ತು ಗೃಹನಿರ್ಮಾಣ ಆಯುಕ್ತರು 1964 ರ ಕರ್ನಾಟಕ ಅಧಿನಿಯಮ ಸಂಖ್ಯೆ 22, 1977 ರ ಅಧಿನಿಯಮ ಸಂಖ್ಯೆ 14 ಮತ್ತು 1985 ರ ಅಧಿನಿಯಮ ಸಂಖ್ಯೆ 20ರ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು.

## ಅಧ್ಯಾಯ-IV
## ಜಮೀನಿನ ಆರ್ಜನೆ ಮತ್ತು ವಿಲೆ

33. ಒಪ್ಪಂದದ ಮೂಲಕ ಖರೀದಿಸಲು ಅಥವಾ ಗುತ್ತಿಗೆಗೆ ತೆಗೆದುಕೊಳ್ಳಲು ಅಧಿಕಾರ
34. ಅಭಿವೃದ್ಧಿ ಚಾರ್ಜುಗಳು
35. ಅಭಿವೃದ್ಧಿ ಚಾರ್ಜುಗಳಿಗೆ ಹೊಣೆಗಾರರಾದ ವ್ಯಕ್ತಿಗಳಿಗೆ ನೋಟೀಸು
36. ಅಭಿವೃದ್ಧಿ ಚಾರ್ಜುಗಳ ಸಂದಾಯದ ಬಗ್ಗೆ ಒಪ್ಪಂದ
37. ಅಭಿವೃದ್ಧಿ ಚಾರ್ಜುಗಳ ವಸೂಲಿ
38. ಜಮೀನಿನ ವಿಲೆಯ ಅಧಿಕಾರ
39. ಪ್ಲಾಟುಗಳ ಪುನರ್ ರಚನೆಗೆ ಸಂಬಂಧಿಸಿದ ವಿವಾದಗಳು

## ಅಧ್ಯಾಯ-V
## ನ್ಯಾಯಾಧಿಕರಣ

40. ನ್ಯಾಯಾಧಿಕರಣ
41. ನ್ಯಾಯಾಧಿಕರಣದ ಕರ್ತವ್ಯಗಳು
42. ನ್ಯಾಯಾಧಿಕರಣದ ಅಧಿಕಾರಗಳು ಮತ್ತು ಅದರ ಮುಂದೆ ಅನುಸರಿಸತಕ್ಕ ಪ್ರಕ್ರಿಯೆ
43. ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರುವುದು
44. ಉಚ್ಚ ನ್ಯಾಯಾಲಯಕ್ಕೆ ಅಪೀಲು

## ಅಧ್ಯಾಯ-VI
## ಮಂಡಲಿಯ ಆವರಣದಿಂದ ವ್ಯಕ್ತಿಗಳನ್ನು ಹೊರಹಾಕಲು ಅಧಿಕಾರ

45. ಮಂಡಲಿಯ ಆವರಣಗಳಿಂದ ಕೆಲವು ವ್ಯಕ್ತಿಗಳನ್ನು ಹೊರಹಾಕಲು ಅಧಿಕಾರ
46. ಬಾಡಿಗೆ, ಹಾನಿಗಳು, ಸಾಲದ ಕಂತುಗಳು ಅಥವಾ ಇತರ ಬಾಕಿಗಳನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡಲು ಅಧಿಕಾರ
47. ಬಾಡಿಗೆಯನ್ನು ಕೆಲವು ಸಂದರ್ಭಗಳಲ್ಲಿ ಸಂಬಳ ಅಥವಾ ಮಜೂರಿಗಳಿಂದ ವಜಾ ಮಾಡಿಕೊಂಡು ವಸೂಲು ಮಾಡುವುದು
48. ಅಪೀಲು
49. ಆದೇಶಗಳ ಅಂತಿಮತೆ

## ಅಧ್ಯಾಯ-VII
## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

50. ಮಂಡಲಿಯ ನಿಧಿ
51. ನಿಧಿಯ ವಿನಿಯೋಗ
52. ತುರ್ತು ಸಂದರ್ಭದಲ್ಲಿ ವೆಚ್ಚ, ಇತ್ಯಾದಿ
53. ಮಂಡಲಿಗೆ ಧನ ಸಹಾಯ ಮತ್ತು ಸಾಲಗಳು
54. ಸಾಲ ಪಡೆಯಲು ಮಂಡಲಿಯ ಅಧಿಕಾರ
54ಎ. ಸಾಲವನ್ನು ಮರುಪಾವತಿ ಮಾಡುವ ವಿಧಾನ
54ಬಿ. ಸಾಲ ತೀರಿಕೆ ನಿಧಿಯ ಸ್ಥಾಪನೆ
55. ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ
56. ಲೆಕ್ಕಗಳ ಸಮವರ್ತಿ ಮತ್ತು ವಿಶೇಷ ಲೆಕ್ಕ ಪರಿಶೋಧನೆಗಳು

## ಅಧ್ಯಾಯ-VIII
### ಕಾರ್ಮಿಕ ಗೃಹನಿರ್ಮಾಣ


57. ಅರ್ಥ ವಿವರಣೆ
58. ಕಾರ್ಮಿಕ ಗೃಹ ನಿರ್ಮಾಣ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಮಂಡಲಿಯ ಕರ್ತವ್ಯ
59. ವಾಸದ ಮನೆಯ ಬಗ್ಗೆ ವ್ಯವಸ್ಥೆ
60. ವಾಸದ ಮನೆಯು ಒಳ್ಳೆಯ ವಾಸ ಯೋಗ್ಯ ಸ್ಥಿತಿಯಲ್ಲಿರುವುದು
61. ಕಾರ್ಮಿಕ ವರ್ಗದವರ ಮನೆಗಳನ್ನು ಪರಿಶೀಲಿಸುವ ಮಂಡಲಿಯ ಕರ್ತವ್ಯ
62. ಕಾರ್ಮಿಕ ವರ್ಗದವರ ಅಧಿಭೋಗದಲ್ಲಿರುವ ಮನೆಗಳಿಗೆ ಸಂಬಂಧಿಸಿದ ಮಂಡಲಿಯ ಅಧಿಕಾರಗಳು
63. ನೈರ್ಮಲ್ಯ ವ್ಯವಸ್ಥೆ ಇಲ್ಲದ ಮನೆಗಳು, ಇತ್ಯಾದಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಮಂಡಲಿಯ ಅಧಿಕಾರಗಳು
64. ಮಾನವ ವಾಸಕ್ಕೆ ಯೋಗ್ಯವಲ್ಲದ ಮನೆಗಳಿಗಾಗಿ ಪರಿಹಾರ
65. ಮಂಡಲಿಯು ಸಾರ್ವಜನಿಕ ಬೀದಿಗಳನ್ನು ನಿರ್ವಹಿಸುವುದು
66. ನಿಯೋಜಕರು ಒದಗಿಸಿದ ವಸತಿ ಸೌಕರ್ಯಕ್ಕೆ ಸಂಬಂಧಪಡುವ ಷರತ್ತುಗಳು
67. ಅಧಿನಿಯಮದ ಪ್ರಾರಂಭದ ತರುವಾಯ ನಿಯೋಜಕನು ಒದಗಿಸಿದ ವಾಸದ ಮನೆಗೆ ಸಂಬಂಧಪಡುವ ಷರತ್ತುಗಳು
68. ನಿಯೋಜಕನು ಸಂದಾಯ ಮಾಡಬೇಕಾದ ಬಾಡಿಗೆಯು ಭೂ ಕಂದಾಯದ ಬಾಕಿಯಂತೆ ವಸೂಲೀಯವಾಗಿರುವುದು


## ಅಧ್ಯಾಯ-IX
### ಸಂಕೀರ್ಣ


69. ವರದಿಗಳು
70. ಇತರ ತಃಖ್ತೆಗಳು ಮತ್ತು ರಿಟರ್ನುಗಳು
70ಎ. ಗೃಹ ನಿರ್ಮಾಣ ಕಮೀಷನರ್ ರಾಜ್ಯ ಸರ್ಕಾರಕ್ಕೆ ರಿಟರ್ನುಗಳು ಮತ್ತು ವರದಿಗಳು, ಮುಂತಾದವುಗಳನ್ನು ಒದಗಿಸುವುದು
70ಬಿ. ರಿಟರ್ನುಗಳು, ವರದಿಗಳು, ದಸ್ತಾವೇಜುಗಳು, ಮುಂತಾದವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಲು ಮಂಡಲಿಯ ಅಧಿಕಾರ
71. ಪ್ರವೇಶಾಧಿಕಾರ
72. ಮಂಡಲಿಯ ವಿರುದ್ಧ ದಾವೆ ನೋಟೀಸು
73. ಮಂಡಲಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ತ್ರೈವಾರ್ಷಿಕ ಮೌಲ್ಯ ನಿರ್ಣಯ
74. ನಿಯಮ ರಚನಾಧಿಕಾರ
75. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು
76. ವಿನಿಯಮಗಳು
77. ಉಪವಿಧಿಗಳನ್ನು ರಚಿಸಲು ಅಧಿಕಾರ
78. ಉಪವಿಧಿಗಳ ಉಲ್ಲಂಘನೆಗಾಗಿ ದಂಡನೆ
79. ಅಡ್ಡಿಪಡಿಸುವುದು, ಮುಂತಾದವುಗಳಿಗಾಗಿ ದಂಡನೆ
80. ಪ್ರಾಸಿಕ್ಯೂಷನ್ ನಡೆಸುವ ಪ್ರಾಧಿಕಾರ
81. ಕೆಲವು ವ್ಯಕ್ತಿಗಳು ಸರ್ಕಾರಿ ನೌಕರರಾಗಿರುವುದು
82. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ರಕ್ಷಣೆ
83. ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961 ಇದು ಅನ್ವಯವಾಗದಿರುವುದಕ್ಕೆ ಸಂಬಂಧಿಸಿ ಸಂದೇಹದ ನಿವಾರಣೆ
84. ಮಂಡಲಿಗೆ ನಿರ್ದೇಶನಗಳನ್ನು ನೀಡಲು ಸರ್ಕಾರದ ಅಧಿಕಾರ
85. [ಬಿಟ್ಟುಬಿಡಲಾಗಿದೆ]
86. ಕರ್ತವ್ಯ ನೆರವೇರಿಸುವಲ್ಲಿ ತಪ್ಪುವುದು
87. ಮಂಡಲಿಯ ವಿಸರ್ಜನೆ
87ಎ. ರಾಜ್ಯ ಸರ್ಕಾರದಿಂದ ನಿಯಂತ್ರಣ
88. ತೊಂದರೆಗಳ ನಿವಾರಣೆ
89. ನಿರಸನ ಮತ್ತು ಉಳಿಸುವಿಕೆ


* * * *

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

I

**1963ರ ಅಧಿನಿಯಮ 10.-** ಮೈಸೂರು ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1955 ಮತ್ತು ಮೈಸೂರು ಕಾರ್ಮಿಕ ಗೃಹ ನಿರ್ಮಾಣ ಅಧಿನಿಯಮ, 1949 ಇವು ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿವೆ; ಮತ್ತು ಮುಂಬಯಿ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1948 ಇದು ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿದೆ. ಹೈದರಾಬಾದ್ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1956 ಇದು ಹೈದರಾಬಾದ್ ವಿಧಾನ ಮಂಡಲದಿಂದ ಅಧಿನಿಯಮಿತವಾಗಿದೆ. ಆದರೆ, ಹೈದರಾಬಾದ್ ಪ್ರದೇಶದಲ್ಲಿ ಇದನ್ನು ಜಾರಿಗೆ ತಂದಿಲ್ಲ. ಮದರಾಸು ಪ್ರದೇಶ ಮತ್ತು ಕೊಡಗು ಜಿಲ್ಲೆಗಳಲ್ಲಿ ಅಂಥ ಯಾವುದೇ ಶಾಸನ ಜಾರಿಯಲ್ಲಿಲ್ಲ.

ಮೈಸೂರು ಗೃಹ ನಿರ್ಮಾಣ ಮಂಡಲಿಯ ಅಧಿಕಾರ ವ್ಯಾಪ್ತಿ ಮತ್ತು ಚಟುವಟಿಕೆಗಳು ಈಗ ಮೈಸೂರು ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿವೆ ಮತ್ತು ಏಕೀಕರಣಗೊಂಡ ಇತರ ಎಲ್ಲ ಪ್ರದೇಶಗಳ ಗೃಹ ನಿರ್ಮಾಣ ಚಟುವಟಿಕೆಗಳನ್ನು ಸರ್ಕಾರವು ನೇಮಿಸಿದ ವಿಶೇಷ ಅಧಿಕಾರಿಯು ನೋಡಿಕೊಳ್ಳುತ್ತಿದ್ದಾನೆ. ಇಡೀ ರಾಜ್ಯವನ್ನು ಒಂದು ಏಕರೂಪ ಕಾನೂನಿನ ಪರಿಧಿಯೊಳಗೆ ತರುವ ದೃಷ್ಟಿಯಿಂದ ಈ ವಿಧೇಯಕವನ್ನು ಪ್ರಸ್ತಾವಿಸಲಾಗಿದೆ. ಈ ಕ್ರಮದಿಂದ, ಇಡೀ ರಾಜ್ಯದಲ್ಲಿ ಗೃಹ ನಿರ್ಮಾಣ ಯೋಜನೆಗಳ ಯಶಸ್ವಿ ಅನುಷ್ಠಾನದಲ್ಲಿ ಈಗಿರುವ ಅಡೆತಡೆಗಳನ್ನು ಹೋಗಲಾಡಿಸಬಹುದೆಂದು ನಿರೀಕ್ಷಿಸಲಾಗಿದೆ.

*(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV – 2ಎ, ದಿನಾಂಕ: 23.8.1962ರಲ್ಲಿ ಪುಟ 661-662 ರಲ್ಲಿ ಪ್ರಕಟಿತವಾಗಿದೆ.)*

II

**1974ರ ತಿದ್ದುಪಡಿ ಮಾಡುವ ಅಧಿನಿಯಮ 10.-** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ದೃಷ್ಟಿಯಿಂದ, ಈ ಕೆಳಕಂಡ ಹಾಗೆ ಉಪಬಂಧಿಸಿ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಮಂಡಲಿಯ ಸದಸ್ಯರ ಸಂಖ್ಯೆಯನ್ನು 12 ರಿಂದ 15ಕ್ಕೆ ಹೆಚ್ಚಿಸುವುದು;

(ii) ಅಧ್ಯಕ್ಷರು ಮತ್ತು ಇತರೆ ಸದಸ್ಯರು ಮೂರು ವರ್ಷಗಳಿಗೆ ಬದಲಾಗಿ ಸರ್ಕಾರದ ಇಷ್ಟಪರ್ಯಂತ ಹುದ್ದೆಯನ್ನು ಧಾರಣ ಮಾಡುವುದು;

(iii) ಗೃಹ ನಿರ್ಮಾಣ ಆಯುಕ್ತರು, ಮುಖ್ಯ ಇಂಜಿನಿಯರು ಮತ್ತು ಕಾರ್ಯದರ್ಶಿ – ಇವರನ್ನು ಮಂಡಲಿಯು ನೇಮಕ ಮಾಡುವುದಕ್ಕೆ ಬದಲಾಗಿ ಸರ್ಕಾರವು ನೇಮಕ ಮಾಡುವುದು ಮತ್ತು ಪ್ರಧಾನ ಇಲಾಖಾ ಮುಖ್ಯಸ್ಥರ ಅಧಿಕಾರಗಳನ್ನು ಗೃಹ ನಿರ್ಮಾಣ ಆಯುಕ್ತರಲ್ಲಿ ನಿಹಿತಗೊಳಿಸುವುದು;

(iv) ಗೃಹ ನಿರ್ಮಾಣ ಆಯುಕ್ತರಿಗೆ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುವೇ ಅಧಿಕಾರಗಳು ಅಥವಾ ಅವನಿಗೆ ವಿಧಿಸಲಾದ ಕರ್ತವ್ಯಗಳನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದಂಥ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗಕ್ಕೆ ಪ್ರತ್ಯಾಯೋಜಿಸಲು ರಾಜ್ಯ ಸರ್ಕಾರವು ಅಧಿಕಾರ ನೀಡುವುದು;

(v) ಕೆಲವು ವಿಷಯಗಳ ಸಂಬಂಧದಲ್ಲಿ ಪುನರೀಕ್ಷಣಾ ಅಧಿಕಾರಗಳನ್ನು ರಾಜ್ಯ ಸರ್ಕಾರದಲ್ಲಿ ನಿಹಿತಗೊಳಿಸುವುದು.

ಈ ಪೈಕಿ ಕೆಲವು ಉದ್ದೇಶಗಳಿಗಾಗಿ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸಲಾಯಿತು. ಈ ವಿಧೇಯಕವನ್ನು ಸದನವು ಪರ್ಯಾಲೋಚನೆಗೆ ತೆಗೆದುಕೊಳ್ಳಲಿಲ್ಲ. ವಿಧಾನಸಭೆಯು ಮಾತ್ರವೇ ಅಧಿವೇಶನದಲ್ಲಿ ಇದ್ದುದರಿಂದ ಮತ್ತು ಆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದು ಅಗತ್ಯವೆಂದು ಪರಿಗಣಿಸಿದ್ದರಿಂದ ಕೆಲವು ಮಾರ್ಪಾಟುಗಳೊಂದಿಗೆ ಉಪಬಂಧಗಳನ್ನು ಸೇರಿಸಿ 3ನೇ ನವೆಂಬರ್, 1973 ರಂದು ಅಧ್ಯಾದೇಶವನ್ನು ಹೊರಡಿಸಲಾಯಿತು.

ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕ.

*(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ 4ನೇ ಮಾರ್ಚ್, 1974 ರಲ್ಲಿ, 9ನೇ ಪುಟದಲ್ಲಿ, ಸಂಖ್ಯೆ 443 ಎಂದು ಪ್ರಕಟಿಸಲಾಗಿದೆ)*

III

**1988ರ ತಿದ್ದುಪಡಿ ಮಾಡುವ ಅಧಿನಿಯಮ 8.-** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ನ್ನು ಮುಂದಿನವುಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ:-

(i) ಭೂ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮತ್ತು ಸದರಿ ಯೋಜನೆಗಳನ್ನು ಜಾರಿಗೊಳಿಸುವುದು;

(ii) ಪ್ರಸ್ತುತ, ಮಂಡಲಿಯು, ಸರ್ಕಾರವು ನೇಮಕ ಮಾಡಬೇಕಾದ ಅಧ್ಯಕ್ಷರು ಮತ್ತು ಇತರ ಹದಿನೈದು ಸದಸ್ಯರನ್ನು ಒಳಗೊಂಡಿರುತ್ತದೆ. ಆದರೆ ಮಂಡಲಿಯ ಅಂಗರಚನೆಯಲ್ಲಿ ಬದಲಾವಣೆ ಮಾಡುವುದು ಅಗತ್ಯವೆಂದು ಭಾವಿಸಿರುವುದರಿಂದ, ಮಂಡಲಿಯಲ್ಲಿ ಸರ್ಕಾರವು ನೇಮಕ ಮಾಡುವ ಅಧ್ಯಕ್ಷರು ಮತ್ತು ಇತರ ಹನ್ನೆರಡು ಸದಸ್ಯರು ಇರಬೇಕೆಂದು ಮತ್ತು ಅವರ ಪೈಕಿ ಏಳು ಮಂದಿ ಸರ್ಕಾರಿ ಸದಸ್ಯರು ಮತ್ತು ಐದು ಮಂದಿ ಸರ್ಕಾರೇತರ ಸದಸ್ಯರಾಗಿರಬೇಕೆಂದು ಪ್ರಸ್ತಾವಿಸಲಾಗಿದೆ;

(iii) ಮಂಡಲಿಯ ಅಧಿಕಾರಗಳನ್ನು ಗೃಹ ಆಯುಕ್ತರಿಗೆ ಅಥವಾ ಮಂಡಲಿಯ ಇತರ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿ ಕೊಡುವುದು;

(iv) ಪ್ರಸ್ತುತ, ಪುರಸಭಾ ನಿಗಮಗಳು, ನಗರ ಅಥವಾ ಪಟ್ಟಣ ಪುರಸಭಾ ಪರಿಷತ್ತುಗಳು ಅಥವಾ ಮಂಡಲ ಪಂಚಾಯಿತಿಗಳಂಥ ಸ್ಥಳೀಯ ಪ್ರಾಧಿಕಾರಗಳು, ಮಂಡಲಿ ನಿರ್ಮಿಸಿದ ಮನೆಗಳು ಇರುವಂಥ ಪ್ರದೇಶದಲ್ಲಿ ಬೀದಿ ದೀಪ, ನೀರು ಸರಬರಾಜು, ಇತ್ಯಾದಿಗಳಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆಸಕ್ತಿ ತೋರಿಸುತ್ತಿಲ್ಲ. ಆದ್ದರಿಂದ ಮಂಡಲಿಯು ತನ್ನಲ್ಲಿ ಲಭ್ಯವಿರುವ ನಿಧಿಗಳಿಂದ ಅಂಥ ಸೌಲಭ್ಯಗಳನ್ನು ಅನಿವಾರ್ಯವಾಗಿ ಒದಗಿಸಬೇಕಾಗಿದೆ. ಆದ್ದರಿಂದ ಗೃಹ ಮಂಡಲಿ ಮತ್ತು ಅದರ ಆಯುಕ್ತರು, ಕರ್ನಾಟಕ ಪುರಸಭೆಗಳ ಅಧಿನಿಯಮ, 1964, ಕರ್ನಾಟಕ ಪುರಸಭಾ ನಿಗಮಗಳ ಅಧಿನಿಯಮ, 1976 ಮತ್ತು ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 – ಇವುಗಳ ಮೇರೆಗೆ ಕೆಲವು ಅಧಿಕಾರಗಳನ್ನು ಚಲಾಯಿಸಲು ಅನುಕೂಲವಾಗುವಂತೆ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ;

(v) ಮಂಡಲಿಯ ಮತ್ತು ಆಯುಕ್ತರ ಹಣಕಾಸು ಸಂಬಂಧವಾದ ಅಧಿಕಾರಗಳನ್ನು ಹೆಚ್ಚಿಸುವುದು;

(vi) ಮಂಡಲಿಗೆ ಬಾಕಿಯಿರುವ ಸಾಲದ ಕಂತುಗಳನ್ನು ಪಾವತಿ ಮಾಡಲು ತಪ್ಪಿದ ವ್ಯಕ್ತಿಗಳನ್ನು ಮಂಡಲಿಯು ನಿರ್ಮಿಸಿದ ಆವರಣದಿಂದ ಹೊರಹಾಕುವುದು.

(vii) ಕಂತುಗಳ ಬಾಕಿಯನ್ನು ನಿಯಮಿಸಿದ ಭೂಕಂದಾಯದ ಬಾಕಿಯಂತೆ ವಸೂಲು ಮಾಡುವುದು;

(viii) ಅಧಿನಿಯಮದ ಉದ್ದೇಶಗಳ ಈಡೇರಿಕೆಗಾಗಿ ಹಣ ಸಾಲ ಪಡೆಯಲು ಮತ್ತು ಹಾಗೆ ಪಡೆಯಲಾದ ಸಾಲಗಳಿಗಾಗಿ ತನ್ನ ಸ್ವತ್ತುಗಳನ್ನು ಭದ್ರತೆಯಾಗಿ ಅಡಮಾನ ಮಾಡಲು ಸಹ ಮಂಡಲಿಗೆ ಸಾಧ್ಯವಾಗುವಂತೆ ಮಾಡುವುದು;

(ix) ಮಂಡಲಿಯು ಪಡೆದ ಸಾಲದ ಮರುಪಾವತಿಗೆ ಋಣ ತೀರಿಕೆ ನಿಧಿಯೊಂದನ್ನು ಸ್ಥಾಪಿಸುವುದು.

ಈ ಸಂದರ್ಭದಲ್ಲಿ ಕೆಲವು ಆನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

*(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ 5ನೇ ಫೆಬ್ರವರಿ, 1988ರಲ್ಲಿ ಪುಟ-13 ರಲ್ಲಿ ಸಂಖ್ಯೆ 74 ಎಂದು ಪ್ರಕಟಿಸಲಾಗಿದೆ.)*

### IV

**1999ರ ತಿದ್ದುಪಡಿ ಮಾಡುವ ಅಧಿನಿಯಮ 13.**- ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ನಾಮ ನಿರ್ದೇಶಿತ ಸದಸ್ಯರ ಪೈಕಿ ಮಹಿಳೆಯರಿಗೆ ಶೇ. 30 ರಷ್ಟು ಪ್ರಾತಿನಿಧ್ಯ ಕಲ್ಪಿಸಲು ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

*(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ 31ನೇ ಮಾರ್ಚ್, 1999ರಲ್ಲಿ, ಸಂಖ್ಯೆ 298 ಎಂದು ಪ್ರಕಟಿಸಲಾಗಿದೆ)*

*(ಅಧಿಸೂಚನೆ ಸಂಖ್ಯೆ: ಎಲ್‌ಜಿಎ/ಬಿಎಲ್‌ಎ/19/1999, ದಿನಾಂಕ: 31.3.1999)*

# 1963ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 10

*(1963ರ ಮಾರ್ಚ್ ಇಪ್ಪತ್ತೊಂದನೇ ದಿನದಂದು [1][ಕರ್ನಾಟಕ ರಾಜಪತ್ರ][1]ದಲ್ಲಿ ಮೊದಲು ಪ್ರಕಟಿಸಲಾಗಿದೆ.)*

# [1][ಕರ್ನಾಟಕ][1] ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962

(1963ರ ಮಾರ್ಚ್ ಒಂಬತ್ತನೇ ದಿನದಂದು ರಾಷ್ಟ್ರಪತಿಯ ಸಮ್ಮತಿಯನ್ನು ಪಡೆದಿದೆ.)

(1974ರ 10, 1988ರ 8 ಮತ್ತು 1999ರ 13-ಈ ಕರ್ನಾಟಕ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ.)

**ವಸತಿ ಅವಶ್ಯಕತೆಯ ಬಗ್ಗೆ ವ್ಯವಹರಿಸಲು ಮತ್ತು ವಸತಿಯ ಅಗತ್ಯವನ್ನು ಈಡೇರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವ್ಯವಸ್ಥೆ ಮಾಡುವ ಅಧಿನಿಯಮ.**

ವಸತಿ ಅವಶ್ಯಕತೆಯ ಬಗ್ಗೆ ವ್ಯವಹರಿಸುವ ಮತ್ತು ವಸತಿಯ ಅಗತ್ಯವನ್ನು ಈಡೇರಿಸುವ ಉದ್ದೇಶಕ್ಕಾಗಿ ಅವಶ್ಯಕವಾದಂಥ ಕ್ರಮಗಳನ್ನು ಕೈಗೊಳ್ಳುವುದು, ಯೋಜನೆಗಳನ್ನು ರೂಪಿಸುವುದು ಮತ್ತು ಕಾಮಗಾರಿಗಳನ್ನು ನಿರ್ವಹಿಸುವುದು ವಿಹಿತವಾಗಿರುವುದರಿಂದ ಮತ್ತು ಆ ಉದ್ದೇಶದಿಂದ [1][ಕರ್ನಾಟಕ ರಾಜ್ಯ][1]ಕ್ಕಾಗಿ ಒಂದು ಮಂಡಲಿಯನ್ನು ಸ್ಥಾಪಿಸುವುದು ಮತ್ತು ಇತರ ಕೆಲವು ಉಪಬಂಧಗಳನ್ನು ಕಲ್ಪಿಸುವುದು ಅವಶ್ಯಕವಾಗಿರುವುದರಿಂದ;

ಭಾರತದ ಗಣರಾಜ್ಯದ ಹದಿಮೂರನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [2][ದಿನಾಂಕ][2] ದಂದು ಜಾರಿಗೆ ಬರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. ಈ ಅಧಿನಿಯಮವು ಅಧಿಸೂಚನೆ ಮೂಲಕ 27ನೇ ಜನವರಿ, 1965 ರಂದು ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) "ಮಂಡಲಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಿದ ಗೃಹನಿರ್ಮಾಣ ಮಂಡಲಿ;

(ಬಿ) "ಮಂಡಲಿ ಆವರಣಗಳು" ಎಂದರೆ ಮಂಡಲಿಗೆ ಸೇರಿದ ಅಥವಾ ಮಂಡಲಿಯಲ್ಲಿ ನಿಹಿತವಾದ, ಮಂಡಲಿಯು ಗುತ್ತಿಗೆಯ ಮೇಲೆ ತೆಗೆದುಕೊಂಡ ಅಥವಾ ಈ ಅಧಿನಿಯಮದ ಉದ್ದೇಶಕ್ಕಾಗಿ ನಿರ್ವಹಣೆಗಾಗಿ ಮತ್ತು ಬಳಕೆಗಾಗಿ ಈ ಅಧಿನಿಯಮದ ಮೇರೆಗೆ ಮಂಡಲಿಗೆ ವಹಿಸಿಕೊಟ್ಟ ಯಾವುವೇ ಆವರಣಗಳು;

(ಸಿ) "ಕಟ್ಟಡ ಸಾಮಗ್ರಿಗಳು"ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಕಟ್ಟಡ ಸಾಮಗ್ರಿಗಳೆಂಬುದಾಗಿ ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದಂಥ ವಸ್ತುಗಳು ಅಥವಾ ಸರಕುಗಳು;

(ಡಿ) "ಉಪವಿಧಿಗಳು" ಎಂದರೆ 77ನೇ ಪ್ರಕರಣದ ಮೇರೆಗೆ ರಚಿಸಲಾದ ಉಪವಿಧಿಗಳು;

(ಇ) "ಅಧ್ಯಕ್ಷ" ಎಂದರೆ ಮಂಡಲಿಯ ಅಧ್ಯಕ್ಷರು;

(ಎಫ್) "ಸಕ್ಷಮ ಪ್ರಾಧಿಕಾರಿ" ಎಂದರೆ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕಾಗಿ VIನೇ ಅಧ್ಯಾಯದ ಮೇರೆಗೆ ಸಕ್ಷಮ ಪ್ರಾಧಿಕಾರಿಯ ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತಗೊಳಿಸಿದ ಯಾರೇ ವ್ಯಕ್ತಿ;

(ಜಿ) "ನಿಗಮ" ಎಂದರೆ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿತವಾದ ಪೌರ ನಿಗಮ;

[1][(ಜಿ–1) ಬೆಂಗಳೂರು ಮಹಾನಗರ ಪ್ರದೇಶಕ್ಕೆ ಸಂಬಂಧಪಟ್ಟಂತೆ "ಜಿಲ್ಲೆ", "ಜಿಲ್ಲಾ ನ್ಯಾಯಾಲಯ" ಮತ್ತು "ಜಿಲ್ಲಾ ನ್ಯಾಯಾಧೀಶ" ಎಂದರೆ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ, 1979 (1980ರ ಕರ್ನಾಟಕ ಅಧಿನಿಯಮ ಸಂಖ್ಯೆ 13) ರಲ್ಲಿ ಪರಿಭಾಷಿಸಿರುವಂತೆ ಅನುಕ್ರಮವಾಗಿ "ಬೆಂಗಳೂರು ನಗರ","ನಗರ ಸಿವಿಲ್ ನ್ಯಾಯಾಲಯ" ಮತ್ತು "ನ್ಯಾಯಾಧೀಶ"][1];

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಜಿ–2) "ಗೃಹ ನಿರ್ಮಾಣ ಆಯುಕ್ತರು" ಎಂದರೆ 10ನೇ ಪ್ರಕರಣದ ಮೇರೆಗೆ ನೇಮಿಸಿದ ಅಧಿಕಾರಿ;][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1988ರ ಅಧಿನಿಯಮ 8ರ ಮೂಲಕ ಅಧಿಸೂಚನೆ ಮೂಲಕ ದಿನಾಂಕ: 1.5.1988 ರಿಂದ ಜಾರಿಗೆ ಬರುವಂತೆ ಪುನರ್ ಸಂಖ್ಯೆ ನೀಡಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

(ಹೆಚ್) "ಗೃಹ ನಿರ್ಮಾಣ ಯೋಜನೆ"ಎಂದರೆ ಈ ಅಧಿನಿಯಮದ ಮೇರೆಗಿನ ಗೃಹ ನಿರ್ಮಾಣ ಯೋಜನೆ;

(ಐ) "ಜಮೀನು" ಎಂಬುದರಲ್ಲಿ ಜಮೀನಿನಿಂದ ಒದಗುವ ಪ್ರಯೋಜನಗಳು ಮತ್ತು ಭೂಮಿಗೆ ಹೊಂದಿಕೊಂಡಿರುವ ಅಥವಾ ಭೂಮಿಗೆ ಹೊಂದಿಕೊಂಡಿರುವ ಯಾವುದೇ ವಸ್ತುವಿಗೆ ಕಾಯಂ ಆಗಿ ಬೆಸೆದುಕೊಂಡಿರುವ ವಸ್ತುಗಳು ಒಳಗೊಳ್ಳುತ್ತವೆ;

[1][(ಐ–1) "ಭೂ ಅಭಿವೃದ್ಧಿ ಯೋಜನೆ" ಎಂದರೆ ಯಾವುದೇ ಪ್ರದೇಶದಲ್ಲಿ ಮನೆ ನಿವೇಶನಗಳನ್ನು ಒದಗಿಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ರಚಿಸಿದ ಯೋಜನೆ][1];

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಜೆ) "ಸದಸ್ಯ" ಎಂದರೆ ಮಂಡಲಿಯ ಸದಸ್ಯ;

(ಕೆ) "ಅಧಿಸೂಚನೆ" ಎಂದರೆ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಲ್) "ಆವರಣಗಳು" ಎಂದರೆ ಯಾವುದೇ ಕಟ್ಟಡ ಅಥವಾ ಅದರ ಭಾಗ ಮತ್ತು ಅದರಲ್ಲಿ,-

(i) ಅಂಥ ಕಟ್ಟಡಕ್ಕೆ ಅಥವಾ ಅದರ ಭಾಗಕ್ಕೆ ಸೇರಿರುವ ತೋಟಗಳು, ನೆಲ ಮತ್ತು ಹೊರಮನೆಗಳು ಯಾವುವಾದರೂ ಇದ್ದರೆ, ಅವು; ಮತ್ತು

(ii) ಆ ಕಟ್ಟಡ ಅಥವಾ ಅದರ ಭಾಗದ ಇನ್ನಷ್ಟು ಪ್ರಯೋಜನಕಾರಿಯಾದ ಅನುಭೋಗಕ್ಕಾಗಿ ಆ ಕಟ್ಟಡಕ್ಕೆ ಅಥವಾ ಅದರ ಭಾಗಕ್ಕೆ ಲಗತ್ತಿಸಿದ ಯಾವುವೇ ಜೋಡಣೆಗಳು

– ಒಳಗೊಳ್ಳುತ್ತವೆ;

(ಎಂ) "ನಿಯಮಿಸಲಾದುದು" ಎಂದರೆ ನಿಯಮಗಳ ಮೂಲಕ ನಿಯಮಿಸಲಾದುದು;

(ಎನ್) "ಕಾರ್ಯಕ್ರಮ" ಎಂದರೆ 19ನೇ ಪ್ರಕರಣದ ಮೇರೆಗೆ ಮಂಡಲಿಯು ಸಿದ್ಧಪಡಿಸಿದ ವಾರ್ಷಿಕ ಗೃಹನಿರ್ಮಾಣ ಕಾರ್ಯಕ್ರಮ [1][ಮತ್ತು ಭೂ ಅಭಿವೃದ್ಧಿ ಕಾರ್ಯಕ್ರಮ][1];

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಒ) "ವಿನಿಯಮಗಳು" ಎಂದರೆ 76ನೇ ಪ್ರಕರಣದ ಮೇರೆಗೆ ರಚಿಸಿದ ವಿನಿಯಮಗಳು;

(ಪಿ) "ಬಾಡಿಗೆ" ಎಂದರೆ ಮಂಡಲಿಯ ಆವರಣಗಳ ಅನುಭೋಗಕ್ಕೆ ಸಂಬಂಧಪಟ್ಟಂತೆ ಮಂಡಲಿಗೆ ಸಂದಾಯ ಮಾಡಬೇಕಾದ ಮೊಬಲಗು, ಆದರೆ ಅದು ಆ ಆವರಣಗಳಲ್ಲಿ ಉಪಯೋಗಿಸಿದ ಅಥವಾ ಬಳಸಿದ ನೀರು ಮತ್ತು ವಿದ್ಯುಚ್ಛಕ್ತಿಗೆ ಸಂದಾಯ ಮಾಡಬೇಕಾದ ನೀರು ಮತ್ತು ವಿದ್ಯುಚ್ಛಕ್ತಿ ಚಾರ್ಜುಗಳನ್ನು [1][ಒಳಗೊಳ್ಳುವುದಿಲ್ಲ][1];

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಕ್ಯೂ) "ನಿಯಮಗಳು" ಎಂದರೆ 74ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳು;

(ಆರ್) "ಕಾರ್ಯದರ್ಶಿ" ಎಂದರೆ ಮಂಡಲಿಯ ಕಾರ್ಯದರ್ಶಿ;

(ಎಸ್) "ನ್ಯಾಯಾಧಿಕರಣ" ಎಂದರೆ 40ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ನ್ಯಾಯಾಧಿಕರಣ; ಮತ್ತು

(ಟಿ) 'ವರ್ಷ" ಎಂದರೆ ಏಪ್ರಿಲ್ 1ನೇ ದಿನದಂದು ಪ್ರಾರಂಭವಾಗಿ ಮಾರ್ಚ್ 31ನೇ ದಿನದಂದು ಕೊನೆಗೊಳ್ಳುವ ವರ್ಷ.

# ಅಧ್ಯಾಯ - II

## ಮಂಡಲಿಯ ಸ್ಥಾಪನೆ

**3. ಮಂಡಲಿಯ ರಚನೆ.-** (1) ರಾಜ್ಯ ಸರ್ಕಾರವು, ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಗಳಿಗಾಗಿ [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ][1] ಎಂಬ ಹೆಸರಿನ ಒಂದು ಮಂಡಲಿಯು ಸ್ಥಾಪಿತವಾಗತಕ್ಕುದು ಮತ್ತು ಅದು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಹೊಂದಿರಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾದ ಎಲ್ಲಾ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(2). ಮಂಡಲಿಯು, ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ:-

(ಎ) ರಾಜ್ಯ ಸರ್ಕಾರವು ನೇಮಕ ಮಾಡತಕ್ಕ ಒಬ್ಬ ಅಧ್ಯಕ್ಷರು;

(ಬಿ) ಸರ್ಕಾರದ ಕಾರ್ಯದರ್ಶಿ - ಗೃಹ ನಿರ್ಮಾಣದ ಪ್ರಭಾರಿ, ಕರ್ನಾಟಕ ಸರ್ಕಾರ;

(ಸಿ) ಸರ್ಕಾರದ ಕಾರ್ಯದರ್ಶಿ - ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ;

(ಡಿ) ಮುಖ್ಯ ಇಂಜಿನಿಯರು, (ರಸ್ತೆ ಮತ್ತು ಕಟ್ಟಡ) (ದಕ್ಷಿಣ);

(ಇ) ನಗರ ಯೋಜನಾ ನಿರ್ದೇಶಕರು, ಕರ್ನಾಟಕ ಸರ್ಕಾರ;

(ಎಫ್) ಅಧ್ಯಕ್ಷರು ಮತ್ತು ಕಾರ್ಯನಿರ್ವಹಣಾ ನಿರ್ದೇಶಕರು, ಕರ್ನಾಟಕ ಭೂ ಸೇನಾ ನಿಗಮ;

(ಜಿ) ಗೃಹ ನಿರ್ಮಾಣ ಆಯುಕ್ತರು;

(ಹೆಚ್) ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ನಿಗಮವು ನಾಮನಿರ್ದೇಶನ ಮಾಡಿದ ಮತ್ತು ಪ್ರಾದೇಶಿಕ ಮುಖ್ಯಸ್ಥರ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ವ್ಯಕ್ತಿ; ಮತ್ತು

(ಐ) ರಾಜ್ಯ ಸರ್ಕಾರವು ನೇಮಕ ಮಾಡಿದ ಐದು ಮಂದಿ ಸರ್ಕಾರೇತರ ಸದಸ್ಯರು, [2][ಆ ಪೈಕಿ ಇಬ್ಬರು ಮಹಿಳೆಯರು ಇರತಕ್ಕದ್ದು][2];][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1999ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 31.12.1999 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

[1][(2ಎ) ಅಧ್ಯಕ್ಷರೂ ಸೇರಿದಂತೆ ನೇಮಕ ಮಾಡಿದ ಸದಸ್ಯರ ಹೆಸರುಗಳನ್ನು ರಾಜ್ಯಪತ್ರದಲ್ಲಿ ಅಧಿಸೂಚಿಸತಕ್ಕದ್ದು.][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) [1][ಅಧ್ಯಕ್ಷರೂ ಸೇರಿದಂತೆ][1] ಮಂಡಲಿಯ [2][ಯಾರೇ ಸರ್ಕಾರೇತರ ಸದಸ್ಯನು][2] ರಾಜ್ಯ ಸರ್ಕಾರಕ್ಕೆ ತನ್ನ ರಾಜೀನಾಮೆಯನ್ನು ಸಲ್ಲಿಸಿ ಯಾವುದೇ ಸಮಯದಲ್ಲಿ ತನ್ನ ಪದಕ್ಕೆ ರಾಜೀನಾಮೆಯನ್ನು ನೀಡಬಹುದು:

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಆ ರಾಜೀನಾಮೆಯನ್ನು ಅಂಗೀಕರಿಸುವವರೆಗೆ ಅದು ಜಾರಿಗೆ ಬರತಕ್ಕದ್ದಲ್ಲ.

(4) ಈ ಅಧಿನಿಯಮದ ಮತ್ತು ಭೂ ಆರ್ಜನಾ ಅಧಿನಿಯಮ, 1894ರ ಉದ್ದೇಶಕ್ಕಾಗಿ ಮಂಡಲಿಯನ್ನು ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕುದು.

**4. ಅಧ್ಯಕ್ಷನ ಗೈರುಹಾಜರಿ ರಜೆ.–** ರಾಜ್ಯ ಸರ್ಕಾರವು ಕಾಲಕಾಲಕ್ಕೆ, ಅಧ್ಯಕ್ಷರಿಗೆ ನಿಯಮಗಳ ಮೇರೆಗೆ ಅನುಮತಿಸಬಹುದಾದಂಥ ಗೈರು ಹಾಜರಿಗೆ ಅನುಮತಿ ಮಂಜೂರು ಮಾಡಬಹುದು ಮತ್ತು ಅಂಥ ಗೈರುಹಾಜರಿ ಅನುಮತಿಯ ಅವಧಿಯಲ್ಲಿ ಅಧ್ಯಕ್ಷರ ಬದಲು ಕಾರ್ಯನಿರ್ವಹಿಸಲು ರಾಜ್ಯ ಸರ್ಕಾರವು ನೇಮಕ ಮಾಡುವ ಯಾರೇ ವ್ಯಕ್ತಿಯನ್ನು, ಹಾಗೆ ಕಾರ್ಯ ನಿರ್ವಹಿಸುವಾಗ ಈ ಅಧಿನಿಯಮದ ಎಲ್ಲಾ ಉದ್ದೇಶಗಳಿಗಾಗಿ ಅಧ್ಯಕ್ಷರೆಂಬುದಾಗಿ ಭಾವಿಸತಕ್ಕುದು.

**5. ಮಂಡಲಿಯಲ್ಲಿ ನೇಮಕಾತಿಗೆ ಅನರ್ಹತೆ.–** (1) ವ್ಯಕ್ತಿಯು,–

(ಎ) ಮಂಡಲಿಯಲ್ಲಿ ಲಾಭದಾಯಕವಾದ ಯಾವುದೇ ಪದವನ್ನು ಅಥವಾ ಸ್ಥಾನವನ್ನು ಹೊಂದಿದ್ದರೆ;

(ಬಿ) ಅಸ್ವಸ್ಥಚಿತ್ತನಾಗಿದ್ದರೆ, ಮತ್ತು ಸಕ್ಷಮ ನ್ಯಾಯಾಲಯವು ಅವನನ್ನು ಹಾಗೆಂದು ಘೋಷಿಸಿದ್ದರೆ;

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಡಿ) ತಾನೇ ಸ್ವತಃ ಅಥವಾ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಂಡಲಿಯೊಂದಿಗೆ, ಮಂಡಲಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ ಉದ್ಯೋಗದಲ್ಲಿದ್ದರೆ; ಅಥವಾ

(ಇ) ಮಂಡಲಿಯೊಂದಿಗೆ, ಮಂಡಲಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಯಾವುದೇ ಪಾಲನ್ನು ಅಥವಾ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ನಿಗಮಿತ ಕಂಪನಿಯ ನಿರ್ದೇಶಕನಾಗಿದ್ದರೆ ಅಥವಾ ಉದ್ಯೋಗದಲ್ಲಿದ್ದರೆ ಅಥವಾ ಕಾರ್ಯದರ್ಶಿಯಾಗಿದ್ದರೆ, ವ್ಯವಸ್ಥಾಪಕನಾಗಿದ್ದರೆ ಅಥವಾ ಸಂಬಳ ಪಡೆಯುವ ಇತರ ಅಧಿಕಾರಿಯಾಗಿದ್ದರೆ

– ಅವನನ್ನು ಮಂಡಲಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ನೇಮಕ ಹೊಂದಲು ಅಥವಾ ಮುಂದುವರಿಯಲು ಅನರ್ಹಗೊಳಿಸತಕ್ಕದ್ದು.

(2) ವ್ಯಕ್ತಿಯು ಅಥವಾ ಅವನು ಯಾವ ನಿಗಮಿತ ಕಂಪನಿಯ ನಿರ್ದೇಶಕ, ಕಾರ್ಯದರ್ಶಿ, ವ್ಯವಸ್ಥಾಪಕ ಅಥವಾ ಸಂಬಳ ಪಡೆಯುವ ಇತರ ಅಧಿಕಾರಿಯಾಗಿರುವನೋ ಆ ನಿಗಮಿತ ಕಂಪನಿಯು, ಮಂಡಲಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಜಾಹೀರಾತನ್ನು, ಯಾವ ಸುದ್ದಿ ಪತ್ರಿಕೆಯಲ್ಲಿ ಹಾಕಲಾಗಿದೆಯೋ ಆ ಯಾವುದೇ ಸುದ್ದಿ ಪತ್ರಿಕೆಯಲ್ಲಿ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಕಾರಣ ಮಾತ್ರದಿಂದಲೇ ಅವನನ್ನು (1) ನೇ ಉಪ-ಪ್ರಕರಣದ (ಡಿ) ಅಥವಾ (ಇ) ಖಂಡದ ಮೇರೆಗೆ ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಅವನು ಸದರಿ ಖಂಡಗಳ ಅರ್ಥವ್ಯಾಪ್ತಿಯಲ್ಲಿ, ಯಾವುದೇ ಕರಾರಿನಲ್ಲಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವುದಾಗಿ ಅಥವಾ ಉದ್ಯೋಗದಲ್ಲಿರುವುದಾಗಿ ಭಾವಿಸತಕ್ಕದ್ದಲ್ಲ.

(3) ಮಂಡಲಿಯೊಂದಿಗೆ, ಮಂಡಲಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವಂಥ ಯಾವುದೇ ನಿಗಮಿತ ಕಂಪನಿಯಲ್ಲಿ ವ್ಯಕ್ತಿಯು ಷೇರುದಾರನಾಗಿರುವ ಕಾರಣಮಾತ್ರದಿಂದಲೇ ಅವನನ್ನು (1)ನೇ ಉಪಪ್ರಕರಣದ (ಡಿ) ಅಥವಾ (ಇ) ಖಂಡದ ಮೇರೆಗೆ ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಅವನು ಅಂಥ ಕಂಪನಿಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ:

ಪರಂತು, ಅಂಥ ವ್ಯಕ್ತಿಯು ಹೊಂದಿರುವ ಷೇರುಗಳ ಸ್ವರೂಪವನ್ನು ಮತ್ತು ಪ್ರಮಾಣವನ್ನು ರಾಜ್ಯ ಸರ್ಕಾರಕ್ಕೆ ತಿಳಿಸತಕ್ಕದ್ದು.

[1][**6. ಪದಾವಧಿ ಮತ್ತು ಸೇವಾ ಷರತ್ತುಗಳು.–** (1) ಅಧ್ಯಕ್ಷನು ಮತ್ತು ಇತರ ಪ್ರತಿಯೊಬ್ಬ ಸದಸ್ಯರು ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಧ್ಯಕ್ಷರು ಮತ್ತು ಇತರ ಪ್ರತಿಯೊಬ್ಬ ಸದಸ್ಯರು ತಮ್ಮ ನೇಮಕಾತಿಯ ದಿನಾಂಕದಿಂದ ಮೂರು ವರ್ಷಗಳವರೆಗೆ ಪದಧಾರಣ ಮಾಡತಕ್ಕುದು. ಅವರು ಮರು ನೇಮಕಾತಿಗೆ ಅರ್ಹರಾಗಿರತಕ್ಕದ್ದು.

(3) ಅಧ್ಯಕ್ಷರು ಮತ್ತು ಇತರ ಪ್ರತಿಯೊಬ್ಬ ಸದಸ್ಯರು, ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

(4) ಅಧ್ಯಕ್ಷರ ಮತ್ತು ಇತರ ಸದಸ್ಯರ ಭತ್ಯಗಳನ್ನು ಮಂಡಲಿಯ ನಿಧಿಗಳಿಂದ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂಥವು ಆಗಿರತಕ್ಕದ್ದು.][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಸದಸ್ಯರ ಸ್ಥಾನ ತೆರವಾಗುವುದು.–** [1][ಅಧ್ಯಕ್ಷರು ಅಥವಾ ಯಾರೇ ಇತರ ಸದಸ್ಯರು,][1]–

(ಎ) 5ನೇ ಪ್ರಕರಣದಲ್ಲಿ ನಮೂದಿಸಿದ ಅನರ್ಹತೆಗಳ ಪೈಕಿ ಯಾವುದೇ ಅನರ್ಹತೆಗೆ ಒಳಗಾದರೆ; ಅಥವಾ

(ಬಿ) ರಾಜ್ಯ ಸರ್ಕಾರಕ್ಕೆ ಲಿಖಿತದಲ್ಲಿ ತನ್ನ ರಾಜೀನಾಮೆಯನ್ನು ಸಲ್ಲಿಸಿದರೆ; ಅಥವಾ

(ಸಿ) ಮಂಡಲಿಯ ಅನುಮತಿಯಿಲ್ಲದೆ ಮಂಡಲಿಯ ಎಲ್ಲಾ ಸಭೆಗಳಿಗೆ ಮೂರು ನಿರಂತರ ಸಾಮಾನ್ಯ ಸಭೆಗಳಿಗೆ ಗೈರುಹಾಜರಾದರೆ

– ಅವರು [1][ಅಧ್ಯಕ್ಷರಾಗಿರುವುದು ಅಥವಾ ಸದಸ್ಯನಾಗಿರುವುದು ಕೊನೆಗೊಳ್ಳತಕ್ಕದ್ದು.][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**8. ಖಾಲಿಸ್ಥಾನವನ್ನು ಸಾಧ್ಯವಾದಷ್ಟು ಬೇಗನೆ ಭರ್ತಿಮಾಡುವುದು.–** (1) [1][ಅಧ್ಯಕ್ಷರ ಅಥವಾ ಸದಸ್ಯನ ಪದದಲ್ಲಿ ಉಂಟಾದ ಯಾವುದೇ ಖಾಲಿಸ್ಥಾನವನ್ನು][1] ಸಾಧ್ಯವಾದಷ್ಟು ಬೇಗನೆ ಭರ್ತಿಮಾಡತಕ್ಕದ್ದು.

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಮುಂದುವರಿಯುತ್ತಿರುವ ಸದಸ್ಯರು, ಸ್ಥಾನವು ಹಾಗೆ ಖಾಲಿ ಇರುವಾಗ ಯಾವುದೇ ಸ್ಥಾನವು ಖಾಲಿಯಾಗಿರದಿದ್ದರೆ ಹೇಗೋ ಹಾಗೆ ಕಾರ್ಯನಿರ್ವಹಿಸಬಹುದು.

**9. ವ್ಯವಹರಣೆಗಳು ಸರಿಯೆಂದು ಮತ್ತು ಸಿಂಧುವಾಗಿರುವುದಾಗಿ ಪೂರ್ವಭಾವನೆ ಮಾಡುವುದು.–** ಮಂಡಲಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ನೇಮಕಾತಿಗೆ ಸಂಬಂಧಿಸಿದ ಯಾವುದೇ ಅನರ್ಹತೆಯು ಅಥವಾ ದೋಷವು, ಮಂಡಲಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು, ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿದ್ದರೆ ಅಂಥ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ನಿರರ್ಥಕಗೊಳಿಸುವುದಾಗಿ ಭಾವಿಸತಕ್ಕದ್ದಲ್ಲ.

[1][**10. ಗೃಹನಿರ್ಮಾಣ ಆಯುಕ್ತರು, ಮುಖ್ಯ ಇಂಜಿನಿಯರ್ ಮತ್ತು ಕಾರ್ಯದರ್ಶಿಯ ನೇಮಕಾತಿ ಮತ್ತು ಅವರ ಅಧಿಕಾರಗಳು.–** (1) ರಾಜ್ಯ ಸರ್ಕಾರವು, ಜಿಲ್ಲಾಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯನ್ನು ಮಂಡಲಿಯ ಗೃಹನಿರ್ಮಾಣ ಆಯುಕ್ತರಾಗಿ ನೇಮಕ ಮಾಡತಕ್ಕದ್ದು.

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ 10 ಮತ್ತು 10ಎ ಪ್ರಕರಣವನ್ನು ಪ್ರತಿಯೋಜಿಸಲಾಗಿದೆ.

(2) ರಾಜ್ಯ ಸರ್ಕಾರವು ಮಂಡಲಿಗೆ ತನ್ನ ಅಧಿಕಾರಿಗಳ ಪೈಕಿಯಿಂದ ಒಬ್ಬ ಮುಖ್ಯ ಇಂಜಿನಿಯರನ್ನು ಮತ್ತು ಒಬ್ಬ ಕಾರ್ಯದರ್ಶಿಯನ್ನು ನೇಮಕಮಾಡತಕ್ಕದ್ದು.

(3) ಗೃಹ ನಿರ್ಮಾಣ ಆಯುಕ್ತರು, ಮುಖ್ಯ ಇಂಜಿನಿಯರ್ ಮತ್ತು ಕಾರ್ಯದರ್ಶಿಯು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಮಂಡಲಿಯಿಂದ ಸಂಪೂರ್ಣವಾಗಿ ಸಂದಾಯವಾಗತಕ್ಕ ಮಾಸಿಕ ವೇತನ ಮತ್ತು ಇತರ ಭತ್ಯಗಳನ್ನು ಪಡೆಯತಕ್ಕದ್ದು.

(4) ರಾಜ್ಯ ಸರ್ಕಾರವು, ಗೃಹನಿರ್ಮಾಣ ಆಯುಕ್ತರಿಗೆ, ಮುಖ್ಯ ಇಂಜಿನಿಯರನಿಗೆ ಮತ್ತು ಕಾರ್ಯದರ್ಶಿಗೆ ತಾನು ಸೂಕ್ತವೆಂದು ಭಾವಿಸುವಂಥ ಅವಧಿಗೆ ಗೈರುಹಾಜರಿ ರಜೆಯನ್ನು ಕಾಲಕಾಲಕ್ಕೆ ಮಂಜೂರು ಮಾಡಬಹುದು. ಅಂಥ ರಜೆಯನ್ನು ಮಂಜೂರು ಮಾಡುವ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅಧ್ಯಕ್ಷರಿಗೆ ಕಳುಹಿಸತಕ್ಕದ್ದು.

(5) ಗೃಹ ನಿರ್ಮಾಣ ಆಯುಕ್ತರು ಮಂಡಲಿಯ ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತಾಧಿಕಾರಿ ಯಾಗಿರತಕ್ಕದ್ದು. ಅವನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅವನಿಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನೆರವೇರಿಸುವುದಲ್ಲದೆ ಮಂಡಲಿಯ ಲೆಕ್ಕಪತ್ರಗಳನ್ನು ಇಡತಕ್ಕದ್ದು ಮತ್ತು ಮಂಡಲಿಯ ಲೆಕ್ಕಪತ್ರಗಳ ನಿರ್ವಹಣೆಗೆ ಜವಾಬ್ದಾರನಾಗಿರತಕ್ಕದ್ದು. ಅವನು, ಮಂಡಲಿಯ [1][ಗೃಹನಿರ್ಮಾಣ ಯೋಜನೆಗಳನ್ನು, ಭೂ ಅಭಿವೃದ್ಧಿ ಯೋಜನೆಗಳನ್ನು ಮತ್ತು ಕಾರ್ಮಿಕರ ಗೃಹನಿರ್ಮಾಣ ಯೋಜನೆಗಳನ್ನು][1] ಕಾರ್ಯಗತಗೊಳಿಸುವುದಕ್ಕೆ ಸಹ ಜವಾಬ್ದಾರನಾಗಿರತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(6) ಗೃಹ ನಿರ್ಮಾಣ ಆಯುಕ್ತರು, ಮಂಡಲಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಮೇರೆಗೆ ರಾಜ್ಯ ಸರ್ಕಾರದ ಪ್ರಧಾನ ಇಲಾಖಾ ಮುಖ್ಯಸ್ಥನ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(7) ಮುಖ್ಯ ಇಂಜಿನಿಯರನು ಮತ್ತು ಕಾರ್ಯದರ್ಶಿಯು, ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು ಮಂಡಲಿಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**10ಎ. ಮಂಡಲಿಯ ಅಧಿಕಾರಿಗಳು ಮತ್ತು ನೌಕರರು.–** (1) ಅಧಿನಿಯಮದ ಮೇರೆಗೆ ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಮಂಡಲಿಯು, ತನ್ನ ಉದ್ದೇಶಗಳಿಗಾಗಿ ಅವಶ್ಯವೆನಿಸುವಂಥ ಅಧಿಕಾರಿಗಳನ್ನು ಮತ್ತು ನೌಕರರನ್ನು ಹೊಂದಿರಬಹುದು. ಈ ನೇಮಕಾತಿಗಳನ್ನು ಮಾಡುವಾಗ, ಪರಿಶಿಷ್ಟ ಜಾತಿಯ, ಪರಿಶಿಷ್ಟ ಪಂಗಡದ ಮತ್ತು ಇತರ ಹಿಂದುಳಿದ ವರ್ಗಗಳ ನಾಗರೀಕರಿಗೆ, ರಾಜ್ಯ ಸರ್ಕಾರಿ ಸೇವೆಗಳ ನೇಮಕಾತಿಗೆ ಅನ್ವಯವಾಗುವ ಅಂಥದೇ ರೀತಿಯಲ್ಲಿ ಮತ್ತು ಅಷ್ಟೇ ಪ್ರಮಾಣದಲ್ಲಿ ಸಾಕಷ್ಟು ಸಂಖ್ಯೆಯ ಹುದ್ದೆಗಳನ್ನು ಮೀಸಲಿಡುವುದು ನೇಮಕಾತಿ ಪ್ರಾಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಗಳ ಮತ್ತು ನೌಕರರ ಉಪಲಬ್ಧಿಗಳು, ಭತ್ಯೆಗಳು ಮತ್ತು ಇತರ ಸೇವಾಷರತ್ತುಗಳು, ಅನ್ಯಥಾ ನಿಯಮಿಸಲಾದಂತೆ ಹೊರತು, ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಿಗೆ ಒಳಪಡುವ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗುವಂಥದೇ ರೀತಿಯಲ್ಲಿ ಇರತಕ್ಕದ್ದು.

(3) ಕರ್ನಾಟಕ ಲೋಕಸೇವಾ ಆಯೋಗವು, ರಾಜ್ಯ ಸೇವೆಗಳಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ 320ನೇ ಅನುಚ್ಛೇದದ ಮೇರೆಗೆ ಯಾವ ಪ್ರಕಾರ್ಯಗಳನ್ನು ಚಲಾಯಿಸುವುದೋ ಅವೇ ಪ್ರಕಾರ್ಯಗಳನ್ನು ಮಂಡಲಿಯ ಸೇವೆಗಳಿಗೆ ಸಂಬಂಧಿಸಿದಂತೆ ಚಲಾಯಿಸತಕ್ಕದ್ದು ಮತ್ತು ನಿಯಮಿಸಲಾದವುಗಳನ್ನು ಹೊರತುಪಡಿಸಿ, ಎರಡು ನೂರು ರೂಪಾಯಿಗಳಿಗೆ ಮೀರಿದ ಗರಿಷ್ಠ ಮಾಸಿಕ ವೇತನದ ಹುದ್ದೆಗಳಿಗೆ ಮಾಡುವ ಪ್ರತಿಯೊಂದು ನೇಮಕಾತಿಯನ್ನು ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸಿ ಮಾಡತಕ್ಕದ್ದು.

ಪರಂತು, ಈ ಉಪ-ಪ್ರಕರಣವು, ಒಂದು ವರ್ಷವನ್ನು ಮೀರುವ ಒಟ್ಟು ಅವಧಿಗೆ ಮಾಡಲಾಗುವ ಸ್ಥಾನಾಪನ್ನ ಅಥವಾ ಹಂಗಾಮಿ ನೇಮಕಾತಿಗೆ ಅನ್ವಯವಾಗತಕ್ಕದ್ದಲ್ಲ.

ಮತ್ತೂ ಪರಂತು, ರಾಜ್ಯ ಸರ್ಕಾರದ ಅನುಮೋದನೆ ಪಡೆದ ಹೊರತು, ಸದರಿ ಆಯೋಗದ ಸಲಹೆಗೆ ವಿರುದ್ಧವಾಗಿ ಯಾವುದೇ ನೇಮಕಾತಿಯನ್ನು ಮಾಡತಕ್ಕದ್ದಲ್ಲ.][1]

**11. ಎಲ್ಲಾ ಅಧಿಕಾರಿಗಳ ಮತ್ತು ನೌಕರರ ಸಾಮಾನ್ಯ ಅನರ್ಹತೆ.–** ಮಂಡಲಿಯ ಅಧಿಕಾರಿ ಅಥವಾ ನೌಕರನ ಹೊರತು, ಮಂಡಲಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಸ್ವತಃ ಅಥವಾ ಅವನ ಪಾಲುದಾರ ಅಥವಾ ಏಜೆಂಟನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಮಂಡಲಿಯಲ್ಲಿ, ಮಂಡಲಿಯು ಅಥವಾ ಅದರ ಪರವಾಗಿ ಮಾಡಿದ ಯಾವುದೇ ನಿಯೋಜನೆಯಲ್ಲಿರುವ ಯಾರೇ ವ್ಯಕ್ತಿಯು ಮಂಡಲಿಯ ಅಧಿಕಾರಿ ಅಥವಾ ನೌಕರನಾಗತಕ್ಕದ್ದಲ್ಲ ಅಥವಾ ಹಾಗೆ ಉಳಿಯತಕ್ಕದ್ದಲ್ಲ.

**12. ಸಮಿತಿಗಳ ನೇಮಕಾತಿ.–** ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಮಂಡಲಿಯು, ಕಾಲಕಾಲಕ್ಕೆ ಮತ್ತು ಯಾವುದೇ ನಿರ್ದಿಷ್ಟ ಸ್ಥಳೀಯ ಪ್ರದೇಶಕ್ಕಾಗಿ, ತಾನು ಪ್ರತ್ಯಾಯೋಜಿಸಬಹುದಾದಂಥ ಕರ್ತವ್ಯಗಳ ನಿರ್ವಹಣೆಯ ಅಥವಾ ಪ್ರಕಾರ್ಯಗಳ ನೆರವೇರಿಕೆಯ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಸಮಿತಿಗಳನ್ನು ನೇಮಕ ಮಾಡಬಹುದು ಮತ್ತು ಅಂಥ ಯಾವುದೇ ಸಮಿತಿಯು, ಆ ನಿರ್ದಿಷ್ಟ ಪ್ರದೇಶದ ಸನ್ನಿವೇಶಗಳಿಗೆ ಮತ್ತು ಅಗತ್ಯತೆಗಳಿಗೆ ಯುಕ್ತ ಗಮನ ಕೊಟ್ಟು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಅಥವಾ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**13. ಮಂಡಲಿಯ ಸಭೆಗಳು.–** ಮಂಡಲಿಯು, ಈ ಕೆಳಕಂಡ ಉಪಬಂಧಗಳಿಗೆ ಒಳಪಟ್ಟು, ಸಭೆ ಸೇರತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂತೆ ತನ್ನ ಸಭೆಗಳ ದಿನಾಂಕ, ಸಮಯ, ಸ್ಥಳ, ನೋಟೀಸು, ವ್ಯವಸ್ಥಾಪನೆ ಮತ್ತು ಮುಂದೂಡಿಕೆ ಇವುಗಳಿಗೆ ಸಂಬಂಧಿಸಿದ ಉಪವಿಧಿಗಳನ್ನು ಕಾಲಕಾಲಕ್ಕೆ ರಚಿಸತಕ್ಕದ್ದು, ಎಂದರೆ:-

(ಎ) ಸಾಮಾನ್ಯ ಸಭೆಯನ್ನು ಕನಿಷ್ಠ ಪಕ್ಷ ಪ್ರತಿ ಎರಡು ತಿಂಗಳಿಗೊಮ್ಮೆ ನಡೆಸತಕ್ಕದ್ದು;

(ಬಿ) ಅಧ್ಯಕ್ಷರು, ತಾನು ಸೂಕ್ತವೆಂದು ಭಾವಿಸಿದಾಗ ವಿಶೇಷ ಸಭೆಗಳನ್ನು ಕರೆಯಬಹುದು;

(ಸಿ) ಪ್ರತಿಯೊಂದು ಸಭೆಗೆ ಅಗತ್ಯವಾದ ಕೋರಂ [1][ಏಳು][1] ಆಗಿರತಕ್ಕದ್ದು;

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿಸಿ) ಸರ್ಕಾರದ ಕಾರ್ಯದರ್ಶಿಯಾಗಿರುವ ಯಾರೇ ಸದಸ್ಯರು ಮಂಡಲಿಯ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಆತನು, ಆ ಬಗ್ಗೆ ಅಧ್ಯಕ್ಷರಿಗೆ ತಿಳಿಸಿ ಉಪಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಯಾವನೇ ಅಧಿಕಾರಿಗೆ ಆ ಸಭೆಗೆ ಹಾಜರಾಗುವಂತೆ ಲಿಖಿತದಲ್ಲಿ ಅಧಿಕಾರ ನೀಡಬಹುದು;][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) ಅಧ್ಯಕ್ಷರು ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಗೈರು ಹಾಜರಿಯಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರು ಆ ಸಂದರ್ಭಕ್ಕಾಗಿ ಆಯ್ಕೆ ಮಾಡಿದ ಯಾರೇ ಸದಸ್ಯನು ಅಧ್ಯಕ್ಷತೆ ವಹಿಸತಕ್ಕದ್ದು;

(ಇ) ಯಾವುದೇ ಸಭೆಯಲ್ಲಿನ ಎಲ್ಲಾ ವಿಷಯಗಳನ್ನು ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮಸಮವಾಗಿರುವ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿಯು ದ್ವಿತೀಯ ಮತ್ತು ನಿರ್ಣಾಯಕ ಮತವನ್ನು ಹೊಂದಿರತಕ್ಕುದು ಮತ್ತು ಅದನ್ನು ಚಲಾಯಿಸತಕ್ಕದ್ದು;

(ಎಫ್) ಪ್ರತಿಯೊಂದು ಸಭೆಯ ವ್ಯವಹರಣೆಗಳ ಸಂಕ್ಷಿಪ್ತ ವರದಿಯನ್ನು ಆ ಉದ್ದೇಶಕ್ಕಾಗಿ ಒದಗಿಸಲಾಗುವ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು.

**14. ಕರಾರುಗಳನ್ನು ಮಾಡಿಕೊಳ್ಳುವ ಅಧಿಕಾರ.–** ಮಂಡಲಿಯು, ಈ ಅಧಿನಿಯಮದ ಉದ್ದೇಶಗಳ ಪೈಕಿ ಯಾವುದೇ ಉದ್ದೇಶವನ್ನು ಈಡೇರಿಸಲು ತಾನು ಅವಶ್ಯವೆಂದು ಅಥವಾ ವಿಹಿತವೆಂದು ಪರಿಗಣಿಸಬಹುದಾದಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳಬಹುದು ಮತ್ತು ಅವುಗಳನ್ನು ನೆರವೇರಿಸಬಹುದು ಅಥವಾ ನೇರವೇರಿಸುವಂತೆ ಅಗತ್ಯಪಡಿಸಬಹುದು.

**15. ಕರಾರುಗಳನ್ನು ಕಾರ್ಯಗತಗೊಳಿಸುವುದು.–** (1) ಪ್ರತಿಯೊಂದು ಕರಾರನ್ನು [1][ಗೃಹನಿರ್ಮಾಣ ಕಮೀಷನರನು][1] ಮಂಡಲಿಯ ಪರವಾಗಿ ಮಾಡಿಕೊಳ್ಳತಕ್ಕದ್ದು:

ಪರಂತು,

(ಎ) [2][ಐವತ್ತು ಲಕ್ಷ][2] ರೂಪಾಯಿ ಮತ್ತು ಅದಕ್ಕೂ ಹೆಚ್ಚಿನ ವೆಚ್ಚವನ್ನೊಳಗೊಂಡ ಯಾವುದೇ ಕರಾರನ್ನು ರಾಜ್ಯ ಸರ್ಕಾರದಿಂದ ಮೊದಲೇ ಮಂಜೂರಾತಿ ಪಡೆಯದೆ ಮಾಡಿಕೊಳ್ಳತಕ್ಕದ್ದಲ್ಲ.

(ಬಿ) (i) [2][ಹತ್ತು ಲಕ್ಷ][2] ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚವನ್ನೊಳಗೊಂಡ ಯಾವುದೇ ಕರಾರನ್ನು (ಎ) ಖಂಡಕ್ಕೆ ಒಳಪಟ್ಟು, ಮಂಡಲಿಯಿಂದ ಮೊದಲೇ ಮಂಜೂರಾತಿ ಪಡೆಯದೆ ಮಾಡಿಕೊಳ್ಳತಕ್ಕದ್ದಲ್ಲ.

(ii) [2][ಹತ್ತು ಲಕ್ಷ][2] ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚವನ್ನೊಳಗೊಂಡ ಯಾವುದೇ ಅಂದಾಜನ್ನು ಅಥವಾ ಟೆಂಡರನ್ನು (ಎ) ಖಂಡಕ್ಕೆ ಒಳಪಟ್ಟು, ಮಂಡಲಿಯಿಂದ ಮೊದಲೇ ಮಂಜೂರಾತಿ ಪಡೆಯದೆ ಮಂಜೂರು ಮಾಡತಕ್ಕುದಲ್ಲ ಅಥವಾ ಅಂಗೀಕರಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣವು, ಕರಾರಿನ ಅಥವಾ ಅಂದಾಜಿನ ಪ್ರತಿಯೊಂದು ವ್ಯತ್ಯಾಸಕ್ಕೆ ಅಥವಾ ಅದನ್ನು ಬಿಟ್ಟುಕೊಡುವುದಕ್ಕೆ ಹಾಗೂ ಮೂಲ ಕರಾರಿಗೆ ಅಥವಾ ಅಂದಾಜಿಗೆ ಅನ್ವಯವಾಗತಕ್ಕದ್ದಲ್ಲ.

(3) [1][ಗೃಹ ನಿರ್ಮಾಣ ಕಮೀಷನರನು][1] ಮಂಡಲಿಯ ಪರವಾಗಿ ಮಾಡಿಕೊಂಡ ಪ್ರತಿಯೊಂದು ಕರಾರನ್ನು, ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಮಾಡಿಕೊಳ್ಳತಕ್ಕದ್ದು.

(4) ಈ ಪ್ರಕರಣದಲ್ಲಿ, ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಲ್ಲಿ ಉಪಬಂಧಿಸಲಾದಂತೆ ಮಾಡಿಕೊಂಡಿಲ್ಲದ ಅಥವಾ ನಿರ್ವಹಿಸಿಲ್ಲದ ಕರಾರಿಗೆ ಮಂಡಲಿ ಬಂಧವಾಗತಕ್ಕದ್ದಲ್ಲ.

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**16. ಪ್ರತ್ಯಾಯೋಜನೆ.–** [2][(1)][2] ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಗೃಹನಿರ್ಮಾಣ ಆಯುಕ್ತರು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದಾನ ಮಾಡಿದ ಯಾವುವೇ ಅಧಿಕಾರಗಳನ್ನು ಅಥವಾ ಅವನಿಗೆ ವಿಧಿಸಲಾದ ಕರ್ತವ್ಯಗಳನ್ನು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾಂಥ ಷರತ್ತುಗಳಿಗೆ ಒಳಪಟ್ಟು ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಪ್ರತ್ಯಾಯೋಜಿಸಲು ಅಧಿಕೃತಗೊಳಿಸಬಹುದು.][1]

[3][(2) ಮಂಡಲಿಯು, ವಿನಿಯಮಗಳನ್ನು ರಚಿಸುವ ಅಧಿಕಾರದ ಹೊರತಾಗಿ ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಗೃಹನಿರ್ಮಾಣ ಕಮೀಷನರು ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಂಡಲಿಯ ಇತರ ಅಧಿಕಾರಿಯು ಕೂಡ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಚಲಾಯಿಸಬಹುದೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.][3]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪುನರ್ ಸಂಖ್ಯೆ ನೀಡಲಾಗಿದೆ.
3. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ-III

## ಗೃಹನಿರ್ಮಾಣ ಯೋಜನೆಗಳು [1][ಮತ್ತು ಭೂ ಅಭಿವೃದ್ಧಿ ಯೋಜನೆಗಳು][1]

**17. ಗೃಹನಿರ್ಮಾಣ ಯೋಜನೆಗಳನ್ನು [1][ಮತ್ತು ಭೂ ಅಭಿವೃದ್ಧಿ ಯೋಜನೆಗಳನ್ನು][1] ಕೈಗೊಳ್ಳುವುದು ಮಂಡಲಿಯ ಕರ್ತವ್ಯವಾಗಿರುವುದು.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಮಂಡಲಿಯು, ತಾನು ಕಾಲಕಾಲಕ್ಕೆ ಅವಶ್ಯವೆಂದು ಭಾವಿಸಬಹುದಾದಂಥ ಅಥವಾ ರಾಜ್ಯ ಸರ್ಕಾರವು ಅದಕ್ಕೆ ವಹಿಸಿಕೊಡಬಹುದಾದಂಥ ಗೃಹ ನಿರ್ಮಾಣ ಯೋಜನೆಗಳನ್ನು [1][ಮತ್ತು ಭೂ ಅಭಿವೃದ್ಧಿ ಯೋಜನೆಗಳನ್ನು][1] ರೂಪಿಸುವುದಕ್ಕಾಗಿ ಮತ್ತು ಕಾರ್ಯಗತಗೊಳಿಸುವುದಕ್ಕಾಗಿ ವೆಚ್ಚ ವಹಿಸಬಹುದು ಮತ್ತು ಯಾವುದೇ ಪ್ರದೇಶದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬಹುದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**18. ಗೃಹನಿರ್ಮಾಣ ಯೋಜನೆಗಳ ಮೂಲಕ ವ್ಯವಸ್ಥೆ ಮಾಡಬೇಕಾದ ವಿಷಯ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಗೃಹ ನಿರ್ಮಾಣ ಯೋಜನೆಯು, ಈ ಕೆಳಕಂಡ ಎಲ್ಲಾ ಅಥವಾ ಅವುಗಳ ಪೈಕಿ ಯಾವುದೇ ವಿಷಯದ ಬಗ್ಗೆ ವ್ಯವಸ್ಥೆ ಮಾಡಬಹುದು, ಎಂದರೆ:-

(ಎ) ಯೋಜನೆಯ ನಿರ್ವಹಣೆಗೆ ಅವಶ್ಯಕವಾದ ಅಥವಾ ಅದರಿಂದ ಬಾಧಿತವಾಗುವಂಥ ಯಾವುದೇ ಸ್ವತ್ತನ್ನು ಖರೀದಿಸುವ, ವಿನಿಮಯ ಮಾಡುವ ಮೂಲಕ ಅಥವಾ ಇತರ ರೀತಿಯಲ್ಲಿ ಆರ್ಜಿಸುವುದು;

(ಬಿ) ಯೋಜನೆಯಲ್ಲಿ ಒಳಗೊಂಡ ಯಾವುದೇ ಜಮೀನಿನ ವಿನ್ಯಾಸ ಅಥವಾ ಮರುವಿನ್ಯಾಸ;

(ಸಿ) ಯೋಜನೆಯಲ್ಲಿ ಒಳಗೊಂಡ ಸ್ವತ್ತಿನ ಒಡೆಯರಿಗೆ ಸೇರಿದ ನಿವೇಶನಗಳ ಹಂಚಿಕೆ ಅಥವಾ ಮರುಹಂಚಿಕೆ;

(ಡಿ) ಮಾನವ ವಾಸಕ್ಕೆ ಯೋಗ್ಯವಲ್ಲದ ನಿವಾಸಗಳನ್ನು ಮುಚ್ಚುವುದು ಅಥವಾ ಕೆಡವಿ ಹಾಕುವುದು;

(ಇ) ಅಡ್ಡಿಯುಂಟು ಮಾಡುವ ಕಟ್ಟಡಗಳನ್ನು ಅಥವಾ ಕಟ್ಟಡಗಳ ಭಾಗವನ್ನು ಕೆಡವಿ ಹಾಕುವುದು;

(ಎಫ್) ಕಟ್ಟಡಗಳ ನಿರ್ಮಾಣ ಮತ್ತು ಮರುನಿರ್ಮಾಣ ಮತ್ತು ಅವುಗಳ ನಿರ್ವಹಣೆ ಮತ್ತು ರಕ್ಷಣೆ;

(ಜಿ) ಯೋಜನೆಯಲ್ಲಿ ಒಳಗೊಂಡ ಯಾವುದೇ ಸ್ವತ್ತನ್ನು ಮಾರಾಟ ಮಾಡುವುದು, ಬಾಡಿಗೆಗೆ ನೀಡುವುದು ಅಥವಾ ವಿನಿಮಯ ಮಾಡವುದು;

(ಹೆಚ್) ಬೀದಿಗಳ ಮತ್ತು ಗಲ್ಲಿಗಳ ನಿರ್ಮಾಣ ಮತ್ತು ಮಾರ್ಪಾಟು;

(ಐ) ಯೋಜನೆಯಲ್ಲಿ ಒಳಗೊಂಡ ಪ್ರದೇಶಕ್ಕೆ ಚರಂಡಿ, ನೀರು ಸರಬರಾಜು ಮತ್ತು ದೀಪದ ವ್ಯವಸ್ಥೆ [1][ಮತ್ತು ಅಂಥ ಪ್ರದೇಶದಲ್ಲಿ ಮಂಡಲಿಯು, ಚರಂಡಿ, ಗ್ರಾಮಸಾರ ಚರಂಡಿ, ಮತ್ತು ನೀರು ಸರಬರಾಜು ಕಾಮಗಾರಿಗಳನ್ನು ಕಾರ್ಯಗತ ಗೊಳಿಸುವುದು;][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಜೆ) ಯೋಜನೆಯಲ್ಲಿ ಒಳಗೊಂಡ ಯಾವುದೇ ಪ್ರದೇಶದ ಅನುಕೂಲಕ್ಕಾಗಿ ಉದ್ಯಾನ ವನಗಳು, ಆಟದ ಮೈದಾನಗಳು ಮತ್ತು ತೆರವು ಜಾಗಗಳ ವ್ಯವಸ್ಥೆ ಮತ್ತು ಈಗಿರುವ ಉದ್ಯಾನ ವನಗಳು, ಆಟದ ಮೈದಾನಗಳು ಮತ್ತು ಕೂಡು ರಸ್ತೆಗಳನ್ನು ವಿಸ್ತರಿಸುವುದು;

(ಕೆ) ನದಿಗಳು ಅಥವಾ ನೀರು ಸರಬರಾಜಿನ ಇತರ ಮೂಲಗಳನ್ನು ಮತ್ತು ಸಾಧನಗಳನ್ನು ಸಂರಕ್ಷಿಸುವುದು ಮತ್ತು ಅವುಗಳಿಗೆ ಯಾವುದೇ ಹಾನಿ ಅಥವಾ ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟುವುದೂ ಸೇರಿದಂತೆ ಯೋಜನೆಯಲ್ಲಿ ಒಳಗೊಂಡ ಪ್ರದೇಶಕ್ಕೆ ಅಗತ್ಯವಿರುವ ನೈರ್ಮಲ್ಯ ವ್ಯವಸ್ಥೆಗಳ ಏರ್ಪಾಡು;

(ಎಲ್) ಯಾವುದೇ ವರ್ಗದ ನಿವಾಸಿಗಳಿಗೆ ವಸತಿ ಸೌಕರ್ಯ ಕಲ್ಪಿಸುವುದು;

(ಎಂ) ಯೋಜನೆಯ ಉದ್ದೇಶಗಳಿಗಾಗಿ ಮುಂಗಡ ಹಣ ನೀಡುವುದು;

(ಎನ್) ಸಂಪರ್ಕ ಮತ್ತು ಸಾರಿಗೆ ಸೌಲಭ್ಯಗಳ ವ್ಯವಸ್ಥೆ ಮಾಡುವುದು;

(ಒ) ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದಂಥ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಸಂಗ್ರಹಿಸುವುದು;

(ಪಿ) ವಸತಿ ಸೌಕರ್ಯ ಕಲ್ಪಿಸುವ ಮತ್ತು ಯೋಜನೆಯಲ್ಲಿ ಒಳಗೊಂಡ ಯಾವುದೇ ಪ್ರದೇಶದ ಸುಧಾರಣೆ ಅಥವಾ ಅಭಿವೃದ್ಧಿ ಅಥವಾ ಯೋಜನೆಯ ಸಾಮಾನ್ಯ ದಕ್ಷ ನಿರ್ವಹಣೆಯ ದೃಷ್ಟಿಯಿಂದ ಯಾವ ವಿಷಯದ ಬಗ್ಗೆ ಉಪಬಂಧ ಕಲ್ಪಿಸುವುದು ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ವಿಹಿತವಾಗಿರುವುದೋ ಆ ಯಾವುದೇ ಇತರ ವಿಷಯ.

**[1][18ಎ. ಭೂ ಅಭಿವೃದ್ಧಿ ಯೋಜನೆಗಳ ಮೂಲಕ ವ್ಯವಸ್ಥೆ ಗೊಳಿಸಬೇಕಾದ ವಿಷಯಗಳು.–**

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಭೂ ಅಭಿವೃದ್ಧಿ ಯೋಜನೆಯು, ಯೋಜನೆಯಲ್ಲಿ ಅಡಕವಾದ ಪ್ರದೇಶದ ಪರಿಮಿತಿಗಳೊಳಗೆ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ವ್ಯವಸ್ಥೆ ಮಾಡಬಹುದು, ಎಂದರೆ:–

(ಎ) ಮಂಡಲಿಯ ಅಭಿಪ್ರಾಯದಲ್ಲಿ ಯಾವ ಜಮೀನು ಭೂ ಅಭಿವೃದ್ಧಿ ಯೋಜನೆಯ ಜಾರಿಗೆ ಅವಶ್ಯಕವಾಗಿದೆಯೋ ಅಥವಾ ಹಾಗೆ ಜಾರಿಗೊಳಿಸುವುದರಿಂದ ಬಾಧಿತವಾಗುವುದೋ ಆ ಜಮೀನನ್ನು ಖರೀದಿಯ ಅಥವಾ ವಿನಿಮಯದ ಮೂಲಕ ಅಥವಾ ಅನ್ಯಥಾ ಆರ್ಜಿಸುವುದು;

(ಬಿ) ಯೋಜನೆಯಲ್ಲಿ ಅಡಕವಾದ ಎಲ್ಲಾ ಅಥವಾ ಯಾವುದೇ ಭೂಮಿಯನ್ನು ವಿನ್ಯಾಸಗೊಳಿಸುವುದು ಅಥವಾ ಮರುವಿನ್ಯಾಸಗೊಳಿಸುವುದು ಮತ್ತು ಬೀದಿಗಳನ್ನು ರಚಿಸುವುದು ಮತ್ತು ವ್ಯತ್ಯಾಸಗೊಳಿಸುವುದು;

(ಸಿ) ಚರಂಡಿ, ನೀರು ಸರಬರಾಜು, ವಿದ್ಯುಚ್ಛಕ್ತಿ ಮತ್ತು ಯೋಜನೆಯಲ್ಲಿ ಸೇರಿದ ಪ್ರದೇಶದಲ್ಲಿ ಮಂಡಲಿಯು ಚರಂಡಿ, ಗ್ರಾಮಸಾರ ಚರಂಡಿ ಮತ್ತು ನೀರು ಸರಬರಾಜು ಕಾಮಗಾರಿಗಳನ್ನು ನಿರ್ವಹಿಸುವುದು;

(ಡಿ) ಯೋಜನೆಗನುಸಾರ ನಿವೇಶಗಳ ಹಂಚಿಕೆ ಅಥವಾ ಮರುಹಂಚಿಕೆ;

(ಇ) ಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸಲು ಯಾವ ಜಮೀನಿನ ಮಟ್ಟವನ್ನು ವಿಸ್ತರಿಸುವುದು ವಿಹಿತವೆಂದು ಮಂಡಲಿಯು ಪರಿಗಣಿಸಬಹುದೋ ಆ ಜಮೀನಿನ ಮಟ್ಟವನ್ನು ಎತ್ತರಿಸುವುದು;

(ಎಫ್) ಯೋಜನೆಯಲ್ಲಿ ಅಡಕವಾದ ಪ್ರದೇಶದಲ್ಲಿ ಅಥವಾ ಯಾವುದೇ ಪಕ್ಕದ ಪ್ರದೇಶದಲ್ಲಿ ಗಾಳಿ ಬೆಳಕಿನ ಸುವ್ಯವಸ್ಥೆಗಾಗಿ ಬಹಿರಂಗ ಸ್ಥಳದ ಏರ್ಪಾಟು;

(ಜಿ) ಅಗತ್ಯವಾದ ನೈರ್ಮಲ್ಯ ವ್ಯವಸ್ಥೆ;

(ಹೆಚ್) ಉದ್ಯಾನಗಳು, ಆಟದ ಬಯಲುಗಳು, ಕ್ರೀಡಾಂಗಣ, ಮನರಂಜನಾ ಸ್ಥಳಗಳು, ಶಾಲಾ ಕಟ್ಟಡಗಳು, ಮಾರುಕಟ್ಟೆಗಳು, ಮೋಟಾರು ವಾಹನ ನಿಲ್ದಾಣಗಳು, ಥಿಯೇಟರುಗಳು, ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ಸಹಕಾರ ಸಂಘಗಳು, ಸಾರ್ವಜನಿಕ ಮೂತ್ರಾಲಯಗಳು ಮತ್ತು ಶೌಚಾಲಯಗಳು, ಪೆಟ್ರೋಲ್ ಸರ್ವೀಸ್ ಸ್ಟೇಷನ್‌ಗಳು, ಆಸ್ಪತ್ರೆಗಳು, ಔಷಧಾಲಯಗಳು, ಬ್ಯಾಂಕುಗಳು, ಸ್ಮಶಾನ ಮತ್ತು ಸುಡುಗಾಡು-ಇವುಗಳಿಗಾಗಿ ನಿವೇಶನಗಳು ಮತ್ತು ಇತರೆ ಬಗೆಯ ಸಾರ್ವಜನಿಕ ಉದ್ದೇಶಗಳಿಗಾಗಿ ನಿವೇಶನಗಳು.][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**19. ವಾರ್ಷಿಕ ಗೃಹನಿರ್ಮಾಣ ಕಾರ್ಯಕ್ರಮ [1][ಮತ್ತು ಭೂ ಅಭಿವೃದ್ಧಿ ಕಾರ್ಯಕ್ರಮ,][1] ಬಜೆಟ್ಟು ಮತ್ತು ಸಿಬ್ಬಂದಿ ವಿವರ ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು.–** (1) ಪ್ರತಿ ವರ್ಷ ಡಿಸೆಂಬರ್ ಮೊದಲನೇ ದಿನಕ್ಕೆ ಮುಂಚೆ ಮಂಡಲಿಯು,-

(i) ಒಂದು ಕಾರ್ಯಕ್ರಮವನ್ನು,

(ii) ಮುಂದಿನ ವರ್ಷದ ಬಜೆಟ್ಟನ್ನು,

(iii) ಈಗಾಗಲೇ ನಿಯೋಜಿತರಾಗಿರುವ ಮತ್ತು ಮುಂದಿನ ವರ್ಷದ ಅವಧಿಯಲ್ಲಿ ನಿಯೋಜಿಸಿಕೊಳ್ಳಬೇಕಾದ ಅಧಿಕಾರಿಗಳ ಮತ್ತು ನೌಕರರ ವಿವರ ಪಟ್ಟಿಯನ್ನು

– ನಿಯಮಿಸಬಹುದಾದಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಆ ಕಾರ್ಯಕ್ರಮವು,-

(ಎ) ಮಂಡಲಿಯು, ನಿಯಮಿಸಬಹುದಾದಂತೆ ಮಂದಿನ ವರ್ಷದ ಅವಧಿಯಲ್ಲಿ ಭಾಗಶಃ ಅಥವಾ ಪೂರ್ಣವಾಗಿ ಕಾರ್ಯಗತಗೊಳಿಸಲು ಪ್ರಸ್ತಾವಿಸಿದ, [1][ಗೃಹ ನಿರ್ಮಾಣ ಯೋಜನೆಗಳ, ಭೂ ಅಭಿವೃದ್ಧಿಯೋಜನೆಗಳ ಮತ್ತು ಕಾರ್ಮಿಕರ ಗೃಹನಿರ್ಮಾಣ ಯೋಜನೆ][1]ಗಳ ವಿವರಗಳನ್ನು;

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಕಟ್ಟಡ ಸಾಮಗ್ರಿಗಳ ಉತ್ಪಾದನೆಯ ಉದ್ದೇಶಕ್ಕಾಗಿ ಮುಂದಿನ ವರ್ಷದ ಅವಧಿಯಲ್ಲಿ ಮಂಡಲಿಯು ಸಂಘಟಿಸಲು ಅಥವಾ ಕಾರ್ಯಗತಗೊಳಿಸಲು ಪ್ರಸ್ತಾವಿಸಿರುವ ಯಾವುದೇ ಉದ್ಯಮದ ವಿವರಗಳನ್ನು; ಮತ್ತು

(ಸಿ) ನಿಯಮಿಸಬಹುದಾಂಥ ಇತರ ವಿವರಗಳನ್ನು

– ಒಳಗೊಂಡಿರತಕ್ಕದ್ದು.

(3) ಬಜೆಟ್ಟು ಮುಂದಿನ ವರ್ಷದ ಬಂಡವಾಳ ಮತ್ತು ರಾಜ್ಯಸ್ವ ಲೆಕ್ಕಗಳ ಮೇಲಣ ಅಂದಾಜು ಜಮೆಗಳನ್ನು ಮತ್ತು ವೆಚ್ಚಗಳನ್ನು ತೋರಿಸುವ ಒಂದು ತಃಖ್ತೆಯನ್ನು ಒಳಗೊಂಡಿರತಕ್ಕದ್ದು.

**20. ಕಾರ್ಯಕ್ರಮ, ಬಜೆಟ್ಟು ಮತ್ತು ಸಿಬ್ಬಂದಿ ವಿವರ ಇವುಗಳಿಗೆ ಮಂಜೂರಾತಿ.–** ರಾಜ್ಯ ಸರ್ಕಾರವು, ತನಗೆ ಕಳುಹಿಸಿದ ಕಾರ್ಯಕ್ರಮ, ಬಜೆಟ್ಟು ಮತ್ತು ಅಧಿಕಾರಿಗಳ ಮತ್ತು ನೌಕರರ ಸಿಬ್ಬಂದಿಯ ವಿವರಪಟ್ಟಿಯನ್ನು, ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳೊಂದಿಗೆ ಮಂಜೂರು ಮಾಡಬಹುದು.

**21. ಮಂಜೂರು ಮಾಡಲಾದ ಕಾರ್ಯಕ್ರಮದ ಪ್ರಕಟಣೆ.–** ರಾಜ್ಯ ಸರ್ಕಾರವು 20ನೇ ಪ್ರಕರಣದ ಮೇರೆಗೆ ತಾನು ಮಂಜೂರು ಮಾಡಿದ ಕಾರ್ಯಕ್ರಮವನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

**22. ಪೂರಕ ಕಾರ್ಯಕ್ರಮ ಮತ್ತು ಬಜೆಟ್.–** ಮಂಡಲಿಯು, ವರ್ಷದ ಅವಧಿಯಲ್ಲಿ ಯಾವುದೇ ಸಮಯದಲ್ಲಿ, 20ನೇ ಪ್ರಕರಣದ ಮೇರೆಗೆ ಮಂಜೂರಾಗಿರುವ ಕಾರ್ಯಕ್ರಮಕ್ಕೆ ಸಂಬಂಧಿಸಿ ಪೂರಕ ಕಾರ್ಯಕ್ರಮವನ್ನು ಮತ್ತು ಬಜೆಟ್ಟನ್ನು ಮತ್ತು ಸಿಬ್ಬಂದಿ ವರ್ಗದ ಹೆಚ್ಚುವರಿ ವಿವರಗಳು ಯಾವುವಾದರೂ ಇದ್ದಲ್ಲಿ ಅವುಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬಹುದು ಮತ್ತು 20ನೇ ಮತ್ತು 21ನೇ ಪ್ರಕರಣಗಳ ಉಪಬಂಧಗಳು ಅಂಥ ಪೂರಕ ಕಾರ್ಯಕ್ರಮಕ್ಕೆ ಅನ್ವಯವಾಗತಕ್ಕದ್ದು.

**23. ಕಾರ್ಯಕ್ರಮ ಮಂಜೂರಾದ ತರುವಾಯ ಮಂಡಲಿಯು ಅದನ್ನು ಮಾರ್ಪಾಟು ಗೊಳಿಸುವುದು.–** ರಾಜ್ಯ ಸರ್ಕಾರವು ಮಂಜೂರು ಮಾಡಿದ ಕಾರ್ಯಕ್ರಮದಲ್ಲಿ ಸೇರಿಸಲಾದ ಯಾವುದೇ ಕಾರ್ಯಕ್ರಮವನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಡಲಿಯು ಯಾವುದೇ ಸಮಯದಲ್ಲಿ ಮಾರ್ಪಾಟುಗೊಳಿಸಬಹುದು:

ಪರಂತು, ಅಂಥ ಯಾವುದೇ ಮಾರ್ಪಾಟು ಅಂಥ ಕಾರ್ಯಕ್ರಮದಲ್ಲಿ ಸೇರಿಸಲಾದ ಯಾವುದೇ ಗೃಹನಿರ್ಮಾಣ ಯೋಜನೆಯನ್ನು [1][ಅಥವಾ ಭೂ ಅಭಿವೃದ್ಧಿಯೋಜನೆಯನ್ನು][1] ಕಾರ್ಯಗತಗೊಳಿಸುವುದಕ್ಕಾಗಿ ಮೂಲತಃ ಮಂಜೂರಾದ ಮೊಬಲಗಿನ [2][ಶೇಕಡಾ ಇಪ್ಪತ್ತಕ್ಕಿಂತ][2] ಹೆಚ್ಚಿನ ವೆಚ್ಚವನ್ನು ಒಳಗೊಂಡಿದ್ದರೆ ಅಥವಾ ಅದರ ವ್ಯಾಪ್ತಿಗೆ ಅಥವಾ ಉದ್ದೇಶಕ್ಕೆ ಬಾಧಕವಾಗುವಂತಿದ್ದರೆ ಅಂತಹ ಮಾರ್ಪಾಟನ್ನು ಮಾಡತಕ್ಕದ್ದಲ್ಲ.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**24. ಮಂಜೂರಾದ ಗೃಹನಿರ್ಮಾಣ ಯೋಜನೆಗಳನ್ನು [1][ಮತ್ತು ಭೂ ಅಭಿವೃದ್ಧಿ ಯೋಜನೆಗಳನ್ನು][1] ಕಾರ್ಯಗತಗೊಳಿಸುವುದು.–** [2][(1)][2] ಕಾರ್ಯಕ್ರಮವನ್ನು 20ನೇ ಮತ್ತು 21 ನೇ ಪ್ರಕರಣಗಳ ಮೇರೆಗೆ ರಾಜ್ಯ ಸರ್ಕಾರವು ಮಂಜೂರು ಮಾಡಿ ಪ್ರಕಟಿಸಿದ ತರುವಾಯ, ಮಂಡಲಿಯು 23ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಆ ಕಾರ್ಯಕ್ರಮದಲ್ಲಿ ಸೇರಿಸಲಾದ [3][ಗೃಹನಿರ್ಮಾಣ ಯೋಜನೆಯನ್ನು, ಭೂ ಅಭಿವೃದ್ಧಿ ಯೋಜನೆಯನ್ನು ಮತ್ತು ಕಾರ್ಮಿಕರ ಗೃಹನಿರ್ಮಾಣ ಯೋಜನೆಯನ್ನು][3] ಕಾರ್ಯಗತಗೊಳಿಸಲು ಪ್ರಾರಂಭಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.
3. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಮಂಡಲಿಯು, ಆ ಯಾವುದೇ [2][ಗೃಹನಿರ್ಮಾಣ ಯೋಜನೆಯನ್ನು, ಭೂ ಅಭಿವೃದ್ಧಿ ಯೋಜನೆಯನ್ನು ಅಥವಾ ಕಾರ್ಮಿಕರ ಗೃಹನಿರ್ಮಾಣ ಯೋಜನೆಯನ್ನು][2], ರಾಜ್ಯ ಸರ್ಕಾರವು ಮಂಜೂರು ಮಾಡಿದ್ದ ಹೊರತು ಕಾರ್ಯಗತಗೊಳಿಸತಕ್ಕದ್ದಲ್ಲ.][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**25. ಗೃಹನಿರ್ಮಾಣ ಯೋಜನೆಯ [1][ಅಥವಾ ಭೂ ಅಭಿವೃದ್ಧಿ ಯೋಜನೆಯ][1] ಉದ್ದೇಶಕ್ಕಾಗಿ ನಿಗಮದಲ್ಲಿ [2][ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಅಥವಾ ಮಂಡಲ ಪಂಚಾಯಿತಿಯಲ್ಲಿ][2] ನಿಹಿತವಾದ ಜಮೀನನ್ನು ಮಂಡಲಿಗೆ ವರ್ಗಾಯಿಸುವುದು.–** (1) (ಎ) ಒಂದು ನಗರದಲ್ಲಿರುವ ಮತ್ತು ಅಂಥ ನಗರ ಪೌರ ನಿಗಮದಲ್ಲಿ ನಿಹಿತವಾಗಿರುವ; ಅಥವಾ

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಪುರಸಭೆಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ರಚಿಸಿದ ಪುರಸಭೆಯ ಯಾವುದೇ ಭಾಗದಲ್ಲಿ ಇರುವ ಮತ್ತು ಪುರಸಭಾ ಪರಿಷತ್ತಿನಲ್ಲಿ, ಪುರಸಭಾ ಸಮಿತಿಯಲ್ಲಿ ಅಥವಾ ಆ ಪುರಸಭೆಯ ಇತರ ಪುರಸಭಾ ನಿಕಾಯದಲ್ಲಿ ನಿಹಿತವಾಗಿರುವ; ಅಥವಾ

(ಸಿ) [1][xxx][1] ಪಟ್ಟಣ ಮಂಡಲಿಗಳಿಗೆ, ನೈರ್ಮಲ್ಯ ಮಂಡಲಿಗಳಿಗೆ ಅಥವಾ [2][ಮಂಡಲ ಪಂಚಾಯತಿಗಳಿಗೆ][2] ಸಂಬಂಧಿಸಿದ [1][xxx][1] ಯಾವುದೇ ಕಾನೂನಿನ ಮೇರೆಗೆ ರಚಿಸಿದ ಪಟ್ಟಣ ಮಂಡಲಿಯ, ನೈರ್ಮಲ್ಯ ಮಂಡಲಿಯ ಅಥವಾ [2][ಮಂಡಲ ಪಂಚಾಯಿತಿಯ][2] ಅಧಿಕಾರ ವ್ಯಾಪ್ತಿಯೊಳಗೆ ಸೇರಿಸಲಾದ ಯಾವುದೇ ಪ್ರದೇಶದಲ್ಲಿರುವ ಮತ್ತು [1][xxx][1] ಅಂಥ ಪಟ್ಟಣ ಮಂಡಲಿಯಲ್ಲಿ, ನೈರ್ಮಲ್ಯ ಮಂಡಲಿಯಲ್ಲಿ ಅಥವಾ [2][ಮಂಡಲ ಪಂಚಾಯತಿಯಲ್ಲಿ][2] ನಿಹಿತವಾಗಿರುವ

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

– ಯಾವುದೇ ಬೀದಿಯು, ಚೌಕವು ಅಥವಾ ಇತರ ಜಮೀನು ಅಥವಾ ಅದರ ಯಾವುದೇ ಭಾಗವು, ರಾಜ್ಯ ಸರ್ಕಾರವು ಮಂಜೂರು ಮಾಡಿದ ಕಾರ್ಯಕ್ರಮದಲ್ಲಿ ಸೇರಿದ ಪ್ರದೇಶದೊಳಗೆ ಇದ್ದರೆ ಮತ್ತು ಅಂಥ ಗೃಹನಿರ್ಮಾಣ ಯೋಜನೆಯ [1][ಅಥವಾ ಭೂ ಅಭಿವೃದ್ಧಿ ಯೋಜನೆಯ][1] ಉದ್ದೇಶಗಳಿಗಾಗಿ ಅಗತ್ಯವಿದ್ದರೆ, ಮಂಡಲಿಯು ತದನುಸಾರವಾಗಿ, ಸಂದರ್ಭಾನುಸಾರ, ಆ ನಿಗಮ, ಪುರಸಭಾ ಪರಿಷತ್ತಿಗೆ, ಪುರಸಭಾ ಸಮಿತಿಗೆ ಅಥವಾ ಪುರಸಭಾ ನಿಕಾಯಕ್ಕೆ, [2][xxx][2] ಪಟ್ಟಣ ಮಂಡಲಿಗೆ, ನೈರ್ಮಲ್ಯ ಮಂಡಲಿಗೆ ಅಥವಾ [3][ಮಂಡಲ ಪಂಚಾಯತಿಗೆ][3] ನೋಟೀಸು ಕೊಡತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಪೌರ ನಿಗಮವು, ಪುರಸಭಾ ಪರಿಷತ್ತು, ಪುರಸಭಾ ಸಮಿತಿಯು ಅಥವಾ ಪುರಸಭಾ ನಿಕಾಯವು, [1][xxx][1] ಪಟ್ಟಣ ಮಂಡಲಿಯು, ನೈರ್ಮಲ್ಯ ಮಂಡಲಿ ಅಥವಾ [2][ಮಂಡಲ ಪಂಚಾಯತಿ][2] ಒಪ್ಪಿಗೆ ಇತ್ತರೆ ಅಂಥ ಬೀದಿಯು, ಚೌಕವು ಅಥವಾ ಇತರ ಜಮೀನು ಅಥವಾ ಅದರ ಭಾಗವು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಯಾವುದೇ ವಿವಾದ ಇದ್ದಲ್ಲಿ, ಆ ವಿಷಯವನ್ನು ರಾಜ್ಯಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು. ರಾಜ್ಯ ಸರ್ಕಾರವು ಸಂಬಂಧಪಟ್ಟ ಪೌರ ನಿಗಮದ, ಪುರಸಭಾ ಪರಿಷತ್ತಿನ, ಪುರಸಭಾ ಸಮಿತಿಯ ಅಥವಾ ಪುರಸಭಾ ನಿಕಾಯದ, [1][xxx][1] ಪಟ್ಟಣ ಮಂಡಲಿಯ, ಅಥವಾ ನೈರ್ಮಲ್ಯ ಮಂಡಲಿಯ ಅಥವಾ [2][ಮಂಡಲ ಪಂಚಾಯಿತಿಯ][2] ಅಹವಾಲು ಕೇಳಿದ ತರುವಾಯ ಆ ವಿಷಯವನ್ನು ತೀರ್ಮಾನಿಸತಕ್ಕದ್ದು. ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು. ರಾಜ್ಯ ಸರ್ಕಾರವು ಅಂಥ ಬೀದಿಯು, ಚೌಕವು ಅಥವಾ ಜಮೀನು, ಮಂಡಲಿಯಲ್ಲಿ ನಿಹಿತವಾಗತಕ್ಕದ್ದೆಂದು ತೀರ್ಮಾನಿಸಿದರೆ, ಅದು ತದನುಸಾರವಾಗಿ ನಿಹಿತವಾಗತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಈ ಪ್ರಕರಣದಲ್ಲಿ ಇರುವುದು ಯಾವುದೂ, ಅಂಥ ಬೀದಿ, ಚೌಕ ಅಥವಾ ಜಮೀನಿನಲ್ಲಿರುವ ಯಾವುದೇ ಚರಂಡಿಯ ಅಥವಾ ನೀರು ಕಾಮಗಾರಿಯ ಅಥವಾ ಅದರ ಮೇಲೆ ಪೌರ ನಿಗಮವು, ಪುರಸಭಾ ಪರಿಷತ್ತು, ಪುರಸಭಾ ಸಮಿತಿಯು ಅಥವಾ ಪುರಸಭಾ ನಿಕಾಯವು, [1][xxx][1] ಪಟ್ಟಣ ಮಂಡಲಿಯು, ನೈರ್ಮಲ್ಯ ಮಂಡಲಿಯು ಅಥವಾ [2][ಮಂಡಲ ಪಂಚಾಯತಿಯು][2] ಹೊಂದಿರುವ ಹಕ್ಕುಗಳಿಗೆ ಅಥವಾ ಅಧಿಕಾರಗಳಿಗೆ ಬಾಧಕವಾಗತಕ್ಕದ್ದಲ್ಲ.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**26. ಮಂಡಲಿಯಲ್ಲಿ ನಿಹಿತವಾಗಿರುವ ಜಮೀನಿಗೆ ಸಂಬಂಧಪಟ್ಟಂತೆ ನಷ್ಟ ಪರಿಹಾರ.–** (1) 25ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವುದೇ ಜಮೀನು ಮಂಡಲಿಯಲ್ಲಿ ನಿಹಿತವಾಗಿದ್ದರೆ ಮತ್ತು ಆ ಜಮೀನು 29ನೇ ಪ್ರಕರಣದ ಮೇರೆಗೆ ಬೀದಿಯ ಭಾಗವಾಗಿ ಅಥವಾ ಬಹಿರಂಗ ಸ್ಥಳವಾಗಿ, ಸಂದರ್ಭಾನುಸಾರ, ಪೌರ ನಿಗಮದಲ್ಲಿ, ಪುರಸಭಾ ಪರಿಷತ್ತಿನಲ್ಲಿ, ಪುರಸಭಾ ಸಮಿತಿಯಲ್ಲಿ ಅಥವಾ ಪುರಸಭಾ ನಿಕಾಯದಲ್ಲಿ, [1][xxx][1] ಪಟ್ಟಣ ಮಂಡಲಿಯಲ್ಲಿ, ನೈರ್ಮಲ್ಯ ಮಂಡಲಿಯಲ್ಲಿ ಅಥವಾ [2][ಮಂಡಲ ಪಂಚಾಯತಿಯಲ್ಲಿ][2] ಮತ್ತೆ ನಿಹಿತಗೊಳ್ಳುವವರೆಗೆ ಅದನ್ನು ಮಂಡಲಿಯು ತನ್ನಲ್ಲಿಯೇ ಇಟ್ಟುಕೊಳ್ಳತಕ್ಕುದೆಂದು ಮಂಡಲಿಯು ಘೋಷಣೆ ಮಾಡಿದ್ದರೆ, ಆ ಜಮೀನಿಗೆ ಸಂಬಂಧಿಸಿ ಮಂಡಲಿಯಿಂದ ಪೌರ ನಿಗಮಕ್ಕೆ, ಪುರಸಭಾ ಪರಿಷತ್ತಿಗೆ, ಪುರಸಭಾ ಸಮಿತಿಗೆ ಅಥವಾ ಪುರಸಭಾ ನಿಕಾಯಕ್ಕೆ, [1][xxx][1] ಪಟ್ಟಣ ಮಂಡಲಿಗೆ, ನೈರ್ಮಲ್ಯ ಮಂಡಲಿಗೆ ಅಥವಾ [2][ಮಂಡಲ ಪಂಚಾಯತಿಗೆ][2] ಯಾವುದೇ ನಷ್ಟಪರಿಹಾರವು ಸಂದಾಯವಾಗತಕ್ಕದ್ದಲ್ಲ.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 25ನೇ ಪ್ರಕರಣದ ಮೇರೆಗೆ ಯಾವುದೇ ಜಮೀನು ಮಂಡಲಿಯಲ್ಲಿ ನಿಹಿತವಾಗಿದ್ದರೆ ಮತ್ತು ಆ ಜಮೀನಿಗೆ ಸಂಬಂಧಿಸಿ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಘೋಷಣೆಯನ್ನು ಮಾಡಿರದಿದ್ದರೆ ಮಂಡಲಿಯು, ಸಂದರ್ಭಾನುಸಾರ ಪೌರ ನಿಗಮಕ್ಕೆ, ಪುರಸಭಾ ಪರಿಷತ್ತಿಗೆ, ಪುರಸಭಾ ಸಮಿತಿಗೆ ಅಥವಾ ಪುರಸಭಾ ನಿಕಾಯಕ್ಕೆ, [1][xxx][1] ಪಟ್ಟಣ ಮಂಡಲಿಗೆ, ನೈರ್ಮಲ್ಯ ಮಂಡಲಿಗೆ ಅಥವಾ [2][ಮಂಡಲ ಪಂಚಾಯತಿಗೆ,][2] ಅಂಥ ಜಮೀನಿನ ಮೌಲ್ಯಕ್ಕೆ ಸಮನಾದ ಮೊತ್ತವನ್ನು ನಷ್ಟ ಪರಿಹಾರವಾಗಿ ಸಂದಾಯ ಮಾಡತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಮಂಡಲಿಯು, ಯಾವುದೇ ಸಂದರ್ಭದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಜಮೀನಿಗೆ ಸಂಬಂಧಿಸಿ ಘೋಷಣೆಯನ್ನು ಮಾಡಿದ್ದು ಮಂಡಲಿಯು, ಆ ಜಮೀನು ಸಂದರ್ಭಾನುಸಾರ ಪೌರ ನಿಗಮದಲ್ಲಿ, ಪುರಸಭಾ ಪರಿಷತ್ತಿನಲ್ಲಿ, ಪುರಸಭಾ ಸಮಿತಿಯಲ್ಲಿ ಅಥವಾ ಪುರಸಭಾ ನಿಕಾಯದಲ್ಲಿ, [1][xxx][1]ಪಟ್ಟಣ ಮಂಡಲಿಯಲ್ಲಿ, ನೈರ್ಮಲ್ಯ ಮಂಡಲಿಯಲ್ಲಿ ಅಥವಾ [2][ಮಂಡಲ ಪಂಚಾಯತಿಯಲ್ಲಿ][2] ಮತ್ತೆ ನಿಹಿತವಾಗದ ಹಾಗೆ ಆ ಘೋಷಣೆಯ ನಿಬಂಧನೆಗಳಿಗೆ ವಿರುದ್ಧವಾಗಿ ಅದನ್ನು ತನ್ನಲ್ಲಿ ಇಟ್ಟುಕೊಂಡರೆ ಅಥವಾ ವಿಲೆ ಮಾಡಿದರೆ ಆ ಮಂಡಲಿಯು ಆ ಜಮೀನಿಗೆ ಸಂಬಂಧಿಸಿ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಆ ಪೌರ ನಿಗಮಕ್ಕೆ, ಪುರಸಭಾ ಪರಿಷತ್ತಿಗೆ, ಪುರಸಭಾ ಸಮಿತಿಗೆ ಅಥವಾ ಪುರಸಭಾ ನಿಕಾಯಕ್ಕೆ, [1][xxx][1] ಪಟ್ಟಣ ಮಂಡಲಿಗೆ, ನೈರ್ಮಲ್ಯ ಮಂಡಲಿಗೆ ಅಥವಾ [2][ಮಂಡಲ ಪಂಚಾಯತಿಗೆ][2] ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**27. ಮಂಡಲಿಯಲ್ಲಿ ನಿಹಿತವಾಗಿರುವ ಸಾರ್ವಜನಿಕ ಬೀದಿಯನ್ನು ತಿರುಗಿಸಲು ಅಥವಾ ಮುಚ್ಚಲು ಅದರ ಅಧಿಕಾರ.–** (1) ಮಂಡಲಿಯು, ತನ್ನಲ್ಲಿ ನಿಹಿತವಾಗಿರುವ ಯಾವುದೇ ಸಾರ್ವಜನಿಕ ಬೀದಿಯನ್ನು ಅಥವಾ ಅದರ ಯಾವುದೇ ಭಾಗವನ್ನು

ತಿರುಗಿಸಬಹುದು, ಮಾರ್ಗಪಲ್ಲಟಗೊಳಿಸಬಹುದು, ಸಾರ್ವಜನಿಕ ಬಳಕೆಯನ್ನು ನಿಲ್ಲಿಸಬಹುದು ಅಥವಾ ಖಾಯಂ ಆಗಿ ಮುಚ್ಚಬಹುದು.

(2) ಮಂಡಲಿಯು, ತನ್ನಲ್ಲಿ ನಿಹಿತವಾಗಿರುವ ಯಾವುದೇ ಸಾರ್ವಜನಿಕ ಬೀದಿಯ ಅಥವಾ ಅದರ ಯಾವುದೇ ಭಾಗದ ಸಾರ್ವಜನಿಕ ಬಳಕೆಯನ್ನು ನಿಲ್ಲಿಸಿದ್ದರೆ ಅಥವಾ ಖಾಯಂ ಆಗಿ ಮುಚ್ಚಿದ್ದರೆ, ಅದು ಸಾಧ್ಯವಾದಷ್ಟು ಮಟ್ಟಿಗೆ, ಆ ಬೀದಿಯ ಅಥವಾ ಅದರ ಭಾಗದ ಬಳಕೆಗೆ ಹಕ್ಕುಳ್ಳವರಾದಂಥವರಿಗೆ ಅದಕ್ಕೆ ಬದಲಾಗಿ ಇತರ ಯುಕ್ತ ಪ್ರವೇಶ ಮಾರ್ಗವನ್ನು ಒದಗಿಸತಕ್ಕದು ಮತ್ತು ಅಂಥ ಬೀದಿಯನ್ನು ಅಥವಾ ಅದರ ಭಾಗವನ್ನು ಪ್ರವೇಶ ಮಾರ್ಗದಂತೆ ಉಪಯೋಗಿಸಲು ಕೇವಲ ಸಾರ್ವಜನಿಕ ವ್ಯಕ್ತಿಯಾಗಿ ಅಲ್ಲದೆ, ಹಕ್ಕುಳ್ಳವನಾಗಿದ್ದು ಹಾಗೆ ಬಳಕೆಯನ್ನು ನಿಲ್ಲಿಸಿದ್ದರಿಂದ ಅಥವಾ ಮುಚ್ಚಿದ್ದರಿಂದ ನಷ್ಟವನ್ನು ಅನುಭವಿಸಿದ ಪ್ರತಿಯೊಬ್ಬ ವ್ಯಕ್ತಿಗೆ ಯುಕ್ತ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ನಿರ್ಧರಿಸುವಾಗ ಮಂಡಲಿಯು, ಯಾವ ಸಾರ್ವಜನಿಕ ಬೀದಿಯನ್ನು ಅಥವಾ ಅದರ ಭಾಗವನ್ನು ನಿಲ್ಲಿಸಿದ ಅಥವಾ ಮುಚ್ಚಿದ ಕಾರಣ ನಷ್ಟ ಪರಿಹಾರವನ್ನು ಸಂದಾಯ ಮಾಡಲಾಯಿತೋ ಆ ಸಾರ್ವಜನಿಕ ಬೀದಿಯನ್ನು ಅಥವಾ ಅದರ ಭಾಗವನ್ನು ನಿಲ್ಲಿಸಿದ ಅಥವಾ ಮುಚ್ಚಿದ ಸಮಯಕ್ಕೆ ಆ ಸುಮಾರಿಗೆ ಇತರ ಯಾವುದೇ ಸಾರ್ವಜನಿಕ ಬೀದಿಯ ನಿರ್ಮಾಣದಿಂದ, ವ್ಯವಸ್ಥೆಯಿಂದ ಅಥವಾ ಸುಧಾರಣೆಯಿಂದ ಅವನಿಗೆ ಒದಗಿಬರುವ ಯಾವುದೇ ಪ್ರಯೋಜನಕ್ಕೆ ಅವಕಾಶ ಮಾಡಿಕೊಡತಕ್ಕದ್ದು.

(4) ಮಂಡಲಿಯಲ್ಲಿ ನಿಹಿತವಾಗಿರುವ ಯಾವುದೇ ಸಾರ್ವಜನಿಕ ಬೀದಿಯನ್ನು, (1)ನೇ ಉಪಪ್ರಕರಣದ ಮೇರೆಗೆ ಖಾಯಂ ಆಗಿ ಮುಚ್ಚಿದ್ದರೆ ಮಂಡಲಿಯು, ಆ ಬೀದಿ ಪೈಕಿ ಮುಂದೆ ಅಗತ್ಯಕ್ಕೆ ಬರದಷ್ಟನ್ನು ಮಾರಾಟ ಮಾಡಬಹುದು ಅಥವಾ ಗುತ್ತಿಗೆಗೆ ಕೊಡಬಹುದು.

**28. 26ನೇ ಪ್ರಕರಣದ ಅಥವಾ 27ನೇ ಪ್ರಕರಣದ ಮೇರೆಗಿನ ವಿವಾದದ ಸಂದರ್ಭದಲ್ಲಿ ನ್ಯಾಯಾಧಿಕರಣಕ್ಕೆ ಉಲ್ಲೇಖ.–** ಸಂದರ್ಭಾನುಸಾರ, 26ನೇ ಪ್ರಕರಣದ ಅಥವಾ 27ನೇ ಪ್ರಕರಣದ ಮೇರೆಗೆ ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕಾಗಿದೆಯೇ ಎಂಬ ಬಗ್ಗೆ ಅಥವಾ 26ನೇ ಪ್ರಕರಣದ ಅಥವಾ 27ನೇ ಪ್ರಕರಣದ ಮೇರೆಗೆ ಸಂದಾಯಮಾಡಬೇಕಾದ ನಷ್ಟ ಪರಿಹಾರದ ಮೊಬಲಗಿನ ಬಗ್ಗೆ ಯಾವುದೇ ವಿವಾದವು ಇದ್ದರೆ, ಆ ವಿಷಯವನ್ನು ನ್ಯಾಯಾಧಿಕರಣಕ್ಕೆ ಉಲ್ಲೇಖಿಸತಕ್ಕದ್ದು.

**29. ಗೃಹ ನಿರ್ಮಾಣ ಯೋಜನೆಯ [1][ಅಥವಾ ಭೂ ಅಭಿವೃದ್ಧಿ ಯೋಜನೆಯ][1] ಮೇರೆಗೆ ಮಂಡಲಿಯು ವಿನ್ಯಾಸಗೊಳಿಸಿದ ಅಥವಾ ವ್ಯತ್ಯಾಸಗೊಳಿಸಿದ ಬೀದಿಗಳು ಮತ್ತು ಒದಗಿಸಿದ ಬಹಿರಂಗ ಸ್ಥಳವು ಪೌರ ನಿಗಮದಲ್ಲಿ, ಪುರಸಭಾ ಪರಿಷತ್ತಿನಲ್ಲಿ, ಪುರಸಭಾ ಸಮಿತಿಯಲ್ಲಿ ಅಥವಾ ಇತರ ಪುರಸಭಾ ನಿಕಾಯದಲ್ಲಿ, [2][xxx][2] ಪಟ್ಟಣ ಮಂಡಲಿಯಲ್ಲಿ, ನೈರ್ಮಲ್ಯ ಮಂಡಲಿಯಲ್ಲಿ ಅಥವಾ [3][ಮಂಡಲ ಪಂಚಾಯತಿ][3] ಯಲ್ಲಿ ನಿಹಿತವಾಗುವುದು.–**

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1-5-1988ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(1) (ಎ) ರಾಜ್ಯ ಸರ್ಕಾರಕ್ಕೆ ಮಂಡಲಿಯು, ವಿನ್ಯಾಸಗೊಳಿಸಿದ ಅಥವಾ ವ್ಯತ್ಯಾಸಗೊಳಿಸಿದ ಯಾವುದೇ ಬೀದಿಯನ್ನು, 20ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಮಂಜೂರು ಮಾಡಿದ ಕಾರ್ಯಕ್ರಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಯುಕ್ತವಾಗಿ, ಮಟ್ಟಗೊಳಿಸಲಾಗಿದೆ, ನೆಲಗಟ್ಟು ಮಾಡಲಾಗಿದೆ, ಅದಕ್ಕೆ ಜಲ್ಲಿ ಹಾಕಲಾಗಿದೆ, ಚಪ್ಪಡಿ ಹಾಸಲಾಗಿದೆ, ಕಾಲುವೆ ಮಾಡಲಾಗಿದೆ, ಒಳಚರಂಡಿ ಮತ್ತು ಚರಂಡಿ ವ್ಯವಸ್ಥೆ ಮಾಡಲಾಗಿದೆ ಎಂದು; ಮತ್ತು

(ಬಿ) ಸಂದರ್ಭಾನುಸಾರ ಪೌರ ನಿಗಮವು, ಪುರಸಭಾ ಪರಿಷತ್ತು, ಪುರಸಭಾ ಸಮಿತಿಯು ಅಥವಾ ಇತರ ಪುರಸಭಾ ನಿಕಾಯವು, [1][xxx][1] ಪಟ್ಟಣ ಮಂಡಲಿಯು, ನೈರ್ಮಲ್ಯ ಮಂಡಲಿಯು ಅಥವಾ [2][ಮಂಡಲ ಪಂಚಾಯತಿ][2] ಯು ಅಂಥ ಬೀದಿಗಳ ದೀಪದ ವ್ಯವಸ್ಥೆಯ ಬಗ್ಗೆ ಅವಶ್ಯವೆಂದು ಪರಿಗಣಿಸಿದ ಮತ್ತು ಮಂಡಲಿಯು ಒದಗಿಸಬೇಕಾದಂಥ ದೀಪಗಳನ್ನು, ದೀಪ ಸ್ತಂಭಗಳನ್ನು ಮತ್ತು ಇತರ ಸಲಕರಣೆಗಳನ್ನು ಹಾಗೆ ಒದಗಿಸಲಾಗಿದೆ ಎಂದು; ಮತ್ತು

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಅಂಥ ಬೀದಿಯಲ್ಲಿ ನೀರು ಮತ್ತು ಇತರ ನೈರ್ಮಲ್ಯ ಅನುಕೂಲತೆಯನ್ನು ಯುಕ್ತವಾಗಿ ಒದಗಿಸಲಾಗಿದೆ ಎಂದು

– ಮನದಟ್ಟಾದಾಗಲೆಲ್ಲ, ರಾಜ್ಯ ಸರ್ಕಾರವು, ಆ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಬಹುದು ಮತ್ತು ಆ ತರುವಾಯ ಆ ಬೀದಿಯು ಸಂದರ್ಭಾನುಸಾರ, ಪೌರ ನಿಗಮದಲ್ಲಿ, ಪುರಸಭಾ ಪರಿಷತ್ತಿನಲ್ಲಿ, ಪುರಸಭಾ ಸಮಿತಿಯಲ್ಲಿ ಅಥವಾ ಇತರ ಪುರಸಭಾ ನಿಕಾಯದಲ್ಲಿ, [1][xxx][1] ಪಟ್ಟಣ ಮಂಡಲಿಯಲ್ಲಿ, ನೈರ್ಮಲ್ಯ ಮಂಡಲಿಯಲ್ಲಿ ಅಥವಾ [2][ಮಂಡಲ ಪಂಚಾಯಿತಿ][2]ಯಲ್ಲಿ ನಿಹಿತವಾಗತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಯಾವುದೇ ಗೃಹ ನಿರ್ಮಾಣ ಯೋಜನೆಯನ್ನು [1][ಅಥವಾ ಭೂ ಅಭಿವೃದ್ಧಿ ಯೋಜನೆ][1]ಯನ್ನು ಕಾರ್ಯಗತಗೊಳಿಸುವಾಗ, ಮಂಡಲಿಯು ಗಾಳಿ ಬೆಳಕಿನ ವ್ಯವಸ್ಥೆಯನ್ನು ಅಥವಾ ಮನರಂಜನೆಯ ಉದ್ದೇಶಕ್ಕಾಗಿ ಯಾವುದೇ ಬಹಿರಂಗ ಸ್ಥಳವನ್ನು ಒದಗಿಸಿದ್ದಾಗ, ಅದನ್ನು, ಪೂರ್ಣಗೊಂಡ ತರುವಾಯ ಮಂಡಲಿಯ ಠರಾವಿನ ಮೂಲಕ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕುದು ಮತ್ತು ಆ ತರುವಾಯ ಆ ಸ್ಥಳೀಯ ಪ್ರಾಧಿಕಾರದಲ್ಲಿ ಅದು ನಿಹಿತವಾಗತಕ್ಕುದು ಮತ್ತು ಅದರ ವೆಚ್ಚದಲ್ಲಿ ಅದನ್ನು ನಿರ್ವಹಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಲಿ ಮತ್ತು ಸಂದರ್ಭಾನುಸಾರ ಪೌರ ನಿಗಮದ, ಪುರಸಭಾ ಪರಿಷತ್ತಿನ, ಪುರಸಭಾ ಸಮಿತಿಯ ಅಥವಾ ಇತರ ಪುರಸಭಾ ನಿಕಾಯದ, [1][xxx][1] ಪಟ್ಟಣ ಮಂಡಲಿಯ, ನೈರ್ಮಲ್ಯ ಮಂಡಲಿಯ ಅಥವಾ [2][ಮಂಡಲ ಪಂಚಾಯತಿ][2] ಯ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದರೆ, ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ಆ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**30. ಮಂಡಲಿಯ ಇತರ ಕರ್ತವ್ಯಗಳು.–** ಕಟ್ಟಡಗಳನ್ನು ತ್ವರಿತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನಿರ್ಮಿಸುವ ದೃಷ್ಟಿಯಿಂದ ಕ್ರಮ ಕೈಗೊಳ್ಳುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಮಂಡಲಿಯು ಆ ಉದ್ದೇಶಕ್ಕಾಗಿ:–

(ಎ) ಕಟ್ಟಡ ಸಾಮಗ್ರಿಗಳ ಏಕರೂಪತೆ, ಸರಳತೆ ಮತ್ತು ಗುಣಮಟ್ಟ ನಿರ್ಧರಣೆ ಬಗ್ಗೆ;

(ಬಿ) ಮನೆಗೆ ಅಗತ್ಯವಾದ ಭಾಗಗಳನ್ನು ಮೊದಲೇ ತಯಾರಿಸುವ ಮತ್ತು ಭಾರಿ ಪ್ರಮಾಣದಲ್ಲಿ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಬಗ್ಗೆ;

(ಸಿ) ಗೃಹ ನಿರ್ಮಾಣ ಯೋಜನೆಗಳಿಗೆ ಅಗತ್ಯವಾದ ಕಟ್ಟಡ ಸಾಮಗ್ರಿಗಳ ಉತ್ಪಾದನೆಯನ್ನು ಸಂಘಟಿಸುವ ಅಥವಾ ಕೈಗೊಳ್ಳುವ;

(ಡಿ) ಕಡಿಮೆ ಬೆಲೆಯ ಕಟ್ಟಡ ಸಾಮಗ್ರಿಗಳನ್ನು ಕಂಡುಹಿಡಿಯುವ ಸಂಶೋಧನೆಯನ್ನು ಪ್ರೋತ್ಸಾಹಿಸುವ ಮತ್ತು ಮಿತವ್ಯಯದ ನಿರ್ಮಾಣದ ಹೊಸ ಪದ್ಧತಿಗಳನ್ನು ರೂಪಿಸುವ ಬಗ್ಗೆ;

(ಇ) ಕಟ್ಟಡಗಳ ನಿರ್ಮಾಣದ ಕಾಮಗಾರಿಯಲ್ಲಿ ತರಬೇತಿ ಹೊಂದಿರುವ ಕೆಲಸಗಾರರು ನಿರಂತರವಾಗಿ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಒದಗುವುದನ್ನು ಸುನಿಶ್ಚಿತಗೊಳಿಸುವ ಬಗ್ಗೆ

– ಎಲ್ಲಾ ಕಾರ್ಯಗಳನ್ನು ಮಾಡಬಹುದು.

**31. ಪ್ಲಾಟುಗಳ ಪುನರ್ರಚನೆ.–** [1][ಗೃಹ ನಿರ್ಮಾಣ ಯೋಜನೆಯು, ಭೂ ಅಭಿವೃದ್ಧಿ ಯೋಜನೆಯು ಅಥವಾ ಕಾರ್ಮಿಕರ ಗೃಹ ನಿರ್ಮಾಣ ಯೋಜನೆ][1] ಯು,–

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಮೂಲ ಪ್ಲಾಟಿನ ಎಲ್ಲೆಗಳನ್ನು ವ್ಯತ್ಯಾಸಗೊಳಿಸುವ ಮೂಲಕ ಪುನರ್ರಚಿತ ಪ್ಲಾಟನ್ನು ರೂಪಿಸುವುದಕ್ಕಾಗಿ;

(ಬಿ) ಯಾವ ಮೂಲ ಪ್ಲಾಟುಗಳನ್ನು ಪ್ರತ್ಯೇಕ ಒಡೆತನದಲ್ಲಿ ಅಥವಾ ಜಂಟಿ ಒಡೆತನದಲ್ಲಿ ಧಾರಣ ಮಾಡಲಾಗಿದೆಯೋ ಆ ಪೈಕಿ ಎರಡು ಅಥವಾ ಅದಕ್ಕಿಂತ ಹೆಚ್ಚು ಮೂಲ ಪ್ಲಾಟುಗಳನ್ನು ಒಡೆಯರ ಸಮ್ಮತಿಯೊಂದಿಗೆ ಎಲ್ಲೆಗಳ ಬದಲಾವಣೆ ಮಾಡಿ ಅಥವಾ ಮಾಡದೆಯೆ ಪುನರ್ರಚಿತ ಪ್ಲಾಟಾಗಿ ಸಾಮಾನ್ಯ ಒಡೆತನದಲ್ಲಿ ಧಾರಣ ಮಾಡತಕ್ಕದ್ದೆಂಬ ಬಗ್ಗೆ; ಮತ್ತು

(ಸಿ) ಗೃಹ ನಿರ್ಮಾಣ ಯೋಜನೆಯನ್ನು [1][ಅಥವಾ ಭೂ ಅಭಿವೃದ್ಧಿ ಯೋಜನೆ][1] ಯನ್ನು ವಿಸ್ತರಿಸುವಾಗ ಜಮೀನಿನ ಸ್ವಾಧೀನತೆಯನ್ನು ಕಳೆದುಕೊಂಡ ಯಾರೇ ಒಡೆಯನಿಗೆ ಒಂದು ಪ್ಲಾಟನ್ನು ಹಂಚಿಕೆ ಮಾಡುವುದಕ್ಕಾಗಿ

– ವ್ಯವಸ್ಥೆ ಮಾಡಬಹುದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**32. ಸರ್ಕಾರವು ಮಂಡಲಿಗೆ ವಹಿಸಿಕೊಟ್ಟ ಯೋಜನೆಗಳು, ಇತ್ಯಾದಿ.–** (1) 18ರಿಂದ 24ರ ವರೆಗಿನ ಪ್ರಕರಣಗಳ (ಎರಡೂ ಸೇರಿದಂತೆ) ಉಪಬಂಧಗಳು ರಾಜ್ಯ ಸರ್ಕಾರವು ಮಾಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ಮಾರ್ಪಾಟುಗಳಿಗೆ ಒಳಪಟ್ಟಂತೆ ಹೊರತು, ರಾಜ್ಯ ಸರ್ಕಾರವು, ಮಂಡಲಿಗೆ ವಹಿಸಿಕೊಟ್ಟ ಯಾವುದೇ [1][ಗೃಹ ನಿರ್ಮಾಣ ಯೋಜನೆಗೆ, ಭೂ ಅಭಿವೃದ್ಧಿ ಯೋಜನೆಗೆ ಅಥವಾ ಕಾರ್ಮಿಕರ ಗೃಹ ನಿರ್ಮಾಣ ಯೋಜನೆ][1]ಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಂದು ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಮಂಡಲಿಯು, ತಾನು ತೆಗೆದುಕೊಂಡ ಅಥವಾ ತನಗೆ ವಹಿಸಿಕೊಟ್ಟ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಲಾಭಕ್ಕಾಗಿ ಆಗಲಿ ಅಥವಾ ಅನ್ಯಥಾ ಆಗಲಿ ಯಾವುದೇ ವ್ಯಾಪಾರ ಅಥವಾ ಹಣಕಾಸಿನ ಕಾರ್ಯಚಟುವಟಿಕೆಯನ್ನು ಕೈಗೊಳ್ಳಲು ಸಕ್ಷಮವಾಗಿರತಕ್ಕದ್ದಲ್ಲ.

[1][**32ಎ. ಮಂಡಲಿಯು ಮತ್ತು ಗೃಹನಿರ್ಮಾಣ ಆಯುಕ್ತರು 1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22, 1977ರ ಅಧಿನಿಯಮ ಸಂಖ್ಯೆ 14ರ ಮತ್ತು 1985ರ ಅಧಿನಿಯಮ ಸಂಖ್ಯೆ 20ರ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು.**– (1) ಈ ಅಧಿನಿಯಮವು ಅನ್ವಯವಾಗುವ ಯಾವುದೇ ಪ್ರದೇಶದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಅವಧಿಗೆ ಹಾಗೂ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುವೇ ನಿರ್ಬಂಧಗಳಿಗೆ ಹಾಗೂ ಮಾರ್ಪಾಟುಗಳಿಗೆ ಒಳಪಟ್ಟು,–

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(i) 1964ರ ಕರ್ನಾಟಕ ಪುರಸಭೆಗಳ ಅಧಿನಿಯಮದ, 1976ರ ಕರ್ನಾಟಕ ಪೌರ ನಿಗಮಗಳ ಅಧಿನಿಯಮದ, 1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮದ ಮೇರೆಗೆ ನಿಗಮವು, ಮುನಿಸಿಪಲ್ ಕೌನ್ಸಿಲ್ ಅಥವಾ ಮಂಡಲ ಪಂಚಾಯತಿಯು ಅಥವಾ ಅವುಗಳ ಸ್ಥಾಯೀ ಸಮಿತಿಗಳು ಹೊಂದಿರುವಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಮಂಡಲಿಯು ಚಲಾಯಿಸತಕ್ಕದ್ದೆಂದು ಮತ್ತು ನಿರ್ವಹಿಸತಕ್ಕದ್ದೆಂದು; ಮತ್ತು

(ii) ನಿಗಮದ ಕಮೀಷನರ್, ಪುರಸಭಾ ಕಮೀಷನರ್, ಮುನಿಸಿಪಲ್ ಕೌನ್ಸಿಲಿನ ಮುಖ್ಯಾಧಿಕಾರಿ ಅಥವಾ ಸಂದರ್ಭಾನುಸಾರ ಮಂಡಲ ಪಂಚಾಯತಿಯ ಕಾರ್ಯದರ್ಶಿಯು ಹೊಂದಿರುವ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಗೃಹನಿರ್ಮಾಣ ಕಮೀಷನರ್ ಚಲಾಯಿಸತಕ್ಕದ್ದೆಂದು ಮತ್ತು ನಿರ್ವಹಿಸತಕ್ಕದ್ದೆಂದು

– ಘೋಷಿಸಬಹುದು:

ಪರಂತು, ಅಂತಹ ಪ್ರದೇಶವು ಅಥವಾ ಅದರ ಯಾವುದೇ ಭಾಗವು ನಗರದ ಅಥವಾ ನಗರ ಅಥವಾ ಪಟ್ಟಣ ಪುರಸಭೆಯ ಅಥವಾ ಮಂಡಲ ಪಂಚಾಯತಿಯ ಪರಿಮಿತಿಗಳೊಳಗೆ ಇದ್ದರೆ, ಅಂತಹ ಘೋಷಣೆಯನ್ನು ಮಾಡುವುದಕ್ಕೆ ಮುಂಚೆ ಸಂಬಂಧಪಟ್ಟ ನಿಗಮದೊಂದಿಗೆ, ಮುನಿಸಿಪಲ್ ಕೌನ್ಸಿಲ್‌ನೊಂದಿಗೆ ಅಥವಾ ಮಂಡಲ ಪಂಚಾಯತಿಯೊಂದಿಗೆ ಸಮಾಲೋಚಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ನಿಗಮವು, ಮುನಿಸಿಪಲ್ ಕೌನ್ಸಿಲ್ ಅಥವಾ ಮಂಡಲ ಪಂಚಾಯತಿಯು ಅಥವಾ ಅದರ ಯಾವುದೇ ಸ್ಥಾಯೀ ಸಮಿತಿಯು ಅಥವಾ ನಿಗಮದ ಕಮೀಷನರನು, ಪೌರಸಭಾ ಕಮೀಷನರನು ಅಥವಾ ಮುನಿಸಿಪಲ್ ಕೌನ್ಸಿಲ್‌ನ ಮುಖ್ಯಾಧಿಕಾರಿಯು ಅಥವಾ ಮಂಡಲ ಪಂಚಾಯತಿಯ ಕಾರ್ಯದರ್ಶಿಯು ಅಂತಹ ಘೋಷಣೆಯ ಮೂಲಕ, ಸಂದರ್ಭಾನುಸಾರ ಮಂಡಲಿಗೆ ಅಥವಾ ಗೃಹ ನಿರ್ಮಾಣ ಕಮೀಷನರನಿಗೆ ಪ್ರದಾನ ಮಾಡಲಾದ ಅಥವಾ ವಹಿಸಿಕೊಟ್ಟ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಕ್ಷಮರಾಗತಕ್ಕದ್ದಲ್ಲ.

(3) ಮಂಡಲಿಯು ಅಥವಾ ಗೃಹನಿರ್ಮಾಣ ಕಮೀಷನರನು (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ಅಥವಾ ಕಮೀಷನರನು ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಮತ್ತು ನಿರ್ವಹಿಸಬಹುದಾದ ಯಾವುವೇ ಪ್ರಕಾರ್ಯಗಳನ್ನು ಮಂಡಲಿಯ ಯಾವನೇ ಅಧಿಕಾರಿಗೆ ಅಥವಾ ನೌಕರನಿಗೆ ವಹಿಸಿಕೊಡಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ವಹಿಸಿಕೊಡಲಾದ ಯಾವುವೇ ಅಧಿಕಾರಗಳ ಚಲಾವಣೆಯು ಅಥವಾ ಕರ್ತವ್ಯಗಳ ನಿರ್ವಹಣೆಯು ಸಂದರ್ಭಾನುಸಾರ ಮಂಡಲಿಯು ಅಥವಾ ಗೃಹನಿರ್ಮಾಣ ಕಮೀಷನರನು ನಿರ್ದಿಷ್ಟಪಡಿಸಬಹುದಾದಂಥ ಪರಿಮಿತಿಗಳಿಗೆ, ಷರತ್ತುಗಳಿಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.][1]

## ಅಧ್ಯಾಯ – IV

## ಜಮೀನಿನ ಆರ್ಜನೆ ಮತ್ತು ವಿಲೆ

**33. ಒಪ್ಪಂದದ ಮೂಲಕ ಖರೀದಿಸಲು ಅಥವಾ ಗುತ್ತಿಗೆಗೆ ತೆಗೆದುಕೊಳ್ಳಲು ಅಧಿಕಾರ.**– (1) ಮಂಡಲಿಯು, ಯಾವ ವ್ಯಕ್ತಿಯಿಂದ ಗೃಹ ನಿರ್ಮಾಣ ಯೋಜನೆಯ [1][ಅಥವಾ ಭೂ ಅಭಿವೃದ್ಧಿ ಯೋಜನೆ][1]ಯ ಉದ್ದೇಶಕ್ಕಾಗಿ ಬೇಕಾಗುವ ಯಾವುದೇ ಜಮೀನನ್ನು ಅಥವಾ ಆ ಜಮೀನಿನಲ್ಲಿನ ಯಾವುದೇ ಹಿತಾಸಕ್ತಿಯನ್ನು ಖರೀದಿಸುವ, ಗುತ್ತಿಗೆಗೆ ತೆಗೆದುಕೊಳ್ಳುವ ಅಥವಾ ವಿನಿಮಯ ಮಾಡಿಕೊಳ್ಳುವ ಮೂಲಕ ಅವನಿಂದ ಆರ್ಜಿಸಿಕೊಳ್ಳುವ ಬಗ್ಗೆ ಅಥವಾ ಆ ಜಮೀನನ್ನು ಯಾವುದೇ ರೀತಿಯಲ್ಲಿ ಕಳೆದುಕೊಂಡ ಅಥವಾ ಅದನ್ನು ಹಸ್ತಕ್ಷೇಪಕ್ಕೆ ಗುರಿಪಡಿಸಿದ ಸಂಬಂಧದಲ್ಲಿ ಒಡೆಯರಿಗೆ ಯಾವುದೇ ಅಂಥ ಹಕ್ಕಿನ ಬಗ್ಗೆ ಪರಿಹಾರವನ್ನು ಕೊಡುವುದಕ್ಕಾಗಿ ಆ ಯಾವನೇ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು:

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು, [1][ಹತ್ತು ಲಕ್ಷ][1] ರೂಪಾಯಿಗಳಿಗಿಂತ ಹೆಚ್ಚಿನ ಮೌಲ್ಯದ ಜಮೀನನ್ನು ಅಥವಾ ಐದು ವರ್ಷಗಳಿಗಿಂತ ಹೆಚ್ಚಿನ ಗುತ್ತಿಗೆಯನ್ನು ಒಳಗೊಂಡ ಖರೀದಿ ಅಥವಾ ವಿನಿಮಯದ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ಮೊದಲೇ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದ ಮೂಲಕ ಮಾರ್ಪಾಟು ಮಾಡಿದ ಭೂ ಆರ್ಜನಾ ಅಧಿನಿಯಮ, 1894ರಲ್ಲಿ ಉಪಬಂಧಿಸಿದ ರೀತಿಯಲ್ಲಿ ಗೃಹನಿರ್ಮಾಣ ಯೋಜನೆಯನ್ನು [1][ಅಥವಾ ಭೂ ಅಭಿವೃದ್ಧಿ ಯೋಜನೆ][1]ಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಗತ್ಯವಾದ ಯಾವುದೇ ಜಮೀನನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಕಡ್ಡಾಯವಾಗಿ ಆರ್ಜಿಸಲು ಸಹ ಮಂಡಲಿಯು ಕ್ರಮ ಕೈಗೊಳ್ಳಬಹುದು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಜಮೀನಿನ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯ ಆರ್ಜನೆಯು ಭೂ ಆರ್ಜನಾ ಅಧಿನಿಯಮ, 1894ರ ಅರ್ಥದಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮಾಡಿದ ಆರ್ಜನೆ ಎಂಬುದಾಗಿ ಭಾವಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**34. ಅಭಿವೃದ್ಧಿ ಚಾರ್ಜುಗಳು.–** (1) ಗೃಹ ನಿರ್ಮಾಣ ಯೋಜನೆಯನ್ನು [1][ಅಥವಾ ಭೂ ಅಭಿವೃದ್ಧಿ ಯೋಜನೆ][1]ಯನ್ನು ಮಾಡಿದ ಪರಿಣಾಮವಾಗಿ ಆ ಯೋಜನೆಯಲ್ಲಿ ಒಳಗೊಂಡ ಪ್ರದೇಶದಲ್ಲಿನ ಯಾವುದೇ ಜಮೀನಿನ ಮೌಲ್ಯವು ಮಂಡಲಿಯ ಅಭಿಪ್ರಾಯದಲ್ಲಿ ಅಧಿಕಗೊಳ್ಳುವುದಾದರೆ ಮಂಡಲಿಯು, ಯೋಜನೆಯನ್ನು ರಚಿಸುವಾಗ, ಜಮೀನಿನ ಒಡೆಯನು ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಯೋಜನೆಯನ್ನು ಕಾರ್ಯಗತಗೊಳಿಸಿದ್ದರಿಂದ ಜಮೀನಿನ ಮೌಲ್ಯದಲ್ಲಿ ಉಂಟಾದ ಹೆಚ್ಚಳಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಚಾರ್ಜುಗಳನ್ನು ಸಂದಾಯ ಮಾಡತಕ್ಕದ್ದೆಂದು ಘೋಷಿಸಬಹುದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಮೌಲ್ಯದಲ್ಲಿನ ಅಂಥ ಹೆಚ್ಚಳವು, ಜಮೀನಿನ ಮೇಲೆ ಕಟ್ಟಡಗಳು ಇಲ್ಲದಿದ್ದರೆ ಹೇಗೋ ಹಾಗೆ ಯೋಜನೆಗಳ ಅನುಷ್ಠಾನವು ಪೂರ್ಣಗೊಂಡ ಮೇಲೆ ಅಂದಾಜು ಮಾಡಿದ ಜಮೀನಿನ ಮೌಲ್ಯವು, ಅದೇ ರೀತಿಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಮುಂಚೆ ಅಂದಾಜುಮಾಡಿದ ಜಮೀನಿನ ಮೌಲ್ಯಕ್ಕಿಂತ ಯಾವ ಮೊಬಲಗಿನಷ್ಟು ಹೆಚ್ಚಾಗಿರುವುದೋ ಆ ಮೊಬಲಗು ಆಗಿರತಕ್ಕುದು ಮತ್ತು ಅಭಿವೃದ್ಧಿ ಚಾರ್ಜುಗಳು, ಮೌಲ್ಯದಲ್ಲಿ ಆದ ಅಂಥ ಹೆಚ್ಚಳದ ಅರ್ಧ ಆಗಿರತಕ್ಕದ್ದು.

(3) ಅಂಥ ಅಭಿವೃದ್ಧಿ ಚಾರ್ಜುಗಳನ್ನು, ಯೋಜನೆಯಲ್ಲಿ ಸೇರಿಲ್ಲದ, ಆದರೆ ಯೋಜನೆಯಲ್ಲಿ ಸೇರಿದ ಪ್ರದೇಶಕ್ಕೆ ಹೊಂದಿಕೊಂಡಿರುವ ಯಾವುದೇ ಜಮೀನಿಗೆ ಸಂಬಂಧಪಟ್ಟಂತೆ ಸಹ ವಿಧಿಸತಕ್ಕದ್ದು.

(4) (1) ಮತ್ತು (3)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಯೋಜನೆಗಳನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ವ್ಯವಸಾಯದ ಉದ್ದೇಶಗಳಿಗಾಗಿ ಬಳಸಿದ ಯಾವುದೇ ಜಮೀನಿಗೆ ಸಂಬಂಧಪಟ್ಟಂತೆ, ಅಂಥ ಜಮೀನನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಬಳಸಿದ ಅಥವಾ ಪರಿವರ್ತಿಸಿದ ತರುವಾಯ ಮಾತ್ರ ನಿಯಮಿಸಬಹುದಾದಂಥ ಪ್ರಕ್ರಿಯೆಗೆ ಅನುಸಾರವಾಗಿ ಮಂಡಲಿಯು ಅಭಿವೃದ್ಧಿ ಚಾರ್ಜುಗಳನ್ನು ವಿಧಿಸತಕ್ಕದ್ದು.

**35. ಅಭಿವೃದ್ಧಿ ಚಾರ್ಜುಗಳಿಗೆ ಹೊಣೆಗಾರರಾದ ವ್ಯಕ್ತಿಗಳಿಗೆ ನೋಟೀಸು.–** (1) ಮಂಡಲಿಯು, ಯಾವ ಜಮೀನಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಚಾರ್ಜುಗಳನ್ನು ವಿಧಿಸಬೇಕಾಗಿರುತ್ತದೋ ಆ ಜಮೀನಿನ ಒಡೆಯನಾಗಿರುವ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಗೆ ನಿಯಮಿಸಿದ ನಮೂನೆಯಲ್ಲಿ ನೋಟೀಸನ್ನು ಕೊಡತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ಕೊಡತಕ್ಕದ್ದು.

(2) ಅಂಥ ವ್ಯಕ್ತಿಯ ಅಹವಾಲು ಕೇಳಿದ ತರುವಾಯ ಅಥವಾ ಅಂಥ ವ್ಯಕ್ತಿಯು ಮಂಡಲಿಯ ಮುಂದೆ ಯಾವ ಅವಧಿಯೊಳಗೆ ಹಾಜರಾಗತಕ್ಕದ್ದೋ ಆ ಅವಧಿಯು ಮುಕ್ತಾಯವಾದ ತರುವಾಯವೂ ಅಂಥ ವ್ಯಕ್ತಿಯು ಹಾಜರಾಗಲು ತಪ್ಪಿದರೆ, ಮಂಡಲಿಯು, ಅಭಿವೃದ್ಧಿ ಚಾರ್ಜುಗಳ ಮೊಬಲಗನ್ನು ನಿರ್ಧರಿಸಲು ಕ್ರಮ ಕೈಗೊಳ್ಳತಕ್ಕದ್ದು.

(3) ಮಂಡಲಿಯು ಪ್ರಸ್ತಾವಿಸಿದ ಅಭಿವೃದ್ಧಿ ಚಾರ್ಜುಗಳ ನಿರ್ಧರಣೆಯನ್ನು, ನಿಯಮಿಸಲಾದ ಅವಧಿಯೊಳಗೆ ಸಂಬಂಧಪಟ್ಟ ವ್ಯಕ್ತಿಯು ಅಂಗೀಕರಿಸಿದರೆ, ಆ ನಿರ್ಧರಣೆಯು ಅಂತಿಮವಾಗಿರತಕ್ಕದ್ದು.

(4) ಮಂಡಲಿಯು ಪ್ರಸ್ತಾವಿಸಿದ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು ಅಂಗೀಕರಿಸದಿದ್ದರೆ, ಆ ವಿಷಯವನ್ನು ನ್ಯಾಯಾಧಿಕರಣಕ್ಕೆ ಉಲ್ಲೇಖಿಸತಕ್ಕದ್ದು.

(5) ನ್ಯಾಯಾಧಿಕರಣವು, ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಕ್ತಿಯ ಅಹವಾಲು ಕೇಳಿದ ತರುವಾಯ, ಆ ವ್ಯಕ್ತಿಯು ಸಂದಾಯ ಮಾಡಬೇಕಾದ ಅಭಿವೃದ್ಧಿ ಚಾರ್ಜುಗಳ ಮೊಬಲಗನ್ನು ನಿರ್ಧರಿಸತಕ್ಕದ್ದು.

**36. ಅಭಿವೃದ್ಧಿ ಚಾರ್ಜುಗಳ ಸಂದಾಯದ ಬಗ್ಗೆ ಒಪ್ಪಂದ.–** (1) ಯಾವುದೇ ಜಮೀನಿನ ಸಂಬಂಧಪಟ್ಟಂತೆ ಅಭಿವೃದ್ಧಿ ಚಾರ್ಜುಗಳನ್ನು ಸಂದಾಯ ಮಾಡಲು ಹೊಣೆಗಾರನಾದ ಯಾರೇ ವ್ಯಕ್ತಿಯು, ಅದನ್ನು ಮಂಡಲಿಗೆ ಸಂದಾಯ ಮಾಡುವುದಕ್ಕೆ

ಬದಲಾಗಿ ಅದನ್ನು, ನಿಯಮಿಸಬಹುದಾದಂಥ ಬಡ್ಡಿಯನ್ನು ನಿರಂತರವಾಗಿ ಸಂದಾಯ ಮಾಡುವುದಕ್ಕೆ ಒಳಪಟ್ಟು, ಜಮೀನಿನಲ್ಲಿನ ತನ್ನ ಹಿತಾಸಕ್ತಿಯಲ್ಲಿ ಬಾಕಿ ಇರುವ ಹೊಣೆಯೆಂದು ಸೇರಿಸಿಕೊಳ್ಳುವುದಕ್ಕೆ ಮಂಡಲಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು.

(2) ಅಭಿವೃದ್ಧಿ ಚಾರ್ಜುಗಳಿಗೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಯಿಂದ ಬಾಕಿ ಇರುವ ಪ್ರತಿಯೊಂದು ಸಂದಾಯವು ಮತ್ತು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಹೊಣೆಯು, ಯಾವುದೇ ಇತರ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ಆ ತರುವಾಯ ಸೃಜಿಸಲಾದ ಯಾವುದೇ ಅಡಮಾನ ಅಥವಾ ಹೊಣೆಯ ನಿರ್ವಹಣೆ ಏನೇ ಇದ್ದರೂ, ಅಂಥ ಜಮೀನಿನಲ್ಲಿ ಅಂಥ ವ್ಯಕ್ತಿಯು ಹೊಂದಿರುವ ಹಿತಾಸಕ್ತಿಯ ಮೇಲಣ ಮೊದಲ ಹೊಣೆಯಾಗಿರತಕ್ಕದ್ದು.

**37. ಅಭಿವೃದ್ಧಿ ಚಾರ್ಜುಗಳ ವಸೂಲಿ.–** 34ನೇ ಪ್ರಕರಣದ ಮೇರೆಗೆ ಅಭಿವೃದ್ಧಿ ಚಾರ್ಜುಗಳಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯು ಅಥವಾ 36ನೇ ಪ್ರಕರಣದ ಮೇರೆಗಿನ ಒಪ್ಪಂದದ ಪ್ರಕಾರ ಯಾರೇ ವ್ಯಕ್ತಿಯು ಯಾವುದೇ ಜಮೀನಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಎಲ್ಲಾ ಮೊತ್ತಗಳು ಮಂಡಲಿಯ ಪರವಾಗಿ ಭೂ ಕಂದಾಯದ ಬಾಕಿಯಂತೆ ವಸೂಲಾಗತಕ್ಕದ್ದು.

**38. ಜಮೀನಿನ ವಿಲೆಯ ಅಧಿಕಾರ.–** ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಮಂಡಲಿಯು, ತನ್ನಲ್ಲಿ ನಿಹಿತವಾಗಿರುವ ಮತ್ತು ಈ ಅಧಿನಿಯಮದ ಮೇರೆಗೆ ಮಂಜೂರಾದ ಯಾವುದೇ ಗೃಹನಿರ್ಮಾಣ ಯೋಜನೆಯಲ್ಲಿ [1][ಅಥವಾ ಭೂ ಅಭಿವೃದ್ಧಿ ಯೋಜನೆ][1]ಯಲ್ಲಿ ಒಳಗೊಂಡ ಪ್ರದೇಶದಲ್ಲಿರುವ ಯಾವುದೇ ಜಮೀನನ್ನು, ಕಟ್ಟಡವನ್ನು ಅಥವಾ ಇತರ ಸ್ವತ್ತನ್ನು ತಾನೇ ಇಟ್ಟುಕೊಳ್ಳಬಹುದು, ಗುತ್ತಿಗೆಗೆ ಕೊಡಬಹುದು, ಮಾರಾಟ ಮಾಡಬಹುದು, ವಿನಿಮಯ ಮಾಡಿಕೊಳ್ಳಬಹುದು ಅಥವಾ ಅನ್ಯಥಾ ವಿಲೆ ಮಾಡಬಹುದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**39. ಪ್ಲಾಟುಗಳ ಪುನರ್ ರಚನೆಗೆ ಸಂಬಂಧಿಸಿದ ವಿವಾದಗಳು.–** (1)ಗೃಹ ನಿರ್ಮಾಣ ಯೋಜನೆಯನ್ನು [1][ಅಥವಾ ಭೂ ಅಭಿವೃದ್ಧಿ ಯೋಜನೆ][1]ಯನ್ನು ಕೈಗೊಂಡಿದ್ದರಿಂದ, ಆ ಯೋಜನೆಯಲ್ಲಿ ಸೇರಿಸಿದ ಪ್ರದೇಶದಲ್ಲಿ ಒಳಗೊಂಡ ಯಾವುವೇ ಪ್ಲಾಟುಗಳನ್ನು ಪುನರ್ ರಚಿಸಿದ್ದರೆ ಅಥವಾ ಯಾರೇ ವ್ಯಕ್ತಿಯ ಸ್ವತ್ತಿನ ಸ್ವಾಧೀನವನ್ನು ತಪ್ಪಿಸಿದ್ದರೆ ಮಂಡಲಿಯು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅಂಥ ಪುನರ್ ರಚನೆಯಿಂದ ಅಥವಾ ಹಾಗೆ ಸ್ವತ್ತಿನ ಸ್ವಾಧೀನವನ್ನು ತಪ್ಪಿಸಿರುವುದರಿಂದ ಬಾಧಿತನಾದ ವ್ಯಕ್ತಿಗೆ, ತಾನು ಯುಕ್ತವೆಂದು ಭಾವಿಸುವಂಥ ಪರಿಹಾರವನ್ನು ಕೊಡತಕ್ಕದ್ದು. ಆ ವ್ಯಕ್ತಿಯು ಈ ವಿಷಯದಲ್ಲಿ ಮಂಡಲಿಯ ತೀರ್ಮಾನದಿಂದ ಅಸಂತುಷ್ಟನಾದರೆ, ಅವನು ಮಂಡಲಿಗೆ ತದನುಸಾರವಾಗಿ ತಿಳಿಸಬಹುದು. ಮಂಡಲಿಯು ಆ ತರುವಾಯ ಆ ವಿಷಯವನ್ನು ನ್ಯಾಯಾಧಿಕರಣಕ್ಕೆ ಉಲ್ಲೇಖಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ನ್ಯಾಯಾಧಿಕರಣವು ಆ ಬಳಿಕ ವಿಚಾರಣೆಯನ್ನು ನಡೆಸಿದ ತರುವಾಯ ಪರಿಹಾರದ ಮೊಬಲಗನ್ನು ನಿರ್ಧರಿಸತಕ್ಕುದು ಮತ್ತು ಅದನ್ನು ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡುವಂತೆ ಮಂಡಲಿಗೆ ನಿರ್ದೇಶಿಸತಕ್ಕದ್ದು.

## ಅಧ್ಯಾಯ–V

## ನ್ಯಾಯಾಧಿಕರಣ

**40. ನ್ಯಾಯಾಧಿಕರಣ.–** ಸಂಬಂಧಪಟ್ಟ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರು ನ್ಯಾಯಾಧಿಕರಣವಾಗಿರತಕ್ಕದ್ದು.

**41. ನ್ಯಾಯಾಧಿಕರಣದ ಕರ್ತವ್ಯಗಳು.–** ನ್ಯಾಯಾಧಿಕರಣವು,-

(ಎ) 26ನೇ ಪ್ರಕರಣದ ಮೇರೆಗೆ ಯಾವುದೇ ಪರಿಹಾರವನ್ನು ಸಂದಾಯ ಮಾಡಬೇಕಾಗಿದೆಯೆ ಇಲ್ಲವೆ ಎಂಬುದನ್ನು ತೀರ್ಮಾನಿಸತಕ್ಕದ್ದು;

(ಬಿ) 28ನೇ ಪ್ರಕರಣದ ಮೇರೆಗೆ ಅದಕ್ಕೆ ಉಲ್ಲೇಖಿಸಲಾದ ವಿಷಯಗಳಲ್ಲಿ ಪರಿಹಾರದ ಮೊಬಲಗನ್ನು ತೀರ್ಮಾನಿಸತಕ್ಕದ್ದು;

(ಸಿ) 35ನೇ ಪ್ರಕರಣದ ಮೇರೆಗೆ ಅದಕ್ಕೆ ಉಲ್ಲೇಖಿಸಲಾದ ಅಭಿವೃದ್ಧಿ ಚಾರ್ಜುಗಳಿಗೆ ಸಂಬಂಧಪಟ್ಟ ವಿವಾದಗಳನ್ನು ತೀರ್ಮಾನಿಸತಕ್ಕದ್ದು;

(ಡಿ) 39ನೇ ಪ್ರಕರಣದ ಮೇರೆಗೆ ವಿವಾದಗಳನ್ನು ಮತ್ತು ಕೊಡಬೇಕಾದ ಪರಿಹಾರದ ಮೊಬಲಗನ್ನು ತೀರ್ಮಾನಿಸತಕ್ಕದ್ದು; ಮತ್ತು

(ಇ) ಈ ಬಗ್ಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ವಿಷಯಗಳನ್ನು ತೀರ್ಮಾನಿಸತಕ್ಕದ್ದು.

**42. ನ್ಯಾಯಾಧಿಕರಣದ ಅಧಿಕಾರಗಳು ಮತ್ತು ಅದರ ಮುಂದೆ ಅನುಸರಿಸತಕ್ಕ ಪ್ರಕ್ರಿಯೆ.–** (1) ನ್ಯಾಯಾಧಿಕರಣವು, ವಿಚಾರಣೆಗಳನ್ನು ನಡೆಸುವಾಗ, ಆದಷ್ಟು ಮಟ್ಟಿಗೆ ದಂಡ ಪ್ರಕಿಯಾ ಸಂಹಿತೆ, 1908ರ ಮೇರೆಗಿನ ಅವೇ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು ಮತ್ತು ಅದೇ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ಹಣ ಸಂದಾಯ ಮಾಡುವುದಕ್ಕಾಗಿ ಮತ್ತು ಯಾವುದೇ ಕಟ್ಟಡದ ಸ್ವಾಧೀನತೆಯನ್ನು ಒಪ್ಪಿಸಿಕೊಡುವುದಕ್ಕೆ ಅಥವಾ ಅದನ್ನು ತೆಗೆದುಹಾಕುವ ಬಗ್ಗೆ ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶವನ್ನು, ಜಿಲ್ಲಾ ನ್ಯಾಯಾಲಯವು, ಅದು ಸದರಿ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಜಾರಿಗೊಳಿಸತಕ್ಕದ್ದು.

(3) ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳನ್ನು, ಭಾರತ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣಗಳ ಅರ್ಥದೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು.

**43. ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರುವುದು.–** ಈ ಅಧಿನಿಯಮದ ಮೇರೆಗೆ, ನ್ಯಾಯಾಧಿಕರಣಕ್ಕೆ ಉಲ್ಲೇಖಿಸಿದ ಯಾವುದೇ ವಿಷಯದ ಮೇಲಣ ಅದರ ತೀರ್ಮಾನವು 44ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**44. ಉಚ್ಚ ನ್ಯಾಯಾಲಯಕ್ಕೆ ಅಪೀಲು.–** ನ್ಯಾಯಾಧಿಕರಣದ ತೀರ್ಮಾನದಿಂದ ಬಾಧಿತವಾದ ಮಂಡಲಿಯು ಅಥವಾ ಬಾಧಿತನಾದ ಯಾರೇ ವ್ಯಕ್ತಿಯು ತೀರ್ಮಾನವಾದ ದಿನಾಂಕದಿಂದ ಮೂರು ತಿಂಗಳೊಳಗೆ ಅಥವಾ ಉಚ್ಚ ನ್ಯಾಯಾಲಯವು ಸಾಕಷ್ಟು ಕಾರಣಗಳಿಗಾಗಿ ಅನುಮತಿಸಬಹುದಾದಂಥ ಇನ್ನಷ್ಟು ಅವಧಿಯೊಳಗೆ ಉಚ್ಚನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಉಚ್ಚ ನ್ಯಾಯಾಲಯವು, ಆ ಅಪೀಲಿನ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸತಕ್ಕದ್ದು.

## ಅಧ್ಯಾಯ - VI

## ಮಂಡಲಿಯ ಆವರಣದಿಂದ ವ್ಯಕ್ತಿಗಳನ್ನು ಹೊರಹಾಕಲು ಅಧಿಕಾರ

**45. ಮಂಡಲಿಯ ಆವರಣಗಳಿಂದ ಕೆಲವು ವ್ಯಕ್ತಿಗಳನ್ನು ಹೊರಹಾಕಲು ಅಧಿಕಾರ.–**

(1) ಸಕ್ಷಮ ಪ್ರಾಧಿಕಾರವು,-

(ಎ) ಯಾವುದೇ ಮಂಡಲಿಯ ಆವರಣಗಳನ್ನು ಅನುಭೋಗಿಸಲು ಅಧಿಕೃತನಾದ ವ್ಯಕ್ತಿಯು,-

(i) ಅಂಥ ಆವರಣಗಳಿಗೆ ಸಂಬಂಧಿಸಿದಂತೆ ಎರಡು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಅವನಿಂದ ಕಾನೂನು ಸಮ್ಮತವಾಗಿ ಬಾಕಿ ಇರುವ ಬಾಡಿಗೆಯನ್ನು ಸಂದಾಯ ಮಾಡಿಲ್ಲವೆಂದು; ಅಥವಾ

[1][(iಎ) ನಿಗದಿತ ದಿನಾಂಕದಿಂದ ಎರಡು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಅಂತಹ ಆವರಣಕ್ಕೆ ಸಂಬಂಧಪಟ್ಟಂತೆ ಮಂಡಲಿಗೆ, ಆತನಿಂದ ಬಾಕಿ ಇರುವ ಸಾಲದ ಯಾವುವೇ ಕಂತುಗಳನ್ನು ಸಂದಾಯ ಮಾಡಿಲ್ಲವೆಂದು; ಅಥವಾ][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ii) ಅಂಥ ಆವರಣಗಳ ಪೂರ್ಣ ಅಥವಾ ಯಾವುದೇ ಭಾಗವನ್ನು, ಮಂಡಲಿಯ ಅನುಮತಿ ಇಲ್ಲದೆ ಒಳಬಾಡಿಗೆಗೆ ಕೊಟ್ಟಿದ್ದಾನೆಂದು; ಅಥವಾ

(iii) ಸ್ಪಷ್ಟ ಅಥವಾ ಇಂಗಿತ ನಿಬಂಧನೆಗಳ ಮೇರೆಗೆ ಅವನನ್ನು ಅಂಥ ಆವರಣಗಳನ್ನು ಅನುಭೋಗಿಸಲು ಅಧಿಕೃತಗೊಳಿಸಲಾಗಿತ್ತೋ ಆ ನಿಬಂಧನೆಗಳ ಪೈಕಿ ಯಾವುದೇ ನಿಬಂಧನೆಯನ್ನು ಉಲ್ಲಂಘಿಸಿ ಅನ್ಯಥಾ ವರ್ತಿಸಿದ್ದಾನೆಂದು; ಅಥವಾ

(ಬಿ) ಯಾರೇ ವ್ಯಕ್ತಿಯು ಮಂಡಲಿಯ ಯಾವುವೇ ಆವರಣಗಳನ್ನು ಅನಧಿಕೃತವಾಗಿ ಅನುಭೋಗಿಸುತ್ತಿದ್ದಾನೆಂದು

- ಮನಗಂಡರೆ, ಆ ಸಕ್ಷಮ ಪ್ರಾಧಿಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ನೋಟೀಸನ್ನು (i) ಅಂಚೆಯ ಮೂಲಕ, ಅಥವಾ (ii) ಅಂಥ ಆವರಣಗಳ ಮುಂಬಾಗಿಲಿನ ಮೇಲೆ ಅಥವಾ ಎದ್ದು ಕಾಣುವ ಭಾಗದಲ್ಲಿ ಅದರ ಒಂದು ಪ್ರತಿಯನ್ನು ಅಂಟಿಸುವ ಮೂಲಕ, ಅಥವಾ (iii) ನಿಯಮಿಸಬಹುದಾಂಥ ಇತರ ರೀತಿಯಲ್ಲಿ ಜಾರಿ ಮಾಡುವ ಮೂಲಕ, ಆವರಣಗಳ ಪೂರ್ಣ ಅಥವಾ ಯಾವುದೇ ಭಾಗವನ್ನು ಅನುಭೋಗಿಸುತ್ತಿರುವಂಥ ವ್ಯಕ್ತಿಯು ಹಾಗೂ ಯಾರೇ ಇತರ ವ್ಯಕ್ತಿಯು, ಆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಒಂದು ತಿಂಗಳೊಳಗೆ ಆವರಣಗಳನ್ನು ತೆರವು ಮಾಡತಕ್ಕದ್ದೆಂದು ಆದೇಶಿಸಬಹುದು:

ಪರಂತು, ಅಂಥ ಆದೇಶವನ್ನು ಏಕೆ ಮಾಡಬಾರದೆಂಬ ಬಗ್ಗೆ ಕಾರಣವನ್ನು ತೋರಿಸುವ ಒಂದು ಅವಕಾಶವನ್ನು ಆ ವ್ಯಕ್ತಿಗೆ ಕೊಟ್ಟ ಹೊರತು ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಯಾರೇ ವ್ಯಕ್ತಿಯು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಸಕ್ಷಮ ಪ್ರಾಧಿಕಾರವು ಆ ವ್ಯಕ್ತಿಯನ್ನು ಆವರಣದಿಂದ ಹೊರಹಾಕಬಹುದು ಮತ್ತು ಅವುಗಳ ಸ್ವಾಧೀನತೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂಥ ಬಲ ಪ್ರಯೋಗವನ್ನು ಮಾಡಬಹುದು.

(3) (1)ನೇ ಉಪಪ್ರಕರಣದ (ಎ) ಖಂಡದ (i)[1][ಅಥವಾ (iಎ)][1] ಅಥವಾ (iii)-ನೇ ಉಪಖಂಡದ ಮೇರೆಗೆ ಯಾವುದೇ ಆವರಣವನ್ನು ತೆರವು ಮಾಡುವಂತೆ ಆದೇಶಿತನಾದ ವ್ಯಕ್ತಿಯು ನೋಟೀಸನ್ನು ಜಾರಿ ಮಾಡಿದ ಮೂವತ್ತು ದಿವಸಗಳೊಳಗೆ ಅಥವಾ ಸಕ್ಷಮ ಪ್ರಾಧಿಕಾರವು ಅನುಮತಿಸಬಹುದಾದಂಥ ಇನ್ನಷ್ಟು ಸಮಯದೊಳಗೆ, ಸಂದರ್ಭಾನುಸಾರ ಮಂಡಲಿಗೆ ಬಾಕಿ ಇರುವ ಬಾಡಿಗೆಯನ್ನು [1][ಅಥವಾ ಬಾಕಿ ಇರುವ ಸಾಲದ ಯಾವುದೇ ಕಂತನ್ನು][1] ಸಂದಾಯ ಮಾಡಿದರೆ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಮನದಟ್ಟಾಗುವಂತೆ ತಾನು ಉಲ್ಲಂಘಿಸಿದ ನಿಬಂಧನೆಗಳನ್ನು ನೆರವೇರಿಸಿದರೆ ಅಥವಾ ಅನ್ಯಥಾ ಪಾಲಿಸಿದರೆ ಸಕ್ಷಮ ಪ್ರಾಧಿಕಾರವು (2)ನೇ ಉಪಪ್ರಕರಣದ ಮೇರೆಗೆ ಅಂಥ ವ್ಯಕ್ತಿಯನ್ನು ಹೊರಹಾಕುವುದಕ್ಕೆ ಬದಲಾಗಿ (1)ನೇ ಉಪಪ್ರಕರಣದ ಮೇರೆಗೆ ತಾನು ಮಾಡಿದ ಆದೇಶವನ್ನು ರದ್ದುಗೊಳಿಸತಕ್ಕದ್ದು ಮತ್ತು ಆ ತರುವಾಯ ಅಂಥ ವ್ಯಕ್ತಿಯು, ಅವನಿಗೆ ಅಂಥ ನೋಟೀಸನ್ನು ಜಾರಿಮಾಡುವುದಕ್ಕೆ ನಿಕಟಪೂರ್ವದಲ್ಲಿ ಯಾವ ನಿಬಂಧನೆಗಳ ಮೇಲೆ ಆ ಆವರಣವನ್ನು ಹೊಂದಿದ್ದನೋ ಅವೇ ನಿಬಂಧನೆಗಳ ಮೇಲೆ ಆ ಆವರಣವನ್ನು ಹೊಂದಿರತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**46. [1][ಬಾಡಿಗೆ, ಹಾನಿಗಳು, ಸಾಲದ ಕಂತುಗಳು ಅಥವಾ ಇತರ ಬಾಕಿಗಳನ್ನು][1] ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಲು ಅಧಿಕಾರ.–** (1) ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು ಮತ್ತು 45ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾರೇ ವ್ಯಕ್ತಿಯು, ಮಂಡಲಿಯ ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಾಡಿಗೆಯನ್ನು [2][ಅಥವಾ ಸಾಲದ ಕಂತುಗಳ ಯಾವುದೇ ಬಾಕಿಯನ್ನು ಅಥವಾ ಮಂಡಲಿಗೆ ಸಂದಾಯ ಮಾಡಬೇಕಾದ ಇತರ ಬಾಕಿಯನ್ನು][2] ಉಳಿಸಿಕೊಂಡಿದ್ದರೆ, ಸಕ್ಷಮ ಪ್ರಾಧಿಕಾರವು, ನೋಟೀಸನ್ನು (i) ಅಂಚೆಯ ಮೂಲಕ, ಅಥವಾ (ii) ಅಂಥ ಆವರಣದ ಮುಂಬಾಗಿಲಿನ ಮೇಲೆ ಅಥವಾ ಇತರ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅದರ ಒಂದು ಪ್ರತಿಯನ್ನು ಅಂಟಿಸುವ ಮೂಲಕ, ಅಥವಾ (iii) ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಜಾರಿಗೊಳಿಸಿ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೂವತ್ತು ದಿವಸಗಳಿಗೆ ಕಡಿಮೆ ಇಲ್ಲದ ಸಮಯದೊಳಗೆ ಅದನ್ನು ಸಂದಾಯಮಾಡುವಂತೆ ಆ ವ್ಯಕ್ತಿಗೆ ಆದೇಶ ನೀಡಬಹುದು. ಅಂಥ ವ್ಯಕ್ತಿಯು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಬಾಡಿಗೆಯ ಬಾಕಿಯನ್ನು ಅಥವಾ [2][ಸಾಲದ ಕಂತಿನ ಬಾಕಿಯನ್ನು ಅಥವಾ ಇತರ ಬಾಕಿಗಳನ್ನು][2] ಸಂದಾಯ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಅಂಥ ಬಾಕಿಯನ್ನು ಭೂಕಂದಾಯದ ಬಾಕಿಯಂತೆ [2][ಅಥವಾ ಗೊತ್ತು ಪಡಿಸಬಹುದಾದಂಥ ಅಧಿಕಾರಿಯ, ಅಂತಹ ರೀತಿಯಲ್ಲಿ ಮತ್ತು ಅಂತಹ ಪ್ರಕ್ರಿಯೆಗನುಸಾರ ಬಾಕಿದಾರನ ಚರಾಸ್ತಿಯನ್ನು ಜಪ್ತಿ ಮಾಡುವುದರ ಅಥವಾ ಮಾರಾಟ ಮಾಡುವುದರ ಮೂಲಕ ವಸೂಲು ಮಾಡತಕ್ಕದ್ದು.][2]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಯಾರೇ ವ್ಯಕ್ತಿಯು, ಮಂಡಲಿಯ ಯಾವುದೇ ಆವರಣವನ್ನು ಅನಧಿಕೃತವಾಗಿ ಅನುಭೋಗಿಸುತ್ತಿದ್ದರೆ, ಸಕ್ಷಮ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ, ತಾನು ಸೂಕ್ತವೆಂದು ಭಾವಿಸಬಹುದಾದಂತೆ ಆವರಣದ ಉಪಯೋಗ ಮತ್ತು ಅನುಭೋಗದಿಂದ ಉಂಟಾದ ಹಾನಿಯನ್ನು ನಿರ್ಧರಿಸಬಹುದು ಮತ್ತು ನೋಟೀಸನ್ನು (i) ಅಂಚೆಯ ಮೂಲಕ, ಅಥವಾ (ii) ಅಂಥ ಆವರಣದ ಮುಂಬಾಗಿಲಿನ ಮೇಲೆ ಅಥವಾ ಇತರ ಎದ್ದು ಕಾಣುವ ಭಾಗದಲ್ಲಿ ಅದರ ಒಂದು ಪ್ರತಿಯನ್ನು ಅಂಟಿಸುವ ಮೂಲಕ, ಅಥವಾ (iii) ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಜಾರಿಗೊಳಿಸಿ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಹಾನಿಯನ್ನು ಸಂದಾಯ ಮಾಡುವಂತೆ ಆ ವ್ಯಕ್ತಿಗೆ ಆದೇಶ ನೀಡಬಹುದು. ಯಾರೇ ವ್ಯಕ್ತಿಯು, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಹಾನಿಯನ್ನು ಸಂದಾಯ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಹಾನಿಯನ್ನು ಭೂ ಕಂದಾಯದ ಬಾಕಿಯಂತೆ ಅವನಿಂದ ವಸೂಲು ಮಾಡಬಹುದು.

**47. ಬಾಡಿಗೆಯನ್ನು ಕೆಲವು ಸಂದರ್ಭಗಳಲ್ಲಿ ಸಂಬಳ ಅಥವಾ ಮಜೂರಿಗಳಿಂದ ವಜಾ ಮಾಡಿಕೊಂಡು ವಸೂಲು ಮಾಡುವುದು.–** (1) 45ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ರಾಜ್ಯ ಸರ್ಕಾರದ ಅಥವಾ ಒಂದು ಸ್ಥಳೀಯ ಪ್ರಾಧಿಕಾರದ ನೌಕರನಾಗಿದ್ದು ಮಂಡಲಿಯ ಯಾವುದೇ ಆವರಣವು ಹಂಚಿಕೆಯಾಗಿರುವ ಯಾರೇ ವ್ಯಕ್ತಿಯು, ಸಂದರ್ಭಾನುಸಾರ ಅವನು ಯಾರ ಅಧೀನದಲ್ಲಿ ಉದ್ಯೋಗದಲ್ಲಿರುವನೋ ಅಥವಾ ಯಾರಿಂದ ನೇಮಕಗೊಂಡಿರುವನೋ, ಆ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ತನಗೆ ಸಂದಾಯವಾಗುವ ಸಂಬಳದಿಂದ ಅಥವಾ ಮಜೂರಿಗಳಿಂದ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಮೊಬಲಗನ್ನು ಮುರಿದುಕೊಳ್ಳಲು ಮತ್ತು ಹಾಗೆ ಮುರಿದುಕೊಂಡ ಮೊಬಲಗನ್ನು, ತನಗೆ ಹಂಚಿಕೆಯಾದ ಮಂಡಲಿಯ ಆವರಣಕ್ಕೆ ಸಂಬಂಧಿಸಿದಂತೆ ತನ್ನಿಂದ ಬಾಕಿ ಇರುವ ಬಾಡಿಗೆಯ ತೀರಿಕೆಗಾಗಿ ಮಂಡಲಿಗೆ ಸಂದಾಯ ಮಾಡಲು ಸಕ್ಷಮವಾಗಿರುವುದಾಗಿ ಉಪಬಂಧಿಸುವ ಒಂದು ಒಪ್ಪಂದವನ್ನು ರಾಜ್ಯಸರ್ಕಾರದ ಹೆಸರಿಗೆ ಬರೆದುಕೊಡಬಹುದು.

(2) ಅಂಥ ಒಪ್ಪಂದವನ್ನು ಬರೆದುಕೊಟ್ಟ ಮೇಲೆ, ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು, ಮಂಡಲಿಯು ಲಿಖಿತ ಕೋರಿಕೆಯ ಮೂಲಕ, ಆ ಕೋರಿಕೆಯಲ್ಲಿ ಹೇಳಿರುವಂತಹ ನೌಕರರ ಸಂಬಳದಿಂದ ಅಥವಾ ಮಜೂರಿಗಳಿಂದ ಆ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಒಪ್ಪಂದಕ್ಕನುಸಾರವಾಗಿ ಮುರಿದುಕೊಳ್ಳಬೇಕೆಂದು ಮತ್ತು ಹಾಗೆ ಮುರಿದುಕೊಂಡ ಮೊಬಲಗನ್ನು ಮಂಡಲಿಗೆ ಸಂದಾಯ ಮಾಡುವಂತೆ ಅಗತ್ಯಪಡಿಸಿದರೆ, ಹಾಗೆ ಮಾಡಬಹುದು.

**48. ಅಪೀಲು.–** (1) 45ನೇ ಪ್ರಕರಣದ ಅಥವಾ 46ನೇ ಪ್ರಕರಣದ ಮೇರೆಗಿನ ಸಕ್ಷಮ ಪ್ರಾಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸಂದರ್ಭಾನುಸಾರ, 45ನೇ ಪ್ರಕರಣದ ಅಥವಾ 46ನೇ ಪ್ರಕರಣದ ಮೇರೆಗೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಮಂಡಲಿಯ ಆವರಣವು ಯಾವ ಜಿಲ್ಲೆಯಲ್ಲಿರುವುದೋ ಆ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರಿಗೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು, ಹೆಸರಿಸಬಹುದಾದಂತೆ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಸೇವೆ ಸಲ್ಲಿಸಿರುವ ಆ ಜಿಲ್ಲೆಯಲ್ಲಿನ ಇತರ ನ್ಯಾಯಿಕ ಅಧಿಕಾರಿಗೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲುದಾರನಿಗೆ ಸಾಕಷ್ಟು ಕಾರಣಗಳಿಂದಾಗಿ ಅಪೀಲನ್ನು ಸಕಾಲದಲ್ಲಿ ಸಲ್ಲಿಸಲು ಸಾಧ್ಯವಾಗಲಿಲ್ಲ ವೆಂದು ಅಪೀಲು ಅಧಿಕಾರಿಗೆ ಮನದಟ್ಟಾದರೆ, ಅವನು, ಮೂವತ್ತು ದಿವಸಗಳ ಸದರಿ ಅವಧಿಯು ಮುಕ್ತಾಯವಾದ ನಂತರವೂ ಅಪೀಲನ್ನು ಸ್ವೀಕರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿದ್ದರೆ, ಅಪೀಲು ಅಧಿಕಾರಿಯು, ತಾನು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳ ಮೇಲೆ, ಸಕ್ಷಮ ಪ್ರಾಧಿಕಾರಿಯ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಅಪೀಲು ಅಧಿಕಾರಿಯು ಸಾಧ್ಯವಾದಷ್ಟು ಬೇಗನೆ ವಿಲೇ ಮಾಡತಕ್ಕದ್ದು.

**49. ಆದೇಶಗಳ ಅಂತಿಮತೆ.–** ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಈ ಅಧ್ಯಾಯದ ಮೇರೆಗೆ ಸಕ್ಷಮ ಪ್ರಾಧಿಕಾರವು ಅಥವಾ ಅಪೀಲು ಅಧಿಕಾರಿಯು ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಮೂಲ ದಾವೆಯಲ್ಲಿ, ಅರ್ಜಿಯಲ್ಲಿ ಅಥವಾ ಅಮಲ್ಜಾರಿ ವ್ಯವಹರಣೆಗಳಲ್ಲಿ ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ - VII

### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**50. ಮಂಡಲಿಯ ನಿಧಿ.– (1)** ಮಂಡಲಿಯು, ಗೃಹ ನಿರ್ಮಾಣ ಮಂಡಲಿಯ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕದ್ದು.

(2) ಮಂಡಲಿಯು, ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅಥವಾ ಯಾರೇ ವ್ಯಕ್ತಿಯಿಂದ ಅಥವಾ ನಿಗಮಿತವಾದ ಅಥವಾ ನಿಗಮಿತವಾಗಿಲ್ಲದ ನಿಕಾಯದಿಂದ ಈ ಅಧಿನಿಯಮದ ಎಲ್ಲಾ ಅಥವಾ ಆ ಪೈಕಿ ಯಾವುದೇ ಉದ್ದೇಶಕ್ಕಾಗಿ, ಅನುದಾನಗಳನ್ನು, ಧನ ಸಹಾಯಗಳನ್ನು, ದೇಣಿಗೆಗಳನ್ನು ಮತ್ತು ಕೊಡುಗೆಗಳನ್ನು ಸ್ವೀಕರಿಸಬಹುದು.

[1][(3) xxx][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ಈ ಅಧಿನಿಯಮದ ಕಾರಣದಿಂದಾಗಿ ಮಂಡಲಿಯು ಅಥವಾ ಮಂಡಲಿಯ ಪರವಾಗಿ ಸ್ವೀಕರಿಸಿದ ಎಲ್ಲಾ ಹಣಗಳು, ಮಂಡಲಿಯು ಮಾರಾಟ ಮಾಡಿದ ಜಮೀನಿನ ಅಥವಾ ಯಾವುದೇ ಇತರ ಬಗೆಯ ಸ್ವತ್ತಿನ ಎಲ್ಲಾ ಉತ್ಪನ್ನಗಳು ಮಂಡಲಿಗೆ ಒದಗಿಬರುವ ಎಲ್ಲಾ ಬಾಡಿಗೆಗಳು ಮತ್ತು ಎಲ್ಲಾ ಬಡ್ಡಿ, ಲಾಭಗಳು ಮತ್ತು ಇತರ ಹಣಗಳು ಕೂಡಿ, ಗೃಹ ನಿರ್ಮಾಣ ಮಂಡಲಿಯ ನಿಧಿ ಆಗತಕ್ಕದ್ದು.

(5) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ಹಿಂದೆ ಹೇಳಲಾದ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಮತ್ತು ಮಂಡಲಿಯ ನಿಧಿ ಆಗಿರುವ ಎಲ್ಲಾ ಹಣಗಳನ್ನು ಮತ್ತು ಜಮೆಗಳನ್ನು ಭಾರತದ ರಿಸರ್ವ್ ಬ್ಯಾಂಕಿನಲ್ಲಿ ಅಥವಾ ಯಾವುದೇ ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಅಥವಾ ರಾಜ್ಯ ಸರ್ಕಾರವು ಅನುಮೋದಿಸಬಹುದಾದಂಥ ಭದ್ರತೆಗಳಲ್ಲಿ ತೊಡಗಿಸತಕ್ಕದ್ದು.

[1][(6) xxx][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಭಾರತದ ರಿಸರ್ವ್ ಬ್ಯಾಂಕ್ ಎಂದರೆ, ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಮೇರೆಗೆ ರಚಿಸಲಾದ ಭಾರತದ ರಿಸರ್ವ್ ಬ್ಯಾಂಕ್, ಮತ್ತು ಷೆಡ್ಯೂಲ್ಡ್ ಬ್ಯಾಂಕು ಎಂದರೆ, ಸದರಿ ಅಧಿನಿಯಮದ ಎರಡನೆಯ ಅನುಸೂಚಿಯಲ್ಲಿ ಸೇರಿಸಲಾಗಿರುವ ಒಂದು ಬ್ಯಾಂಕು.

**51. ನಿಧಿಯ ವಿನಿಯೋಗ.–** ಎಲ್ಲಾ ಸ್ವತ್ತನ್ನು, ಗೃಹ ನಿರ್ಮಾಣ ಮಂಡಲಿ ನಿಧಿಯನ್ನು ಮತ್ತು ಮಂಡಲಿಯಲ್ಲಿ ನಿಹಿತವಾಗಿರುವ ಎಲ್ಲಾ ಇತರ ಆಸ್ತಿಗಳನ್ನು, ಮಂಡಲಿಯು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಅಧಿನಿಯಮದ ಉದ್ದೇಶಗಳಿಗಾಗಿ ಹೊಂದಿರತಕ್ಕುದು ಮತ್ತು ವಿನಿಯೋಗಿಸತಕ್ಕದ್ದು.

**52. ತುರ್ತು ಸಂದರ್ಭದಲ್ಲಿ ವೆಚ್ಚ, ಇತ್ಯಾದಿ.–** (1) ಅತಿ ತುರ್ತು ಸಂದರ್ಭಗಳು ಉದ್ಭವಿಸಿವೆ ಎಂದು ಮಂಡಲಿಯು ಅಭಿಪ್ರಾಯಪಟ್ಟಲ್ಲಿ, ಯಾವುದೇ ವರ್ಷದಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ, [1][ಒಂದು ಲಕ್ಷ ರೂಪಾಯಿ)][1] ಗಳನ್ನು ಮೀರದ ವೆಚ್ಚವನ್ನು ರಾಜ್ಯ ಸರ್ಕಾರವು ಮಂಜೂರು ಮಾಡಿದ ಅದರ ವಾರ್ಷಿಕ ಕಾರ್ಯಕ್ರಮದಲ್ಲಿ ಅಥವಾ ಪೂರಕ ಕಾರ್ಯಕ್ರಮದಲ್ಲಿ ಅಥವಾ 23ನೇ ಪ್ರಕರಣದ ಮೇರೆಗೆ ಮಾಡಿದ ಆ ಕಾರ್ಯಕ್ರಮದ ಮಾರ್ಪಾಟಿನಲ್ಲಿ ಸೇರಿಸಿರದಿದ್ದರೂ, ಮಂಡಲಿಯು ಆ ವೆಚ್ಚವನ್ನು ವಹಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದಂತೆ ಅತಿ ತುರ್ತಿನ ಸಂದರ್ಭಗಳಲ್ಲಿ ಯಾವುದೇ ಮೊತ್ತವನ್ನು ವೆಚ್ಚ ಮಾಡಿದ್ದರೆ, ಆ ವೆಚ್ಚವನ್ನು ಭರಿಸುವುದಕ್ಕೆ ಪ್ರಸ್ತಾವಿಸಿರುವ ಮೂಲವನ್ನು ಸೂಚಿಸಿ ಮಂಡಲಿಯು, ಸಾಧ್ಯವಾದಷ್ಟು ಬೇಗನೆ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

(3) ಮಂಡಲಿಯು, ರಾಜ್ಯ ಸರ್ಕಾರವು ಮಂಜೂರು ಮಾಡಿದ ಬಜೆಟ್‌ನೊಳಗೆ ಪ್ರಧಾನ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಒಂದು ಉಪ ಶೀರ್ಷಿಕೆಯಿಂದ ಇನ್ನೊಂದು ಉಪ ಶೀರ್ಷಿಕೆಗೆ ಮತ್ತು ಸಣ್ಣ ಶೀರ್ಷಿಕೆಯಿಂದ ಇನ್ನೊಂದು ಸಣ್ಣ ಶೀರ್ಷಿಕೆಗೆ [1][ಒಂದು ಲಕ್ಷ ರೂಪಾಯಿ)][1]ಗಳನ್ನು ಮೀರದ ವಿನಿಯೋಗಗಳನ್ನು ಅನುಮೋದಿಸಬಹುದು ಮತ್ತು ಅಂಥ ಪುನರ್ ವಿನಿಯೋಗಗಳ ಒಂದು ತಃಖ್ತೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬಹುದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**53. ಮಂಡಲಿಗೆ ಧನ ಸಹಾಯ ಮತ್ತು ಸಾಲಗಳು.–** (1) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಈ ಅಧಿನಿಯಮದ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರವು ಮಂಡಲಿಗೆ ಕಾಲಕಾಲಕ್ಕೆ ಧನ ಸಹಾಯಗಳನ್ನು ಮಾಡಬಹುದು.

(2) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ, ರಾಜ್ಯ ಸರ್ಕಾರವು ಮಂಡಲಿಗೆ ಕಾಲಕಾಲಕ್ಕೆ ಸಾಲಗಳನ್ನು ಕೊಡಬಹುದು.

**54. ಸಾಲ ಪಡೆಯಲು ಮಂಡಲಿಯ ಅಧಿಕಾರ.–** [1][(1) ಅಧಿನಿಯಮದ ಉಪಬಂಧಗಳಿಗೆ ಮತ್ತು ಗೊತ್ತುಪಡಿಸಬಹುದಾದಂತಹ ಷರತ್ತುಗಳಿಗೆ ಒಳಪಟ್ಟು, ಮಂಡಲಿಯು, ಕಾಲಕಾಲಕ್ಕೆ, ಈ ಅಧಿನಿಯಮದ ಉದ್ದೇಶವನ್ನು ಈಡೇರಿಸಲು ಅಗತ್ಯವಿರುವ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಿಂದ ಅಥವಾ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮದಿಂದ ಸಾಲ ಪಡೆಯಬಹುದು.][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಪ್ರಕರಣದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ರಚಿಸಿದ ನಿಯಮಗಳು, ಡಿಬೆಂಚರುಗಳನ್ನು ಹೊರಡಿಸಿ ಸಾಲ ಪಡೆಯಲು ಮತ್ತು ಆ ಬಗ್ಗೆ ಬ್ಯಾಂಕರುಗಳೊಡನೆ ವ್ಯವಸ್ಥೆಮಾಡಿಕೊಳ್ಳಲು ಮಂಡಲಿಯನ್ನು ಅಧಿಕೃತಗೊಳಿಸಬಹುದು.

(3) ಮಂಡಲಿಯು ಹೊರಡಿಸಿದ ಎಲ್ಲಾ ಡಿಬೆಂಚರುಗಳು, ಮಂಡಲಿಯು, ರಾಜ್ಯ ಸರ್ಕಾರದ ಮಂಜೂರಾತಿ ಪಡೆದು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೂಪದಲ್ಲಿರತಕ್ಕದ್ದು.

(4) ಪ್ರತಿಯೊಂದು ಡಿಬೆಂಚರಿಗೆ, ಮಂಡಲಿಯ ಅಧ್ಯಕ್ಷ ಮತ್ತು ಇತರ ಒಬ್ಬ ಸದಸ್ಯರು ಸಹಿ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಪಡೆದುಕೊಂಡ ಸಾಲಗಳಿಗೆ ಮತ್ತು ಹೊರಡಿಸಿದ ಡಿಬೆಂಚರುಗಳಿಗೆ ರಾಜ್ಯ ಸರ್ಕಾರವು ಅದರ ಅಸಲಿನ ಸಂದಾಯಕ್ಕೆ ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯ ಸಂದಾಯಕ್ಕೆ ರಾಜ್ಯ ಸರ್ಕಾರವು ಖಾತರಿ ಒದಗಿಸಬಹುದು.

[1][(6) ಮಂಡಲಿಯು, ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿ ನಿಗಮ, ನವದೆಹಲಿ ಇದರಿಂದ ಅಥವಾ ಯಾವುದೇ ಅನುಸೂಚಿತ ಬ್ಯಾಂಕಿನಿಂದ ಅಥವಾ ಇತರ ಯಾವುವೇ ಅಂಗೀಕೃತ ಗೃಹನಿರ್ಮಾಣ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಕ್ಕೆ ಭದ್ರತೆಯ ರೂಪದಲ್ಲಿ ಮಂಡಲಿಯ ಯಾವುವೇ ಸ್ವತ್ತುಗಳನ್ನು ಅಡಮಾನ ಮಾಡಲು ಸಕ್ಷಮವಾಗಿರತಕ್ಕದ್ದು.][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**54ಎ. ಸಾಲವನ್ನು ಮರುಪಾವತಿ ಮಾಡುವ ವಿಧಾನ.–** ಮಂಡಲಿಯು ಪಡೆದ ಪ್ರತಿಯೊಂದು ಸಾಲವನ್ನು ಅದು ಒಪ್ಪಿಕೊಂಡಿರುವ ಅವಧಿಯೊಳಗೆ ಮತ್ತು ಅಂತಹ ರೀತಿಯಲ್ಲಿ,–

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) 54ಬಿ ಪ್ರಕರಣದ ಮೇರೆಗಿನ ಉದ್ದೇಶಗಳಿಗಾಗಿ ಸ್ಥಾಪಿಸಲಾದ ಋಣ ತೀರಿಕೆ ನಿಧಿಯಿಂದ; ಅಥವಾ

(ಬಿ) ಆ ಉದ್ದೇಶಕ್ಕಾಗಿ ಸಾಲ ಪಡೆಯಲಾದ ಹಣದಿಂದ; ಅಥವಾ

(ಸಿ) 54ಬಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಋಣ ನಿಧಿಯಿಂದ ಭಾಗಶಃ ಮತ್ತು ಆ ಉದ್ದೇಶಕ್ಕಾಗಿ ಸಾಲ ಪಡೆಯಲಾದ ಹಣದಿಂದ ಭಾಗಶಃ

– ಮರು ಸಂದಾಯ ಮಾಡತಕ್ಕದ್ದು.

**54ಬಿ. ಸಾಲ ತೀರಿಕೆ ನಿಧಿಯ ಸ್ಥಾಪನೆ.–** (1) ಮಂಡಲಿಯು ತಾನು ಪಡೆದ ಸಾಲಗಳ ಮರು ಸಂದಾಯದ ಉದ್ದೇಶಕ್ಕಾಗಿ ಸಾಲತೀರಿಕೆ ನಿಧಿಯನ್ನು ಸ್ಥಾಪಿಸಬಹುದು.

(2) ಸಾಲ ತೀರಿಕೆ ನಿಧಿಗೆ ಸಂದಾಯ ಮಾಡಬೇಕಾದ ಮೊತ್ತವು ಮತ್ತು ಸಂದಾಯದ ವಿಧಾನವು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(3) ಸಾಲ ತೀರಿಕೆ ನಿಧಿಗೆ ಸಂದಾಯ ಮಾಡಬೇಕಾದ ಎಲ್ಲ ಹಣವನ್ನು ಸರ್ಕಾರಿ ಭದ್ರತೆಗಳಲ್ಲಿ ಅಥವಾ ಅನುಸೂಚಿತ ಬ್ಯಾಂಕುಗಳ ನಿಗದಿತ ಠೇವಣಿಗಳಲ್ಲಿ ತೊಡಗಿಸತಕ್ಕದ್ದು.][1]

**55. ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ.–** (1) ಮಂಡಲಿಯು, ಈ ಅಧಿನಿಯಮದ ಮೇರೆಗಿನ ನಿಯಮಗಳು ಅಗತ್ಯಪಡಿಸಬಹುದಾದ ಲೆಕ್ಕಗಳ ಸೂಕ್ತ ಪುಸ್ತಕಗಳನ್ನು ಮತ್ತು ಅಂಥ ಇತರ ಪುಸ್ತಕಗಳನ್ನು ಇಡುವಂತೆ ಮಾಡತಕ್ಕದ್ದು ಮತ್ತು ಅಂಥ ನಿಯಮಗಳಿಗೆ ಅನುಸಾರವಾಗಿ ಲೆಕ್ಕಗಳ ವಾರ್ಷಿಕ ತಃಖ್ತೆಯನ್ನು ತಯಾರಿಸತಕ್ಕದ್ದು.

(2) ಮಂಡಲಿಯು, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಗಳಿಂದ ಪ್ರತಿ ವರ್ಷ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳತಕ್ಕದ್ದು.

(3) ಮಂಡಲಿಯ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ ನಡೆಸಿದ ಕೂಡಲೇ, ಮಂಡಲಿಯು ಅವುಗಳ ಒಂದು ಪ್ರತಿಯನ್ನು ಅದರ ಮೇಲಣ ಲೆಕ್ಕ ಪರಿಶೋಧಕನ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಲೆಕ್ಕಪತ್ರಗಳನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಅದರ ಪ್ರತಿಗಳನ್ನು ಯುಕ್ತ ಬೆಲೆಯಲ್ಲಿ ಮಾರಾಟಕ್ಕೆ ಇಡತಕ್ಕದ್ದು. [1][ಪರಿಶೋಧಿತ ಲೆಕ್ಕಪತ್ರಗಳನ್ನು ಮತ್ತು ವರದಿಯನ್ನು ರಾಜ್ಯ ಸರ್ಕಾರವು ಸ್ವೀಕರಿಸಿದ ಕೂಡಲೇ ಅವುಗಳನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.][1]

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಲೆಕ್ಕಪರಿಶೋಧಕನ ವರದಿಯನ್ನು ಪರಿಶೀಲಿಸಿದ ತರುವಾಯ ರಾಜ್ಯ ಸರ್ಕಾರವು ಯುಕ್ತವೆಂದು ಭಾವಿಸಿ ನೀಡಿದ ನಿರ್ದೇಶನಗಳನ್ನು ಮಂಡಲಿಯು ಪಾಲಿಸತಕ್ಕದ್ದು.

**56. ಲೆಕ್ಕಗಳ ಸಮವರ್ತಿ ಮತ್ತು ವಿಶೇಷ ಲೆಕ್ಕ ಪರಿಶೋಧನೆಗಳು.–** (1) 55ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳಿಂದ ಮಂಡಲಿಯ ಲೆಕ್ಕಪತ್ರಗಳ ಸಮವರ್ತಿ ಲೆಕ್ಕಪರಿಶೋಧನೆಯನ್ನು ಮಾಡಿಸಿಕೊಳ್ಳತಕ್ಕದೆಂದು ಆದೇಶಿಸಬಹುದು. ರಾಜ್ಯ ಸರ್ಕಾರವು ಯಾವುದೇ ನಿರ್ದಿಷ್ಟ ವ್ಯವಹಾರದ ಅಥವಾ ವ್ಯವಹಾರಗಳ ಒಂದು ವರ್ಗದ ಅಥವಾ ಸರಣಿಗಳ ಅಥವಾ ಒಂದು ನಿರ್ದಿಷ್ಟ ಅವಧಿಗೆ ಸಂಬಂಧಪಟ್ಟ ಮಂಡಲಿಯ ಲೆಕ್ಕಪತ್ರಗಳ ವಿಶೇಷ ಲೆಕ್ಕ ಪರಿಶೋಧನೆಯನ್ನು ತಾನು ನೇಮಕ ಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ನಿಂದ ಮಾಡಿಸಿಕೊಳ್ಳುವಂತೆ ಸಹ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿದ್ದರೆ, ಮಂಡಲಿಯು, ಅಂಥ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗಾಗಿ ಹಾಜರುಪಡಿಸತಕ್ಕದ್ದು ಅಥವಾ ಹಾಜರುಪಡಿಸುವಂತೆ ಮಾಡತಕ್ಕದ್ದು ಮತ್ತು (1)ನೇ ಉಪಪ್ರಕರಣದ ಮೇರೆಗೆ ನೇಮಕಮಾಡಿದ ವ್ಯಕ್ತಿಗೆ, ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಸದರಿ ವ್ಯಕ್ತಿಯು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

## ಅಧ್ಯಾಯ – VIII

## ಕಾರ್ಮಿಕ ಗೃಹ ನಿರ್ಮಾಣ

**57. ಅರ್ಥ ವಿವರಣೆ.–** (1) ಈ ಅಧ್ಯಾಯದ ಉದ್ದೇಶಕ್ಕಾಗಿ,–

(ಎ) "ನೌಕರ" ಎಂದರೆ ಕಾರ್ಖಾನೆಗಳ ಅಧಿನಿಯಮ, 1984ರಲ್ಲಿ ಪರಿಭಾಷಿಸಿದ ಯಾವುದೇ ಕಾರ್ಖಾನೆಯಲ್ಲಿ ಅಥವಾ ಗಣಿಗಳ ಅಧಿನಿಯಮ, 1952ರಲ್ಲಿ ಪರಿಭಾಷಿಸಿದ ಯಾವುದೇ ಗಣಿಯಲ್ಲಿ ಅಥವಾ ಯಾವುದೇ ಬಟ್ಟೆಗಿರಣಿಯಲ್ಲಿ ಅಥವಾ ಯಾವುದೇ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಅಥವಾ ತಂಬಾಕು ತಯಾರಿಕೆಯ ಯಾವುದೇ ಕಾರ್ಖಾನೆಯಲ್ಲಿ ಕೂಲಿಗೆ ಅಥವಾ ಪ್ರತಿಫಲಕ್ಕಾಗಿ ಯಾವುದೇ ಕುಶಲ ಅಥವಾ ಅಕುಶಲ, ದೈಹಿಕ ಅಥವಾ ಲಿಪಿಕ ಕೆಲಸವನ್ನು ಮಾಡುವ ಸಲುವಾಗಿ ನಿಯೋಜಿತನಾದಂಥ ಯಾರೇ ವ್ಯಕ್ತಿ; ಮತ್ತು ಇದು, ಈ ಅಧ್ಯಾಯದ ಉದ್ದೇಶಕ್ಕಾಗಿ ನೌಕರನೆಂದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಘೋಷಿಸಿದ ಯಾರೇ ವ್ಯಕ್ತಿಯನ್ನು ಸಹ ಒಳಗೊಳ್ಳುತ್ತದೆ.

(ಬಿ) "ನಿಯೋಜಕ" ಎಂದರೆ ನೇರವಾಗಿ ತಾನೇ ಅಥವಾ ಮತ್ತೊಬ್ಬ ವ್ಯಕ್ತಿಯ ಮೂಲಕ ಅಥವಾ ತನ್ನ ಪರವಾಗಿ ಅಥವಾ ಯಾರೇ ಇತರ ವ್ಯಕ್ತಿಯ ಪರವಾಗಿ ಒಬ್ಬ ಅಥವಾ ಹೆಚ್ಚು ಜನ ನೌಕರರನ್ನು ನಿಯೋಜಿಸಿಕೊಳ್ಳುವ ಯಾರೇ ವ್ಯಕ್ತಿ, ಮತ್ತು ಇದು,-

(i) ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ಕಾರ್ಖಾನೆಯ ಒಡೆಯ ಅಥವಾ ಅನುಭೋಗದಾರನನ್ನು ಒಳಗೊಳ್ಳುತ್ತದೆ ಮತ್ತು ಅಂಥ ಒಡೆಯನ ಅಥವಾ ಅನುಭೋಗದಾರನ ವ್ಯವಸ್ಥಾಪಕ ಏಜಂಟ್‌ನನ್ನು ಮೃತ ಒಡೆಯನ ಅಥವಾ ಅನುಭೋಗದಾರನ ಕಾನೂನು ಸಮ್ಮತ ಪ್ರತಿನಿಧಿಯನ್ನು ಮತ್ತು ಕಾರ್ಖಾನೆಗಳ ಅಧಿನಿಯಮ, 1984ರ 7ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಒಬ್ಬ ವ್ಯಕ್ತಿಯನ್ನು ಕಾರ್ಖಾನೆಯ ವ್ಯವಸ್ಥಾಪಕನೆಂದು ಹೆಸರಿಸಲಾಗಿರುವಲ್ಲಿ ಹಾಗೆ ಹೆಸರಿಸಲಾದ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ii) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿನ ಯಾವುದೇ ನಿಯೋಜನೆಗೆ ಸಂಬಂಧಪಟ್ಟಂತೆ ನಿಯೋಜಿತರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ಅಂಥ ಪ್ರಾಧಿಕಾರವು ನೇಮಕ ಮಾಡಿದ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಅಥವಾ ಅಂಥ ಯಾರೇ ವ್ಯಕ್ತಿಯನ್ನು ನೇಮಕ ಮಾಡಿರದಿದ್ದರೆ ಆ ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(iii) ಯಾವುದೇ ಇತರ ಸಂದರ್ಭದಲ್ಲಿ ಸ್ಥಾಪನೆಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾದ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಸಿ) "ಮಜೂರಿಗಳು" ಎಂಬುದು ಮಜೂರಿಗಳ ಸಂದಾಯ ಅಧಿನಿಯಮ, 1936ರಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಡಿ) "ಕಾರ್ಮಿಕ ವರ್ಗ" ಇದು ಮಜೂರಿಗಾಗಿ ಕೆಲಸ ಮಾಡುವ ಮೆಕ್ಯಾನಿಕ್‌ಗಳನ್ನು, ಕುಶಲಕರ್ಮಿಗಳನ್ನು, ಕಾರ್ಮಿಕರನ್ನು ಮತ್ತು ಇತರರನ್ನು ಮಜೂರಿಗಾಗಿ ಕೆಲಸ ಮಾಡದಿರುವ, ಆದರೆ, ತಮ್ಮ ಕುಟುಂಬದ ಸದಸ್ಯರ ಹೊರತಾಗಿ ಇತರರನ್ನು ನಿಯೋಜಿಸಿಕೊಳ್ಳದೆ ಯಾವೊಂದು ವೃತ್ತಿ ಅಥವಾ ಕೈ ಕಸಬಿನಲ್ಲಿ ಕೆಲಸ ಮಾಡುತ್ತಿರುವ ಬೀದಿ ವ್ಯಾಪಾರಿಗಳನ್ನು ಮತ್ತು ವ್ಯಕ್ತಿಗಳನ್ನು ಮತ್ತು ಯಾವುದೇ ಸಂದರ್ಭದಲ್ಲಿ ಒಂದು ತಿಂಗಳಿಗೆ ಸರಾಸರಿ ಒಂದು ನೂರ ಇಪ್ಪತ್ತೈದು ರೂಪಾಯಿಗಳನ್ನು ಮೀರದ ವರಮಾನವಿರುವ ಮನೆಗೆಲಸದವರಲ್ಲದ ವ್ಯಕ್ತಿಗಳನ್ನು ಮತ್ತು ಅವರೊಂದಿಗೆ ವಾಸಿಸುತ್ತಿರುವ ಅಂಥ ಯಾರೇ ವ್ಯಕ್ತಿಗಳ ಕುಟುಂಬಗಳನ್ನು ಒಳಗೊಳ್ಳುತ್ತದೆ.

(2) ಈ ಅಧ್ಯಾಯದ ಉದ್ದೇಶಗಳಿಗಾಗಿ ಮನೆಯು ಮಾನವ ವಾಸಕ್ಕೆ ಯೋಗ್ಯವಾಗಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸುವಾಗ ಆ ಮನೆಯು ದುರಸ್ತಿಯಾಗದಿರುವ ಅಥವಾ ನೈರ್ಮಲ್ಯ ವ್ಯವಸ್ಥೆಯ ದೋಷಗಳ ಕಾರಣದಿಂದಾಗಿ ಆ ಮನೆಯು ಇರುವಂಥ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಪೌರಸಭಾ ಉಪ ವಿಧಿಗಳಿಗೆ ಅಥವಾ ಕಾನೂನುಗಳಿಗೆ ಅಥವಾ ಹೊಸ ಬೀದಿಗಳ ರಚನೆಗೆ ಮತ್ತು ಚರಂಡಿ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಆ ಪ್ರದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಯಾವುದೇ ಇತರ ಉಪಬಂಧಕ್ಕೆ ಅಥವಾ ಆ ಪ್ರದೇಶದಲ್ಲಿ ಕಾರ್ಮಿಕ ವರ್ಗಗಳಿಗಾಗಿ ಕಟ್ಟುವ ವಾಸದ ಮನೆಗಳ ಸಾಮಾನ್ಯ ಗುಣಮಟ್ಟ ಇವುಗಳಿಗೆ ಆ ಮನೆಯು ಎಷ್ಟರ ಮಟ್ಟಿಗೆ ಅನುಗುಣವಾಗಿಲ್ಲವೋ ಅಷ್ಟು ಮಟ್ಟಿಗೆ ಆ ವಿಷಯವನ್ನು ಗಮನಿಸತಕ್ಕದ್ದು.

**58. ಕಾರ್ಮಿಕ ಗೃಹ ನಿರ್ಮಾಣ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಮಂಡಲಿಯ ಕರ್ತವ್ಯ.-** (1) ರಾಜ್ಯ ಸರ್ಕಾರವು ಅನುಮೋದಿಸಬಹುದಾದಂಥ ಯೋಜನೆಗಳಿಗೆ ಅನುಸಾರವಾದಂಥ ಮಾದರಿಗಳ ಮತ್ತು ವಿನ್ಯಾಸಗಳ ಸೂಕ್ತ ಮನೆಗಳನ್ನು ನೌಕರರಿಗೆ ಅವರ ಕೆಲಸದ ಸ್ಥಳಕ್ಕೆ ಸಾಧ್ಯವಾದಷ್ಟು ಸಮೀಪದಲ್ಲಿ ಒದಗಿಸುವ ಮೂಲಕ ಕಾರ್ಮಿಕ ಕಲ್ಯಾಣಕ್ಕಾಗಿ ವ್ಯವಸ್ಥೆ ಮಾಡುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

(2) ಮಂಡಲಿಯು, ನೌಕರರಿಗೆ ಸೂಕ್ತ ವಾಸದ ಮನೆಗಳನ್ನು ಒದಗಿಸುವ ಯೋಜನೆಗಳನ್ನು ತಯಾರಿಸಿ, ಕಾರ್ಯಗತಗೊಳಿಸುವುದಲ್ಲದೆ,-

(i) ತೋಟಗಳು, ಆಟದ ಮೈದಾನಗಳು ಮತ್ತು ಮನರಂಜನಾ ಸೌಲಭ್ಯಗಳ ವ್ಯವಸ್ಥೆ;

(ii) ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯದ ಸುಧಾರಣೆ;

(iii) ನೀರು ಸರಬರಾಜು ಮತ್ತು ತೊಳೆಯುವ ಸೌಲಭ್ಯಗಳ ವ್ಯವಸ್ಥೆ;

(iv) ಕೆಲಸದ ಸ್ಥಳಗಳಿಗೆ ಹೋಗಿಬರುವ ಸಾರಿಗೆ ವ್ಯವಸ್ಥೆ

– ಇವುಗಳಿಗೆ ಸಂಬಂಧಪಟ್ಟ ಕ್ರಮಗಳನ್ನು ಪ್ರವರ್ಧಿಸಬಹುದು ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಪರಿಮಿತಿಗಳಲ್ಲಿ ಮಂಡಲಿಯ ನಿಧಿಯಿಂದ ಅಂಥ ಕ್ರಮಗಳಿಗೆ ಸಂಬಂಧಪಟ್ಟ ವೆಚ್ಚವನ್ನು ವಹಿಸಬಹುದು.

**59. ವಾಸದ ಮನೆಯ ಬಗ್ಗೆ ವ್ಯವಸ್ಥೆ.–** (1) ಮಂಡಲಿಯು ಒದಗಿಸಿದ ಯಾವುದೇ ವಾಸದ ಮನೆಯಲ್ಲಿ ಯಾರೇ ನೌಕರನ ಅನುಭೋಗವು ಅಂಥ ವಾಸದ ಮನೆಯ ಅನುಭೋಗಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಷರತ್ತುಗಳನ್ನು ಆ ವ್ಯಕ್ತಿಯು ಎಲ್ಲಾ ಕಾಲಗಳಲ್ಲಿ ಪಾಲಿಸುವುದಕ್ಕೆ ಒಳಪಟ್ಟಿರತಕ್ಕದ್ದು.

(2) ಯಾರೇ ವ್ಯಕ್ತಿಯು ಅಂಥ ಯಾವುದೇ ವಾಸದ ಮನೆಯನ್ನು ಅನುಭೋಗಿಸುವುದಕ್ಕೆ ಮುಂಚೆ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಷರತ್ತಿನ ಒಂದು ಪ್ರತಿಯನ್ನು ಅವನಿಗೆ ಒದಗಿಸತಕ್ಕದ್ದು, ಮತ್ತು ಅವನು ಬಯಸಿದರೆ ಸದರಿ ಷರತ್ತುಗಳನ್ನು ಅವನಿಗೆ ತಿಳಿಯುವ ಭಾಷೆಯಲ್ಲಿ ಅವನಿಗೆ ಓದಿ ಹೇಳತಕ್ಕದ್ದು; ಮತ್ತು ಸದರಿ ಷರತ್ತುಗಳಲ್ಲಿ ಕಾಲಕಾಲಕ್ಕೆ ಮಾಡಬಹುದಾದ ಯಾವುವೇ ಬದಲಾವಣೆಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ತಿಳಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಅದನ್ನು ಮಂಡಲಿಯು ಪ್ರಕಟಿಸುವಂತೆ ಮಾಡತಕ್ಕದ್ದು.

(3) ಅಂಥ ಯಾವುದೇ ವಾಸದ ಮನೆಯ ಅನುಭೋಗದಲ್ಲಿರುವ ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಪಾಲಿಸಲು ತಪ್ಪಿರುವನೆಂದು ಅಥವಾ ಪಾಲಿಸುವುದನ್ನು ನಿಲ್ಲಿಸಿರುವನೆಂದು ಮಂಡಲಿಯು ಅಭಿಪ್ರಾಯಪಟ್ಟರೆ, ಅದು ಲಿಖಿತ ನೋಟೀಸಿನ ಮೂಲಕ ಆ ನೋಟೀಸನ್ನು ಜಾರಿ ಮಾಡಿದ ತರುವಾಯ ಮೂವತ್ತು ದಿನಗಳಿಗಿಂತ ಕಡಿಮೆ ಇಲ್ಲದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಆ ವಾಸದ ಮನೆಯನ್ನು ತೆರವು ಮಾಡುವಂತೆ ಅವನನ್ನು ಅಗತ್ಯಪಡಿಸಬಹುದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಅಂಥ ವ್ಯಕ್ತಿಯು ಅಥವಾ ಅವನ ಯಾವನೇ ಅವಲಂಬಿತನು ಅಂಥ ವಾಸದ ಮನೆಯ ಅನುಭೋಗದಲ್ಲಿರುವುದು ಕಾನೂನುಬಾಹಿರವಾಗತಕ್ಕದ್ದು ಮತ್ತು ಅಂಥ ವ್ಯಕ್ತಿಯನ್ನು ಅಥವಾ ಅವಲಂಬಿತನನ್ನು VIನೇ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ಅಂಥ ವಾಸದ ಮನೆಯಿಂದ ತದನುಸಾರವಾಗಿ ಹೊರಹಾಕತಕ್ಕದ್ದು.

(4) ಮೇಲೆ ಹೇಳಿದಂತೆ ಅಂಥ ಯಾವುದೇ ವಾಸದ ಮನೆಯ ಅನುಭೋಗಕ್ಕೆ ಸಂಬಂಧಿಸಿದಂತೆ,–

(i) ವಾಸದ ಮನೆಯ ನಿರ್ಮಾಣದ ವೆಚ್ಚವನ್ನು, ಮತ್ತು

(ii) ವಾಸದ ಮನೆಯ ನಿರ್ವಹಣಾ ವೆಚ್ಚವನ್ನು

– ಗಣನೆಗೆ ತೆಗೆದುಕೊಂಡು ನಿಯಮಿಸಬಹುದಾದಂಥ ದರದಲ್ಲಿ ಬಾಡಿಗೆಯು ಸಂದಾಯವಾಗತಕ್ಕದ್ದು.

(5) (i) ಮೇಲೆ ಹೇಳಲಾದಂತೆ ಅಂಥ ವಾಸದ ಮನೆಯ ಅನುಭೋಗಕ್ಕೆ ಸಂಬಂಧಿಸಿ ಸಂದಾಯವಾಗತಕ್ಕ ಎಲ್ಲಾ ಬಾಡಿಗೆಯನ್ನು ಮೊದಲಲ್ಲಿ ವಾಸದ ಮನೆಯ ಅನುಭೋಗದಲ್ಲಿರುವ ನೌಕರನ ನಿಯೋಜಕನು ಸಂದಾಯ ಮಾಡತಕ್ಕದ್ದು.

(ii) ಯಾವುದೇ ಇತರ ಅಧಿನಿಯಮದಲ್ಲಿ ಏನೇ ಇದ್ದರೂ, ಆದರೆ, ಈ ಅಧಿನಿಯಮದ ಮೇರೆಗೆ ವಿನಿಯಮಗಳು ಯಾವುವಾದರೂ ಇದ್ದರೆ ಅವುಗಳ ಉಪಬಂಧಗಳಿಗೆ ಒಳಪಟ್ಟು, ನಿಯೋಜಕನು (i)ನೇ ಖಂಡದ ಮೇರೆಗೆ ತಾನು ಸಂದಾಯ ಮಾಡಿದ ಬಾಡಿಗೆಯನ್ನು ಸಂಬಂಧಪಟ್ಟ ನೌಕರನ ಮಜೂರಿಯಿಂದ ಮುರಿದುಕೊಳ್ಳುವ ಮೂಲಕ ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕುದೇ ಹೊರತು ಅನ್ಯಥಾ ಹಕ್ಕುಳ್ಳವನಾಗತಕ್ಕದ್ದಲ್ಲ.

**60. ವಾಸದ ಮನೆಯು ಒಳ್ಳೆಯ ವಾಸಯೋಗ್ಯ ಸ್ಥಿತಿಯಲ್ಲಿರುವುದು.–** (1) ಮಂಡಲಿಯು, ತನ್ನ ನಿಯಂತ್ರಣದಲ್ಲಿರುವ ವಾಸದ ಮನೆಯನ್ನು ಒಳ್ಳೆಯ ವಾಸಯೋಗ್ಯಸ್ಥಿತಿಯಲ್ಲಿಡುವುದು ಅದರ ಕರ್ತವ್ಯವಾಗಿರತಕ್ಕದ್ದು.

(2) ರಾಜ್ಯ ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ನ್ಯಾಯಾಲಯಕ್ಕೆ, ತನ್ನ ಅಧಿಕಾರಿಗಳ ಪೈಕಿ ಯಾರಿಂದಾದರೂ ಬಂದ ಯಾವುದೇ ಮನವಿಯನ್ನು ಅಥವಾ ವರದಿಯನ್ನು ಅಥವಾ ತಾನು ಸ್ವೀಕರಿಸಿದ ಇತರ ಮಾಹಿತಿಯನ್ನು ಪರಿಶೀಲಿಸಿದ ತರುವಾಯ, ಮಂಡಲಿಯ ನಿಯಂತ್ರಣದಲ್ಲಿರುವ ಯಾವುದೇ ವಾಸದ ಮನೆಯು ಯಾವುದೇ ರೀತಿಯಲ್ಲಿ ಒಳ್ಳೆಯ ವಾಸಯೋಗ್ಯ ಸ್ಥಿತಿಯಲ್ಲಿಲ್ಲವೆಂದು ಮನದಟ್ಟಾಗಿದ್ದರೆ, ಅದನ್ನು ಯುಕ್ತ ವೆಚ್ಚದಲ್ಲಿ ವಾಸಯೋಗ್ಯ ಸ್ಥಿತಿಗೆ ತರಲು ಸಾಧ್ಯವಿಲ್ಲವೆಂದು ಅದಕ್ಕೆ ಮನದಟ್ಟಾದ ಹೊರತು, ಮಂಡಲಿಗೆ ನೋಟೀಸನ್ನು ಜಾರಿ ಮಾಡಿ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇಪ್ಪತ್ತು ದಿವಸಗಳಿಗಿಂತ ಕಡಿಮೆ ಇಲ್ಲದೆ, ಯುಕ್ತ ಸಮಯದೊಳಗೆ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಮಗಾರಿಗಳಿಂದ ಆ ವಾಸದ ಮನೆಯು ಒಳ್ಳೆಯ ವಾಸಯೋಗ್ಯ ಸ್ಥಿತಿಗೆ ಬರುವುದೆಂದು ಸಂದರ್ಭಾನುಸಾರ ರಾಜ್ಯ ಸರ್ಕಾರವು, ಸ್ಥಳೀಯ ಪ್ರಾಧಿಕಾರವು ಅಥವಾ ನ್ಯಾಯಾಲಯವು ಅಭಿಪ್ರಾಯಪಟ್ಟಿದೆಯೆಂದು ತಿಳಿಸುತ್ತಾ ಆ ಕಾಮಗಾರಿಗಳನ್ನು ಮಂಡಲಿಯನ್ನು ಕಾರ್ಯಗತಗೊಳಿಸುವಂತೆ ಅಗತ್ಯಪಡಿಸತಕ್ಕದ್ದು.

(3) (ಎ) ಮಂಡಲಿಯು, ಸ್ಥಳೀಯ ಪ್ರಾಧಿಕಾರವು ಅಥವಾ ನ್ಯಾಯಾಲಯವು (2)ನೇ ಉಪ ಪ್ರಕರಣದ ಮೇರೆಗೆ ನೋಟೀಸನ್ನು ಜಾರಿ ಮಾಡಿದ ಇಪ್ಪತ್ತೊಂದು ದಿವಸಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಅಥವಾ ಆ ನೋಟೀಸನ್ನು ರಾಜ್ಯ ಸರ್ಕಾರವೇ ಜಾರಿ ಮಾಡಿದ್ದರೆ ಪುನರವಲೋಕನಕ್ಕಾಗಿ ಅದಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ನ್ಯಾಯಾಲಯವು, ಸಂದರ್ಭಾನುಸಾರ ಅಪೀಲನ್ನು ಅಥವಾ ಪುನರವಲೋಕನಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಅಂತಿಮವಾಗಿ ನಿರ್ಧರಿಸುವುದಕ್ಕೆ ಮುಂಚೆ ಆ ನೋಟೀಸನ್ನು ಜಾರಿ ಮಾಡಲು ಯಾವುದೇ ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

(ಬಿ) ರಾಜ್ಯ ಸರ್ಕಾರವು, ಅಂಥ ಅಪೀಲನ್ನು ಅಥವಾ ಪುನರವಲೋಕನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಆ ನೋಟೀಸನ್ನು ಸ್ಥಿರೀಕರಿಸಿ ಅಥವಾ ರದ್ದುಗೊಳಿಸಿ, ಅಥವಾ ವ್ಯತ್ಯಾಸಗೊಳಿಸಿ, ಆದೇಶ ಮಾಡಬಹುದು ಮತ್ತು ರಾಜ್ಯ ಸರ್ಕಾರದ ಅಂಥ ಆದೇಶವು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಮಂಡಲಿಗೆ ಜಾರಿ ಮಾಡಿದ ನೋಟೀಸನ್ನು ಪಾಲಿಸದಿದ್ದರೆ, ಆಗ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ ಅಥವಾ ನೋಟೀಸಿನ ವಿರುದ್ಧ ಅಪೀಲನ್ನು ಅಥವಾ ಪುನರವಲೋಕನದ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಅಂಥ ಅಪೀಲನ್ನು ಅಥವಾ ಪುನರವಲೋಕನದ ಅರ್ಜಿಯನ್ನು ಸಲ್ಲಿಸಿದ ಮೇಲೆ ಆ ನೋಟೀಸನ್ನು ವ್ಯತ್ಯಾಸಗೊಳಿಸಿ ಅಥವಾ ವ್ಯತ್ಯಾಸಗೊಳಿಸದೆ ಸ್ಥಿರೀಕರಿಸಿದರೆ, ಆ ಅಪೀಲಿನ ಅಥವಾ ಪುನರವಲೋಕನದ ಅರ್ಜಿಯ ಬಗ್ಗೆ ಅಂತಿಮ ನಿರ್ಧಾರವಾದಂದಿನಿಂದ ಇಪ್ಪತ್ತೊಂದು ದಿವಸಗಳು ಅಥವಾ ಆ ಅಪೀಲನ್ನು ಅಥವಾ ಪುನರವಲೋಕನದ ಅರ್ಜಿಯನ್ನು ನಿರ್ಧರಿಸಲು ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಇನ್ನಷ್ಟು ಹೆಚ್ಚಿನ ಅವಧಿಯು ಮುಕ್ತಾಯವಾದ ತರುವಾಯ, ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ನ್ಯಾಯಾಲಯವು ನೋಟೀಸಿನ ಮೂಲಕ ಅಥವಾ ರಾಜ್ಯ ಸರ್ಕಾರವು ವ್ಯತ್ಯಾಸಗೊಳಿಸಿದ ನೋಟೀಸಿನ ಮೂಲಕ ಅಗತ್ಯಪಡಿಸಲಾದ ಕಾಮಗಾರಿಯನ್ನು ಮಾಡಿಸಲು ತಾನೇ ಕ್ರಮ ಕೈಗೊಳ್ಳಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ನ್ಯಾಯಾಲಯವು ವಹಿಸಿದ ಯಾವುವೇ ವೆಚ್ಚಗಳನ್ನು, ಆ ವೆಚ್ಚಗಳ ಬಗ್ಗೆ ತಗಾದೆ ಮಾಡಿದ ದಿನಾಂಕದಿಂದ ಸಂದಾಯವಾಗುವ ತನಕ ವರ್ಷಕ್ಕೆ ಶೇಕಡಾ ಆರರ ದರದ ಬಡ್ಡಿಯೂ ಸೇರಿ, ತಗಾದೆಯ ನೋಟಿಸು, ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಕ್ಷಿಪ್ರವಾಗಿ ಮಂಡಲಿಯಿಂದ ವಸೂಲು ಮಾಡಿಕೊಳ್ಳಬಹುದು ಮತ್ತು ಸಕ್ಷಮ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾವುದೇ ಸಿವಿಲ್ ನ್ಯಾಯಾಲಯವು ಅಂಥ ತಗಾದೆ ನೋಟೀಸನ್ನು ಅಂಥ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಜಾರಿಗೊಳಿಸತಕ್ಕದ್ದು.

**61. ಕಾರ್ಮಿಕ ವರ್ಗದವರ ಮನೆಗಳನ್ನು ಪರಿಶೀಲಿಸುವ ಮಂಡಲಿಯ ಕರ್ತವ್ಯ.–** ಕಾರ್ಮಿಕ ವರ್ಗದ ಜನರ ಅನುಭೋಗದಲ್ಲಿರುವ ಮನೆಗಳನ್ನು ಮತ್ತು ಮನೆಗಳು ಇರುವಂತಹ ಪ್ರದೇಶಗಳನ್ನು, ಅಂಥ ಮನೆಗಳು ಮಾನವ ವಾಸಕ್ಕೆ ಯೋಗ್ಯವಾಗಿವೆಯೇ ಇಲ್ಲವೆ ಎಂಬುದನ್ನು ಮತ್ತು ಅಂಥ ಪ್ರದೇಶಗಳನ್ನು ಕಾರ್ಮಿಕ ವರ್ಗದವರ ಸುರಕ್ಷೆ, ಆರೋಗ್ಯ ಮತ್ತು ಯೋಗಕ್ಷೇಮವನ್ನು ಸುನಿಶ್ಚಿತಗೊಳಿಸುವ ಹಾಗೆ ಸೂಕ್ತ ಸ್ಥಿತಿಯಲ್ಲಿ ಇಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಕಾಲಕಾಲಕ್ಕೆ ಪರಿಶೀಲನೆ ನಡೆಸುವಂತೆ ಮಾಡುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

**62. ಕಾರ್ಮಿಕ ವರ್ಗದವರ ಅನುಭೋಗದಲ್ಲಿರುವ ಮನೆಗಳಿಗೆ ಸಂಬಂಧಿಸಿದ ಮಂಡಲಿಯ ಅಧಿಕಾರಗಳು.–** ಕಾರ್ಮಿಕ ವರ್ಗದವರ ಅನುಭೋಗದಲ್ಲಿರುವ ಮನೆಗಳ ಪೈಕಿ ಯಾವ ಮನೆಗಳು ಮಂಡಲಿಯನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಯ ಒಡೆತನದಲ್ಲಿವೆಯೋ ಆ ಮನೆಗಳಿಗೆ ಸಂಬಂಧಿಸಿ 60ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮಂಡಲಿಯು, ಸ್ಥಳೀಯ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಸದರಿ ಪ್ರಕರಣದ ಉಪಬಂಧಗಳು ಆ ತರುವಾಯ ಮಂಡಲಿಯು ಸ್ಥಳೀಯ ಪ್ರಾಧಿಕಾರವಾಗಿದ್ದರೆ ಮತ್ತು ಮಂಡಲಿಯು ಅಂಥ ಮನೆಗಳ ಒಡೆಯನಾಗಿದ್ದರೆ ಹೇಗೋ ಹಾಗೆ ಅಂಥ ಮನೆಗಳಿಗೆ ಅನ್ವಯವಾಗತಕ್ಕದ್ದು.

**63. ನೈರ್ಮಲ್ಯ ವ್ಯವಸ್ಥೆ ಇಲ್ಲದ ಮನೆಗಳು, ಇತ್ಯಾದಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಲಿಯ ಅಧಿಕಾರಗಳು.–** (1) ಕಾರ್ಮಿಕ ವರ್ಗದವರ ಅನುಭೋಗದಲ್ಲಿರುವ ಯಾವುದೇ ಮನೆಯು ಮಾನವ ವಾಸಕ್ಕೆ ಯೋಗ್ಯವಾಗಿಲ್ಲವೆಂದು ಮತ್ತು ಯುಕ್ತ ವೆಚ್ಚ ವಹಿಸಿ ಅದನ್ನು ಹಾಗೆ ಯೋಗ್ಯವಾಗಿ ಮಾಡಲು ಸಾಧ್ಯವಿಲ್ಲವೆಂದು ಅಥವಾ ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಗರಗಳ ಅಥವಾ ಪಟ್ಟಣಗಳ ಪೈಕಿ ಯಾವುದೇ ನಗರದಲ್ಲಿ ಅಥವಾ ಪಟ್ಟಣದಲ್ಲಿ ಯಾವುದೇ ಪ್ರದೇಶದಲ್ಲಿ ಐವತ್ತು ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಮಿಕ ವರ್ಗದವರ ಮನೆಗಳು ಇವೆ ಮತ್ತು ಅಂಥ ಪ್ರದೇಶದಲ್ಲಿನ ಕನಿಷ್ಠ ಮೂರನೇ ಒಂದು ಭಾಗ ಕಾರ್ಮಿಕವರ್ಗದವರ ಮನೆಗಳು ಜನದಟ್ಟಣೆಯಿಂದ ತುಂಬಿವೆ ಅಥವಾ ಮಾನವ ವಾಸಕ್ಕೆ ಯೋಗ್ಯವಾಗಿಲ್ಲವೆಂದು ಮತ್ತು ಯುಕ್ತ ವೆಚ್ಚ ವಹಿಸಿ ಹಾಗೆ ಯೋಗ್ಯವಾಗಿ ಮಾಡಲು ಅಥವಾ ಜನದಟ್ಟಣೆ ಇಲ್ಲದ ಹಾಗೆ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೆಂದು ಮಂಡಲಿಗೆ ಮನದಟ್ಟಾದರೆ, ಮಂಡಲಿಯು, ರಾಜ್ಯ ಸರ್ಕಾರದ ಮಂಜೂರಾತಿ ಪಡೆದು ಅಂಥ ಮನೆಗಳನ್ನು ಅಥವಾ ಅಂಥ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಬಹುದು ಮತ್ತು ಇಲ್ಲಿ ಇನ್ನು ಮಂದೆ ಉಪಬಂಧಿಸಿದಂಥ ಕ್ರಮವನ್ನು ಕೈಗೊಳ್ಳಬಹುದು.

(2) ಮಂಡಲಿಯು, ಸರ್ಕಾರದ ಮಂಜೂರಾತಿಗೆ ಒಳಪಟ್ಟು (1)ನೇ ಉಪ ಪ್ರಕರಣದ ಮೇರೆಗೆ ಸ್ವಾಧೀನಪಡಿಸಿಕೊಂಡ ಯಾವುದೇ ಮನೆಯನ್ನು ಕೆಡವಬಹುದು ಮತ್ತು ಪುನರ್ ನಿರ್ಮಾಣ ಮಾಡಬಹುದು ಮತ್ತು ಅದೇ ರೀತಿಯ ಮಂಜೂರಾತಿಗೆ ಒಳಪಟ್ಟು (1)ನೇ ಉಪ ಪ್ರಕರಣದ ಮೇರೆಗೆ ಸ್ವಾಧೀನಪಡಿಸಿಕೊಂಡ ಯಾವುದೇ ಪ್ರದೇಶದಲ್ಲಿನ ಮನೆಗಳನ್ನು ಕೆಡವಬಹುದು ಮತ್ತು ಪುನರ್ ನಿರ್ಮಾಣ ಮಾಡಬಹುದು ಅಥವಾ ಆ ಪ್ರದೇಶವನ್ನು ರಾಜ್ಯ ಸರ್ಕಾರವು ಅನುಮೋದಿಸಬಹುದಾದಂತೆ ನೌಕರರಿಗಾಗಿ ಯಾವುವೇ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ರೂಪುಗೊಳಿಸಿ ಬಳಸಬಹುದು.

**64. ಮಾನವ ವಾಸಕ್ಕೆ ಯೋಗ್ಯವಲ್ಲದ ಮನೆಗಳಿಗಾಗಿ ಪರಿಹಾರ.–** 63ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ, ಯಾವುದೇ ಜಮೀನನ್ನು ಮಂಡಲಿಯು ಸ್ವಾಧೀನಪಡಿಸಿಕೊಂಡಿದ್ದರೆ ಅದಕ್ಕೆ ಸಂಬಂಧಪಟ್ಟಂತೆ ಸಂದಾಯ ಮಾಡಬೇಕಾದ ಪರಿಹಾರವನ್ನು ಮಾನವ ವಾಸಕ್ಕೆ ಯೋಗ್ಯವಲ್ಲದ ಮತ್ತು ವೆಚ್ಚ ಮಾಡಿದರೂ ಹಾಗೆ ಯೋಗ್ಯವಾಗಿ ಪರಿವರ್ತಿಸಲು ಸಾಧ್ಯವಿಲ್ಲದಂಥ ಮನೆಯ ಬಗ್ಗೆ ಸಂದಾಯ ಮಾಡಬೇಕಾದ ಪರಿಹಾರವು ಕಟ್ಟಡವನ್ನು ಕೆಡವಿಹಾಕಿದ ನಿವೇಶನವಾಗಿದ್ದರೆ ಹೇಗೋ ಹಾಗೆ ಆ ಜಮೀನಿನ ಮೌಲ್ಯವಾಗಿರತಕ್ಕುದು ಎಂಬ ಷರತ್ತಿಗೆ ಒಳಪಟ್ಟು, ಭೂ ಅರ್ಜನೆ ಅಧಿನಿಯಮ, 1894ಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

**65. ಮಂಡಲಿಯು ಸಾರ್ವಜನಿಕ ಬೀದಿಗಳನ್ನು ನಿರ್ವಹಿಸುವುದು.–** (1) ಮಂಡಲಿಯ ಗೃಹ ನಿರ್ಮಾಣ ಕಾರ್ಯಾಚರಣೆಗೆ ಸಂಬಂಧಪಟ್ಟಂತೆ, ರಾಜ್ಯ ಸರ್ಕಾರದಿಂದ ಅನುಮೋದಿತವಾದ ನಕ್ಷೆಗಳಿಗೆ ಮತ್ತು ತಪಶೀಲು ಪಟ್ಟಿಗೆ ಅನುಸಾರವಾಗಿ ಹೊಸ ಕಟ್ಟಡಗಳನ್ನು ನಿರ್ಮಿಸಿದ್ದರೆ ಅಥವಾ ಇರುವ ಕಟ್ಟಡಗಳನ್ನು ಪುನರ್ ನಿರ್ಮಿಸಿದ್ದರೆ ಅಥವಾ ಸಾರ್ವಜನಿಕ ಬೀದಿಗಳನ್ನು ಮತ್ತು ರಸ್ತೆಗಳನ್ನು ರೂಪಿಸಿ ನಿರ್ಮಿಸಿದ್ದರೆ ಅಥವಾ ಪುನರ್ ನಿರ್ಮಿಸಿದ್ದರೆ ಕಟ್ಟಡಗಳಿಗೆ ಅಥವಾ ರಸ್ತೆಗಳಿಗೆ ಸಂಬಂಧಪಡುವ ಯಾವುದೇ ಅಥವಾ ಇತರ ಕಾನೂನುಗಳ ಉಪಬಂಧಗಳು ಈ ಕಟ್ಟಡಗಳ ಮತ್ತು ಬೀದಿಗಳ ಬಗ್ಗೆ ಅನುಮೋದಿಸಲಾದ ನಕ್ಷೆಗಳಿಗೆ ಮತ್ತು ತಪಶೀಲು ಪಟ್ಟಿಗೆ ಅವು ಅಸಂಗತವಾಗುವಷ್ಟರ ಮಟ್ಟಿಗೆ ಅನ್ವಯವಾಗತಕ್ಕುದಲ್ಲ ಮತ್ತು ಯಾವುದೇ ಇತರ ಅಧಿನಿಯಮದ ಉಪಬಂಧಗಳಲ್ಲಿ ಏನೇ ಇದ್ದರೂ, ಆ ನಕ್ಷೆಗಳಿಗೆ ಮತ್ತು ತಪಶೀಲು ಪಟ್ಟಿಗೆ ಅನುಸಾರವಾಗಿ ರೂಪಿಸಿದ ಮತ್ತು ನಿರ್ಮಿಸಿದ ಯಾವುದೇ ಸಾರ್ವಜನಿಕ ಬೀದಿಯನ್ನು ಮತ್ತು ರಸ್ತೆಯನ್ನು ಮಂಡಲಿಯು ನಿರ್ವಹಿಸಬಹುದು.

(2) ಬೆಂಗಳೂರು, ಮೈಸೂರು ನಗರಗಳಿಗೆ ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಸರ್ಕಾರವು, ಬೆಂಗಳೂರು, ಮೈಸೂರು ನಗರಗಳಲ್ಲಿ ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂತಹ ಇತರ ಪ್ರದೇಶಗಳಲ್ಲಿ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಅಸಂಗತವಾಗಿರುವ ಯಾವುವೇ ನಕ್ಷೆಗಳನ್ನು ಮತ್ತು ತಪಶೀಲು ಪಟ್ಟಿಯನ್ನು (1)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ಗೃಹ ನಿರ್ಮಾಣ ಕಾರ್ಯಾಚರಣೆಗಳಿಗೆ ಸಂಬಂಧಪಟ್ಟಂತೆ ಅಂಥ ಉಪಬಂಧಗಳನ್ನು ಸಡಿಲಗೊಳಿಸುವ ಸಾಮಾನ್ಯ ವಿಷಯ ಬಗ್ಗೆ ನಗರಗಳ ಮತ್ತು ಪ್ರದೇಶಗಳ ಪುರಸಭಾ ಪ್ರಾಧಿಕಾರಿಗಳೊಂದಿಗೆ ಸಮಾಲೋಚಿಸಿದ ಹೊರತು ಅನುಮೋದಿಸತಕ್ಕದ್ದಲ್ಲ.

**66. ನಿಯೋಜಕರು ಒದಗಿಸಿದ ಸೌಕರ್ಯಕ್ಕೆ ಸಂಬಂಧಪಡುವ ಷರತ್ತುಗಳು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಯಾವುದೇ ಉಪಬಂಧದಲ್ಲಿ ಏನೇ ಇದ್ದರೂ, ಯಾರೇ ನಿಯೋಜಕನು ತನ್ನ ನೌಕರರಿಗೆ ವಸತಿ ಸೌಕರ್ಯವನ್ನು ಒದಗಿಸಿದ್ದರೆ ಅಂತಹ ನಿಯೋಜಕ ಮತ್ತು ನೌಕರರು, (i) ಅಂಥ ವಾಸದ ಮನೆಯ ಅನುಭೋಗಕ್ಕೆ, (ii) ಅಂಥ ಅನುಭೋಗಕ್ಕೆ ಸಂದಾಯ ಮಾಡಬೇಕಾದ ಬಾಡಿಗೆಯನ್ನು, (iii) ಅಂಥ ವಾಸದ ಮನೆಯ ಯುಕ್ತ ನಿರ್ವಹಣೆಯ, (iv) ಅಂಥ ವಾಸದ ಮನೆಗೆ ಸಂಬಂಧಿಸಿದ ನಿಯೋಜಕನ ಮತ್ತು ನೌಕರ ಹಕ್ಕುಗಳ ಮತ್ತು ಹೊಣೆಗಾರಿಕೆಗಳನ್ನು, ಮತ್ತು (v) ಅಂಥ ವಾಸದ ಮನೆಯಿಂದ ಅಂಥ ನಿಯೋಜಿತರನ್ನು ಹೊರಹಾಕುವಂಥ ಸಂದರ್ಭಗಳನ್ನು ಗೊತ್ತುಪಡಿಸ ಬಹುದಾದಂಥ ಉಪಬಂಧಗಳನ್ನು ಪಾಲಿಸತಕ್ಕದ್ದು.

**67. ಅಧಿನಿಯಮದ ಪ್ರಾರಂಭದ ತರುವಾಯ ನಿಯೋಜಕನು ಒದಗಿಸಿದ ವಾಸದ ಮನೆಗೆ ಸಂಬಂಧಪಡುವ ಷರತ್ತುಗಳು.–** ಈ ಅಧಿನಿಯಮದ ಮೂಲಕ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮವು ಪ್ರಾರಂಭವಾದ ನಂತರ, ಯಾರೇ ನಿಯೋಜಕನು ತನ್ನ ನೌಕರರಿಗೆ ವಾಸದ ಮನೆಗಳನ್ನು ಒದಗಿಸಿದ್ದರೆ ಅಂಥ ವಾಸದ ಮನೆಯು ನಿಯಮಿಸಬಹುದಾದಂಥ ಷರತ್ತುಗಳನ್ನು ಮತ್ತು ಉಪಬಂಧಗಳನ್ನು ಪಾಲಿಸತಕ್ಕದ್ದು ಮತ್ತು ಅವುಗಳಿಗೆ ಅನುಸಾರವಾಗಿರತಕ್ಕದ್ದು.

**68. ನಿಯೋಜಕನು ಸಂದಾಯ ಮಾಡಬೇಕಾದ ಬಾಡಿಗೆಯು ಭೂ ಕಂದಾಯದ ಬಾಕಿಯಂತೆ ವಸೂಲೀಯ ವಾಗಿರುವುದು.–** ಯಾರೇ ನಿಯೋಜಕನು ಈ ಅಧಿನಿಯಮದ ಮೇರೆಗೆ ತಾನು ಸಂದಾಯ ಮಾಡಬೇಕಾದ ಯಾವುದೇ ಬಾಡಿಗೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ಅಥವಾ ಉಪೇಕ್ಷಿಸಿದಲ್ಲಿ ಹಾಗೆ ಸಂದಾಯ ಮಾಡಬೇಕಾದ ಮೊತ್ತವನ್ನು, ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲು ಮಾಡಬಹುದು.

## ಅಧ್ಯಾಯ – IX

### ಸಂಕೀರ್ಣ

**69. ವರದಿಗಳು.–** ಮಂಡಲಿಯು, ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ಮಧ್ಯಂತರಗಳಲ್ಲಿ ನಿಯಮಿಸಬಹುದಾದಂಥ ವಿಷಯಗಳ ಬಗ್ಗೆ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕುದು ಮತ್ತು ರಾಜ್ಯ ಸರ್ಕಾರವು ಅಂಥ ವರದಿಯನ್ನು ರಾಜ್ಯಪತ್ರದಲ್ಲಿ ಪ್ರಕಟವಾಗುವಂತೆ ಮಾಡತಕ್ಕದ್ದು. 10ನೇ ಪ್ರಕರಣದ (4)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಲೋಕಸೇವಾ ಆಯೋಗದ ಅಭಿಪ್ರಾಯವನ್ನು ಅಂಗೀಕರಿಸಿಲ್ಲದಿರುವಂಥ ಪ್ರಕರಣಗಳನ್ನು ಒಳಗೊಂಡಿರತಕ್ಕ ಅಂಥ ಪ್ರತಿಯೊಂದು ವರದಿಯನ್ನು, ಅದನ್ನು ಪ್ರಕಟಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**70. ಇತರ ತಃಖ್ತೆಗಳು ಮತ್ತು ರಿಟರ್ನ್‌ಗಳು.–** ಮಂಡಲಿಯು ನಿಯಮಿಸಬಹುದಾದಂಥ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾಂಥ ಸಮಯಗಳಲ್ಲಿ ಮತ್ತು ಅಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಯಾವುದೇ ಪ್ರಸ್ತಾವಿತ ಅಥವಾ ಇರುವ [1][ಗೃಹ ನಿರ್ಮಾಣ ಯೋಜನೆಗಳಿಗೆ, ಭೂ ಅಭಿವೃದ್ಧಿ ಯೋಜನೆಗಳಿಗೆ ಅಥವಾ ಕಾರ್ಮಿಕ ಗೃಹ ನಿರ್ಮಾಣ ಯೋಜನೆಗಳಿಗೆ][1] ಸಂಬಂಧಪಟ್ಟಂಥ ಅಂಕಿ ಅಂಶಗಳನ್ನು, ರಿಟರ್ನ್‌ಗಳನ್ನು, ವಿವರಗಳನ್ನು ಮತ್ತು ತಃಖ್ತೆಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**70ಎ. ಗೃಹ ನಿರ್ಮಾಣ ಕಮೀಷನರ್ ರಾಜ್ಯ ಸರ್ಕಾರಕ್ಕೆ ರಿಟರ್ನ್‌ಗಳು ಮತ್ತು ವರದಿಗಳು, ಮುಂತಾದವುಗಳನ್ನು ಒದಗಿಸುವುದು.–** ಗೃಹ ನಿರ್ಮಾಣ ಕಮೀಷನರ್‌ರು, ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ವರದಿಗಳನ್ನು ಮತ್ತು ರಿಟರ್ನ್‌ಗಳನ್ನು ಅಂಥ ಮಧ್ಯಂತರಗಳಲ್ಲಿ ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 70ಎ ಮತ್ತು 70ಬಿ ಪ್ರಕರಣಗಳನ್ನು 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**70ಬಿ. ರಿಟರ್ನ್‌ಗಳು, ವರದಿಗಳು, ದಸ್ತಾವೇಜುಗಳು, ಮುಂತಾದುವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಲು ಮಂಡಲಿಯ ಅಧಿಕಾರ.–** (1) ಮಂಡಲಿಯು,–

(ಎ) ಈ ಅಧಿನಿಯಮದ ಜಾರಿಗೆ ಸಂಬಂಧಪಡುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ರಿಟರ್ನ್‌ನನ್ನು, ತಃಖ್ತೆಯನ್ನು, ಅಂದಾಜನ್ನು, ಅಂಕಿಅಂಶಗಳನ್ನು ಅಥವಾ ಇತರ ಮಾಹಿತಿಯನ್ನು;

(ಬಿ) ಅಂಥ ಯಾವುದೇ ವಿಷಯದ ಬಗ್ಗೆ ವರದಿಯನ್ನು; ಮತ್ತು

(ಸಿ) ತನ್ನ ಪ್ರಭಾರದಲ್ಲಿರುವ ಯಾವುದೇ ದಸ್ತಾವೇಜಿನ ಪ್ರತಿಯನ್ನು

– ಒದಗಿಸುವಂತೆ ಗೃಹ ನಿರ್ಮಾಣ ಆಯುಕ್ತರನ್ನು ಅಗತ್ಯಪಡಿಸಬಹುದು.

(2) ಗೃಹನಿರ್ಮಾಣ ಕಮೀಷನರು ಪ್ರತಿಯೊಂದು ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಪಾಲಿಸತಕ್ಕದ್ದು.][1]

**71. ಪ್ರವೇಶಾಧಿಕಾರ.–** [1][ಗೃಹ ನಿರ್ಮಾಣ ಕಮೀಷನರ್ ಅಥವಾ ಈ ಬಗ್ಗೆ ಅವರಿಂದ ಅಥವಾ ಮಂಡಲಿಯಿಂದ ಸಾಮಾನ್ಯವಾಗಿಯಾಗಲಿ ಅಥವಾ ವಿಶೇಷವಾಗಿಯಾಗಲಿ ಅಧಿಕಾರ ಪಡೆದ ಯಾರೇ ವ್ಯಕ್ತಿಯು][1] ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳ ಅಥವಾ ಮಂಜೂರು ಮಾಡಿದ ಯೋಜನೆಯ ಯಾವುದೇ ಉದ್ದೇಶಕ್ಕಾಗಿ,–

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಯಾವುದೇ ಪರಿಶೀಲನೆ, ಮೋಜಣಿ, ಅಳತೆ, ಮೌಲ್ಯ ನಿರ್ಣಯ ಮಾಡಲು;

(ಬಿ) ಮಟ್ಟಗಳನ್ನು ತೆಗೆದುಕೊಳ್ಳಲು;

(ಸಿ) ಒಳಮಣ್ಣಿನೊಳಕ್ಕೆ ಅಗೆಯಲು ಅಥವಾ ಕೊರೆಯಲು;

(ಡಿ) ಕಾಮಗಾರಿಯ ಗಡಿಗಳು ಮತ್ತು ಉದ್ದೇಶಿತ ರೇಖೆಗಳನ್ನು ಏರ್ಪಡಿಸಲು;

(ಇ) ಕಾಮಗಾರಿಗಳ ಅಂಥ ಮಟ್ಟಗಳನ್ನು, ಗಡಿಗಳನ್ನು ಮತ್ತು ರೇಖೆಗಳನ್ನು ಮಾಡಲು ಮತ್ತು ಕಂದಕಗಳನ್ನು ತೋಡಲು; ಅಥವಾ

(ಎಫ್) ಯಾವುದೇ ಇತರ ಕೆಲಸವನ್ನು ಮಾಡಲು

– ಯಾವುದೇ ಜಮೀನಿನಲ್ಲಿ ಅಥವಾ ಜಮೀನಿನ ಮೇಲೆ ಸಹಾಯಕರು ಅಥವಾ ಕೆಲಸಗಾರರ ಸಹಿತ ಅಥವಾ ಅವರಿಲ್ಲದೆ ಪ್ರವೇಶಮಾಡುವುದು ಅಗತ್ಯವಾದಾಗಲೆಲ್ಲ ಹಾಗೆ ಮಾಡಬಹುದು:

ಪರಂತು,–

(i) ಅಂಥ ಯಾವುದೇ ಪ್ರವೇಶವನ್ನು ಸೂರ್ಯಾಸ್ತ ಮತ್ತು ಸೂರ್ಯೋದಯದ ನಡುವಿನ ಅವಧಿಯಲ್ಲಿ ಮಾಡತಕ್ಕದ್ದಲ್ಲ;

(ii) ವಾಸದ ಮನೆ ಮತ್ತು ವಾಸದ ಸ್ಥಳವಾಗಿ ಉಪಯೋಗಿಸುವ ಸಾರ್ವಜನಿಕ ಕಟ್ಟಡವನ್ನು, ಅದರ ಅಧಿಭೋಗದಾರನ ಸಮ್ಮತಿ ಇಲ್ಲದೆ ಅಂಥ ಪ್ರವೇಶ ಮಾಡುವ ಉದ್ದೇಶದ ಬಗ್ಗೆ ಕನಿಷ್ಠ ಇಪ್ಪತ್ನಾಲ್ಕು ಗಂಟೆಗಳಿಗೆ ಮುಂಚೆ ಲಿಖಿತ ನೋಟೀಸನ್ನು ಅಧಿಭೋಗದಾರನಿಗೆ ನೀಡಿದ್ದ ಹೊರತು ಹಾಗೆ ಪ್ರವೇಶಿಸತಕ್ಕದ್ದಲ್ಲ;

(iii) ನೋಟೀಸು ಕೊಡದೆ ಯಾವುದೇ ಆವರಣವನ್ನು ಅನ್ಯಥಾ ಪ್ರವೇಶಿಸುವಂಥ ಪ್ರತಿಯೊಂದು ಸಂದರ್ಭದಲ್ಲೂ, ಮಹಿಳೆಯರ ಅನುಭೋಗದಲ್ಲಿರುವ ಯಾವುದೇ ಕೊಠಡಿಯ ನಿವಾಸಿಗಳಿಗೆ ಅವರ ಏಕಾಂತತೆಗೆ ಅಡಚಣೆಯಾಗದಂಥ ಆವರಣದ ಬೇರೊಂದು ಭಾಗಕ್ಕೆ ಅವರು ಹೋಗಲು ಸಾಧ್ಯವಾಗುವ ಹಾಗೆ ಸಾಕಷ್ಟು ತಿಳಿವಳಿಕೆ ನೀಡತಕ್ಕದ್ದು.

(iv) ಯಾವ ಉದ್ದೇಶಕ್ಕಾಗಿ ಪ್ರವೇಶ ಮಾಡಬೇಕಾಗಿದೆಯೋ ಆ ಉದ್ದೇಶದ ಅಗತ್ಯತೆಗಳಿಗೆ ಹೊಂದಿಕೆಯಾಗುವಷ್ಟು ಮಟ್ಟಿಗೆ, ಪ್ರವೇಶಿಸುವ ಆವರಣಗಳ ಅಧಿಭೋಗದಾರರ ಸಾಮಾಜಿಕ ಮತ್ತು ಧಾರ್ಮಿಕ ಆಚಾರಗಳಿಗೆ ಸಹ ಸೂಕ್ತ ಗಮನ ನೀಡತಕ್ಕದ್ದು.

**72. ಮಂಡಲಿಯ ವಿರುದ್ಧ ದಾವೆ ನೋಟೀಸು.–** ಯಾರೇ ವ್ಯಕ್ತಿಯು, ಗೃಹ ನಿರ್ಮಾಣ ಮಂಡಲಿಯ, [1][ಗೃಹನಿರ್ಮಾಣ ಆಯುಕ್ತರು, ಮುಖ್ಯ ಎಂಜಿನಿಯರ್, ಕಾರ್ಯದರ್ಶಿ][1]– ವಿರುದ್ಧ ಅಥವಾ ಮಂಡಲಿಯ ಯಾರೇ ಅಧಿಕಾರಿಯ ಅಥವಾ ನೌಕರನ ಅಥವಾ ಮಂಡಲಿಯ ಆದೇಶಗಳ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಮಂಡಲಿಗೆ, [1][ಗೃಹ ನಿರ್ಮಾಣ ಆಯುಕ್ತರಿಗೆ, ಮುಖ್ಯ ಎಂಜಿನಿಯರ್‌ಗೆ, ಕಾರ್ಯದರ್ಶಿಗೆ,][1] ಸಂಬಂಧಪಟ್ಟ ಅಧಿಕಾರಿಗೆ, ನೌಕರನಿಗೆ ಅಥವಾ ವ್ಯಕ್ತಿಗೆ ಉದ್ದೇಶಿತ ದಾವೆ ಮತ್ತು ಅದರ ಕಾರಣವನ್ನು ತಿಳಿಸುವ ಎರಡು ತಿಂಗಳ ಲಿಖಿತ ನೋಟೀಸನ್ನು ಕೊಟ್ಟ ಹೊರತು ಅಥವಾ ಯಾವ ಕೃತ್ಯದ ವಿರುದ್ಧ ದೂರು ನೀಡಲಾಗಿದೆಯೋ ಅದರ ದಿನಾಂಕದಿಂದ ಆರು ತಿಂಗಳ ತರುವಾಯ ಈ ಅಧಿನಿಯಮಕ್ಕೆ ಅನುಸಾರವಾಗಿ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕೃತ್ಯದ ಬಗ್ಗೆ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**73. ಮಂಡಲಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ತ್ರೈವಾರ್ಷಿಕ ಮೌಲ್ಯ ನಿರ್ಣಯ.–** ಮಂಡಲಿಯು, ರಾಜ್ಯ ಸರ್ಕಾರದ ಅನುಮೋದನೆ ಪಡೆದು ನೇಮಕ ಮಾಡಿದ ಒಬ್ಬ ಮೌಲ್ಯಮಾಪಕನಿಂದ ಮೂರು ವರ್ಷಕ್ಕೊಮ್ಮೆ ತನ್ನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಮೌಲ್ಯ ನಿರ್ಣಯವನ್ನು ಮಾಡಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ತಾನು ಅಗತ್ಯವೆಂದು ಪರಿಗಣಿಸುವಂಥ ಯಾವುದೇ ವೇಳೆಯಲ್ಲಿ ಮೌಲ್ಯ ನಿರ್ಣಯ ಮಾಡುವಂತೆ ನಿರ್ದೇಶಿಸುವ ಅವಕಾಶ ಹೊಂದಿರತಕ್ಕದ್ದು.

**74. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಮುಂಚೆಯೇ ಪ್ರಕಟಿಸುವ ಷರತ್ತಿಗೊಳಪಟ್ಟು ಈ ಅಧಿನಿಯಮದ ಉದ್ದೇಶವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಈ ಕೆಳಕಂಡ ಎಲ್ಲಾ ಅಥವಾ ಅವುಗಳ ಪೈಕಿ ಯಾವುದೇ ಉದ್ದೇಶಕ್ಕಾಗಿ ಅಂಥ ನಿಯಮಗಳನ್ನು ರಚಿಸಬಹುದು, ಎಂದರೆ:–

(ಎ) 6ನೇ ಪ್ರಕರಣದ ಮೇರೆಗೆ [1][ಅಧ್ಯಕ್ಷರ ಮತ್ತು ಇತರ ಸದಸ್ಯರ][1] ಭತ್ಯೆಗಳು ಮತ್ತು ಸಂಭಾವನೆ ಮತ್ತು ಸೇವಾ ಷರತ್ತುಗಳು;

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) 15ನೇ ಪ್ರಕರಣದ ಮೇರೆಗೆ ಕರಾರುಗಳನ್ನು ಮಾಡಿಕೊಳ್ಳತಕ್ಕ ರೀತಿ ಮತ್ತು ನಮೂನೆ;

(ಸಿ) ವಾರ್ಷಿಕ ಗೃಹ ನಿರ್ಮಾಣ ಕಾರ್ಯಕ್ರಮದ ರೀತಿ, ಮತ್ತು ಭೂ ಅಭಿವೃದ್ಧಿ ಕಾರ್ಯಕ್ರಮದ ಬಜೆಟ್ಟು ಮತ್ತು ಅಧಿಕಾರಿಗಳ ಮತ್ತು ನೌಕರರ, ಸಿಬ್ಬಂದಿಯ ವಿವರ ಮತ್ತು ಗೃಹನಿರ್ಮಾಣ ಯೋಜನೆಗಳ [1][ಅಥವಾ ಭೂ ಅಭಿವೃದ್ಧಿ ಯೋಜನೆಯ][1] ವಿವರಗಳು ಮತ್ತು 19ನೇ ಪ್ರಕರಣದ ಮೇರೆಗಿನ ಕಾರ್ಯಕ್ರಮದಲ್ಲಿ ಒಳಗೊಂಡಿರಬೇಕಾದ ಇತರ ವಿವರಗಳು;

1. 1988ರ ಅಧಿನಿಯಮ ಸಂಖ್ಯೆ 8ರ ಮೂಲಕ 1.5.1988 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) 35ನೇ ಪ್ರಕರಣದ ಮೇರೆಗಿನ ನೋಟೀಸಿನ ನಮೂನೆ;

(ಇ) 36ನೇ ಪ್ರಕರಣದ ಮೇರೆಗಿನ ಬಡ್ಡಿಯ ದರ;

(ಎಫ್) 41ನೇ ಪ್ರಕರಣದ ಮೇರೆಗಿನ ನ್ಯಾಯಾಧಿಕರಣವು ತೀರ್ಮಾನಿಸಬೇಕಾದ ಇತರ ವಿಷಯಗಳು;

(ಜಿ) 45 ಮತ್ತು 46ನೇ ಪ್ರಕರಣದ ಮೇರೆಗಿನ ನೋಟೀಸಿನ ನಮೂನೆಗಳು ಮತ್ತು ಅವುಗಳನ್ನು ಜಾರಿ ಮಾಡಬೇಕಾದ ಯಾವುದೇ ಇತರ ರೀತಿ;

(ಹೆಚ್) 45ನೇ ಪ್ರಕರಣದ ಮೇರೆಗೆ ಮಂಡಲಿಯ ಯಾವುವೇ ಆವರಣಗಳ ಸ್ವಾಧೀನತೆಯನ್ನು ತೆಗೆದುಕೊಳ್ಳುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಐ) 46ನೇ ಪ್ರಕರಣದ ಮೇರೆಗೆ ಹಾನಿಗಳನ್ನು ನಿರ್ಧರಿಸಬಹುದಾದ ರೀತಿ;

(ಜೆ) 48ನೇ ಪ್ರಕರಣದ ಮೇರೆಗೆ ಅಪೀಲುಗಳನ್ನು ಸಲ್ಲಿಸಬಹುದಾದ ರೀತಿ ಮತ್ತು ಅಂಥ ಅಪೀಲುಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಕೆ) 54ನೇ ಪ್ರಕರಣದ ಮೇರೆಗೆ ಮಂಡಲಿಯು ಯಾವ ಷರತ್ತುಗಳಿಗೆ ಒಳಪಟ್ಟು ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದೋ ಆ ಷರತ್ತುಗಳು;

(ಎಲ್) 55ನೇ ಪ್ರಕರಣದ ಮೇರೆಗೆ ಲೆಕ್ಕಪತ್ರಗಳನ್ನು ತಯಾರಿಸುವ, ನಿರ್ವಹಿಸುವ ಮತ್ತು ಪ್ರಕಟಿಸುವ ರೀತಿ;

(ಎಂ) 69ನೇ ಪ್ರಕರಣದ ಮೇರೆಗೆ ಯಾವ ದಿನಾಂಕಕ್ಕೆ ಮೊದಲು, ಯಾವ ನಮೂನೆಯಲ್ಲಿ, ಯಾವ ಮಧ್ಯಂತರದಲ್ಲಿ ಮತ್ತು ಯಾವ ವಿಷಯಗಳ ಮೇಲೆ ವರದಿಯನ್ನು ಸಲ್ಲಿಸತಕ್ಕುದೋ ಆ ದಿನಾಂಕ, ನಮೂನೆ, ಮಧ್ಯಂತರ ಮತ್ತು ವಿಷಯಗಳು;

(ಎನ್) 70ನೇ ಪ್ರಕರಣದ ಮೇರೆಗೆ ಅಂಕಿ ಅಂಶಗಳನ್ನು, ವಿವರಗಳನ್ನು ಮತ್ತು ವಿವರ ಪಟ್ಟಿಗಳನ್ನು ಯಾವ ಸಮಯದಲ್ಲಿ ಮತ್ತು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಸಲ್ಲಿಸತಕ್ಕುದೋ ಆ ಸಮಯ, ನಮೂನೆ ಮತ್ತು ರೀತಿ;

(ಒ) 86ನೇ ಪ್ರಕರಣದ ಮೇರೆಗೆ ಮಂಡಲಿಯನ್ನು ಯಾವ ರೀತಿಯಲ್ಲಿ ರದ್ದುಗೊಳಿಸಿ ಪುನರ್ ರಚಿಸತಕ್ಕುದೋ ಆ ರೀತಿ;

(ಪಿ) ಯಾವ ಉಪವಿಧಿಗಳನ್ನು ಉಲ್ಲಂಘಿಸಿದರೆ ಅಪರಾಧವಾಗುವುದೋ ಅಂಥ ಉಪವಿಧಿಗಳನ್ನು ನಿರ್ದಿಷ್ಟಪಡಿಸುವುದು; ಮತ್ತು

(ಕ್ಯೂ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

**75. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 88ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಅನುಕ್ರಮವಾಗಿ ಬರುವ ಎರಡು ಅಧಿವೇಶಗಳಲ್ಲಿ ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು, ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮ ಅಥವಾ ಅಧಿಸೂಚನೆಯ ಮೇರೆಗೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**76. ವಿನಿಯಮಗಳು.–** ಮಂಡಲಿಯು, ರಾಜ್ಯ ಸರ್ಕಾರದಿಂದ ಮುಂಚೆಯೇ ಮಂಜೂರಾತಿ ಪಡೆದು ಅಧಿಸೂಚನೆಯ ಮೂಲಕ,–

(ಎ) ಯಾವುದೇ ಗೃಹನಿರ್ಮಾಣ ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಕಟ್ಟಡಗಳ ವ್ಯವಸ್ಥಾಪನೆ ಮತ್ತು ಬಳಕೆ ಬಗ್ಗೆ;

(ಬಿ) ಮನೆಗಳ ಮತ್ತು ಆವರಣಗಳ ಹಂಚಿಕೆಯಲ್ಲಿ ಅನುಸರಿಸಬೇಕಾದ ತತ್ವಗಳ ಬಗ್ಗೆ;

(ಸಿ) ಅದರ ವ್ಯವಹಾರದ ಪ್ರಕ್ರಿಯೆ ಮತ್ತು ವಿಲೆಯನ್ನು ವಿನಿಯಮಿಸುವ ಬಗ್ಗೆ

– ಈ ಅಧಿನಿಯಮದ ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಸಂಗತವಾದ ವಿನಿಯಮಗಳನ್ನು ಕಾಲಕಾಲಕ್ಕೆ ರಚಿಸಬಹುದು.

**77. ಉಪವಿಧಿಗಳನ್ನು ರಚಿಸಲು ಅಧಿಕಾರ.–** (1) ಮಂಡಲಿಯು, ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ, ಅಗತ್ಯವಾದ ಅಥವಾ ವಿಹಿತವಾದ ಮತ್ತು ಈ ಅಧಿನಿಯಮಕ್ಕೆ ಮತ್ತು ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅಸಂಗತವಾಗಿಲ್ಲದ ಉಪವಿಧಿಗಳನ್ನು ರಚಿಸಬಹುದು.

(2) ಮಂಡಲಿಯು ರಚಿಸಿದ ಯಾವುದೇ ಉಪವಿಧಿಯು, ಅದನ್ನು ಮಾರ್ಪಾಟುಗೊಳಿಸಿ ಅಥವಾ ಮಾರ್ಪಾಟು ಮಾಡದೆ ರಾಜ್ಯ ಸರ್ಕಾರವು ಸ್ಥಿರೀಕರಿಸುವವರೆಗೆ ಜಾರಿಗೆ ಬರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲಾ ಉಪವಿಧಿಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

**78. ಉಪವಿಧಿಗಳ ಉಲ್ಲಂಘನೆಗಾಗಿ ದಂಡನೆ.–** 77ನೇ ಪ್ರಕರಣದ ಮೇರೆಗೆ ರಚಿಸಿದ ಯಾವ ಉಪವಿಧಿಯ ಉಲ್ಲಂಘನೆಯು ಅಪರಾಧವಾಗುತ್ತದೆಂದು ನಿಯಮಿಸಲಾಗಿದೆಯೋ ಆ ಉಪವಿಧಿಯನ್ನು ಉಲ್ಲಂಘಿಸುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ, ಒಂದು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**79. ಅಡ್ಡಿಪಡಿಸುವುದು, ಮುಂತಾದವುಗಳಿಗಾಗಿ ದಂಡನೆ.–** ಯಾರೇ ವ್ಯಕ್ತಿಯು,–

(ಎ) ಯಾವ ವ್ಯಕ್ತಿಯೊಂದಿಗೆ ಮಂಡಲಿಯು ಕರಾರು ಮಾಡಿಕೊಂಡಿರುವುದೋ ಆ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ಯಾವ ಕರ್ತವ್ಯವನ್ನು ನೆರವೇರಿಸಲು ಅಥವಾ ಯಾವ ಕಾರ್ಯವನ್ನು ನಿರ್ವಹಿಸಲು ಅವನನ್ನು ಅಧಿಕೃತಗೊಳಿಸಲಾಗಿದೆಯೋ ಅಥವಾ ಅಗತ್ಯಪಡಿಸಲಾಗಿದೆಯೋ ಆ ಕರ್ತವ್ಯವನ್ನು ನೆರವೇರಿಸುವಾಗ ಅಥವಾ ಆ ಕಾರ್ಯವನ್ನು ನಿರ್ವಹಿಸುವಾಗ ಅಡ್ಡಿಪಡಿಸಿದರೆ, ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಲಾದ ಕಾಮಗಾರಿಗಳ ನಿರ್ವಹಣೆಗೆ ಅಗತ್ಯವಾದ ಯಾವುದೇ ಮಟ್ಟವನ್ನು ಅಥವಾ ನಿರ್ದೇಶನವನ್ನು ಸೂಚಿಸುವ ಉದ್ದೇಶಕ್ಕಾಗಿ ಏರ್ಪಡಿಸಿದ ಯಾವುದೇ ಗುರುತನ್ನು ತೆಗೆದುಹಾಕಿದರೆ

– ಅವನು, ಅಪರಾಧ ನಿರ್ಣಯವಾದ ಮೇಲೆ, ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**80. ಪ್ರಾಸಿಕ್ಯೂಷನ್ ನಡೆಸುವ ಪ್ರಾಧಿಕಾರ.–** ಯಾವುದೇ ನ್ಯಾಯಾಲಯವು, ಅನ್ಯಥಾ ಉಪಬಂಧಿಸಿದ ಹೊರತು, ಮಂಡಲಿಯು ಅಥವಾ ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಮಂಡಲಿಯು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಲ್ಲಿಸಿದ ದೂರಿನ ಮೇಲೆ ಅಥವಾ ಒದಗಿಸಿದ ಮಾಹಿತಿಯ ಮೇಲೆ ಹೊರತು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**81. ಕೆಲವು ವ್ಯಕ್ತಿಗಳು ಸರ್ಕಾರಿ ನೌಕರರಾಗಿರುವುದು.–** ಸಕ್ಷಮ ಪ್ರಾಧಿಕಾರವು ಮತ್ತು ಮಂಡಲಿಯ ಎಲ್ಲಾ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಯಾವುದೇ ಉಪಬಂಧದ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಸರ್ಕಾರಿ ನೌಕರರೆಂಬುದಾಗಿ ಭಾವಿಸತಕ್ಕದ್ದು.

**82. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪಾರ್ಯವಾಗುವ ಯಾವುದೇ ಕಾರ್ಯದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**83. [1][ಕರ್ನಾಟಕ][1] ಬಾಡಿಗೆ ನಿಯಂತ್ರಣ ಅಧಿನಿಯಮ, 1961 ಇದು ಅನ್ವಯ ವಾಗದಿರುವುದಕ್ಕೆ ಸಂಬಂಧಿಸಿ ಸಂದೇಹದ ನಿವಾರಣೆ.–** ಸಂದೇಹದ ನಿವಾರಣೆಗಾಗಿ [1][ಕರ್ನಾಟಕ][1] ಬಾಡಿಗೆ ನಿಯಂತ್ರಣ ಅಧಿನಿಯಮ, 1961 ಇದು,–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) ಈ ಅಧಿನಿಯಮದ ಮೇರೆಗೆ ಅಥವಾ ಅದರ ಉದ್ದೇಶಗಳಿಗಾಗಿ ಮಂಡಲಿಗೆ ಸೇರಿದ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಮನೆಗೆ ಅನ್ವಯವಾಗತಕ್ಕದ್ದಲ್ಲವೆಂದು;

(ಬಿ) ಅಂಥ ಮನೆಗೆ ಸಂಬಂಧಿಸಿ ಮಂಡಲಿಯು ಸೃಜಿಸಿದ ಯಾವುವೇ ಗೇಣಿಗಳಿಗೆ ಅಥವಾ ಅಂಥದೇ ಬಗೆಯ ಸಂಬಂಧದ ವಿಷಯದಲ್ಲಿ ಮಂಡಲಿಯ ವಿರುದ್ಧ ಅನ್ವಯವಾಗತಕ್ಕದ್ದಲ್ಲವೆಂದು, ಆದರೆ;

(ಸಿ) ಮಂಡಲಿಗೆ ಬಾಡಿಗೆಗೆ ಕೊಡಲಾದ ಯಾವುದೇ ಮನೆಗೆ ಅನ್ವಯವಾಗತಕ್ಕದ್ದೆಂದು

– ಈ ಮೂಲಕ ಘೋಷಿಸಲಾಗಿದೆ.

**84. ಮಂಡಲಿಗೆ ನಿರ್ದೇಶನಗಳನ್ನು ನೀಡಲು ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತನ್ನ ಅಭಿಪ್ರಾಯದಲ್ಲಿ ಅವಶ್ಯವಾಗಿರುವ ಅಥವಾ ವಿಹಿತವಾಗಿರುವಂಥ ನಿರ್ದೇಶನಗಳನ್ನು ಮಂಡಲಿಗೆ ನೀಡಬಹುದು, [1][xxx][1] ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**[1][85. xxx][1]**

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**86. ಕರ್ತವ್ಯ ನೆರವೇರಿಸುವಲ್ಲಿ ತಪ್ಪುವುದು.–** (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಮಂಡಲಿಗೆ ವಿಧಿಸಿದ ಕರ್ತವ್ಯವನ್ನು ನೆರವೇರಿಸುವಾಗ ಆ ಮಂಡಲಿಯು ತಪ್ಪು ಮಾಡಿದೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಆ ಕರ್ತವ್ಯ ನೆರವೇರಿಸಲು ಒಂದು ಅವಧಿಯನ್ನು ನಿಗದಿಪಡಿಸಬಹುದು.

(2) ಅಂಥ ಕರ್ತವ್ಯದ ನೆರವೇರಿಕೆ ಬಗ್ಗೆ ನಿಗದಿಪಡಿಸಿದ ಅವಧಿಯೊಳಗೆ ಮಂಡಲಿಯು ಅಂಥ ಕರ್ತವ್ಯವನ್ನು ನೆರವೇರಿಸಲು ತಪ್ಪಿದೆ ಎಂದು ಅಥವಾ ನಿರ್ಲಕ್ಷಿಸಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, 6ನೇ ಪ್ರಕರಣದಲ್ಲಿ ಏನೇ ಇದ್ದರೂ, ನಿಯಮಿಸಿದ ರೀತಿಯಲ್ಲಿ ಮಂಡಲಿಯನ್ನು ರಾಜ್ಯ ಸರ್ಕಾರವು ರದ್ದುಗೊಳಿಸಿ ಪುನರ್ ರಚಿಸುವುದು ಕಾನೂನುಸಮ್ಮತವಾಗಿರತಕ್ಕದ್ದು.

(3) ಮಂಡಲಿಯನ್ನು ರದ್ದುಗೊಳಿಸಿದ ತರುವಾಯ ಮತ್ತು ಅದನ್ನು ಪುನರ್ ರಚಿಸುವವರೆಗೆ ಈ ಅಧಿನಿಯಮದ ಮೇರೆಗಿನ ಮಂಡಲಿಯ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ರಾಜ್ಯ ಸರ್ಕಾರವು ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಅಧಿಕಾರಿಗಳು ನಿರ್ವಹಿಸತಕ್ಕದ್ದು.

**87. ಮಂಡಲಿಯ ವಿಸರ್ಜನೆ.–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ ಮಂಡಲಿಯನ್ನು ವಿಸರ್ಜಿಸತಕ್ಕದ್ದೆಂದು ಘೋಷಿಸಬಹುದು:

ಪರಂತು, ಈ ಬಗ್ಗೆ ಒಂದು ನಿರ್ಣಯವನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಮಂಡಿಸಿ ಅಂಗೀಕರಿಸಿದ ಹೊರತು, ರಾಜ್ಯ ಸರ್ಕಾರವು ಅಂಥ ಯಾವುದೇ ಘೋಷಣೆಯನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ,-

(ಎ) ಮಂಡಲಿಯಲ್ಲಿ, ನಿಹಿತವಾದ ಮತ್ತು ಮಂಡಲಿಯು ಪಡೆದುಕೊಳ್ಳಬಹುದಾದ ಎಲ್ಲಾ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕುದು ಮತ್ತು ರಾಜ್ಯ ಸರ್ಕಾರವು ಅವುಗಳನ್ನು ಪಡೆಯಲು ಅವಕಾಶವಿರತಕ್ಕದ್ದು;

(ಬಿ) ಮಂಡಲಿಯ ವಿರುದ್ಧ ಜಾರಿಗೊಳಿಸಬಹುದಾದ ಎಲ್ಲಾ ಹೊಣೆಗಾರಿಕೆಗಳನ್ನು, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಅದು ಪಡೆದುಕೊಂಡಿರುವ ಸ್ವತ್ತುಗಳ, ನಿಧಿಯ ಮತ್ತು ಬಾಕಿಗಳಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ವಿರುದ್ಧ ಜಾರಿಗೊಳಿಸಲು ಅವಕಾಶವಿರತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, 54ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಖಾತರಿ ನೀಡಿದ ಸಾಲಗಳಿಗೆ ಅಥವಾ ಡಿಬೆಂಚರುಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

[1][**87ಎ. ರಾಜ್ಯ ಸರ್ಕಾರದಿಂದ ನಿಯಂತ್ರಣ.–** (1) ರಾಜ್ಯ ಸರ್ಕಾರವು ಮಂಡಲಿಯ ಎಲ್ಲಾ ಚಟುವಟಿಕೆಗಳ ಮತ್ತು ವ್ಯವಹಾರಗಳ ಮೇಲೆ ಸಾಮಾನ್ಯ ಆಡಳಿತ ನಿಯಂತ್ರಣವನ್ನು ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು.

(2) ರಾಜ್ಯ ಸರ್ಕಾರವು, ಮಂಡಲಿಯ ಯಾವುವೇ ವ್ಯವಹರಣೆಗಳ ಸರಿತನ, ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಂಥ ವ್ಯವಹರಣೆಗಳ ದಾಖಲೆಗಳನ್ನು ಒಪ್ಪಿಸುವಂತೆ ಗೃಹನಿರ್ಮಾಣ ಆಯುಕ್ತರನ್ನು ಅಥವಾ ಮಂಡಲಿಯ ಯಾರೇ ಅಧೀನ ಅಧಿಕಾರಿಯನ್ನು ಕೋರಬಹುದು ಮತ್ತು ಅದಕ್ಕೆ ಸಂಬಂಧಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು.][1]

1. 1974ರ ಅಧಿನಿಯಮ ಸಂಖ್ಯೆ 10ರ ಮೂಲಕ 3.11.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**88. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಾಗಿ ಪರಿವರ್ತನೆಗೊಂಡ ಪರಿಣಾಮವಾಗಿ ಸದರಿ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯವೆಂದು ಅಥವಾ ವಿಹಿತವೆಂದು ತೋರುವಂಥ ಉಪಬಂಧಗಳನ್ನು ಮಾಡಬಹುದು.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳ ಪರಿವರ್ತನೆಗೆ ಸಂಬಂಧಿಸಿದಂತೆಯೇ ಅಲ್ಲದೆ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿಲ್ಲದಂಥ ಉಪಬಂಧಗಳನ್ನು ಮಾಡಬಹುದು.

**89. ನಿರಸನ ಮತ್ತು ಉಳಿಸುವಿಕೆ.–** ಈ ಅಧಿನಿಯಮದ ಮೇರೆಗೆ ಮಂಡಲಿಯು ಸ್ಥಾಪನೆಯಾದ ದಿನಾಂಕದಿಂದ,-

(ಎ) ಮೈಸೂರು ಗೃಹನಿರ್ಮಾಣ ಮಂಡಲಿ ಅಧಿನಿಯಮ, 1955 (ಮೈಸೂರು ಅಧಿನಿಯಮ 1955ರ XX), ಮೈಸೂರು ಕಾರ್ಮಿಕ ಗೃಹನಿರ್ಮಾಣ ಅಧಿನಿಯಮ, 1949 (ಮೈಸೂರು ಅಧಿನಿಯಮ 1949ರ XXVIII), ಹೈದ್ರಾಬಾದ್ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1956 (ಹೈದ್ರಾಬಾದ್ ಅಧಿನಿಯಮ 1956 XLVI) ಮತ್ತು ಮುಂಬಯಿ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1948 (ಮುಂಬಯಿ ಅಧಿನಿಯಮ 1948ರ LXIX) ಇವು ನಿರಸಿತವಾಗತಕ್ಕದ್ದು;

(ಬಿ) ಮೈಸೂರು ಗೃಹನಿರ್ಮಾಣ ಮಂಡಲಿ ಅಧಿನಿಯಮ, 1955ರ ಮೇರೆಗೆ ಸ್ಥಾಪಿತವಾದ ಮೈಸೂರು ಗೃಹನಿರ್ಮಾಣ ಮಂಡಲಿಯ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮಂಡಲಿಯಲ್ಲಿ ನಿಹಿತವಾಗತಕ್ಕುದು ಮತ್ತು ಸದರಿ ಅಧಿನಿಯಮದ ಮೇರೆಗೆ ರಚಿತವಾದ ಮಂಡಲಿಯ ನಿಧಿಯ ಲೆಕ್ಕದಲ್ಲಿ ಜಮೆ ಇರುವ ಹಣಗಳು ಮತ್ತು ಮೈಸೂರು ಕಾರ್ಮಿಕ

ಗೃಹನಿರ್ಮಾಣ ಅಧಿನಿಯಮ, 1949ರ ಮೇರೆಗೆ ರಚಿತವಾದ ಮೈಸೂರು ಕಾರ್ಮಿಕ ಗೃಹನಿರ್ಮಾಣ ನಿಧಿಯ ಲೆಕ್ಕದಲ್ಲಿ ಜಮೆ ಇರುವ ಹಣಗಳು, ಈ ಅಧಿನಿಯಮದ ಮೇರೆಗೆ ರಚಿತವಾದ ಗೃಹನಿರ್ಮಾಣ ಮಂಡಲಿಯ ನಿಧಿಗೆ ವರ್ಗಾವಣೆಯಾಗತಕ್ಕದ್ದು; ಮತ್ತು

(ಸಿ) [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1889ರ (1899ರ [1][ಕರ್ನಾಟಕ][1] ಅಧಿನಿಯಮ III) 6ನೇ ಮತ್ತು 24 ನೇ ಪ್ರಕರಣಗಳ ಉಪಬಂಧಗಳು, ಹಿಂದಿನ ಖಂಡದ ಉಪಬಂಧಗಳಿಗೊಳಪಟ್ಟು (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಗಳ ನಿರಸನಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

* * *

## ಅಧಿಸೂಚನೆ - I

**ಬೆಂಗಳೂರು, ದಿನಾಂಕ 20ನೇ ಜನವರಿ, 1965 [ಸಂಖ್ಯೆ: ಪಿಹೆಚ್ಎಸ್ 51 ಪಿಹೆಚ್‌ಬಿ / 63 (2)]**

**ವಿಷಯ.**- ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1963 - ಈ ಅಧಿನಿಯಮವನ್ನು ಜಾರಿಗೊಳಿಸಿ ಆದೇಶವನ್ನು ಹೊರಡಿಸುವುದು.

**ಎಸ್‌ಒ 1930.**- ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 10) 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 27ನೇ ಜನವರಿ 1965ನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರುವ ದಿನಾಂಕವೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಖಾದರ್ ಮೊಹಿದ್ದೀನ್**
ಸರ್ಕಾರದ ಅಧೀನ ಕಾರ್ಯದರ್ಶಿ.

## ಅಧಿಸೂಚನೆ - II

**ಬೆಂಗಳೂರು, ದಿನಾಂಕ 30ನೇ ಏಪ್ರಿಲ್, 1988 [ಸಂಖ್ಯೆ: ಹೆಚ್‌ಯುಡಿ 92 ಕೆಹೆಚ್‌ಬಿ 88]**

ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ಅಧಿನಿಯಮ, 1988ರ 1(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1ನೇ ಮೇ 1988 ರ ದಿವಸವನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ಅಧಿನಿಯಮ, 1988 - ಇದು ಜಾರಿಗೆ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್. ಅಶ್ವತ್ಥನಾರಾಯಣ ರಾವ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ (ಎಚ್)

## ಅಧಿಸೂಚನೆ III

**ಬೆಂಗಳೂರು, ದಿನಾಂಕ 28ನೇ ಡಿಸೆಂಬರ್, 1999 [ಸಂಖ್ಯೆ: ಡಿಓಹೆಚ್ 349 ಕೆಹೆಚ್‌ಬಿ 99]**

ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ಅಧಿನಿಯಮ, 1998ರ (1999ರ ಕರ್ನಾಟಕ ಅಧಿನಿಯಮ ಸಂಖ್ಯೆ 13) 1ನೇ ಪ್ರಕರಣದ (2)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1999ರ ಡಿಸೆಂಬರ್ 31ನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಿ. ಕೃಷ್ಣಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ನಿರ್ಮಾಣ ಇಲಾಖೆ.

* * *

# ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964

## ವಿಷಯಸೂಚಿ

**ನಿಯಮಗಳು:**


1. ಹೆಸರು
2. ಪರಿಭಾಷೆಗಳು
3. ಅಧ್ಯಕ್ಷರ ಮತ್ತು ಇತರ ಸದಸ್ಯರ ಭತ್ಯೆ
4. ಬಿಟ್ಟುಬಿಡಲಾಗಿದೆ

4ಎ. ಮಂಡಲಿಯ ಅಧಿಕಾರಿಗಳು ಮತ್ತು ನೌಕರರ ನೇಮಕಾತಿ

5. ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು
6. ಸಮಿತಿಗಳು
7. ಕರಾರುಗಳನ್ನು ಮಾಡಿಕೊಳ್ಳುವುದು
8. ವಾರ್ಷಿಕ ಗೃಹನಿರ್ಮಾಣ ಕಾರ್ಯಕ್ರಮ, ಗೃಹನಿರ್ಮಾಣ ಯೋಜನೆ, ಬಜೆಟ್ ಮತ್ತು ಸಿಬ್ಬಂದಿ ಪಟ್ಟಿ- ಇವುಗಳನ್ನು ತಯಾರಿಸುವುದು ಮತ್ತು ಸಲ್ಲಿಸುವುದು
9. ಜಮೀನಿನ ವಿಲೆ
10. ವಾಸದ ಮನೆಯ ಅಧಿಭೋಗಕ್ಕೆ ಸಂಬಂಧಿಸಿದ ಷರತ್ತುಗಳು
11. ನೋಟೀಸುಗಳು

11ಎ.ಅಪೀಲುಗಳಲ್ಲಿನ ಪ್ರಕ್ರಿಯೆ

12. ಸ್ವಾಧೀನವನ್ನು ತೆಗೆದುಕೊಳ್ಳುವ ಪ್ರಕ್ರಿಯೆ
13. ಅನಧಿಕೃತ ಅಧಿಭೋಗದಿಂದಾದ ಹಾನಿಗಳ ನಿರ್ಧರಣೆ
14. ಲೆಕ್ಕ ಪತ್ರಗಳ ತಯಾರಿಕೆ ಮತ್ತು ನಿರ್ವಹಣೆ
15. ಬಾಡಿಗೆಯನ್ನು ನಿಗದಿಪಡಿಸುವುದು
16. ನಿಯೋಜಕನು ಸಂದಾಯ ಮಾಡಿದ ಬಾಡಿಗೆಗೆ ಸಂಬಂಧಿಸಿದ ರಿಜಿಸ್ಟರುಗಳು
17. ಬಾಡಿಗೆ ಸಂದಾಯ ಮಾಡುವ ರೀತಿ
18. ವಸತಿಯ ಗುಣಮಟ್ಟ
19. ನಿಯೋಜಕರು ಸಲ್ಲಿಸಬೇಕಾದ ರಿಟರ್ನುಗಳು
20. ಮಂಡಲಿಯು ಒದಗಿಸಬೇಕಾದ ರಿಟರ್ನುಗಳು
21. ವಾರ್ಷಿಕ ತಃಖ್ತೆಯನ್ನು ಪ್ರಕಟಿಸುವುದು
22. ಮಂಡಲಿಯ ರದ್ದಿಯಾತಿ

ನಮೂನೆಗಳು

ತಿದ್ದುಪಡಿ ನಿಯಮಗಳು

# [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964

(ಜಿಎಸ್ಆರ್ 322, ದಿನಾಂಕ: 18-7-1967; ಜಿಎಸ್ಆರ್ 61, ದಿನಾಂಕ: 27-2-1971;ಜಿಎಸ್ಆರ್ 44, ದಿನಾಂಕ 17-2-1973; ಜಿಎಸ್ಆರ್ 150, ದಿನಾಂಕ 14-5-1974; ಜಿಎಸ್ಆರ್ 180, ದಿನಾಂಕ 24-6-1976; ಜಿಎಸ್ಆರ್ 42, ದಿನಾಂಕ 25/28-1-1978; ಎಸ್ಓ 1106, ದಿನಾಂಕ 7/12-4-1978 ಮತ್ತು ಜಿಎಸ್ಆರ್ 103, ದಿನಾಂಕ 20-4-1983ರ ಮೂಲಕ ತಿದ್ದುಪಡಿಯಾದಂತೆ.)

**ಜಿ.ಎಸ್.ಆರ್. 409.**- ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10)ರ 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸುತ್ತದೆ. ಅದರ ಕರಡನ್ನು 1964ರ ಡಿಸೆಂಬರ್ 24ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ IV ನೇ ಭಾಗ 2ಸಿ (i) ವಿಭಾಗದಲ್ಲಿ 1964ರ ಡಿಸೆಂಬರ್ 7ನೇ ದಿನಾಂಕದ ಅಧಿಸೂಚನೆ ಸಂಖ್ಯೆ ಜಿಎಸ್ಆರ್, 345 ರಲ್ಲಿ ಸದರಿ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಈಗಾಗಲೇ ಪ್ರಕಟಿಸಲಾಗಿದೆ.

1. ದಿನಾಂಕ 25-2-1965ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ, ದಿನಾಂಕ 20/22-1-1965ರ ಅಧಿಸೂಚನೆ ಸಂಖ್ಯೆ ಪಿಎಚ್ಎಸ್/51/ಪಿಎಚ್ಬಿ 63(1)ನ್ನು ನೋಡಿ.

**1. ಹೆಸರು.**- ಈ ನಿಯಮಗಳನ್ನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964 ಎಂದು ಕರೆಯತಕ್ಕುದು.

**2. ಪರಿಭಾಷೆಗಳು.**- ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10);

(ಬಿ) "ನಮೂನೆ" ಎಂದರೆ ಈ ನಿಯಮಗಳಿಗೆ ಅನುಬಂಧಿಸಿದ ನಮೂನೆ;

(ಸಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಡಿ) "ಅನುಸೂಚಿ" ಎಂದರೆ ಈ ನಿಯಮಗಳಿಗೆ ಅನುಬಂಧಿಸಿದ ಅನುಸೂಚಿ;

(ಇ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ.

**3. ಅಧ್ಯಕ್ಷರ ಮತ್ತು ಇತರ ಸದಸ್ಯರ ಭತ್ಯೆ.**-

(1) ಅಧ್ಯಕ್ಷರಿಗೆ-

(ಎ) ಅವರು ಅಧಿಕಾರೇತರ ಸದಸ್ಯರಾಗಿದ್ದರೆ-

(i) [1][xxx][1]

1. ಜಿ.ಎಸ್.ಆರ್. 150, ದಿನಾಂಕ 14-5-1974ರ ಮೂಲಕ (i)ನೇ ಬಾಬನ್ನು ಬಿಟ್ಟುಬಿಡಲಾಗಿದೆ.

(ii) ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ VIIIನೇ ಭಾಗದ ಮೇರೆಗೆ ಉನ್ನತ ವರ್ಗದ ಅಧಿಕಾರಿಗೆ ಅನುಮತಿಸಲಾಗುವ ದರಗಳಲ್ಲಿ ಪ್ರಯಾಣ ಭತ್ಯೆಯನ್ನು;

[1][(ಬಿ) ಅವರು ಸರ್ಕಾರಿ ಅಧಿಕಾರಿಯಾಗಿದ್ದರೆ, ಸಂದರ್ಭಾನುಸಾರ ರಾಜ್ಯ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಗಳ ಸದಸ್ಯರಾಗಿರುವುದಕ್ಕಾಗಿ ಕಾಲಕಾಲಕ್ಕೆ ಸಂಬಳ ಮತ್ತು ಭತ್ಯೆಗಳನ್ನು][1]

- ಸಂದಾಯ ಮಾಡತಕ್ಕದ್ದು.

1. ಜಿ.ಎಸ್.ಆರ್. 61, ದಿನಾಂಕ 27-2-1971 ರ ಮೂಲಕ (ಬಿ) ಖಂಡವನ್ನು ಪ್ರತಿಯೋಜಿಸಲಾಗಿದೆ.

[1][(2) ಮಂಡಲಿಯ ಒಬ್ಬ ಸದಸ್ಯನು, ಉಪವೇಶನದ ಪ್ರತಿದಿನಕ್ಕೆ [2][ರೂಪಾಯಿ ಎಪ್ಪತ್ತೈದು][2] ಮಾತ್ರ ಉಪವೇಶನ ಶುಲ್ಕವನ್ನು ಮತ್ತು ಮಂಡಲಿಯ ವ್ಯವಹಾರದ ಸಂಬಂಧದಲ್ಲಿ ಒಂದು ಸ್ಥಳದಲ್ಲಿ ಅವನು ಹಾಜರಾಗುವುದು ಅಗತ್ಯವಾಗಿರುವಾಗ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ 'ಎ' ಅನುಬಂಧದ 'ಎ' ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ದರಗಳಲ್ಲಿ ದಿನ ಭತ್ಯ ಮತ್ತು ಪ್ರಯಾಣ ಭತ್ಯಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

1. ಜಿಎಸ್ಆರ್ 322, ದಿನಾಂಕ 18-7-1967ರ ಮೂಲಕ ಉಪನಿಯಮ (2)ನ್ನು ಪ್ರತಿಯೋಜಿಸಲಾಗಿದೆ.
2. ಜಿಎಸ್ಆರ್ 180ರ ದಿನಾಂಕ: 26-6-1976 ರ ಮೂಲಕ "ನಲವತ್ತು ರೂಪಾಯಿಗಳು" ಎಂಬ ಪದಗಳ ಬದಲಾಗಿ ಪ್ರತಿಯೋಜಿಸಲಾಗಿದೆ.

ಪರಂತು, ಯಾವ ಸದಸ್ಯನ ಸಾಮಾನ್ಯ ವಾಸಸ್ಥಳವು ಅವನು ಹಾಜರಾಗುವುದು ಅಗತ್ಯವಾಗಿರುವಂಥ ಸ್ಥಳದ ಪುರಸಭಾ ಅಥವಾ ಪಂಚಾಯತ್ ಪರಿಮಿತಿಯೊಳಗೆ ಇದ್ದರೆ, ಅವನು ಮಂಡಲಿಯ ವ್ಯವಹಾರಗಳಿಗೆ ಹಾಜರಾಗುವುದಕ್ಕಾಗಿ ದಿನ ಭತ್ಯ ಮತ್ತು ಪ್ರಯಾಣ ಭತ್ಯಗಳನ್ನು ಪಡೆಯತಕ್ಕದ್ದಲ್ಲ:

ಮತ್ತೂ ಪರಂತು, ಯಾರೇ ಸದಸ್ಯನು ಅದೇ ದಿನಕ್ಕೆ ದಿನ ಭತ್ಯ ಮತ್ತು ಉಪವೇಶನ ಭತ್ಯ ಇವೆರಡನ್ನೂ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.][1]

[1][ಪರಂತು, ಅಧ್ಯಕ್ಷರು ಸರ್ಕಾರದ ಅಧಿಕಾರಿಯಾಗಿದ್ದರೆ, ಸಂದರ್ಭಾನುಸಾರ ರಾಜ್ಯ ಸಿವಿಲ್ ಸೇವೆಗಳ ಅಥವಾ ಅಖಿಲ ಭಾರತ ಸೇವೆಗಳ ಅಧಿಕಾರಿಯಾಗಿರುವುದಕ್ಕಾಗಿ ಕಾಲಕಾಲಕ್ಕೆ ಅವರಿಗೆ ಅನ್ವಯವಾಗುವಂಥ ರೀತಿಯಲ್ಲಿ ಮತ್ತು ಅದೇ ರೀತಿಯ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ರಜೆಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. ಜಿಎಸ್‌ಆರ್ 44ರ ದಿನಾಂಕ 17-2-1973 ರ ಮೂಲಕ ಮೂರನೇ ಪರಂತುಕವನ್ನು ಸೇರಿಸಲಾಗಿದೆ.

[1][**4. ಅಧ್ಯಕ್ಷರಿಗೆ ರಜೆ.–** x x x][1]

1. ಜಿಎಸ್‌ಆರ್ 150ರ ದಿನಾಂಕ 14-5-1974 ರ ಮೂಲಕ 4ನೇ ನಿಯಮವನ್ನು ಬಿಟ್ಟುಬಿಡಲಾಗಿದೆ.

[1][**4ಎ. ಮಂಡಲಿಯ ಅಧಿಕಾರಿಗಳು ಮತ್ತು ನೌಕರರ ನೇಮಕಾತಿ.–** ಮಂಡಲಿಗೆ ಈ ಕೆಳಕಂಡ ಹುದ್ದೆಗಳನ್ನು ನೇಮಕ ಮಾಡುವುದಕ್ಕೆ ಮೊದಲು ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸುವ ಅವಶ್ಯಕತೆ ಇರತಕ್ಕದ್ದಲ್ಲ, ಎಂದರೆ:–

| | | | |
|---|---|---|---|
| 1. | ಷರಾಫ್‌ಗಳು; | 7. | ಬಿಲ್ ಕಲೆಕ್ಟರುಗಳು; |
| 2. | ಜವಾನರು; | 8. | ಕಾವಲುಗಾರ; |
| 3. | ಚಾಲಕರು; | 9. | ಮಾಲಿಗಳು; |
| 4. | ದಲಾಯಿತರು; | 10. | ಸ್ವೀಪರ್‌ಗಳು; ಮತ್ತು |
| 5. | ಬೆರಳಚ್ಚುಗಾರರು; | 11. | ಪ್ರತಿನಿಯೋಜನೆಯ |
| 6. | ಶೀಘ್ರ ಲಿಪಿಗಾರರು; | | ಮೇಲೆ ಸರ್ಕಾರಿ ನೌಕರರ ನೇಮಕಾತಿ.][1] |

1. ಎಸ್‌ಒ 1106ರ ದಿನಾಂಕ 7/12-4-1978 ರ ಮೂಲಕ 4ಎ ನಿಯಮವನ್ನು ಸೇರಿಸಲಾಗಿದೆ.

**5. ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು.–** [1][(1)][1] ಮಂಡಲಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ, ಕರ್ನಾಟಕ ಸರಕಾರಿ ಸೇವಾ ನಿಯಮಗಳಲ್ಲಿ ವಿಧಿಸಿರುವಂತೆ ಅದೇ ದರಗಳಲ್ಲಿ ಮತ್ತು ಅವೇ ಷರತ್ತುಗಳಿಗೊಳಪಟ್ಟು ನಿವೃತ್ತಿಯ ತರುವಾಯ ನಿವೃತ್ತಿ ವೇತನವನ್ನು ಸಂದಾಯಮಾಡತಕ್ಕದ್ದು.

1. ಜಿಎಸ್‌ಆರ್. 103, ದಿನಾಂಕ 20-4-1983, ಅದರ (1)ನೇ ಉಪನಿಯಮದಂತೆ 5ನೇ ನಿಯಮವನ್ನು ಪುನರಂಕಿತಗೊಳಿಸಲಾಗಿದೆ.

[1][(2) 1957ರ ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಮಂಡಲಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗತಕ್ಕದ್ದು. ನೇಮಕಾತಿ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿಯು, ದಂಡನೆಗಳನ್ನು ವಿಧಿಸುವುದಕ್ಕೆ ಅಧಿಕಾರ ಉಳ್ಳ ಪ್ರಾಧಿಕಾರಿಯು ಮತ್ತು ಆ ಪ್ರಾಧಿಕಾರಿಯು ವಿಧಿಸಬಹುದಾದ ದಂಡನೆಗಳು ಮತ್ತು ಮಂಡಲಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಿಸಿದ ಅಪೀಲು ಪ್ರಾಧಿಕಾರಿಯು ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿದಂತಿರತಕ್ಕದ್ದು:–

1. ಜಿಎಸ್‌ಆರ್ 103, ದಿನಾಂಕ 20-4-1983 ರ ಮೂಲಕ 5ನೇ ನಿಯಮದಲ್ಲಿ (2)ನೇ ಉಪ ನಿಯಮವನ್ನು ಸೇರಿಸಲಾಗಿದೆ.

## ಅನುಸೂಚಿ – ಎ

**ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿಕಾರಿಗಳಿಗೆ ಕೆ.ಸಿ.ಎಸ್. (ಸಿ.ಸಿ ಮತ್ತು ಎ) ನಿಯಮಗಳು, 1957ರ ನಿಯಮ 8ರ ಮೇರೆಗೆ ದಂಡನೆ ವಿಧಿಸಬಹುದಾದ ಪ್ರಾಧಿಕಾರಿ.**

| | ಹುದ್ದೆಗಳ ವರ್ಗ | ನೇಮಕಾತಿ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿ | ದಂಡಗಳನ್ನು ವಿಧಿಸುವುದಕ್ಕೆ ಅಧಿಕಾರವುಳ್ಳ ಪ್ರಾಧಿಕಾರಿ ಮತ್ತು ಆ ಪ್ರಾಧಿಕಾರಿಯು ವಿಧಿಸಬಹುದಾದ ದಂಡನೆಗಳು | | ಅಪೀಲು ಪ್ರಾಧಿಕಾರಿ |
|---|---|---|---|---|---|
| | | | ಪ್ರಾಧಿಕಾರಿ | ದಂಡನೆಗಳು (ನಿಯಮ 8) | |
| | **1** | **2** | **3** | **4** | **5** |
| 1. | ರೆವಿನ್ಯೂ ಆಫೀಸರ್ ಜನರಲ್ ಅಸಿಸ್ಟೆಂಟ್, ಮ್ಯಾನೇಜರ್ ಮತ್ತು ಅಧೀಕ್ಷಕರು | ಗೃಹನಿರ್ಮಾಣ ಆಯುಕ್ತರು | ಕಾರ್ಯದರ್ಶಿ, ಗೃಹನಿರ್ಮಾಣ ಆಯುಕ್ತರು | (ii) ರಿಂದ (iv)<br>(v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 2. | ಪ್ರಥಮ ದರ್ಜೆ ಗುಮಾಸ್ತರುಗಳು, ಸ್ಟೆನೋಗ್ರಾಫರ್‌ಗಳು, ಇನ್ಸ್‌ಪೆಕ್ಟರ್‌ಗಳು | ಗೃಹನಿರ್ಮಾಣ ಆಯುಕ್ತರು | ಕಾರ್ಯದರ್ಶಿ, ಗೃಹನಿರ್ಮಾಣ ಆಯುಕ್ತರು | (ii) ರಿಂದ (iv)<br>(v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 3. | ದ್ವಿತೀಯ ದರ್ಜೆ ಗುಮಾಸ್ತರುಗಳು, ಬೆರಳಚ್ಚುಗಾರರು, ಷೇರಾಫರು, ಟೆಲಿಫೋನ್ ಆಪರೇಟರ್‌ಗಳು, ಬಿಲ್ ಕಲೆಕ್ಟರ್‌ಗಳು, ಇಲೆಕ್ಟ್ರಿಸಿಯನ್‌ಗಳು ಮತ್ತು ಡ್ರೈವರ್‌ಗಳು | –ಅದೇ– | –ಅದೇ– | –ಅದೇ– | –ಅದೇ– |
| 4. | ಅಟೆಂಡರ್‌ಗಳು, ದಫೇದಾರರು, ಲಿಫ್ಟ್ ಅಟೆಂಡರ್‌ಗಳು, ತೋಟಗಾರ ಜವಾನರು, ಕ್ಲೀನರ್‌ಗಳು, ವಾಚ್‌ಮನ್, ಸ್ವೀಪರ್‌ಗಳು, ಬ್ಲೂ ಪ್ರಿಂಟರ್ಸ್. | –ಅದೇ– | –ಅದೇ– | (i) ರಿಂದ (ii)<br>(v) ರಿಂದ (viii) | –ಅದೇ– |

**ವಿಭಾಗೀಯ ಮತ್ತು ಉಪ ವಿಭಾಗೀಯ ಹುದ್ದೆಗಳ ಸಿಬ್ಬಂದಿಗಾಗಿ**

| | | | | | |
|---|---|---|---|---|---|
| 5. | ಪ್ರಥಮ ದರ್ಜೆ ಗುಮಾಸ್ತರುಗಳು, ಸ್ಟೆನೋಗ್ರಾಫರ್‌ಗಳು, ದ್ವಿತೀಯ ದರ್ಜೆ ಗುಮಾಸ್ತರುಗಳು, ಇನ್‌ಸ್ಪೆಕ್ಟರ್, ಬೆರಳಚ್ಚುಗಾರರು, ಡ್ರೈವರ್, ಬಿಲ್ ಕಲೆಕ್ಟರ್‌ಗಳು. | ಗೃಹನಿರ್ಮಾಣ ಆಯುಕ್ತರು | ಕಾರ್ಯ ನಿರ್ವಾಹಕ ಇಂಜಿನಿಯರ್, ಗೃಹ ನಿರ್ಮಾಣ ಆಯುಕ್ತರು | (ii) ರಿಂದ (iv)<br>(v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 6. | IVನೇ ವರ್ಗ ಎಲ್ಲಾ ಹುದ್ದೆ | ಗೃಹನಿರ್ಮಾಣ ಆಯುಕ್ತರು | ಕಾರ್ಯ ನಿರ್ವಾಹಕ ಇಂಜಿನಿಯರ್, ಗೃಹ ನಿರ್ಮಾಣ ಆಯುಕ್ತರು | (i) ರಿಂದ (iv)<br>(v) ರಿಂದ (vii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |

## ಅನುಸೂಚಿ – ಬಿ

**ಕ.ಗೃ.ಮ. ಗೆ ಎರವಲು ಸೇವೆ ಮೇಲೆ ಬಂದಿರುವ ಅಧಿಕಾರಿಗಳಿಗೆ (ನಾನ್ ಗೆಜೆಟೆಡ್ ಅಧಿಕಾರಿಗಳು) ಕೆ.ಸಿ.ಎಸ್. (ಸಿ.ಸಿ ಮತ್ತು ಎ) ನಿಯಮಗಳು, 1957ರ ನಿಯಮ 8ನೇ ನಿಯಮದ ಮೇರೆಗೆ ದಂಡನೆ ವಿಧಿಸಬಹುದಾದ ಪ್ರಾಧಿಕಾರಿ.**

| | **ಹುದ್ದೆಗಳ ವರ್ಗ** | **ನೇಮಕಾತಿ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿ** | **ದಂಡಗಳನ್ನು ವಿಧಿಸುವುದಕ್ಕೆ ಅಧಿಕಾರವುಳ್ಳ ಪ್ರಾಧಿಕಾರಿ ಮತ್ತು ಆ ಪ್ರಾಧಿಕಾರಿಯು ವಿಧಿಸಬಹುದಾದ ದಂಡನೆಗಳು** | | **ಅಪೀಲು ಪ್ರಾಧಿಕಾರಿ** |
|---|---|---|---|---|---|
| | | | **ಅಧಿಕಾರಿ** | **ದಂಡನೆಗಳು (ನಿಯಮ 8)** | |
| | **1** | **2** | **3** | **4** | **5** |
| 1. | ಸಹಾಯಕ ಇಂಜಿನಿಯರ್, ಜೂನಿಯರ್ ಇಂಜಿನಿಯರ್, ಡ್ರಾಫ್ಟ್ಸ್‌ಮನ್, ಟ್ರೇಸರ್‌ಗಳು (ಪ್ರಧಾನ ಕಚೇರಿಯಲ್ಲಿ) | ಗೃಹ ನಿರ್ಮಾಣ ಆಯುಕ್ತರು | ಕಾರ್ಯದರ್ಶಿ, ಗೃಹನಿರ್ಮಾಣ ಆಯುಕ್ತರು | (ii) ರಿಂದ (iv) (v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 2. | ಲೆಕ್ಕ ಪತ್ರಗಳ ಸೂಪರಿಂಟೆಂಡೆಂಟರ್‌ಗಳು, ತಾಲೂಕು ಶಿರಸ್ತೇದಾರ –ಕಂ– ಸೂಪರಿಂಟೆಂಡೆಂಟ್‌ಗಳು, ಪ್ರಥಮ ದರ್ಜೆ ಗುಮಾಸ್ತ, ಸ್ಟೆನೋಗ್ರಾಫರ್‌ಗಳು, ರೆವಿನ್ಯೂ ಇನ್ಸ್‌ಪೆಕ್ಟರುಗಳು ಮತ್ತು ಸರ್ವೆಯರ್‌ಗಳು | –ಅದೇ– | –ಅದೇ– | –ಅದೇ– | –ಅದೇ– |
| 3. | ದ್ವಿತೀಯ ದರ್ಜೆ ಗುಮಾಸ್ತರು | –ಅದೇ– | –ಅದೇ– | –ಅದೇ– | –ಅದೇ– |

**ವಿಭಾಗೀಯ ಮತ್ತು ಉಪ ವಿಭಾಗೀಯ ಸಿಬ್ಬಂದಿ ಅಧಿಕಾರಿಗಳಿಗಾಗಿ**

| | | | | | |
|---|---|---|---|---|---|
| 4. | ಸಹಾಯಕ ಇಂಜಿನಿಯರ್, ಜೂನಿಯರ್ ಇಂಜಿನಿಯರ್, ಡ್ರಾಫ್ಟ್ಸ್‌ಮನ್, ಟ್ರೇಸರ್‌ಗಳು, ಪ್ರಥಮ ದರ್ಜೆ ಗುಮಾಸ್ತರು, ಸ್ಟೆನೋಗ್ರಾಫರ್‌ಗಳು, ದ್ವಿತೀಯ ದರ್ಜೆ ಗುಮಾಸ್ತರುಗಳು | ಗೃಹನಿರ್ಮಾಣ ಆಯುಕ್ತರು | ಕಾರ್ಯ ನಿರ್ವಾಹಕ ಇಂಜಿನಿಯರ್, ಗೃಹ ನಿರ್ಮಾಣ ಆಯುಕ್ತರು | (ii) ರಿಂದ (iv) (v) ರಿಂದ (viii) | ಅಧ್ಯಕ್ಷರು, ಗೃಹ ನಿರ್ಮಾಣ ಆಯುಕ್ತರು][5] |

6. **ಸಮಿತಿಗಳು.–** (1) ಮಂಡಲಿಯು ತನ್ನ ಸದಸ್ಯರ ಪೈಕಿಯಿಂದ ತಾನು ಅವಶ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು ನೇಮಕ ಮಾಡಬಹುದು.

(2) ಯಾವುದೇ ಸಮಿತಿಯ ಸದಸ್ಯರ ಸಂಖ್ಯೆಯು ಐದನ್ನು ಮೀರತಕ್ಕದ್ದಲ್ಲ.

(3) ಸಮಿತಿಯ ಸದಸ್ಯರು ಮಂಡಲಿಯ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(4) ಅಧ್ಯಕ್ಷರು, ಸಮಿತಿಯ ಸದಸ್ಯನಾಗಿದ್ದು ಹಾಜರಿದ್ದರೆ ಅವರು ಆ ಸಮಿತಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಲು ಹಾಜರಿರುವ ಸದಸ್ಯರು ಆಯ್ಕೆ ಮಾಡಿದ ಯಾರೇ ಸದಸ್ಯನು ಅಧ್ಯಕ್ಷತೆ ವಹಿಸತಕ್ಕದ್ದು. ಅಧ್ಯಕ್ಷರು ಯಾವುದೇ ಸಮಿತಿಯ ಸದಸ್ಯನಾಗಿರದಿದ್ದರೆ, ಆ ಸಮಿತಿಯು ತನ್ನ ಅಧ್ಯಕ್ಷನನ್ನು ಆಯ್ಕೆ ಮಾಡತಕ್ಕದ್ದು.

(5) ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಅರ್ಧದಷ್ಟು ಜನ ಸಮಿತಿಯ ಸಭೆಯ ಕೋರಂ ಆಗಿರತಕ್ಕದ್ದು ಮತ್ತು ಮುಂದೂಡಿದ ಸಭೆಗೆ ಕೋರಂನ ಅವಶ್ಯಕತೆ ಇರತಕ್ಕದ್ದಲ್ಲ.

**7. ಕರಾರುಗಳನ್ನು ಮಾಡಿಕೊಳ್ಳುವುದು.–** (1) ಐದು ಸಾವಿರ ರೂಪಾಯಿಗಳನ್ನು ಮೀರುವ ವೆಚ್ಚವನ್ನೊಳಗೊಂಡ ಯಾವುದೇ ಕಾಮಗಾರಿಯ ನಿರ್ವಹಣೆ ಬಗ್ಗೆ ಅಥವಾ ಯಾವುವೇ ಸಾಮಗ್ರಿಗಳ ಅಥವಾ ಸರಕುಗಳ ಸರಬರಾಜು ಬಗ್ಗೆ ಮಾಡಿಕೊಳ್ಳಲಾಗುವ ಪ್ರತಿಯೊಂದು ಕರಾರನ್ನು, ಮಂಡಲಿಯ ಸಾಮಾನ್ಯ ಮುದ್ರೆಯನ್ನು ಒತ್ತುವ ಮೂಲಕ ಮಾಡಿಕೊಳ್ಳತಕ್ಕದ್ದು.

[1][(2) ಮಂಡಲಿಯು ಅಥವಾ ಮಂಡಲಿಯ ಪರವಾಗಿ ಅಥವಾ ಮಂಡಲಿಯ ಹೆಸರಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅಥವಾ ಯಾವುದೇ ಸಾಮಗ್ರಿ ಅಥವಾ ಸರಕುಗಳನ್ನು ಸರಬರಾಜು ಮಾಡುವ ಬಗ್ಗೆ, ಟೆಂಡರುಗಳು ಮತ್ತು ಕರಾರುಗಳ ಸಂಬಂಧದಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯು ನಿಯಮಿಸಿದ ನಿಯಮಗಳನ್ನು ಮತ್ತು ನಮೂನೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಮತ್ತು ಅವು ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲ ದಿರುವಷ್ಟು ಮಟ್ಟಿಗೆ ಅನುಸರಿಸತಕ್ಕದ್ದು.][1]

1. ಜಿಎಸ್‌ಆರ್ 42, ದಿನಾಂಕ 25/28.1.1978 ಕೆಜಿಡಿ 2.2.1978ರ ಮೂಲಕ 7ನೇ ನಿಯಮದಲ್ಲಿ (2)ನೇ ಉಪನಿಯಮವನ್ನು ಪ್ರತಿಯೋಜಿಸಲಾಗಿದೆ.

**8. ವಾರ್ಷಿಕ ಗೃಹನಿರ್ಮಾಣ ಕಾರ್ಯಕ್ರಮ, ಗೃಹನಿರ್ಮಾಣ ಯೋಜನೆ, ಬಜೆಟ್ ಮತ್ತು ಸಿಬ್ಬಂದಿ ಪಟ್ಟಿ – ಇವುಗಳನ್ನು ತಯಾರಿಸುವುದು ಮತ್ತು ಸಲ್ಲಿಸುವುದು.–**

(i) ವಾರ್ಷಿಕ ಗೃಹನಿರ್ಮಾಣ ಕಾರ್ಯಕ್ರಮವನ್ನು ನಮೂನೆ – I ರಲ್ಲಿ ತಯಾರಿಸತಕ್ಕದ್ದು;

(ii) ಮುಂದಿನ ವರ್ಷದ ಬಜೆಟ್ಟನ್ನು ನಮೂನೆ II ರಲ್ಲಿ ತಯಾರಿಸತಕ್ಕದ್ದು; ಮತ್ತು

(iii) ಈಗಾಗಲೇ ನಿಯೋಜಿತರಾಗಿರುವ ಮತ್ತು ವರ್ಷದ ಅವಧಿಯಲ್ಲಿ ನಿಯೋಜಿತರಾಗುವ ಅಧಿಕಾರಿಗಳ ಮತ್ತು ನೌಕರರ ಸಿಬ್ಬಂದಿ ಪಟ್ಟಿಯನ್ನು ನಮೂನೆ III ರಲ್ಲಿ ತಯಾರಿಸತಕ್ಕದ್ದು.

(2) ಮಂಡಲಿಯು ಪ್ರತಿಯೊಂದು ಗೃಹನಿರ್ಮಾಣ ಯೋಜನೆಯನ್ನು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಮೇರೆಗೆ ಯಾವುದೇ ಪ್ರದೇಶಕ್ಕಾಗಿ ರೂಪಿಸಿದ ಅಭಿವೃದ್ಧಿಯ ರೂಪರೇಖೆ ಯೋಜನೆಗೆ ಅಥವಾ ಸಂದರ್ಭಾನುಸಾರ ವ್ಯಾಪಕ ಅಭಿವೃದ್ಧಿ ಯೋಜನೆಗೆ ಅನುಗುಣವಾಗಿ ರೂಪಿಸತಕ್ಕದ್ದು.

**9. ಜಮೀನಿನ ವಿಲೆ.–** (1) ಮಂಡಲಿಯು ತನ್ನಲ್ಲಿ ನಿಹಿತವಾಗಿರುವ ಮತ್ತು ಯಾವುದೇ ಗೃಹನಿರ್ಮಾಣ ಯೋಜನೆಯಲ್ಲಿ ಒಳಗೊಂಡಿರುವ ಪ್ರದೇಶದಲ್ಲಿರುವ ಯಾವುದೇ ಜಮೀನನ್ನು ಸರ್ಕಾರದಿಂದ ಪಡೆದ ಯಾವುದೇ ಸಾಲವನ್ನು ತೀರಿಸುವ ಸಲುವಾಗಿ ಸರ್ಕಾರಕ್ಕೆ ವರ್ಗಾಯಿಸಬಹುದು.

(2) ಹಾಗೆ ವರ್ಗಾವಣೆ ಮಾಡಿದ ಮೇಲೆ, ಸರ್ಕಾರವು ನೀಡಿದ ಸಾಲವು ಹಾಗೆ ವರ್ಗಾವಣೆ ಮಾಡಿದ ಜಮೀನಿನ ಮಾರುಕಟ್ಟೆ ಬೆಲೆ ಮತ್ತು ಅದರ ನಿರ್ವಹಣೆ ಮತ್ತು ಅಭಿವೃದ್ಧಿಯ ಬಗ್ಗೆ ವ್ಯವಸ್ಥಾಪನೆಯ ಮೇಲಣ ಮೊಬಲಗು ಸೇರಿದ ಮೊಬಲಗಿನಷ್ಟು ಕಡಿಮೆಯಾಗತಕ್ಕದ್ದು.

(3) ಮಂಡಲಿಯು, ತನ್ನಲ್ಲಿ ನಿಹಿತವಾದ ಯಾವುದೇ ಜಮೀನನ್ನು, ಸಂಬಂಧಪಟ್ಟ ಗೃಹನಿರ್ಮಾಣ ಯೋಜನೆಯನ್ನು ನಿಯಂತ್ರಿಸುವಂಥ ಅಥವಾ ಮಂಡಲಿಯು ವಿಶೇಷ ಸಂದರ್ಭದಲ್ಲಿ ನಿರ್ಧರಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ಗೇಣಿಗೆ ಕೊಡಬಹುದು, ಮಾರಾಟ ಮಾಡಬಹುದು ಅಥವಾ ಅನ್ಯಥಾ ವಿಲೆ ಮಾಡಬಹುದು.

**10. ವಾಸದ ಮನೆಯ ಅಧಿಭೋಗಕ್ಕೆ ಸಂಬಂಧಿಸಿದ ಷರತ್ತುಗಳು.–** ಮಂಡಲಿಯು ಒದಗಿಸಿದ ಯಾವುದೇ ವಾಸದ ಮನೆಯನ್ನು ಯಾರೇ ನೌಕರ ಅನುಭೋಗಿಸುವುದು ಈ ಕೆಳಕಂಡ ಷರತ್ತುಗಳಿಗೊಳಪಟ್ಟಿರತಕ್ಕದ್ದು, ಎಂದರೆ:–

(ಎ) ನೌಕರನು, ಮಂಡಲಿಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ದರಗಳಲ್ಲಿ ಮಾಸಿಕ ಬಾಡಿಗೆಯನ್ನು ಸಂದಾಯ ಮಾಡತಕ್ಕದ್ದು;

(ಬಿ) ಅವನು, ದರಗಳಲ್ಲಿ, ತೆರಿಗೆಗಳಲ್ಲಿ, ಉಪಕರಗಳಲ್ಲಿ ಅಥವಾ ಇತರ ಸೇವಾ ವೆಚ್ಚಗಳಲ್ಲಿ ಆದ ಯಾವುದೇ ಹೆಚ್ಚಳದ ಕಾರಣ ಅಥವಾ ಯಾವುವೇ ಹೆಚ್ಚಿನ ಸೇರ್ಪಡೆಗಳು ಅಥವಾ ಬದಲಾವಣೆಗಳು ಅಥವಾ ಅವೆರಡರ ಅಥವಾ ಒದಗಿಸಿದ ಯಾವುವೇ ಸೌಕರ್ಯಗಳ ಕಾರಣ ಸದರಿ ಮಾಸಿಕ ಬಾಡಿಗೆ ಮತ್ತು ಇತರ ವೆಚ್ಚಗಳಲ್ಲಿ ಮಂಡಲಿಯು ವಿಧಿಸುವುದು ಯುಕ್ತವೆಂದು ಅಥವಾ ವಿಹಿತವೆಂದು ಪರಿಗಣಿಸುವಂಥ ಹೆಚ್ಚಳವನ್ನು ಸಂದಾಯಮಾಡತಕ್ಕದ್ದು;

(ಸಿ) ಅವನು, ಆವರಣದಲ್ಲಿ ಅಥವಾ ಅದರ ಹತ್ತಿರ ಯಾವುದೇ ಕಸ ಸಂಗ್ರಹವಾಗಲು ಅವಕಾಶ ಕೊಡತಕ್ಕದ್ದಲ್ಲ ಮತ್ತು ಅವನು ಮಂಡಲಿಗೆ ಪೂರ್ಣ ತೃಪ್ತಿಯಾಗುವ ಹಾಗೆ ಸದರಿ ಆವರಣವನ್ನು ಮತ್ತು ಹೊರಗಿನ ಸ್ಥಳವನ್ನು ಮತ್ತು ಅದಕ್ಕೆ ಹೊಂದಿಕೊಂಡಿರುವ ಬೀದಿಗಳನ್ನು ಸ್ವಚ್ಛವಾಗಿ, ಅಚ್ಚುಕಟ್ಟಾಗಿ ಮತ್ತು ಚೊಕ್ಕಟವಾಗಿ ಇಡತಕ್ಕದ್ದು;

(ಡಿ) ಅವನು, ಮಂಡಲಿಯಿಂದ ಲಿಖಿತದಲ್ಲಿ ಮೊದಲೇ ಅನುಮತಿ ಪಡೆಯದೆ ಸದರಿ ಆವರಣಕ್ಕೆ ಯಾವುವೇ ಸೇರ್ಪಡೆಗಳನ್ನು ಅಥವಾ ಬದಲಾವಣೆಗಳನ್ನು ಮಾಡತಕ್ಕದ್ದಲ್ಲ. ಎಲ್ಲಾ ಬದಲಾವಣೆಗಳು ಮತ್ತು ಸೇರ್ಪಡೆಗಳು (ಜೋಡಣೆಗಳೂ ಸೇರಿ) ಮಂಡಲಿಯ ಸ್ವತ್ತಾಗತಕ್ಕದ್ದು ಮತ್ತು ಅಧಿಭೋಗವನ್ನು ಕೊನೆಗೊಳಿಸಿದ ತರುವಾಯ ಆ ಅಧಿಭೋಗದಾರನು ಅವುಗಳನ್ನು ಸ್ಥಳಾಂತರಿಸಲು ಅಥವಾ ಸ್ಥಳಾಂತರಿಸದಿದ್ದ ಸಂದರ್ಭದಲ್ಲಿ, ಆ ಸಂಬಂಧದಲ್ಲಿ ಯಾವುದೇ ಪರಿಹಾರವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ. ಪರಂತು, ಅಂಥ ಯಾವುದೇ ಬದಲಾವಣೆಯನ್ನು ಅಥವಾ ಸೇರ್ಪಡೆಯನ್ನು ನೌಕರನು ತನ್ನ ಸ್ವಂತ ಖರ್ಚಿನಲ್ಲಿ ಸ್ಥಳಾಂತರಿಸುವಂತೆ ಮತ್ತು ಸದರಿ ಆವರಣಗಳು ಅಧಿಭೋಗದ ಪ್ರಾರಂಭದ ದಿನಾಂಕದಂದು ಯಾವ ಸ್ಥಿತಿಯಲ್ಲಿದ್ದವೋ ಅದೇ ಸ್ಥಿತಿಗೆ ತರುವಂತೆ ಅವನನ್ನು ಕೇಳಲು ಮಂಡಲಿಯು ಪೂರ್ಣ ಹಕ್ಕು ಹೊಂದಿರತಕ್ಕದ್ದು.

(ಇ) ಅವನು, ಆವರಣದ ಅಥವಾ ಅದರ ಯಾವುದೇ ಭಾಗದ ಸ್ವಾಧೀನವನ್ನು ಹಸ್ತಾಂತರಿಸತಕ್ಕದ್ದಲ್ಲ. ಒಳಗೇಣಿಗೆ ಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾಯಿಸತಕ್ಕದ್ದಲ್ಲ.

(ಎಫ್) ಅವನು, ಆ ಆವರಣದಲ್ಲಿ ದಹ್ಯ ಅಥವಾ ಅಪಾಯಕಾರಿ ಸ್ವರೂಪದ ಯಾವುವೇ ವಸ್ತುಗಳನ್ನು ಇಡತಕ್ಕದ್ದಲ್ಲ ಅಥವಾ ದಾಸ್ತಾನು ಮಾಡತಕ್ಕದ್ದಲ್ಲ ಅಥವಾ ಆ ಆವರಣದಲ್ಲಿ ಅಥವಾ ಅದರ ಸುತ್ತ ಕಾಂಪೌಂಡ್ ಇದ್ದರೆ ಅದರಲ್ಲಿ ಯಾವುದೇ ಪ್ರಾಣಿಯನ್ನಾಗಲಿ ಅಥವಾ ಕೋಳಿಯನ್ನಾಗಲೀ ಇಡತಕ್ಕದ್ದಲ್ಲ.

(ಜಿ) ಅವನು, ಮಂಡಲಿಗೆ ಅಥವಾ ಅದರ ಅಧಿಕಾರಿಗಳಿಗೆ, ಏಜೆಂಟರಿಗೆ, ಅಥವಾ ನೌಕರರಿಗೆ ಅಥವಾ ಮಂಡಲಿಯು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಗೆ ಆವರಣದ ಹಿತದೃಷ್ಟಿಯಿಂದ ಆ ಪ್ರದೇಶದಲ್ಲಿ ಇರುವ ಮನೆಗಳ ಅಧಿಭೋಗದಾರರ ಪೈಕಿ ಯಾರೊಬ್ಬರ ಸಾಮಾನ್ಯ ಹಿತದೃಷ್ಟಿಯಿಂದ, ಅಥವಾ ಸಾಮಾನ್ಯ ನಿರ್ವಹಣೆ ಹಿತದೃಷ್ಟಿಯಿಂದ ಆ ಆವರಣಗಳಿಗೆ ಪ್ರವೇಶಿಸಲು ಮತ್ತು ಅವುಗಳನ್ನು ಪರಿಶೀಲಿಸಲು ಮತ್ತು ಅವುಗಳಿಗೆ ಮೇಲೆ ಅವಶ್ಯವಿರಬಹುದಾದಂಥ ಸೇರ್ಪಡೆ ಮತ್ತು ಬದಲಾವಣೆಯ ಕಾಮಗಾರಿಯನ್ನು ನಿರ್ವಹಿಸಲು ಯಾವುದೇ ದಿನ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಅಥವಾ ಮಂಡಲಿಯು ಅಥವಾ ಅದರ ಅಧಿಕಾರಿಗಳು, ನೌಕರರು ಅಥವಾ ಏಜೆಂಟರು ಅಥವಾ ಹಾಗೆ ಅಧಿಕೃತಗೊಂಡ ವ್ಯಕ್ತಿಗಳು ಹಾಗೆ ಮಾಡುವುದು ಅವಶ್ಯವೆಂದು ಭಾವಿಸುವಂಥ ಯಾವುದೇ ಇತರ ಸಮಯದಲ್ಲಿ ಹಾಗೆ ಮಾಡಲು ಅನುಮತಿಸತಕ್ಕದ್ದು;

(ಹೆಚ್) ಅವನು, ಕಾಂಪೌಂಡಿನಲ್ಲಿ ಅಥವಾ ಬೀದಿಯಲ್ಲಿ ಬೆಳೆದು ನಿಂತಿರುವ ಮರಗಳನ್ನು ಅಥವಾ ದೊಡ್ಡ ಪೊದೆಗಳನ್ನು ಕತ್ತರಿಸತಕ್ಕದ್ದಲ್ಲ, ಸವರತಕ್ಕದ್ದಲ್ಲ ಅಥವಾ ಅವುಗಳಿಗೆ ಹಾನಿಯುಂಟುಮಾಡತಕ್ಕದ್ದಲ್ಲ ಅಥವಾ ಆ ಮರಗಳಿಂದ ಹಣ್ಣುಗಳನ್ನು ಅಥವಾ ಹೂವುಗಳನ್ನು ಕೀಳತಕ್ಕದ್ದಲ್ಲ;

(ಐ) ಅವನು, ಅಧಿಭೋಗದ ಕೊನೆಯಲ್ಲಿ ಅಥವಾ ಅಧಿಭೋಗವನ್ನು ಕೊನೆಗೊಳಿಸಿದಾಗ ಅದಕ್ಕಿಂತ ಮುಂಚಿತವಾಗಿ ಆ ಆವರಣಗಳ ಸ್ವಾಧೀನವನ್ನು, ಯುಕ್ತವಾದ ಸವೆತಗಳನ್ನುಳಿದು, ಅಧಿಭೋಗದ ಪ್ರಾರಂಭದಂದು ಯಾವ ಸ್ಥಿತಿಯಲ್ಲಿದ್ದತೋ ಅದೇ ಸ್ಥಿತಿಯಲ್ಲಿ ಶಾಂತವಾಗಿಯೂ ಮತ್ತು ಸಮಾಧಾನದಿಂದಲೂ ಮಂಡಲಿಗೆ ಒಪ್ಪಿಸತಕ್ಕದ್ದು. ಯುಕ್ತವಾದ ಸವೆತ ಎಷ್ಟು ಎಂಬ ಪ್ರಶ್ನೆಯನ್ನು ಮಂಡಲಿಯು ತೀರ್ಮಾನಿಸತಕ್ಕದ್ದು ಮತ್ತು ಮಂಡಲಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಬಂಧನಕಾರಿಯಾಗಿರತಕ್ಕದ್ದು. ಆವರಣಗಳಿಗೆ ಉಂಟುಮಾಡಿದ ಹಾನಿಗಳು ಅಥವಾ ನಷ್ಟ ಏನಾದರೂ ಇದ್ದಲ್ಲಿ ಅದನ್ನು ತುಂಬಿಕೊಡತಕ್ಕದ್ದು ಮತ್ತು ಬಾಡಿಗೆಯ ಮುಂಗಡ ಯಾವುದಾದರೂ ಇದ್ದಲ್ಲಿ ಅದರಿಂದ ಸರಿ ಹೊಂದಿಸಲು ಮಂಡಲಿಗೆ ಹಕ್ಕಿರತಕ್ಕದ್ದು;

(ಜೆ) ಅವನು, ಮಂಡಲಿಯ ಹೆಸರಿಗೆ ಬರೆದುಕೊಡಬೇಕಾದ ಯಾವುದೇ ದಸ್ತಾವೇಜಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಸ್ಟಾಂಪು ಮತ್ತು ನೋಂದಣಿ ಚಾರ್ಜುಗಳನ್ನು ಸಂದಾಯ ಮಾಡತಕ್ಕದ್ದು;

(ಕೆ) ಅವನು, ತನ್ನ ಮತ್ತು ತನ್ನ ಕುಟುಂಬದ ಸದಸ್ಯರ ವಾಸದ ಉದ್ದೇಶಗಳಿಗಾಗಿ ಮಾತ್ರ ಆ ಆವರಣವನ್ನು ಉಪಯೋಗಿಸತಕ್ಕುದು ಮತ್ತು ಅಧಿಭೋಗಿಸತಕ್ಕುದು ಮತ್ತು ಮಂಡಲಿಯು ಅಗತ್ಯಪಡಿಸಿದಾಗಲೆಲ್ಲ ಆವರಣದಲ್ಲಿ ಅವನೊಂದಿಗೆ ವಾಸಿಸುತ್ತಿರುವ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಅವರ ಸಂಬಂಧ, ವಯಸ್ಸು ಮತ್ತು ಮಾಸಿಕ ಆದಾಯದ ಬಗ್ಗೆ ಪೂರ್ಣ ಮಾಹಿತಿಯನ್ನು ಮತ್ತು ಮಂಡಲಿಯು ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ಒದಗಿಸತಕ್ಕದ್ದು;

(ಎಲ್) ಅವನು, ತನ್ನ ಅಧಿಭೋಗದ ಅವಧಿಯಲ್ಲಿ ಬೆಂಕಿ ಅಥವಾ ಅಪಘಾತ ಅಥವಾ ಯಾವುದೇ ಇತರ ಕಾರಣದಿಂದ ಉಂಟಾದ ನಷ್ಟ ಯಾವುದಾದರೂ ಇದ್ದರೆ, ಆ ಬಗ್ಗೆ ಮಂಡಲಿಯಿಂದ ಯಾವುದೇ ನಷ್ಟಭರ್ತಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗತಕ್ಕದ್ದಲ್ಲ;

(ಎಂ) ಅವನು, ಆ ಆವರಣವನ್ನು ವಾಸದ ಉದ್ದೇಶಕ್ಕಾಗಿ ಹೊರತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕುದಲ್ಲ ಮತ್ತು ಅದಕ್ಕೆ ಹೊಂದಿಕೊಂಡಿರುವ ಅಧಿಭೋಗದಾರರಿಗೆ ಅಥವಾ ನೆರೆಹೊರೆಯವರಿಗೆ ಯಾವುದೇ ಅನಾನುಕೂಲ, ಉಪದ್ರವ ಅಥವಾ ಕಿರುಕುಳವನ್ನು ಉಂಟುಮಾಡವ ರೀತಿಯಲ್ಲಿ ಉಪಯೋಗಿಸತಕ್ಕುದಲ್ಲ. ಯಾವುದೇ ಕೃತ್ಯವು ಯಾವುದೇ ಉಪದ್ರವವನ್ನು ಉಂಟು ಮಾಡುವುದೇ ಅಥವಾ ಇಲ್ಲವೇ ಎಂಬ ಬಗ್ಗೆ ಸಕ್ಷಮ ಪ್ರಾಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅವನು ಅದಕ್ಕೆ ಬದ್ಧನಾಗಿರತಕ್ಕದ್ದು;

(ಎನ್) ಅವನು, ಯಾವುದೇ ಕೊಳಾಯಿಯಿಂದ ನೀರು ವ್ಯರ್ಥವಾಗಿ ಹರಿದು ಹೋಗಲು ಅವಕಾಶ ಕೊಡತಕ್ಕುದಲ್ಲ ಮತ್ತು ಆವರಣದಿಂದ ಹೊರಕ್ಕೆ ನೀರನ್ನು ಅಥವಾ ಯಾವುದೇ ಇತರೆ ವಸ್ತುವನ್ನು ಎಸೆಯತಕ್ಕದ್ದಲ್ಲ ಮತ್ತು ಸ್ನಾನದ ಕೊಠಡಿಗಳನ್ನು ಅಥವಾ ವಠಾರದ ಯಾವುದೇ ಭಾಗವನ್ನು ಕಕ್ಕಸು ಅಥವಾ ಮೂತ್ರಿಗಳನ್ನಾಗಿ ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸಲು ಅವಕಾಶ ಕೊಡತಕ್ಕದ್ದಲ್ಲ;

(ಒ) ಅವನು ಅಥವಾ ಆವರಣವನ್ನು ಅನುಭೋಗಿಸಲು ಅಧಿಕೃತನಾದ ಅವನ ಕುಟುಂಬದ ಯಾರೇ ವ್ಯಕ್ತಿಯು, ಮಂಡಲಿಯಿಂದ ಅಥವಾ ಲಿಖಿತದಲ್ಲಿ ಮೊದಲೇ ಅನುಮತಿ ಪಡೆಯದೆ 14 ದಿನಗಳ ನಿರಂತರ ಅವಧಿಗೆ ಆ ಆವರಣದ ಅನುಭೋಗವನ್ನು ನಿಲ್ಲಿಸಿದರೆ ಅನುಭೋಗಿಸಲು ನೀಡಿದ ಅನುಮತಿಯು ಕೂಡಲೇ ಕೊನೆಗೊಳ್ಳತಕ್ಕದ್ದು;

(ಪಿ) (ಎ) ಷರತ್ತಿನ ಮೇರೆಗೆ ನಿಗದಿಪಡಿಸಿದ ಮಾಸಿಕ ಬಾಡಿಗೆಯ ಅಥವಾ ಅದರ ಯಾವುದೇ ಭಾಗವು ಬಾಕಿ ಇದ್ದರೆ ಮತ್ತು ಬಾಕಿ ಇದ್ದಾಗಲೆಲ್ಲ, ಅದನ್ನು ಭೂ ಕಂದಾಯದ ಬಾಕಿಯಂತೆ ಮಂಡಲಿಯು ವಸೂಲು ಮಾಡತಕ್ಕದ್ದು ಮತ್ತು ಅಂಥ ಬಾಡಿಗೆಯು ಅಥವಾ ಅದರ ಯಾವುದೇ ಭಾಗವು ಎರಡು ತಿಂಗಳ ಅವಧಿಯವರೆಗೆ ಬಾಕಿಯಾಗಿದ್ದು ಅದನ್ನು ಕಾನೂನು ಸಮ್ಮತವಾಗಿ ತಗಾದೆ ಮಾಡಿರಲಿ ಅಥವಾ ಇಲ್ಲದಿರಲಿ ಅಥವಾ ಇದರಲ್ಲಿ ಒಳಗೊಂಡಿರುವ ಯಾವುದೇ ಇತರೆ ಉಪಬಂಧದ ಉಲ್ಲಂಘನೆಯಾಗಿದ್ದರೆ ಮತ್ತು ಆಗಿರುವಾಗಲೆಲ್ಲ ಅಧಿಭೋಗದ ಹಕ್ಕನ್ನು ಸಮಾಪ್ತಗೊಳಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಮಂಡಲಿಯು ಆ ತರುವಾಯ ಆ ಆವರಣವನ್ನು ಪುನಃ ಪ್ರವೇಶಿಸಬಹುದು;

(ಕ್ಯೂ) ಅವನು, (ಎ) ದಿಂದ (ಪಿ) ವರೆಗಿನ ಷರತ್ತುಗಳಲ್ಲಿ ಒಳಗೊಂಡಿರುವ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ, ಅವನು ಅಂಥ ಉಲ್ಲಂಘನೆಯನ್ನು ಮುಂದುವರೆಸಿದಂಥ ಅವಧಿಗೆ, ಮಂಡಲಿಯು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ದರಗಳಲ್ಲಿ ಸದರಿ ಆವರಣಕ್ಕೆ ಸಂಬಂಧಪಟ್ಟಂತೆ ಹೆಚ್ಚಿಸಿದ ಬಾಡಿಗೆಯನ್ನು ಸಂದಾಯ ಮಾಡಲು ಸಹ ಬದ್ಧನಾಗತಕ್ಕದ್ದು;

(ಆರ್) ಅವನು ಸಂದಾಯ ಮಾಡಿದ ಮುಂಗಡ ಬಾಡಿಗೆಯ ಮೊಬಲಗನ್ನು, ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಉಲ್ಲಂಘಿಸಿದ ಬಗ್ಗೆ ಮುಟ್ಟುಗೋಲು ಹಾಕಿಕೊಳ್ಳದಿದ್ದರೆ, ಅವನು ಎಲ್ಲಾ ಬಾಡಿಗೆಗಳನ್ನು ಸಂದಾಯ ಮಾಡಿದ್ದರೆ ಮತ್ತು ಇದರಲ್ಲಿ ಒಳಗೊಂಡಿರುವ ಎಲ್ಲಾ ನಿಬಂಧನೆಗಳನ್ನು ಪಾಲಿಸಿದ್ದರೆ ಮತ್ತು ಮಂಡಲಿಗೆ ಅವನಿಂದ ಸಂದಾಯ ಬಾಕಿ ಇರುವ ಯಾವುವೇ ಮೊತ್ತಗಳನ್ನು ಅದರಿಂದ ಮುರಿದುಕೊಂಡ ನಂತರ ಮಂಡಲಿಗೆ ಸಲ್ಲತಕ್ಕ ಬಾಕಿಗಳು ಅಂಥ ಮುಂಗಡದ ಮೊಬಲಗನ್ನು ಮೀರಿದ್ದ ಸಂದರ್ಭದಲ್ಲಿ ಅದನ್ನು ಆ ಕೂಡಲೆ ಸಂದಾಯ ಮಾಡುವುದಾಗಿ ಮಾತು ಕೊಟ್ಟರೆ ಅನುಭೋಗವನ್ನು ಮುಕ್ತಾಯಗೊಳಿಸಿದ ತರುವಾಯ ಅವನಿಗೆ ಮರುಪಾವತಿ ಮಾಡತಕ್ಕದ್ದು. ಅನುಭೋಗವನ್ನು ಮುಂದುವರಿಸಿದ ಅವಧಿಯಲ್ಲಿ ಸದರಿ ಮುಂಗಡದಿಂದ ಯಾವುದೇ ಮೊತ್ತವನ್ನು ಮುರಿದುಕೊಂಡಿರುವ ಸಂದರ್ಭದಲ್ಲಿ, ಅವನು, ಆ ಕೂಡಲೇ, ಹಾಗೆ ಮುರಿದುಕೊಂಡಿದ್ದ ಮೊಬಲಗಿಗೆ ತಗಾದೆ ಮಾಡಿದರೆ ಸಂದಾಯ ಮಾಡತಕ್ಕುದು ಮತ್ತು ಅಧಿಭೋಗದ ಅವಧಿಯುದ್ದಕ್ಕೂ ಮುಂಗಡದ ಮೊಬಲಗನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗತಕ್ಕದ್ದು, ಮುಂಗಡವು ನಗದು ರೂಪದಲ್ಲಿರತಕ್ಕದ್ದು ಮತ್ತು ಅದಕ್ಕೆ ಯಾವುದೇ ಬಡ್ಡಿ ಸಂದಾಯವಾಗತಕ್ಕದ್ದಲ್ಲ.

(ಎಸ್) ಮಂಡಲಿಯು ತೀರ್ಮಾನಿಸಬೇಕಾದ ಯಾವುದೇ ವಿಷಯವನ್ನು ಮತ್ತು ಮಂಡಲಿಯು ನೀಡಬೇಕಾದ ಯಾವುದೇ ನೋಟೀಸನ್ನು, ಅನುಮತಿಯನ್ನು ಅಥವಾ ಸಮ್ಮತಿಯನ್ನು ತತ್ಕಾಲದ ಸಕ್ಷಮ ಪ್ರಾಧಿಕಾರಿಯು ಅಥವಾ ಮಂಡಲಿಯು ಯುಕ್ತವಾಗಿ ಅಧಿಕೃತಗೊಳಿಸಿದ ಇತರ ಯಾವನೇ ಅಧಿಕಾರಿಯು ತೀರ್ಮಾನಿಸಬಹುದು ಮತ್ತು ನೀಡಬಹುದು ಮತ್ತು ಸದರಿ ಸಕ್ಷಮ ಪ್ರಾಧಿಕಾರಿಯು ಅಥವಾ ಮಂಡಲಿಯು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಇತರ ಅಧಿಕಾರಿಯು ಸಹಿಮಾಡಿ ಅವನ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಅಥವಾ ಸದರಿ ಆವರಣದಲ್ಲಿ ಇಟ್ಟುಹೋದ ಅಥವಾ ವೈಯಕ್ತಿಕವಾಗಿ ಕೊಟ್ಟ ಅಥವಾ ಸದರಿ ಆವರಣದ ಎದ್ದು ಕಾಣುವ ಭಾಗದಲ್ಲಿ ಅಂಟಿಸಿದ ಯಾವುದೇ ತಿಳುವಳಿಕೆಯನ್ನು ಸಾಕಷ್ಟು ಜಾರಿಯೆಂಬುದಾಗಿ ಪರಿಣಿಸತಕ್ಕದ್ದು;

(ಟಿ) ಅನುಭೋಗವನ್ನು ಇಬ್ಬರಲ್ಲಿ ಒಬ್ಬರು ಮತ್ತೊಬ್ಬನಿಗೆ ಒಂದು ತಿಂಗಳ ನೋಟೀಸನ್ನು ಕೊಡುವ ಮೂಲಕ ಕೊನೆಗೊಳಿಸಬಹುದು. ಅನುಭೋಗದಾರನು ಅಂಥ ನೋಟೀಸನ್ನು ಕೊಡದೆ ಆವರಣವನ್ನು ಬಿಟ್ಟುಹೋದರೆ, ಅಂಥ ನೋಟೀಸಿಗೆ ಬದಲಾಗಿ ಅವನು ಒಂದು ತಿಂಗಳ ಬಾಡಿಗೆಯನ್ನು ಮತ್ತು ನೋಟೀಸಿನ ಅವಧಿಯ ಬಗ್ಗೆ ಇಲ್ಲಿ ಉಪಬಂಧಿಸಿರುವ ಹಾಗೆ ಅವನಿಂದ ಬಾಕಿ ಇರುವ ಇತರ ಎಲ್ಲಾ ಚಾರ್ಜುಗಳನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು;

(ಯು) ಸದರಿ ಆವರಣವನ್ನು ಕಾರ್ಖಾನೆಗಳ ಅಧಿನಿಯಮ, 1948ರ 2 (1)ನೇ ಪ್ರಕರಣದ ವ್ಯಾಪ್ತಿಗೆ ಒಳಪಡುವ ಕೈಗಾರಿಕಾ ಕಾರ್ಮಿಕನಾಗಿರುವ ಕಾರಣದಿಂದ ಸಬ್ಸಿಡಿ ಬಾಡಿಗೆಯ ಮೇಲೆ ಅನುಭೋಗಿಸಲು ಲೈಸೆನ್ಸು ಕೊಟ್ಟಿದ್ದರೆ ಆ ಲೈಸೆನ್ಸು, ಅವನು ಕೈಗಾರಿಕಾ ಕಾರ್ಮಿಕನಾಗಿರುವುದು ಮುಕ್ತಾಯವಾದ ಕೂಡಲೇ ಕೊನೆಗೊಳ್ಳತಕ್ಕದ್ದು;

(ವಿ) ಅನುಭೋಗವು, ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ವಿನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು;

(ಡಬ್ಲ್ಯೂ) ಅವನು, ಹಿಂದೆ ಹೇಳಿದ ಷರತ್ತುಗಳಲ್ಲಿ ಮಾಡಿದ ಬದಲಾವಣೆಗಳಿಗೆ ಅಥವಾ ಅವುಗಳಿಗೆ ಮಾಡಿದ ಸೇರ್ಪಡೆಗಳಿಗೆ ಬದ್ಧನಾಗಿರತಕ್ಕದ್ದು, ಪರಂತು, ಅಂಥ ಬದಲಾವಣೆಗಳನ್ನು, ಆ ಬಗ್ಗೆ ಅವನಿಗೆ ನೋಟೀಸನ್ನು ಕೊಟ್ಟ ತರುವಾಯ ಮಾಡಬೇಕು;

(ಎಕ್ಸ್) ಅವನು, ಮೇಲೆ ತಿಳಿಸಿರುವ ಷರತ್ತುಗಳನ್ನು ಒಳಗೊಂಡಿರುವ ಒಪ್ಪಂದವನ್ನು ಸೂಕ್ತ ಸ್ಟಾಂಪ್ ಕಾಗದದ ಮೇಲೆ ಬರೆದುಕೊಡತಕ್ಕದ್ದು;

(ವೈ) ಅವನು, ಅಧಿನಿಯಮದ ಉಪಬಂಧಗಳ ಮೇರೆಗಿನ ಅನುಭೋಗದ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ ಮಂಡಲಿಯು ಆವರಣದಿಂದ ಹೊರ ಹಾಕಲ್ಪಡುವುದಕ್ಕೆ ಒಳಪಟ್ಟಿರತಕ್ಕದ್ದು.

[1][**11. ನೋಟೀಸುಗಳು.–** (1) 45ನೇ ಪ್ರಕರಣದ (1)ನೇ ಉಪ-ಪ್ರಕರಣದ ಪರಂತುಕದ ಮೇರೆಗಿನ ಷೋಕಾಸ್ ನೋಟೀಸು IVನೇ ನಮೂನೆಯಲ್ಲಿರತಕ್ಕದ್ದು.

(2) 45ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಅಂತಿಮ ನೋಟೀಸು IV-ಎ ನಮೂನೆಯಲ್ಲಿರತಕ್ಕದ್ದು.

(3) 46ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ನೋಟೀಸು Vನೇ ನಮೂನೆಯಲ್ಲಿರತಕ್ಕದ್ದು.

(4) 46ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ನೋಟೀಸು VIನೇ ನಮೂನೆಯಲ್ಲಿರತಕ್ಕದ್ದು.][1]

1. ಜಿಎಸ್‌ಆರ್ 322, ದಿನಾಂಕ 18-7-1967ರ ಮೂಲಕ ನಿಯಮ 11ನ್ನು ಪ್ರತಿಯೋಜಿಸಲಾಗಿದೆ.

[1][**11ಎ. ಅಪೀಲುಗಳಲ್ಲಿನ ಪ್ರಕ್ರಿಯೆ.–** (1) ಅಧಿನಿಯಮದ 48ನೇ ಪ್ರಕರಣದ ಮೇರೆಗೆ ಸಲ್ಲಿಸುವ ಅಪೀಲು ಬರವಣಿಗೆಯಲ್ಲಿರತಕ್ಕದ್ದು ಮತ್ತು ಅದರಲ್ಲಿ ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶಕ್ಕೆ ಮಾಡಿದ ಆಕ್ಷೇಪಣೆಯ ಕಾರಣಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿರತಕ್ಕದ್ದು ಮತ್ತು ಅದಕ್ಕೆ ಅಂಥ ಆದೇಶದ ಒಂದು ಪ್ರತಿಯನ್ನು ಲಗತ್ತಿಸಿರತಕ್ಕದ್ದು.

(2) ಅಪೀಲನ್ನು ಸ್ವೀಕರಿಸಿದ ತರುವಾಯ ಮತ್ತು ಸಕ್ಷಮ ಪ್ರಾಧಿಕಾರದ ಸಮ್ಮುಖದಲ್ಲಿ ನಡೆದ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಂಡು ಪರಿಶೀಲಿಸಿದ ತರುವಾಯ ಅಪೀಲು ಅಧಿಕಾರಿಯು ಅಪೀಲಿನ ವಿಚಾರಣೆಗಾಗಿ ಸಮಯ ಮತ್ತು ಸ್ಥಳವನ್ನು ಗೊತ್ತುಪಡಿಸತಕ್ಕದ್ದು ಮತ್ತು ಯಾವ ಸಕ್ಷಮ ಪ್ರಾಧಿಕಾರದ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಸಕ್ಷಮ ಪ್ರಾಧಿಕಾರಕ್ಕೆ ಮತ್ತು ಅಪೀಲುದಾರನಿಗೆ ಆ ಬಗ್ಗೆ ನೋಟೀಸು ಕೊಡತಕ್ಕದ್ದು.][1]

1. ಜಿಎಸ್‌ಆರ್ 322, ದಿನಾಂಕ 18-7-1967ರ ಮೂಲಕ ನಿಯಮ 11-ಎ ಯನ್ನು ಸೇರಿಸಲಾಗಿದೆ.

**12. ಸ್ವಾಧೀನವನ್ನು ತೆಗೆದುಕೊಳ್ಳುವ ಪ್ರಕ್ರಿಯೆ.–** (1) 45ನೇ ಪ್ರಕರಣದ ಮೇರೆಗೆ ಆವರಣದ ಸ್ವಾಧೀನವನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರವು ಸದರಿ ಪ್ರಕರಣದ ಮೂಲಕ ಅಗತ್ಯಪಡಿಸಲಾದ ನೋಟೀಸನ್ನು ಕೊಟ್ಟ ತರುವಾಯ ಮತ್ತು ಅನುಭೋಗದಾರನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಸೂರ್ಯೋದಯದ ಮುಂಚೆ ಅಥವಾ ಸೂರ್ಯಾಸ್ತವಾದ ತರುವಾಯ ಹೊರತು ಯಾವುದೇ ಸಮಯದಲ್ಲಿ ಆ ಆವರಣವನ್ನು ಪ್ರವೇಶಿಸಬಹುದು.

(2) ಸಕ್ಷಮ ಪ್ರಾಧಿಕಾರವು (1)ನೇ ಉಪನಿಯಮದ ಮೇರೆಗೆ ಪ್ರವೇಶಿಸುವ ಉದ್ದೇಶಗಳಿಗಾಗಿ ಯಾವುದೇ ಬೀಗವನ್ನು ಒಡೆದು ತೆಗೆಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಯು ಅಂಥ ವಸ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ನಿರಾಕರಿಸಿದರೆ ಸಾಕ್ಷಿಗಳ ಸಮ್ಮುಖದಲ್ಲಿ ಆವರಣದಲ್ಲಿ ಕಂಡುಬಂದ ಯಾವುವೇ ವಸ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು.

(3) (2)ನೇ ಉಪ-ನಿಯಮದ ಮೇರೆಗೆ ವಸ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಾಗ, ಸಕ್ಷಮ ಪ್ರಾಧಿಕಾರವು ಪ್ರತಿಯೊಂದು ಸಂದರ್ಭದಲ್ಲಿ ನಿಗದಿಪಡಿಸಬಹುದಾದಂಥ ಅಭಿರಕ್ಷೆ ಚಾರ್ಜುಗಳನ್ನು ಸಂದಾಯಮಾಡಿದ ತರುವಾಯ ಸದರಿ ವಸ್ತುಗಳನ್ನು ಸ್ವೀಕರಿಸಲು ಅನುಭೋಗದಾರನಿಗೆ ನೋಟೀಸನ್ನು ಕೊಡತಕ್ಕದ್ದು.

(4) (3)ನೇ ಉಪನಿಯಮದ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಕೊಡಲಾಗಿದೆಯೋ ಆ ವ್ಯಕ್ತಿಯು, ಸ್ವಾಧೀನಕ್ಕೆ ತೆಗೆದುಕೊಳ್ಳಲು ತಪ್ಪಿದರೆ, ಸಕ್ಷಮ ಪ್ರಾಧಿಕಾರವು ಆ ವಸ್ತುಗಳನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಬಹುದು ಮತ್ತು ಅದರಿಂದ ಬಂದ ಉತ್ಪತ್ತಿಯನ್ನು ಸಂಬಂಧಪಟ್ಟ ವ್ಯಕ್ತಿಯ ಲೆಕ್ಕಕ್ಕೆ ಜಮೆಮಾಡಬಹುದು.

**13. ಅನಧಿಕೃತ ಅನುಭೋಗದಿಂದಾದ ಹಾನಿಗಳ ನಿರ್ಧರಣೆ.–** (1) ಮಂಡಲಿಗೆ ಸೇರಿದ ಯಾವುವೇ ಆವರಣಗಳ ಅನಧಿಕೃತ ಅನುಭೋಗದಿಂದಾದ ಹಾನಿಗಳನ್ನು ನಿರ್ಧರಿಸುವಾಗ ಸಕ್ಷಮ ಪ್ರಾಧಿಕಾರವು ಈ ಕೆಳಕಂಡ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು, ಎಂದರೆ:-

(ಎ) ಮಂಡಲಿಯ ಆವರಣಗಳನ್ನು ಯಾವ ಉದ್ದೇಶ ಮತ್ತು ಎಷ್ಟು ಅವಧಿಯವರೆಗೆ ಅನಧಿಕೃತವಾಗಿ ಅನುಭೋಗಿಸಲಾಯಿತೋ ಆ ಉದ್ದೇಶ ಮತ್ತು ಅವಧಿ;

(ಬಿ) ಅಂಥ ಆವರಣದಲ್ಲಿ ಲಭ್ಯವಿರುವ ವಸತಿಯ ಸ್ವರೂಪ, ಗಾತ್ರ ಮತ್ತು ಗುಣಮಟ್ಟ;

(ಸಿ) ಅನಧಿಕೃತ ಅನುಭೋಗದ ಅವಧಿಯಲ್ಲಿ ಆ ಆವರಣವನ್ನು ಬಾಡಿಗೆಗೆ ಕೊಟ್ಟಿದ್ದಿದ್ದರೆ ಪ್ರಾಪ್ತವಾಗಬಹುದಾಗಿದ್ದ ಬಾಡಿಗೆ;

(ಡಿ) ಅನಧಿಕೃತ ಅನುಭೋಗದ ಅವಧಿಯಲ್ಲಿ ಆವರಣಕ್ಕೆ ಉಂಟಾದ ಯಾವುದೇ ಹಾನಿ;

(ಇ) ಹಾನಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದ ಅಭಿಪ್ರಾಯದಲ್ಲಿ ಸುಸಂಗತವಾಗಿರುವ ಯಾವುದೇ ಇತರ ವಿಷಯ.

(2) ಹಾನಿಯನ್ನು ನಿರ್ಧರಿಸುವುದಕ್ಕೆ ಮುಂಚೆ, ಸಕ್ಷಮ ಪ್ರಾಧಿಕಾರವು ಅನಧಿಕೃತ ಅನುಭೋಗದಲ್ಲಿದ್ದ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡತಕ್ಕದ್ದು.

**14. ಲೆಕ್ಕ ಪತ್ರಗಳ ತಯಾರಿಕೆ ಮತ್ತು ನಿರ್ವಹಣೆ.–** [1][(1) ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರಗಳ ಸಂಹಿತೆಯ ಮೇರೆಗೆ ನಿಯಮಿಸಲಾದ ನಮೂನೆಗಳು ಮತ್ತು ರಿಜಿಸ್ಟರುಗಳು, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಷ್ಟು ಮಟ್ಟಿಗೆ ಅವುಗಳನ್ನು ಜಮೀನುಗಳಿಗೆ ಮತ್ತು ಮಂಡಲಿಯು ನಿರ್ಮಿಸಿದ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಮಂಡಲಿಯ ಲೆಕ್ಕಪತ್ರಗಳನ್ನು ನಿರ್ವಹಿಸುವುದಕ್ಕಾಗಿ ಅಂಗೀಕರಿಸತಕ್ಕದ್ದು. ಮಂಡಲಿಯ ಇತರ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಕರ್ನಾಟಕ ಆರ್ಥಿಕ ಸಂಹಿತೆ, 1958ರ ಮತ್ತು ಸಾದಿಲ್ವಾರು ವೆಚ್ಚ ಕೈಪಿಡಿಯ ಮೂಲಕ ನಿಯಮಿಸಲಾದ ನಮೂನೆಗಳು ಮತ್ತು ರಿಜಿಸ್ಟರುಗಳು, ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಷ್ಟು ಮಟ್ಟಿಗೆ ಅವುಗಳನ್ನು ಅಂಗೀಕರಿಸತಕ್ಕದ್ದು.][1]

1. ಜಿಎಸ್ಆರ್ 42, ದಿನಾಂಕ 25/28-1-1978 ಕೆಜಿಡಿ, ದಿನಾಂಕ: 2-2-1978ರ ಮೂಲಕ 14ನೇ ನಿಯಮದ (1)ನೇ ಉಪನಿಯಮವನ್ನು ಪ್ರತಿಯೋಜಿಸಲಾಗಿದೆ.

(2) ಮಂಡಲಿಯು, ತನ್ನ ಜಮೆಗಳು ಮತ್ತು ವೆಚ್ಚದ ವಾರ್ಷಿಕ ತಃಖ್ತೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಸದರಿ ಲೆಕ್ಕಪತ್ರಗಳ ಪ್ರತಿಗಳನ್ನು ಕಾಲಕಾಲಕ್ಕೆ ತಾನು ನಿಗದಿಪಡಿಸಬಹುದಾದಂಥ ದರಗಳಲ್ಲಿ ಮಾರಾಟಕ್ಕೆ ದೊರೆಯುವಂತೆ ಇಡತಕ್ಕದ್ದು.

**15. ಬಾಡಿಗೆಯನ್ನು ನಿಗದಿಪಡಿಸುವುದು.–** (1) 59ನೇ ಪ್ರಕರಣದ ಮೇರೆಗೆ ನೌಕರನಿಗೆ ಮಂಡಲಿಯು ಒದಗಿಸಿದ ವಾಸದ ಮನೆಯ ಬಾಡಿಗೆಯನ್ನು –

(i) ಕಟ್ಟಡದ ಬಂಡವಾಳ ವೆಚ್ಚವನ್ನು ;

(ii) ನಿರ್ವಹಣೆ ವೆಚ್ಚವನ್ನು ;

(iii) ಸಂದಾಯವಾಗಬೇಕಾದ ಪುರಸಭಾ ತೆರಿಗೆಗಳನ್ನು ;

(iv) ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜು ವೆಚ್ಚಗಳನ್ನು ; ಮತ್ತು

(v) ಆವರಣಗಳು ಖಾಲಿಯಾಗಿದ್ದ ಅವಧಿಗಳನ್ನು

– ಗಣನೆಗೆ ತೆಗೆದುಕೊಂಡು ನಿಗದಿಪಡಿಸತಕ್ಕದ್ದು.

(2) ಬಾಡಿಗೆ ದರವನ್ನು ಮಂಡಲಿಯು ಕಾಲಕಾಲಕ್ಕೆ ಪರಿಷ್ಕರಿಸಬಹುದು.

**16. ನಿಯೋಜಕನು ಸಂದಾಯ ಮಾಡಿದ ಬಾಡಿಗೆಗೆ ಸಂಬಂಧಿಸಿದ ರಿಜಿಸ್ಟರುಗಳು.–** (1) ಮಂಡಲಿಯು ಯಾವ ನಿಯೋಜಕನ ನೌಕರರಿಗಾಗಿ ವಾಸದ ಮನೆಗಳನ್ನು ಒದಗಿಸಿದೆಯೋ ಅಂಥ ಪ್ರತಿಯೊಬ್ಬ ನಿಯೋಜಕನು 59ನೇ ಪ್ರಕರಣದ (5)ನೇ ಉಪಪ್ರಕರಣದ (ii)ನೇ ಖಂಡದ ಮೇರೆಗೆ ಮಾಡಲಾದ ಎಲ್ಲಾ ಕಳೆತಗಳ ವಿವರಗಳನ್ನು ತೋರಿಸುವ ಒಂದು ರಿಜಿಸ್ಟರನ್ನು VII ನೇ ನಮೂನೆಯಲ್ಲಿ ಇಡತಕ್ಕದ್ದು.

(2) ಪ್ರತಿ ತಿಂಗಳಿಗೆ ಸಂಬಂಧಿಸಿದಂತೆ ಅಂಥ ರಿಜಿಸ್ಟರುಗಳಲ್ಲಿ ಮಾಡಿದ ನಮೂದುಗಳನ್ನು ಗೃಹನಿರ್ಮಾಣ ಮಂಡಲಿಯ ಅಧಿಕಾರಿಯು ಅಥವಾ ಪರಿಶೀಲಕನು ಸರಿನೋಡತಕ್ಕುದು ಮತ್ತು ಹಾಗೆ ಸರಿನೋಡಿರುವುದಕ್ಕೆ ಸಂಕೇತವಾಗಿ ಅವನು ಅದಕ್ಕೆ ಸಹಿ ಹಾಕತಕ್ಕದ್ದು.

**17. ಬಾಡಿಗೆ ಸಂದಾಯ ಮಾಡುವ ರೀತಿ.–** ಮಂಡಲಿಗೆ ಸಂದಾಯ ಮಾಡುವ ಎಲ್ಲಾ ಬಾಡಿಗೆಗಳನ್ನು ಅಂಚೆ ಮನಿಆರ್ಡರ್, ಚೆಕ್ ಮೂಲಕ ಅಥವಾ ಖಜಾನೆಗೆ ಅಥವಾ ಸಂದಾಯಗಳನ್ನು ಸ್ವೀಕರಿಸಲು ಮಂಡಲಿಯು ಸೂಚಿಸಬಹುದಾದಂಥ ಅಧಿಕೃತವಾದ ಬ್ಯಾಂಕಿಗೆ ಜಮೆಮಾಡುವ ಮೂಲಕ ಮಂಡಲಿಗೆ ಪಾವತಿ ಮಾಡತಕ್ಕದ್ದು

**18. ವಸತಿಯ ಗುಣಮಟ್ಟ.–** (1) ಈ ಅಧಿನಿಯಮದ ಪ್ರಾರಂಭದ ತರುವಾಯ ನಿಯೋಜಕನು ತನ್ನ ನೌಕರರಿಗಾಗಿ ವಾಸದ ಮನೆಗಳನ್ನು ಒದಗಿಸಿದಾಗಲೆಲ್ಲ ಅಂಥ ಪ್ರತಿಯೊಂದು ಕಟ್ಟಡದ ಗಾತ್ರವು VII ನೇ ನಮೂನೆಯಲ್ಲಿ ನಮೂದಿಸಿದ ವಿಶಿಷ್ಟ ವಿವರಣೆಗೆ ಅನುಸಾರವಾಗಿರತಕ್ಕದ್ದು.

(2) ವಾಸದ ಮನೆಗಳನ್ನು ಸಾರ್ವಜನಿಕ ಆರೋಗ್ಯಕ್ಕೆ ಪ್ರತಿಕೂಲವಾದ ಅನೈರ್ಮಲ್ಯ ಪರಿಸ್ಥಿತಿಯಿಂದ ಮುಕ್ತವಾದ ಪ್ರದೇಶದಲ್ಲಿ ಒದಗಿಸತಕ್ಕದ್ದು.

(3) ಕಾರ್ಮಿಕರ ಮನೆಗಳ ಪೈಕಿ ಪ್ರತಿಯೊಂದು ಘಟಕವೂ ಪಯಾಲ್ ಹೊಂದಿರುವ ಮುಂಭಾಗದ ವರಾಂಡ, ಒಂದು ಹಾಲು, ಒಂದು ಮಲಗುವ ಕೋಣೆ, ಒಂದು ಅಡುಗೆ ಮನೆ, ಒಂದು ಸ್ನಾನದ ಕೋಣೆ ಮತ್ತು ಶೌಚಾಲಯ ಇವುಗಳನ್ನು ಒಳಗೊಂಡಿರತಕ್ಕದ್ದು.

(4) ಒದಗಿಸಲಾದ ವಸತಿಯು ಕಾಲಕಾಲಕ್ಕೆ ಮಂಡಲಿಯ ಅಧಿಕಾರಿಗಳ ಪರಿಶೀಲನೆಗೊಳಪಟ್ಟಿರತಕ್ಕದ್ದು ಮತ್ತು ನಿಯೋಜಕನು ಆ ವಸತಿಯ ನಿರ್ವಹಣೆಗೆ ಸಂಬಂಧಿಸಿ ಸದರಿ ಅಧಿಕಾರಿಗಳು ಕೊಡಬಹುದಾದಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**19. ನಿಯೋಜಕರು ಸಲ್ಲಿಸಬೇಕಾದ ರಿಟರ್ನುಗಳು.–** ಪ್ರತಿಯೊಬ್ಬ ನಿಯೋಜಕನು ಮಂಡಲಿಗೆ ಅಥವಾ ಈ ಬಗ್ಗೆ ಮಂಡಲಿಯು ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗೆ ಈ ಕೆಳಕಂಡ ರಿಟರ್ನುಗಳನ್ನು ಒದಗಿಸತಕ್ಕದ್ದು, ಎಂದರೆ:–

(i) ಅವನು ತನ್ನ ನೌಕರರಿಗೆ ಒದಗಿಸಿದ ಮತ್ತು ಮಂಡಲಿಯು ಒಳ್ಳೆಯ ವಾಸಯೋಗ್ಯ ಸ್ಥಿತಿಯಲ್ಲಿರುವುದಾಗಿ ಅನುಮೋದಿಸಿದ ಎಲ್ಲಾ ಮನೆಗಳ ಪಟ್ಟಿ;

(ii) ಯಾವ ನೌಕರರಿಗೆ ವಾಸದ ಮನೆಗಳನ್ನು ಒದಗಿಸಿಲ್ಲವೋ ಆ ನೌಕರರ ಸಂಖ್ಯೆ;

(iii) 59ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಾಡಿಗೆಗೆ ಸಂಬಂಧಪಟ್ಟಂತೆ ತನ್ನ ನೌಕರರ ಮಜೂರಿಗಳಿಂದ ಮಾಡಿದ ಕಳೆತಗಳ ವಿವರಗಳು.

**20. ಮಂಡಲಿಯು ಒದಗಿಸಬೇಕಾದ ರಿಟರ್ನುಗಳು.–** ಮಂಡಲಿಯು ಈ ಕೆಳಕಂಡ ರಿಟರ್ನುಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಎಂದರೆ:–

(i) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ವಿವಿಧ ಗೃಹನಿರ್ಮಾಣ ಯೋಜನೆಗಳ ತ್ರೈಮಾಸಿಕ ಪ್ರಗತಿ ವರದಿಗಳು;

(ii) ವಿವಿಧ ಗೃಹನಿರ್ಮಾಣ ಯೋಜನೆಗಳ ವಾರ್ಷಿಕ ಪ್ರಗತಿಯ ವರದಿಗಳು;

(iii) ಬಾಡಿಗೆ ಮತ್ತು ಸಾಲದ ತಗಾದೆ, ವಸೂಲಿ ಮತ್ತು ಬಾಕಿ;

(iv) ಮಂಡಲಿಯ ನಡವಳಿಕೆಗಳ ಪ್ರತಿಗಳು;

(v) ಜಮೆಗಳು ಮತ್ತು ವೆಚ್ಚಗಳ ವಾರ್ಷಿಕ ತಃಖ್ತೆ.

**21. ವಾರ್ಷಿಕ ತಃಖ್ತೆಯನ್ನು ಪ್ರಕಟಿಸುವುದು.–** ಮಂಡಲಿಯ ಜಮೆಗಳು ಮತ್ತು ವೆಚ್ಚದ ವಾರ್ಷಿಕ ತಃಖ್ತೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

ಸದರಿ ಲೆಕ್ಕಪತ್ರಗಳ ಪ್ರತಿಗಳನ್ನು ಕಾಲಕಾಲಕ್ಕೆ ಮಂಡಲಿಯು ನಿಗದಿಪಡಿಸಬಹುದಾದ ದರಗಳಲ್ಲಿ ಮಾರಾಟ ಮಾಡಲಾಗುವುದು.

**22. ಮಂಡಲಿಯ ರದ್ದಿಯಾತಿ.–** (1) 86ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಡಲಿಯನ್ನು ರದ್ದುಪಡಿಸುವ ಆದೇಶವನ್ನು ಅಂಗೀಕರಿಸುವುದಕ್ಕೆ ಮುಂಚೆ, ಸರ್ಕಾರವು ಮಂಡಲಿಗೆ ಅಹವಾಲು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡತಕ್ಕದ್ದು ಮತ್ತು ಆ ಆದೇಶದಲ್ಲಿ, ಆದೇಶವನ್ನು ಮಾಡಿದ್ದಕ್ಕೆ ಕಾರಣಗಳನ್ನು ಮತ್ತು ರದ್ದಿಯಾತಿಯು ಯಾವ ದಿನಾಂಕದಿಂದ ಜಾರಿಗೆ ಬರತಕ್ಕುದೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ರದ್ದಿಯಾತಿಯ ಆದೇಶದ ಒಂದು ಪ್ರತಿಯನ್ನು ಮಂಡಲಿಯ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಜಾರಿಮಾಡತಕ್ಕದ್ದು.

(3) ರದ್ದಿಯಾತಿಯ ಆದೇಶವನ್ನು ಮಾಡಿದ ತರುವಾಯ ಅಧ್ಯಕ್ಷರು ಮತ್ತು ಮಂಡಳಿಯ ಇತರ ಎಲ್ಲಾ ಸದಸ್ಯರು ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದಿಂದ ತಮ್ಮ ಪದಗಳನ್ನು ತೆರವು ಮಾಡತಕ್ಕದ್ದು.

## ನಮೂನೆ – I

(8ನೇ ನಿಯಮ ನೋಡಿ)

**ಕರ್ನಾಟಕ ಗೃಹ ನಿರ್ಮಾಣ ಮಂಡಳಿ**

........ವರ್ಷದ ಗೃಹನಿರ್ಮಾಣ ಕಾರ್ಯಕ್ರಮ

**I.** ಧನಸಹಾಯ ಘೋಷಿತ ಕೈಗಾರಿಕಾ ಗೃಹ ನಿರ್ಮಾಣ ಯೋಜನೆ

(.............................ಲಕ್ಷಗಳ ರಾಜ್ಯ ಬಜೆಟ್ ಏರ್ಪಾಡು)

**ಎ. ರಾಜ್ಯ ಸರ್ಕಾರದ ಯೋಜನೆಗಳು**

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಮನೆಗಳ ಸಂಖ್ಯೆ | ಅಂದಾಜು ವೆಚ್ಚ | ಹಿಂದಿನ ವರ್ಷದ ಮಾರ್ಚ್ ಕೊನೆಯ ವರೆಗೆ ವಹಿಸಿದ ವೆಚ್ಚ | ಮಂಜೂರಾದ ವೆಚ್ಚದಲ್ಲಿ ಉಳಿದಿರುವ ಶಿಲ್ಕು |
|---|---|---|---|---|---|
| | | | | | |

**ಬಿ. ನಿಯೋಜಕನ ಯೋಜನೆಗಳು**

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಮನೆಗಳ ಸಂಖ್ಯೆ | ಯೋಜನೆಯ ಅಂದಾಜು ವೆಚ್ಚ | ನೆರವು | | | ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗೆ ವಿತರಿಸಲಾದ ನೆರವು |
|---|---|---|---|---|---|---|---|
| | | | | ಸಾಲ | ಸಹಾಯಧನ | ಒಟ್ಟು | |
| | | | | | | | |

ಸಿ. **(ರಾಜ್ಯ ಸರ್ಕಾರದ ವಲಯದಲ್ಲಿ ಮತ್ತು ನಿಯೋಜಕರ ವಲಯದಲ್ಲಿ) ಹೊಸ ಯೋಜನೆಗಳು, ಕಾಲಕ್ರಮದಲ್ಲಿ ವಿವರಗಳನ್ನು ನಿಗದಿಪಡಿಸಲಾಗುವುದು. ಏಕಗಂಟಿನ ಏರ್ಪಾಡು.**

| ಅಗತ್ಯತೆಗಳ ಘೋಷ್ವಾರೆ | **ಹಣಕಾಸು ಸ್ಥಿತಿ** | |
|---|---|---|
| | **ರೂಪಾಯಿ ಲಕ್ಷಗಳಲ್ಲಿ** | |
| ಒಟ್ಟು ಎ | | ಪ್ರಾರಂಭದ ಶಿಲ್ಕು |
| ಒಟ್ಟು ಬಿ | | ಬಜೆಟ್ ಹಂಚಿಕೆ |
| ಒಟ್ಟು ಸಿ | | ಅವಧಿಯಲ್ಲಿ ವೆಚ್ಚಕ್ಕೆ ಲಭ್ಯವಿರುವ ಒಟ್ಟು ನಿಧಿಗಳು |

**II. ಅಲ್ಪ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ**

( ___________ವರ್ಷಕ್ಕೆ ರಾಜ್ಯ ಬಜೆಟ್‌ನಲ್ಲಿ ಏರ್ಪಾಡು)

ಮಂಡಲಿಯ ಪೂರ್ಣಗೊಳ್ಳದ ಕಾಮಗಾರಿಗಳಿಗಾಗಿ ಅಗತ್ಯವಿರುವ ಮೊಬಲಗು

| ಕಾಮಗಾರಿಯ ಹೆಸರು | ಅಂದಾಜು ವೆಚ್ಚ | ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗೆ ಆದ ವೆಚ್ಚ |
|---|---|---|
| | | |

ಪೂರ್ಣಗೊಳ್ಳದ ಕಾಮಗಾರಿಗಳಿಗಾಗಿ ಅಗತ್ಯವಿರುವ ಒಟ್ಟು ಮೊಬಲಗು.

ಪ್ರಸ್ತಾವಿಸಲಾದ ಹೊಸ ಕಾಮಗಾರಿಗಳು

| ಕಾಮಗಾರಿಯ ಹೆಸರು | ಮನೆಗಳ ಸಂಖ್ಯೆ | ಸಂಭವನೀಯ ಖರ್ಚು |
|---|---|---|
| | | |

ಮುಂದುವರೆದದ್ದು

ಅಪೂರ್ಣ ಕಾಮಗಾರಿಗಳನ್ನು ಪೂರ್ಣ
ಗೊಳಿಸಲು ಅಗತ್ಯವಾದ ಮೊಬಲಗು. ——————
ವ್ಯಕ್ತಿಗಳಿಗೆ ಮಂಡಲಿಯು ನೀಡಿದ ನಗದು ಸಾಲಗಳು. ——————
ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗಿನ
ಒಟ್ಟು ಮಂಜೂರಾತಿಗಳು. ——————
ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗಿನ
ಒಟ್ಟು ಸಂದಾಯಗಳು. ——————
ಸ್ಥಳೀಯ ಮಂಡಲಿಗಳಿಗೆ ಸಾಲಗಳು
ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗಿನ
ಒಟ್ಟು ಮಂಜೂರಾತಿ. ——————
ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗಿನ
ಒಟ್ಟು ಸಂದಾಯಗಳು ——————
ಹೊಸ ಪ್ರಕರಣಗಳು
ಹೊಸ ಕಾಮಗಾರಿಗಳು
ವರ್ಷದ ಅವಧಿಯಲ್ಲಿ
ಮಂಜೂರು ಮಾಡಬೇಕಾದ ನಗದು ಸಾಲಗಳು

ಒಟ್ಟು ಜುಮ್ಲಾ

ಪ್ರಾರಂಭದ ಶಿಲ್ಕು :
...............ವರ್ಷಕ್ಕೆ ಹಂಚಿಕೆ :
ವರ್ಷದ ಅವಧಿಯಲ್ಲಿ ವೆಚ್ಚಕ್ಕೆ
ಲಭ್ಯವಿರುವ ಒಟ್ಟು ನಿಧಿಗಳು :

### III ಧನ ಸಹಾಯ ಘೋಷಿತ ಬಾಡಿಗೆ ಗೃಹನಿರ್ಮಾಣ ಯೋಜನೆ

(ಯೋಜನೆಯಿಂದ........................ಲಕ್ಷ ರೂ. ಗಳ ಹಂಚಿಕೆ. ಅಲ್ಪ ವರಮಾನ ಸಮೂಹದ ಗೃಹ ನಿರ್ಮಾಣ ಯೋಜನೆಯ ಮೇರೆಗೆ..........ಲಕ್ಷ ರೂ. ಏರ್ಪಾಡು).

| | **ಮನೆಗಳ ಸಂಖ್ಯೆ** | **ಅಂದಾಜು ವೆಚ್ಚ** | **ವೆಚ್ಚ** |
|---|---|---|---|
| (ಎ) ಅಪೂರ್ಣ ಕಾಮಗಾರಿ | | | |
| (ಬಿ) ಪ್ರಸ್ತಾವಿತ ಕಾಮಗಾರಿ | | | |
| ಅಪೂರ್ಣ ಕಾಮಗಾರಿಗಳಿಗೆ ಅವಶ್ಯ ವಿರುವ ಮೊಬಲಗು<br>ಪ್ರಸ್ತಾವಿತ ಕಾಮಗಾರಿಗಳಿಗೆ ಅವಶ್ಯ ವಿರುವ ಮೊಬಲಗು<br>ಆರ್ಥಿಕ ಸ್ಥಿತಿ,- | | | |
| ಇದ್ದಂತೆ ಪ್ರಾರಂಭದ ಶಿಲ್ಕು ಸ್ಥಿತಿ.<br>.......................ವರ್ಷಕ್ಕೆ ಹಂಚಿಕೆ | | | |
| ವರ್ಷದ ಅವಧಿಯಲ್ಲಿ ವೆಚ್ಚಕ್ಕೆ ಲಭ್ಯವಿರುವ ಒಟ್ಟು ನಿಧಿಗಳು | | | |

## IV. ಮಧ್ಯಮ ವರಮಾನ ಸಮೂಹದ ಗೃಹ ನಿರ್ಮಾಣ ಯೋಜನೆ

(ರಾಜ್ಯ ಬಜೆಟ್ ಏರ್ಪಾಡು.......ಲಕ್ಷ ರೂಪಾಯಿಗಳು)

ಒಪ್ಪಿಕೊಂಡಿರುವುವುಗಳ ಮುಂದುವರಿಕೆ:

(1) ವ್ಯಕ್ತಿಗಳಿಗೆ ನಗದು ಸಾಲಗಳು – –
ಮಂಜೂರಾತಿ
ಸಂದಾಯ

(2) ಸ್ಥಳೀಯ ಸಂಸ್ಥೆಗಳಿಗೆ – –
ಸಾಲಗಳು

(3) ಅಪೂರ್ಣ ಕಾಮಗಾರಿಗಳು: – –

| **ಕ್ರಮ ಸಂಖ್ಯೆ** | **ಸ್ಥಳದ ಹೆಸರು** | **ಮನೆಗಳ ಸಂಖ್ಯೆ** | **ಅಂದಾಜು ವೆಚ್ಚ** | **ಹಿಂದಿನ ವರ್ಷದ ಮಾರ್ಚ್ ಕೊನೆಯವರೆಗೆ ವೆಚ್ಚ** |
|---|---|---|---|---|
| | ಪ್ರಸ್ತಾವಿತ ಹೊಸ ಮಂಜೂರಾತಿಗಳು: | | | |
| (1) | ವ್ಯಕ್ತಿಗಳಿಗೆ ನಗದು ಸಾಲಗಳು (ವಿಲೆಯಾಗಬೇಕಾದ ಅರ್ಜಿಗಳು) | | | |
| (2) | ಸ್ಥಳೀಯ ಸಂಸ್ಥೆಗಳಿಗೆ ನಗದು ಸಾಲ (ವಿಲೆಯಾಗಬೇಕಾದ ಅರ್ಜಿಗಳು) | | | |
| (3) | ಕೈಕೊಳ್ಳಬೇಕಾದ ಹೊಸಕಾಮಗಾರಿಗಳು (ವಿವರಗಳನ್ನು ಕಾಲಕ್ರಮದಲ್ಲಿ ಅಂತಿಮಗೊಳಿಸಲಾಗುವುದು) | | | |

| | ಹಣಕಾಸಿನ ಏರ್ಪಾಡು |
|---|---|
| ಪ್ರಾರಂಭದ ಶಿಲ್ಕು<br>............... ವರ್ಷಕ್ಕೆ ಹಂಚಿಕೆ | |
| | ಬಜೆಟ್ ಏರ್ಪಾಡು |
| ವರ್ಷದ ಅವಧಿಯಲ್ಲಿ ವೆಚ್ಚಕ್ಕೆ ಲಭ್ಯವಿರುವ ಒಟ್ಟು ನಿಧಿಗಳು | |

## V. ಪ್ಲಾಂಟೇಷನ್ ಕಾರ್ಮಿಕರ ಗೃಹನಿರ್ಮಾಣ ಯೋಜನೆ

| ಹಂಚಿಕೆ | ರೂ.ಗಳು | ಲಕ್ಷಗಳು |
|---|---|---|
| ವಾಸ್ತವಿಕ ಗುರಿ | | ಮನೆಗಳು |

## ನಮೂನೆ - II

(8ನೇ ನಿಯಮ ನೋಡಿ)

### ಕರ್ನಾಟಕ ಗೃಹ ನಿರ್ಮಾಣ ಮಂಡಳಿ - ತಃಖ್ತೆ 'ಎ'

..............ರ ವರ್ಷದ ಬಜೆಟ್ ಅಂದಾಜು ಘೋಷ್ವಾರೆ

| ಜಮೆಗಳು | .........ದ ಅಂದಾಜು | ಪ್ರಸಕ್ತ ವರ್ಷಕ್ಕೆ ಪರಿಷ್ಕೃತ ಅಂದಾಜು | ಪ್ರಸಕ್ತ ವರ್ಷದ ಅಂದಾಜು | ಹಿಂದಿನ ವರ್ಷದ ವಾಸ್ತವಿಕ ಅಂಕಿಗಳು | ವೆಚ್ಚ | ಜಮಾ ವರ್ಷದ ಅಂಕಣ ಗಳಂತೆಯೇ ಅಂಕಣ |
|---|---|---|---|---|---|---|
| | ರೂ.ಗಳು | ರೂ.ಗಳು | ರೂ.ಗಳು | ರೂ.ಗಳು | | |
| ಎ. ಸಾಮಾನ್ಯ ಜಮೆಗಳು | | | | | ಆಡಳಿತ ನಿರ್ವಹಣಾ ವೆಚ್ಚ | |
| ಬಿ. ಭೂಮಿ / ಕಟ್ಟಡದ ಮಾರಾಟ ನಿರ್ವಹಣೆ, ದಿಂದ ಬಂದ ಉತ್ಪತ್ತಿ | | | | | ದುರಸ್ತಿಗಳು, ನಿರ್ವಹಣೆ ಇತ್ಯಾದಿಗಳ ವೆಚ್ಚ | |
| ಸಿ. ಋಣಗಳು - ಠೇವಣಿಗಳು ಮುಂಗಡಗಳು | | | | | ಬಂಡವಾಳ ವೆಚ್ಚ | |
| ಡಿ. | | | | | ಋಣಗಳು ಠೇವಣಿಗಳು ಮುಂಗಡಗಳು | |
| ಒಟ್ಟು ಜಮೆ | | | | | ಒಟ್ಟು ವೆಚ್ಚ | |
| ಪ್ರಾರಂಭದ ಶಿಲ್ಕು | | | | | ಮುಕ್ತಾಯದ ಶಿಲ್ಕು | |
| ಒಟ್ಟು ಜುಮ್ಲಾ | | | | | ಒಟ್ಟು ಜುಮ್ಲಾ | |

### ಕರ್ನಾಟಕ ಗೃಹನಿರ್ಮಾಣ ಮಂಡಳಿ

......................ವರ್ಷದ ಬಜೆಟ್ ಅಂದಾಜುಗಳು

ತಃಖ್ತೆ 'ಬಿ' - ಜಮೆಗಳು

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| 1 | 2 | 3 | 4 | 5 |
| **ಎ. ಸಾಮಾನ್ಯ ಜಮೆಗಳು** | | | | |
| 1. ಕಟ್ಟಡಗಳ ಬಾಡಿಗೆ | | | | |
| (ಎ) ಧನಸಹಾಯ ಘೋಷಿತ ಕೈಗಾರಿಕಾ ಗೃಹ ನಿರ್ಮಾಣ ಯೋಜನೆಯ ಮೇರೆಗಿನ ಕಟ್ಟಡಗಳ ಬಾಡಿಗೆ. | | | | |
| (ಬಿ) ಧನಸಹಾಯ ಘೋಷಿತ ಬಾಡಿಗೆ ಗೃಹನಿರ್ಮಾಣ ಯೋಜನೆಯ ಮೇರೆಗಿನ ಕಟ್ಟಡಗಳ ಬಾಡಿಗೆ. | | | | |
| 2. ಸಂಕೀರ್ಣ ಜಮೆಗಳು | | | | |
| 3. (ಎ) ರಾಜ್ಯ ಯೋಜನೆಗಳ ಮೇರೆಗೆ ಧನಸಹಾಯ | | | | |

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| (ಬಿ) ನಿಯೋಜಕರ ಯೋಜನೆ ಮೇರೆಗೆ ಧನಸಹಾಯ (ಧನಸಹಾಯ ಘೋಷಿತ ಕೈಗಾರಿಕಾ ಗೃಹನಿರ್ಮಾಣ ಯೋಜನೆ) | | | | |
| (ಸಿ) ಬಾಡಿಗೆ ಗೃಹ ನಿರ್ಮಾಣ ಯೋಜನೆಯ ಮೇರೆಗಿನ ಧನ ಸಹಾಯ (ಕಡಿಮೆ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ) | | | | |
| 4. ಸರ್ಕಾರದಿಂದ ಅನುದಾನಗಳು<br>(ಎ) ಆಡಳಿತ ನಿರ್ವಹಣಾ ವೆಚ್ಚಗಳಿಗೆ<br>(ಬಿ) ರಾಜ್ಯ ಯೋಜನೆಗಳ ಮೇಲಣ ಹೆಚ್ಚಿನ ವೆಚ್ಚಗಳಿಗೆ | | | | |
| 5. ಸರ್ಕಾರ ಮತ್ತು ಇತರೆ ಮೂಲ ಗಳಿಂದ ಅನುದಾನಗಳು, ದೇಣಿಗೆಗಳು ಮತ್ತು ಕೊಡುಗೆಗಳು | | | | |
| 6. ಹಣ ಹೊಡಿಕೆಗಳ ಮೇಲಣ ಬಡ್ಡಿ | | | | |
| 7. ಮೇಲ್ವಿಚಾರಣಾ ವೆಚ್ಚಗಳು | | | | |
| ಒಟ್ಟು 'ಎ' | | | | |
| **'ಬಿ' ಬಂಡಾವಾಳ ಜಮೆಗಳು** | | | | |
| (ಎ) ಟಿ ಮತ್ತು ಪಿ ಜಮೆಗಳು<br>(ಬಿ) ಭೂಮಿ ಮತ್ತು ಕಟ್ಟಡಗಳ ಮಾರಾಟದಿಂದ ಬಂದ ಉತ್ಪತ್ತಿ | | | | |
| ಒಟ್ಟು 'ಬಿ' | | | | |
| ಸಿ. **ಋಣಗಳು, ಠೇವಣಿಗಳು, ಮುಂಗಡಗಳು** | | | | |
| 1. ಠೇವಣಿಗಳು | | | | |
| 2. (ಎ) ಕಟ್ಟಡಗಳ ನಿರ್ಮಾಣಕ್ಕೆ ಪಕ್ಷಕಾರರಿಂದ ವಂತಿಗೆ (ಧನಸಹಾಯ ಘೋಷಿತ ಕೈಗಾರಿಕಾ ಗೃಹನಿರ್ಮಾಣ ಯೋಜನೆ)<br>(ಬಿ) ಕಟ್ಟಡಗಳ ನಿರ್ಮಾಣಕ್ಕೆ ಪಕ್ಷಕಾರರಿಂದ ವಂತಿಗೆ (ಕಡಿಮೆ ವರಮಾನ ಸಮೂಹದ ಗೃಹ ನಿರ್ಮಾಣ ಯೋಜನೆ.)<br>(ಸಿ)–ಅದೇ–(ಮಧ್ಯಮ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ) | | | | |
| 3. ಸರ್ಕಾರದಿಂದ ಸಾಲಗಳು<br>(ಎ) ಧನಸಹಾಯ ಘೋಷಿತ ಕೈಗಾರಿಕಾ ಗೃಹನಿರ್ಮಾಣ ಯೋಜನೆಗಳಿಗೆ<br>(ಬಿ) ಅದೇ– (ನಿಯೋಜಿತರ ಯೋಜನೆ) | | | | |

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| (ಸಿ) ಕಡಿಮೆ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ (ಧನ ಸಹಾಯ ಘೋಷಿತ ಬಾಡಿಗೆ ಗೃಹನಿರ್ಮಾಣ ಯೋಜನೆ ಸೇರಿ)<br>(ಡಿ) ಪ್ಲಾಂಟೇಷನ್ ಕಾರ್ಮಿಕರ ಗೃಹನಿರ್ಮಾಣ ಯೋಜನೆ. | | | | |
| 4. ಮಧ್ಯಮ ವರಮಾನ ಸಮೂಹದ ಗೃಹನಿರ್ಮಾಣದ ಯೋಜನೆಗೆ ಸರ್ಕಾರದಿಂದ ಸಾಲಗಳು | | | | |
| 5. ಭೂ ಆರ್ಜನಾ ಮತ್ತು ಅಭಿವೃದ್ಧಿ ಯೋಜನೆಯ ಮೇರೆಗೆ ಸರ್ಕಾರದಿಂದ ಸಾಲಗಳು | | | | |
| 6. ಇತರ ಮೂಲಗಳಿಂದ ಸಾಲಗಳು | | | | |
| 7. ಕಡಿಮೆ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ ಮೇರೆಗೆ ನೀಡಲಾದ ಸಾಲಗಳ ಬಗ್ಗೆ ವಸೂಲಿಗಳು.-<br>ಅಸಲು<br>ಬಡ್ಡಿ | | | | |
| 8. ಮಧ್ಯಮ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ ಮೇರೆಗೆ ನೀಡಲಾದ ಸಾಲಗಳ ಬಗ್ಗೆ ವಸೂಲಿಗಳು.-<br>ಅಸಲು<br>ಬಡ್ಡಿ | | | | |
| 9. ಭೂ ಆರ್ಜನೆ ಮತ್ತು ಅಭಿವೃದ್ಧಿ ಯೋಜನೆ ಮೇರೆಗೆ ನೀಡಲಾದ ಸಾಲಗಳ ಬಗ್ಗೆ ವಸೂಲಿಗಳು.-<br>ಅಸಲು<br>ಬಡ್ಡಿ | | | | |
| 10. ನಿಯೋಜಕರ ಯೋಜನೆ ಮೇರೆಗೆ ನೀಡಲಾದ ಸಾಲಗಳ ಬಗ್ಗೆ ವಸೂಲಿಗಳು.-<br>ಅಸಲು<br>ಬಡ್ಡಿ | | | | |
| 11. .............ಮೇರೆಗೆ ನೀಡಲಾದ ಸಾಲಗಳ ಬಗ್ಗೆ ವಸೂಲಿಗಳು.-<br>ಅಸಲು<br>ಬಡ್ಡಿ | | | | |

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| 12. ಅಮಾನತು ಲೆಕ್ಕಗಳು<br>(ಎ) ಸ್ಟಾಕು<br>(ಬಿ) ಮುಂಗಡಗಳು<br>(ಸಿ) ಖರೀದಿಗಳು<br>(ಡಿ) ಉಪಕರಣಗಳು ಮತ್ತು ಸ್ಥಾವರ ಟ್ರ್ಯಾಕ್ಟರ್ ಮತ್ತು ಟ್ರೈಲರ್‌ಗಳು | | | | |
| 13. ಹೂಡಿಕೆಯಿಂದ ವಾಪಸಾತಿಗಳು | | | | |
| ಒಟ್ಟು 'ಸಿ' | | | | |
| ಒಟ್ಟು ಜಮೆಗಳು | | | | |

## ಕರ್ನಾಟಕ ಗೃಹನಿರ್ಮಾಣ ಮಂಡಳಿ

......................ವರ್ಷದ ಬಜೆಟ್ ಅಂದಾಜುಗಳು

ತಃಖ್ತೆ 'ಸಿ' – ವೆಚ್ಚಗಳು

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| 1 | 2 | 3 | 4 | 5 |
| ಎ. ಆಡಳಿತ ನಿರ್ವಹಣಾ ವೆಚ್ಚ | | | | |
| 1.(ಎ) ಅಧಿಕಾರಿಗಳ ಸಂಬಳ<br>(ಬಿ) ಸಿಬ್ಬಂದಿ ವರ್ಗದ ವೇತನ<br>(ಸಿ) ಅಧ್ಯಕ್ಷರಿಗೆ ಭತ್ಯ ಮತ್ತು ಗೌರವಧನ ಭತ್ಯ | | | | |
| 2. ಕಾನೂನು ವೆಚ್ಚಗಳು.–<br>(ಎ) ಕಾನೂನು ಸಲಹೆಗಾರನಿಗೆ ಸಂಭಾವನೆ<br>(ಬಿ) ಇತರೆ ಕಾನೂನು ವೆಚ್ಚಗಳು | | | | |
| 3. ಸಾದಿಲ್ವಾರು ವೆಚ್ಚಗಳು.–<br>(i) ಕಚೇರಿಯ ಸಾದಿಲ್ವಾರು ವೆಚ್ಚ<br>(ii) ಲೇಖನ ಸಾಮಗ್ರಿ ಮತ್ತು ಮುದ್ರಣಾ ವೆಚ್ಚ<br>(iii) ಅಂಚೆ ವೆಚ್ಚ<br>(iv) ಕಟ್ಟಡಗಳ ಬಾಡಿಗೆ<br>(v) ಪೀಠೋಪಕರಣಗಳು ಇತ್ಯಾದಿ<br>(vi) ವ್ಯಾನಿನ ನಿರ್ವಹಣೆ<br>(vii) ವಸ್ತುಪ್ರದರ್ಶನ<br>(viii) ಸಂಕೀರ್ಣ ಮತ್ತು ಅನಿರೀಕ್ಷಿತ ವೆಚ್ಚಗಳು | | | | |
| 4. ವೈದ್ಯಕೀಯ ವೆಚ್ಚಗಳನ್ನು ತುಂಬಿ ಕೊಡುವುದು | | | | |
| 5. ಪ್ರಯಾಣ ಭತ್ಯ | | | | |
| 6. ಲೆಕ್ಕಪರಿಶೋಧನಾ ವೆಚ್ಚಗಳು | | | | |
| 7. ಉಪಕರಣಗಳು ಮತ್ತು ಸ್ಥಾವರಗಳು | | | | |
| ಒಟ್ಟು 'ಎ' ಆಡಳಿತ ನಿರ್ವಹಣಾ ವೆಚ್ಚ | | | | |

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| ಬಿ. ದುರಸ್ತಿ ಮತ್ತು ನಿರ್ವಹಣಾ ವೆಚ್ಚ, ಇತ್ಯಾದಿ<br>(ಎ) ಸಾಮಾನ್ಯ ದುರಸ್ತಿಗಳು<br>(ಬಿ) ವಿಶೇಷ ದುರಸ್ತಿಗಳು<br>(ಸಿ) ದರ ಮತ್ತು ತೆರಿಗೆಗಳು | | | | |
| ಒಟ್ಟು 'ಬಿ' ರಾಜಸ್ವ ವೆಚ್ಚ | | | | |
| ಸಿ. ಬಂಡವಾಳ ವೆಚ್ಚ<br>ಎ ಮತ್ತು ಬಿ ಮೂಲ ಕಾಮಗಾರಿಗಳು ಮತ್ತು ಜಮೀನಿನ ಬೆಲೆ | | | | |
| 1. ಧನಸಹಾಯ ಘೋಷಿತ ಕೈಗಾರಿಕಾ ಗೃಹ ನಿರ್ಮಾಣ ಯೋಜನೆ | | | | |
| 2.(ಎ) ಕಡಿಮೆ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ (ಸಾಮಾನ್ಯ)<br>(ಬಿ) ಧನಸಹಾಯ ಘೋಷಿತ ಬಾಡಿಗೆ ಗೃಹನಿರ್ಮಾಣ ಯೋಜನೆ | | | | |
| 3. ಮಧ್ಯಮ ವರ್ಗದ ವರಮಾನ ಸಮೂಹದ ಗೃಹ ನಿರ್ಮಾಣ ಯೋಜನೆ | | | | |
| 4. ಉಪಕರಣಗಳು ಮತ್ತು ಸ್ಥಾವರಗಳು | | | | |
| ಒಟ್ಟು 'ಸಿ' ಬಂಡವಾಳ ವೆಚ್ಚ | | | | |
| ಡಿ. ಋಣಗಳು, ಠೇವಣಿಗಳು, ಮುಂಗಡಗಳು | | | | |
| 1. ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಸಾಲಗಳು ಮತ್ತು ಮುಂಗಡಗಳು<br>(ಎ) ಕಡಿಮೆ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ ಅಡಿಯಲ್ಲಿ ಸಾಲಗಳು<br>(ಬಿ) ಮಧ್ಯಮ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆಯ ಅಡಿಯಲ್ಲಿ ಸಾಲಗಳು<br>(ಸಿ) ಪ್ಲಾಂಟೇಶನ್ ಕಾರ್ಮಿಕರ ಗೃಹನಿರ್ಮಾಣ ಯೋಜನೆಯ ಅಡಿಯಲ್ಲಿ ಸಾಲಗಳು<br>(ಡಿ) ನಿಯೋಜಕರ ಯೋಜನೆಯ ಅಡಿಯಲ್ಲಿ ಸಾಲಗಳು<br>(ಇ) ಭೂ ಆರ್ಜನಾ ಮತ್ತು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸಾಲಗಳು | | | | |
| 2. ಸರ್ಕಾರದಿಂದ ಪಡೆಯಲಾದ ಸಾಲಗಳ ಮರುಸಂದಾಯ<br>(ಎ) ಧನಸಹಾಯ ಘೋಷಿತ ಕೈಗಾರಿಕಾ ಗೃಹನಿರ್ಮಾಣ ಯೋಜನೆ<br>(ಬಿ) ಕಡಿಮೆ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ<br>ಅಸಲು<br>ಬಡ್ಡಿ<br>(ಸಿ) ಮಧ್ಯಮ ವರಮಾನ ಸಮೂಹದ ಗೃಹನಿರ್ಮಾಣ ಯೋಜನೆ<br>ಅಸಲು<br>ಬಡ್ಡಿ | | | | |

| ಲೆಕ್ಕ ಶೀರ್ಷಿಕೆ | ಬಜೆಟ್ ಅಂದಾಜುಗಳು | ಪರಿಷ್ಕೃತ ಅಂದಾಜುಗಳು | ಬಜೆಟ್ ಅಂದಾಜುಗಳು | ವಾಸ್ತವಿಕ ಅಂಕಿಗಳು |
|---|---|---|---|---|
| (ಡಿ) 'ನಿಯೋಜಿತರ' ಯೋಜನೆಯ ಅಡಿಯಲ್ಲಿನ ಸಾಲದ ಮರುಸಂದಾಯ<br>ಅಸಲು<br>ಬಡ್ಡಿ<br>(ಇ) ಭೂ ಆರ್ಜನೆ ಮತ್ತು ಅಭಿವೃದ್ಧಿ ಯೋಜನೆ ಅಡಿಯಲ್ಲಿನ ಸಾಲದ ಮರುಸಂದಾಯ<br>ಅಸಲು<br>ಬಡ್ಡಿ | | | | |
| 3. ಠೇವಣಿಗಳ ಮರುಪಾವತಿ | | | | |
| 4. ಹೂಡಿಕೆಗಳು | | | | |
| 5. ಅಮಾನತು ಲೆಕ್ಕಗಳು<br>(ಎ) ಸ್ಟಾಕು<br>(ಬಿ) ಮುಂಗಡಗಳು<br>(ಸಿ) ಖರೀದಿಗಳು<br>(ಡಿ) ಉಪಕರಣಗಳು ಮತ್ತು ಸ್ಥಾವರಗಳು (ಟ್ರಾಕ್ಟರ್‌ಗಳು ಮತ್ತು ಟ್ರೈಲರ್‌ಗಳು) | | | | |
| ಬೈಸಿಕಲ್‌ಗಳ ಮುಂಗಡಗಳೂ ಒಳಗೊಂಡಂತೆ ಒಟ್ಟು ವ್ಯವಹಾರಗಳು.-<br>ಮುಂಗಡಗಳು<br>ಅನುದಾನಗಳು<br>ವಸೂಲಿಗಳು | | | | |
| ಒಟ್ಟು 'ಡಿ' ಋಣಗಳು, ಠೇವಣಿಗಳು, ಮುಂಗಡಗಳು | | | | |
| ಒಟ್ಟು ವೆಚ್ಚ | | | | |

## **ನಮೂನೆ - III**

(8 ನೇ ನಿಯಮ ನೋಡಿ)

' ಎ '

——————————ವರ್ಷದ ಬಗ್ಗೆ ಸಿಬ್ಬಂದಿ ವ್ಯವಸ್ಥೆಯ ವಿವರ.

| ಕ್ರಮ ಸಂಖ್ಯೆ | ಪದನಾಮ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ವೇತನ | ವಾಹನ ಭತ್ಯ | ತುಟ್ಟಿ ಭತ್ಯ | ಮನೆಬಾಡಿಗೆ ಭತ್ಯ | ವಿಶೇಷ ವೇತನ |
|---|---|---|---|---|---|---|---|---|
| | | | | | | | | |

'ಬಿ'

**ಅಧಿಕಾರಿಗಳ ವೇತನ ಮತ್ತು ನಿಗದಿತ ಸಾದಿಲ್ವಾರು ವೆಚ್ಚದ ಬಗ್ಗೆ ಪ್ರಸ್ತಾವಿತ ಏರ್ಪಾಡಿನ ತಃಖ್ತೆ**

| ಕ್ರಮ ಸಂಖ್ಯೆ | ಹೆಸರು | ಪದನಾಮ | ಅಂದಾಜು ನಮೂನೆಯ ಪುಟಕ್ಕೆ ಉಲ್ಲೇಖ | ಹುದ್ದೆಗೆ ಮುಂಜೂರಾದ ವೇತನ | | ಮುಂದಿನ ವರ್ಷ ಏಪ್ರಿಲ್ 1ರಂದು ಸರ್ಕಾರಿ ನೌಕರನಿಗೆ ದೊರೆಯಬೇಕಾದ ವಾಸ್ತವಿಕ ವೇತನ | 4(ಸಿ) ಅಂಕಣದಲ್ಲಿನ ದರದಂತೆ ವರ್ಷಕ್ಕೆ ಏರ್ಪಾಡು ಮಾಡಿರುವ ಮೊಬಲಗು |
|---|---|---|---|---|---|---|---|
| | | | | ಕನಿಷ್ಠ | ಗರಿಷ್ಠ | | |
| 1 | 2 | 3 | 4 | 5 | 6 | 7 | 8 |
| | | | | | | | |

| ವರ್ಷದಲ್ಲಿ ಬರಬೇಕಾದ ವೇತನ ಬಡ್ತಿಗಳು | | | ವರ್ಷದ ಒಟ್ಟು ಏರ್ಪಾಡು ಎಂದರೆ 5 ಮತ್ತು 6 ನೇಯ ಅಂಕಣಗಳ ಒಟ್ಟು ಜುಮ್ಲಾ | ಒಂದು ತಿಂಗಳಿಗೆ ನಿಗದಿಪಡಿಸಿದ ಪ್ರಯಾಣ ಭತ್ಯ ಮತ್ತು ವಾಹನ ಭತ್ಯ | ತುಟ್ಟಿ ಭತ್ಯ | ಎಚ್.ಆರ್.ಎ. ಎಸ್.ಎಲ್.ಎ. ಆರ್ ಮತ್ತು ಯು.ಎ. ನೀರಿನ ಭತ್ಯ ಇತ್ಯಾದಿಗಳಂಥ ನಿಗದಿಪಡಿಸಿದ ಭತ್ಯಗಳು (ವಿಶೇಷ ವೇತನ) | ಷರಾ |
|---|---|---|---|---|---|---|---|
| ವೇತನ ಬಡ್ತಿಯ ದಿನಾಂಕ | ವೇತನ ಬಡ್ತಿಯ ದರ | ವರ್ಷದ ವೇತನ ಬಡ್ತಿಯ ಮೊಬಲಗು | | | | | |
| 9 | 10 | 11 | 12 | 13 | 14 | 15 | 16 |
| | | | | | | | |

## [1][ನಮೂನೆ – IV

(11ನೇ ನಿಯಮ ನೋಡಿ)

ಕರ್ನಾಟಕ ಗೃಹನಿರ್ಮಾಣ ಮಂಡಳಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ 45ನೇ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧದ ಮೇರೆಗೆ ಕಾರಣ ತೋರಿಸಿ ನೋಟೀಸಿನ ನಮೂನೆ.

..................................ಜಿಲ್ಲೆಯ........................................... ತಾಲ್ಲೂಕಿನ ..................................ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ/ಕುಮಾರಿ .............................. ಇವರಿಗೆ

(i)* ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಆವರಣಕ್ಕೆ ಸಂಬಂಧಪಟ್ಟಂತೆ ನೀವು ಎರಡು ತಿಂಗಳಿಗಿಂತ ಹೆಚ್ಚಿನ ಅವಧಿಯ ಕಾನೂನು ಸಮ್ಮತವಾಗಿ ಬಾಕಿ ಇರುವ ಬಾಡಿಗೆಯನ್ನು ಸಂದಾಯ ಮಾಡದಿರುವುದರಿಂದ;

(ii)* ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಪೂರ್ಣ ಆವರಣವನ್ನು ಅಥವಾ ಅದರ ಭಾಗವನ್ನು ಮಂಡಲಿಯ ಅನುಮತಿ ಇಲ್ಲದೇ ನೀವು ಒಳ ಬಾಡಿಗೆಗೆ ಕೊಟ್ಟಿರುವುದರಿಂದ;

(iii)* ನೀವು ಆವರಣದ ಅನುಭೋಗವನ್ನು ಕೊನೆಗೊಳಿಸಿರುವುದರಿಂದ ಮತ್ತು ಅದನ್ನು ಹಾಗೆಯೇ ಬಿಟ್ಟುಹೋಗಿರುವುದರಿಂದ;

(iv)* ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಆವರಣವನ್ನು ನೀವು ಅನಧಿಕೃತವಾಗಿ ಅನುಭೋಗಿಸುತ್ತಿರುವುದರಿಂದ;

(v)* ನೀವು..................ಮಾಡಿ, ಆ ಮೂಲಕ ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಆವರಣವನ್ನು ಯಾವ ನಿಬಂಧನೆಗಳ ಪ್ರಕಾರ ಅನುಭೋಗಿಸಲು ಮತ್ತು ಉಪಯೋಗಿಸಲು ನಿಮ್ಮನ್ನು ಅಧಿಕೃತಗೊಳಿಸಲಾಗಿತ್ತೋ ಆ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ

ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗಿನ ಈ ನೋಟೀಸನ್ನು ನೀವು ಸ್ವೀಕರಿಸಿದ ಹತ್ತು ದಿವಸಗಳ ಒಳಗೆ ಈ ಕೆಳಗೆ ಸಹಿ ಮಾಡಿರುವವರಿಗೆ ಸಮಾಧಾನವಾಗುವ ಹಾಗೆ, ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಕೂಡದು ಮತ್ತು ನಿಮ್ಮನ್ನು ಆ ಆವರಣದಿಂದ ಹೊರಹಾಕಲು ನಿಮ್ಮ ವಿರುದ್ಧ ಆದೇಶವನ್ನು ಏಕೆ ಹೊರಡಿಸಕೂಡದು ಎಂಬ ಬಗ್ಗೆ ಕಾರಣ ತೋರಿಸುವಂತೆ ಇದನ್ನು ತಮಗೆ ಜಾರಿ ಮಾಡಲಾಗಿದೆ.

**ಅನುಸೂಚಿ**

ದಿನಾಂಕ

ಸಕ್ಷಮ ಪ್ರಾಧಿಕಾರಿಯ ಸಹಿ.

## ನಮೂನೆ IV - ಎ

(ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 45ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅಂತಿಮ ನೋಟೀಸು.)

ಶ್ರೀ / ಶ್ರೀಮತಿ / ಕುಮಾರಿ.................................................... ಇವರು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಂಡಲಿಯ ಆವರಣಗಳ ಅನಧಿಕೃತ ಅಧಿಭೋಗದಲ್ಲಿದ್ದಾರೆಂದು ಈ ಕೆಳಗೆ ದಾಖಲು ಮಾಡಿರುವ ಕಾರಣಗಳಿಂದ ಈ ಕೆಳಗೆ ಸಹಿಮಾಡಿರುವ ನನಗೆ ಮನವರಿಕೆಯಾಗಿರುವುದರಿಂದ:

ಕಾರಣಗಳು

1.
2.
3.
4.

ಆದುದರಿಂದ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ನಾನು, ಸದರಿ ಶ್ರೀ / ಶ್ರೀಮತಿ / ಕುಮಾರಿ ...................................... ಮತ್ತು ಸದರಿ ಆವರಣದ ಅಥವಾ ಅದರ ಯಾವುದೇ ಭಾಗದ ಅಧಿಭೋಗದಲ್ಲಿರಬಹುದಾದ ಎಲ್ಲ ವ್ಯಕ್ತಿಗಳು ಈ ಆದೇಶವು ಜಾರಿಯಾದ ದಿನಾಂಕದಿಂದ ಒಂದು ತಿಂಗಳೊಳಗೆ ಸದರಿ ಆವರಣಗಳನ್ನು ತೆರವು ಮಾಡತಕ್ಕುದೆಂದು ಈಗ ಈ ಮೂಲಕ ಆದೇಶ ಮಾಡಿದ್ದೇ. ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಸದರಿ ಶ್ರೀ / ಶ್ರೀಮತಿ/ಕುಮಾರಿ ............... ಇವರು ಮತ್ತು ಸಂಬಂಧಪಟ್ಟ ಇತರ ಎಲ್ಲಾ ವ್ಯಕ್ತಿಗಳು, ಅಗತ್ಯವೆಂದು ಕಂಡುಬಂದರೆ ಅವಶ್ಯಕವಾಗಬಹುದಾದಂಥ ಬಲವನ್ನು ಉಪಯೋಗಿಸುವ ಮೂಲಕ ಸದರಿ ಆವರಣದಿಂದ ಹೊರಹಾಕಲ್ಪಡಲು ಬದ್ಧರಾಗತಕ್ಕದ್ದು.

**ಅನುಸೂಚಿ**

ದಿನಾಂಕ: ಸಕ್ಷಮ ಪ್ರಾಧಿಕಾರಿಯ ಸಹಿ ಮತ್ತು ಮೊಹರು][1]

1. ಜಿಎಸ್‌ಆರ್ 322, ದಿನಾಂಕ 18-7-1967 ಕೆಜಿಡಿ ದಿನಾಂಕ 27-7-1967ರ ಮೂಲಕ IV ಮತ್ತು IV-ಎ ನಮೂನೆಗಳನ್ನು ಪ್ರತಿಯೋಜಿಸಲಾಗಿದೆ.

* ಇವುಗಳ ಪೈಕಿ ಯಾವುದು ಅನ್ವಯವಾಗುತ್ತದೋ ಅದನ್ನು ನಿರ್ದಿಷ್ಟಪಡಿಸಬೇಕು.

** ಅನ್ವಯವಾಗದಿದ್ದರೆ ಹೊಡೆದು ಹಾಕಿ.

## ನಮೂನೆ – V

(11 ನೇ ನಿಯಮ ನೋಡಿ)

...................... ಜಿಲ್ಲೆಯ ............................... ತಾಲ್ಲೂಕಿನ .................................. ಇಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ/ ಕುಮಾರಿ ............................................ಇವರಿಗೆ.

ನೀವು ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿರುವ ಆವರಣದ ಅಧಿಭೋಗದಲ್ಲಿರುವುದರಿಂದ.

ಮತ್ತು ಮಂಡಲಿಗೆ ಸದರಿ ಆವರಣಕ್ಕೆ ಸಂಬಂಧಪಟ್ಟಂತೆ ................................................ ದಿನಾಂಕದಿಂದ......................... ರೂ.ಮೊತ್ತದ ಬಾಡಿಗೆ ಬಾಕಿ ಇದ್ದು ಅದನ್ನು ನೀವು ಮಂಡಲಿಗೆ ಸಂದಾಯ ಮಾಡಬೇಕಾಗಿರುವುದರಿಂದ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಅಧಿನಿಯಮ, 1962ರ 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನಾನು ಸದರಿ ಮೊತ್ತವನ್ನು ಈ ನೋಟೀಸು ಜಾರಿಯಾದ ದಿನಾಂಕದಿಂದ (..............................) ಒಳಗೆ ಸಂದಾಯ ಮಾಡಲು ನಿಮಗೆ ಈಗ ಈ ಮೂಲಕ ಆದೇಶಿಸಿದ್ದೇನೆ. ಅದಕ್ಕೆ ತಪ್ಪಿದಲ್ಲಿ, ಸದರಿ ಮೊತ್ತವನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಲಾಗುವುದು.

**ಅನುಸೂಚಿ**

ದಿನಾಂಕ ಸಕ್ಷಮ ಪ್ರಾಧಿಕಾರಿಯ ಸಹಿ

## ನಮೂನೆ – VI

(11 ನೇ ನಿಯಮ ನೋಡಿ)

..................ಜಿಲ್ಲೆಯ ........................................................ ತಾಲ್ಲೂಕಿನ ..............................................
ಇಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ / ಕುಮಾರಿ .......................................................ಇವರಿಗೆ.

ನೀವು, ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಮಂಡಳಿಯ ಆವರಣದ ಅನಧಿಕೃತ ಅಧಿಭೋಗದಲ್ಲಿರುವುದರಿಂದ.

ಮತ್ತು ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ 46ನೇ ಪ್ರಕರಣದ (2)ನೇ ಉಪ-ಪ್ರಕರಣದಿಂದ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ನಾನು, ಸದರಿ ಆವರಣದ ಉಪಯೋಗ ಮತ್ತು ಅಧಿಭೋಗದಿಂದಾಗಿ ನೀವು ಸಂದಾಯ ಮಾಡಬೇಕಾದ ಹಾನಿಯು ........................................................... ರೂಪಾಯಿಗಳಾಗುತ್ತದೆಂದು ನಿರ್ಧರಿಸಿರುವುದಿಂದ ಈ ನೋಟೀಸು ಜಾರಿಯಾದ ದಿನಾಂಕದಿಂದ (..... ) ಒಳಗಾಗಿ ಸದರಿ ಹಾನಿಯ ಮೊಬಲಗನ್ನು ನೀವು ಸಂದಾಯಮಾಡಬೇಕೆಂದು ಈ ಮೂಲಕ ಅಗತ್ಯಪಡಿಸಿದ್ದೇನೆ. ಸದರಿ ಮೊಬಲಗನ್ನು ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂದಾಯ ಮಾಡದಿದ್ದರೆ ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಲಾಗುವುದು.

**ಅನುಸೂಚಿ**

ದಿನಾಂಕ................ ಸಕ್ಷಮ ಪ್ರಾಧಿಕಾರಿಯ ಸಹಿ

## ನಮೂನೆ – VII

(16 ನೇ ನಿಯಮ ನೋಡಿ)

ಬಾಡಿಗೆ ವಸೂಲಿಗೆ ಸಂಬಂಧಪಟ್ಟಂತೆ ನಿಯೋಜಕನು ಮಾಡಿದ ಕಳೆತ

1. ಸಂಬಂಧಪಟ್ಟ ಕೈಗಾರಿಕೆಯ ಹೆಸರು
2. ಇರುವ ಸ್ಥಳ
3. ಅಂಚೆ ವಿಳಾಸ
4. ಕೈಗಾರಿಕೆಯ ಸ್ವರೂಪ
5. ತಿಂಗಳು

| ಕ್ರಮ ಸಂಖ್ಯೆ | ನೌಕರನ ಹೆಸರು | ತಂದೆಯ ಹೆಸರು | ಟೋಕನ್ ಸಂಖ್ಯೆ ಮತ್ತು ಠೇವಣಿ | ಮಜೂರಿ ಮೊಬಲಗು | ಮಾಡಿದ ಕಳೆತ | ಯಾವ ಅವಧಿಗೆ ಕಳೆತ ಮಾಡ ಲಾಗಿದೆಯೋ ಆ ಅವಧಿ | ನಿಯೋಜಕನ ರುಜು | ಪರಿಶೀಲನೆ ಮಾಡಿದ ಬಗ್ಗೆ ಅಧಿಕಾರಿಯ ರುಜು |
|---|---|---|---|---|---|---|---|---|
| | | | | | | | | |

## ನಮೂನೆ – VIII

(18 ನೇ ನಿಯಮ ನೋಡಿ)

**ವಿವಿಧ ವರಮಾನ ಸಮೂಹಗಳ ಮನೆಗಳ ಬಗ್ಗೆ ಕಟ್ಟಡಗಳ ಮಾದರಿಗಳ ವಿವರಗಳನ್ನು ತೋರಿಸುವ ತಃಖ್ತೆ**

| ವಿವರಗಳು | 250 ರೂಪಾಯಿಗಳವರೆಗೆ | ವರಮಾನ | ರೂ. 251 ರಿಂದ 350 ರವರೆಗೆ |
|---|---|---|---|
| 1. ಕಟ್ಟಡ ಪ್ರದೇಶ<br>2. ನಿವೇಶನದ ಅಳತೆ | 320 ಚದರ ಅಡಿ<br>25’ X 40’ | | 450 ಚದರ ಅಡಿ<br>25’ X 45’ |

[ಸಂಖ್ಯೆ ಪಿಎಚ್‌ಎಸ್ 51 ಪಿಎಚ್‌ಬಿ 63 (1)]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಖಾದರ್ ಮೊಹಿದ್ದೀನ್,**
ಸರ್ಕಾರದ ಅಧೀನ ಕಾರ್ಯದರ್ಶಿ.

## [1][ಕರ್ನಾಟಕ ಗೃಹನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1967

1. ಕರ್ನಾಟಕ ರಾಜ್ಯಪತ್ರ ದಿನಾಂಕ: 27.7.1967 ರಲ್ಲಿ ಅಧಿಸೂಚನೆ ಸಂಖ್ಯೆ ಡಿಪಿಸಿ 97 ಡಿಎಚ್‌ಬಿ 66, ದಿನಾಂಕ: 18.7.1967ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 322.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) ರ 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ಕ್ಕೆ ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ ಮತ್ತು ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಅದರ ಕರಡನ್ನು ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 71, ದಿನಾಂಕ 24ನೇ ಜನವರಿ 1967ರ ಕರ್ನಾಟಕ ರಾಜ್ಯಪತ್ರದ ಭಾಗ IV, ವಿಭಾಗ 2ಸಿ (i), ದಿನಾಂಕ 9ನೇ ಫೆಬ್ರವರಿ 1967 ರಲ್ಲಿ ಪ್ರಕಟಿಸಲಾಗಿತ್ತು, ಎಂದರೆ:–

**1. ಹೆಸರು.–** ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು ಎಂದು ಕರೆಯತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ 3ನೇ ನಿಯಮದಲ್ಲಿ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) (2)ನೇ ಉಪನಿಯಮಕ್ಕೆ ಈ ಮುಂದಿನ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಮಂಡಲಿಯ ಒಬ್ಬ ಸದಸ್ಯನು, ಉಪವೇಶನದ ಪ್ರತಿದಿನಕ್ಕೆ ರೂಪಾಯಿ ಇಪ್ಪತ್ತು ಮಾತ್ರ ಉಪವೇಶನ ಶುಲ್ಕವನ್ನು ಮತ್ತು ಮಂಡಲಿಯ ವ್ಯವಹಾರದ ಸಂಬಂಧದಲ್ಲಿ ಒಂದು ಸ್ಥಳದಲ್ಲಿ ಅವನು ಹಾಜರಾಗುವುದು ಅಗತ್ಯವಾಗಿರುವಾಗ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ 'ಎ' ಅನುಬಂಧದ 'ಎ' ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ದರಗಳಲ್ಲಿ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಯಾವ ಸದಸ್ಯನ ಸಾಮಾನ್ಯ ವಾಸಸ್ಥಳವು ಅವನು ಹಾಜರಾಗುವುದು ಅಗತ್ಯವಾಗಿರುವಂಥ ಸ್ಥಳದ ಪುರಸಭಾ ಅಥವಾ ಪಂಚಾಯತ್ ಪರಿಮಿತಿಯೊಳಗೆ ಇದ್ದರೆ, ಅವನು ಮಂಡಲಿಯ ವ್ಯವಹಾರಗಳಿಗೆ ಹಾಜರಾಗುವುದಕ್ಕಾಗಿ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಪಡೆಯತಕ್ಕದ್ದಲ್ಲ:

ಮತ್ತೂ ಪರಂತು, ಯಾರೇ ಸದಸ್ಯನು ಅದೇ ದಿನಕ್ಕೆ ದಿನಭತ್ಯ ಮತ್ತು ಉಪವೇಶನ ಭತ್ಯೆ ಇವೆರಡನ್ನೂ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**3. 11ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳಲ್ಲಿ 11ನೇ ನಿಯಮಕ್ಕೆ ಈ ಮುಂದಿನ ನಿಯಮವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

**"11. ನೋಟೀಸುಗಳು.–** (1) 45ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗಿನ ಷೋಕಾಸ್ ನೋಟೀಸು IVನೇ ನಮೂನೆಯಲ್ಲಿರತಕ್ಕದ್ದು.

(2) 45ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅಂತಿಮ ನೋಟೀಸು IV–ಎ ನಮೂನೆಯಲ್ಲಿರತಕ್ಕದ್ದು.

(3) 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸು Vನೇ ನಮೂನೆಯಲ್ಲಿರತಕ್ಕದ್ದು.

(4) 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸು VIನೇ ನಮೂನೆಯಲ್ಲಿರತಕ್ಕದ್ದು.

**4. ಹೊಸ ನಿಯಮ 11ಎ ಸೇರ್ಪಡೆ.–** ಸದರಿ ನಿಯಮಗಳಲ್ಲಿ 11ನೇ ನಿಯಮದ ತರುವಾಯ ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

**"11ಎ. ಅಪೀಲುಗಳಲ್ಲಿನ ಪ್ರಕ್ರಿಯೆ.–** (1) ಅಧಿನಿಯಮದ 48ನೇ ಪ್ರಕರಣದ ಮೇರೆಗೆ ಸಲ್ಲಿಸುವ ಅಪೀಲು ಬರವಣಿಗೆಯಲ್ಲಿರತಕ್ಕದ್ದು ಮತ್ತು ಅದರಲ್ಲಿ ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶಕ್ಕೆ ಮಾಡಿದ ಆಕ್ಷೇಪಣೆಯ ಕಾರಣಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿರತಕ್ಕದ್ದು ಮತ್ತು ಅದಕ್ಕೆ ಅಂಥ ಆದೇಶದ ಒಂದು ಪ್ರತಿಯನ್ನು ಲಗತ್ತಿಸಿರತಕ್ಕದ್ದು.

(2) ಅಪೀಲನ್ನು ಸ್ವೀಕರಿಸಿದ ತರುವಾಯ ಮತ್ತು ಸಕ್ಷಮ ಪ್ರಾಧಿಕಾರದ ಸಮ್ಮುಖದಲ್ಲಿ ನಡೆದ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಂಡು ಪರಿಶೀಲಿಸಿದ ತರುವಾಯ ಅಪೀಲು ಅಧಿಕಾರಿಯು ಅಪೀಲಿನ ವಿಚಾರಣೆಗಾಗಿ ಸಮಯ ಮತ್ತು ಸ್ಥಳವನ್ನು ಗೊತ್ತುಪಡಿಸತಕ್ಕದ್ದು ಮತ್ತು ಯಾವ ಸಕ್ಷಮ ಪ್ರಾಧಿಕಾರದ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಸಕ್ಷಮ ಪ್ರಾಧಿಕಾರಕ್ಕೆ ಮತ್ತು ಅಪೀಲುದಾರನಿಗೆ ಆ ಬಗ್ಗೆ ನೋಟೀಸು ಕೊಡತಕ್ಕದ್ದು.

**5. ನಮೂನೆ IVರ ತಿದ್ದುಪಡಿ.–** ಸದರಿ ನಿಯಮಗಳಲ್ಲಿ IVನೇ ನಮೂನೆಗೆ ಬದಲಾಗಿ, ಈ ಮುಂದಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

## ನಮೂನೆ – IV

(11ನೇ ನಿಯಮ ನೋಡಿ)

ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ 45ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧದ ಮೇರೆಗೆ "ಷೋಕಾಸ್" ನೋಟೀಸಿನ ನಮೂನೆ.

........................... ಜಿಲ್ಲೆಯ ........................... ತಾಲ್ಲೂಕಿನ ....................... ನಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ/ ಕುಮಾರಿ ........................ ಇವರಿಗೆ

(i) *ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಆವರಣಕ್ಕೆ ಸಂಬಂಧಪಟ್ಟಂತೆ ನೀವು ಎರಡು ತಿಂಗಳಿಗಿಂತ ಹೆಚ್ಚಿನ ಅವಧಿಯ ಕಾನೂನು ಸಮ್ಮತವಾಗಿ ಬಾಕಿ ಇರುವ ಬಾಡಿಗೆಯನ್ನು ಸಂದಾಯ ಮಾಡದಿರುವುದರಿಂದ;

(ii) *ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಪೂರ್ಣ ಆವರಣವನ್ನು ಅಥವಾ ಅದರ ಭಾಗವನ್ನು ಮಂಡಲಿಯ ಅನುಮತಿ ಇಲ್ಲದೇ ನೀವು ಒಳ ಬಾಡಿಗೆಗೆ ಕೊಟ್ಟಿರುವುದರಿಂದ;

(iii) *ನೀವು ಆವರಣದ ಅನುಭೋಗವನ್ನು ಕೊನೆಗೊಳಿಸಿರುವುದರಿಂದ ಮತ್ತು ಅದನ್ನು ಹಾಗೆಯೇ ಬಿಟ್ಟುಹೋಗಿರುವುದರಿಂದ;

(iv) *ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಆವರಣವನ್ನು ನೀವು ಅನಧಿಕೃತವಾಗಿ ಅನುಭೋಗಿಸುತ್ತಿರುವುದರಿಂದ;

(v) *ನೀವು *................. ಮಾಡಿ, ಆ ಮೂಲಕ ಇದಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿದ ಆವರಣವನ್ನು ಯಾವ ನಿಬಂಧನೆಗಳ ಪ್ರಕಾರ ಅನುಭೋಗಿಸಲು ಮತ್ತು ಉಪಯೋಗಿಸಲು ನಿಮ್ಮನ್ನು ಅಧಿಕೃತಗೊಳಿಸಲಾಗಿತ್ತೋ ಆ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ.

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗಿನ ಈ ನೋಟೀಸನ್ನು ನೀವು ಸ್ವೀಕರಿಸಿದ ಹತ್ತು ದಿವಸಗಳ ಒಳಗೆ ಈ ಕೆಳಗೆ ಸಹಿ ಮಾಡಿರುವವರಿಗೆ ಸಮಾಧಾನವಾಗುವ ಹಾಗೆ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಕೂಡದು ಮತ್ತು ನಿಮ್ಮನ್ನು ಆ ಆವರಣದಿಂದ ಹೊರಹಾಕಲು ನಿಮ್ಮ ವಿರುದ್ಧ ಆದೇಶವನ್ನು ಏಕೆ ಹೊರಡಿಸ ಕೂಡದು ಎಂಬ ಬಗ್ಗೆ ಕಾರಣ ತೋರಿಸುವಂತೆ ಇದನ್ನು ತಮಗೆ ಜಾರಿ ಮಾಡಲಾಗಿದೆ.

**ಅನುಸೂಚಿ**

ದಿನಾಂಕ : ಸಕ್ಷಮ ಪ್ರಾಧಿಕಾರಿಯ ಸಹಿ.

---

* ಇವುಗಳ ಪೈಕಿ ಯಾವುದು ಅನ್ವಯವಾಗುತ್ತದೆಯೋ ಅದನ್ನು ನಿರ್ದಿಷ್ಟಪಡಿಸಬೇಕು.

## ನಮೂನೆ IV – ಎ

(ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 45ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂತಿಮ ನೋಟೀಸು.)

ಶ್ರೀ/ ಶ್ರೀಮತಿ/ ಕುಮಾರಿ .................................. ಇವರು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಂಡಲಿಯ ಆವರಣಗಳ ಅನಧಿಕೃತ ಅಧಿಭೋಗದಲ್ಲಿದ್ದಾರೆಂದು ಈ ಕೆಳಗೆ ದಾಖಲು ಮಾಡಿರುವ ಕಾರಣಗಳಿಂದ ಈ ಕೆಳಗೆ ಸಹಿಮಾಡಿರುವ ನನಗೆ ಮನವರಿಕೆಯಾಗಿರುವುದರಿಂದ:

**ಕಾರಣಗಳು:**

1.

2.

3.

4.

ಆದುದರಿಂದ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನಾನು, ಸದರಿ ಶ್ರೀ/ ಶ್ರೀಮತಿ/ ಕುಮಾರಿ ......................................................... ಮತ್ತು ಸದರಿ ಆವರಣದ ಅಥವಾ ಅದರ ಯಾವುದೇ ಭಾಗದ ಅಧಿಭೋಗದಲ್ಲಿರಬಹುದಾದ ಎಲ್ಲ ವ್ಯಕ್ತಿಗಳು ಈ ಆದೇಶವು ಜಾರಿಯಾದ ದಿನಾಂಕದಿಂದ ಒಂದು ತಿಂಗಳೊಳಗೆ ಸದರಿ ಆವರಣಗಳನ್ನು ತೆರವು ಮಾಡತಕ್ಕುದೆಂದು ಈಗ ಈ ಮೂಲಕ ಆದೇಶ ಮಾಡಿದ್ದೇನೆ. ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಸದರಿ ಶ್ರೀ/ ಶ್ರೀಮತಿ/ ಕುಮಾರಿ .................................................. ಇವರು ಮತ್ತು ಸಂಬಂಧಪಟ್ಟ ಇತರ ಎಲ್ಲಾ ವ್ಯಕ್ತಿಗಳು, ಅಗತ್ಯವೆಂದು ಕಂಡುಬಂದರೆ ಅವಶ್ಯಕವಾಗಬಹುದಾದಂಥ ಬಲವನ್ನು ಉಪಯೋಗಿಸುವ ಮೂಲಕ ಸದರಿ ಆವರಣದಿಂದ ಹೊರಹಾಕಲ್ಪಡಲು ಬದ್ಧರಾಗತಕ್ಕದ್ದು.

**ಅನುಸೂಚಿ**

ದಿನಾಂಕ: ಸಕ್ಷಮ ಪ್ರಾಧಿಕಾರಿಯ ಸಹಿ ಮತ್ತು ಮೊಹರು.

---

* ಇವುಗಳ ಪೈಕಿ ಯಾವುದು ಅನ್ವಯವಾಗುತ್ತದೆಯೋ ಅದನ್ನು ನಿರ್ದಿಷ್ಟಪಡಿಸಬೇಕು.

** ಯಾವುದು ಅನ್ವಯಿಸುವುದಿಲ್ಲವೋ ಅದನ್ನು ಹೊಡೆದುಹಾಕಿ.

## [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1971

1. ಕರ್ನಾಟಕ ರಾಜ್ಯಪತ್ರ, ದಿನಾಂಕ: 27.2.1971 ರ ವಿಶೇಷ ಸಂಚಿಕೆಯಲ್ಲಿ ಅಧಿಸೂಚನೆ ಸಂ. ಡಿಪಿಸಿ 29 ಡಿಎಚ್‌ಬಿ 71, ದಿನಾಂಕ: 27.2.1971ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 61.**– ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವ ನಿಯಮಗಳ ಒಂದು ಕರಡನ್ನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ 24ನೇ ಫೆಬ್ರವರಿ 1971 ರಂದು ಅಥವಾ ಅದಕ್ಕೆ ಮೊದಲು, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ, 1971ರ ಫೆಬ್ರವರಿ 17ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ, ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 50, ದಿನಾಂಕ 17ನೇ ಫೆಬ್ರವರಿ 1971ರಲ್ಲಿ ಪ್ರಕಟಿಸಿರುವುದರಿಂದ;

ಮತ್ತು, ಸದರಿ ರಾಜ್ಯಪತ್ರವನ್ನು 17ನೇ ಫೆಬ್ರವರಿ 1971 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಿರುವುದರಿಂದ;

ಅಲ್ಲದೆ, ರಾಜ್ಯ ಸರ್ಕಾರವು ಸದರಿ ಕರಡಿಗೆ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) ಪ್ರಕರಣ 74ರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈಗ ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಗೃಹನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1971 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.**– ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ (ಇಲ್ಲಿ ಇನ್ನುಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 3ನೇ ನಿಯಮದಲ್ಲಿ, (ಬಿ) ಖಂಡಕ್ಕೆ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಬಿ) ಅವರು ಸರ್ಕಾರಿ ಅಧಿಕಾರಿಯಾಗಿದ್ದರೆ, ಸಂದರ್ಭಾನುಸಾರ, ರಾಜ್ಯ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಸದಸ್ಯನಾಗಿ ಕಾಲಕಾಲಕ್ಕೆ ಗ್ರಾಹ್ಯವಾಗುವಂಥ ಸಂಬಳ ಮತ್ತು ಭತ್ಯೆಗಳನ್ನು ಪಡೆಯಲು ಅರ್ಹನಾಗತಕ್ಕದ್ದು."

**3. 4ನೇ ನಿಯಮದ ತಿದ್ದುಪಡಿ.**– ಸದರಿ ನಿಯಮಗಳ 4ನೇ ನಿಯಮಕ್ಕೆ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಅಧ್ಯಕ್ಷರು ಸರ್ಕಾರಿ ಅಧಿಕಾರಿಯಾಗಿದ್ದರೆ, ಸಂದರ್ಭಾನುಸಾರ, ರಾಜ್ಯ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಅಧಿಕಾರಿಯಾಗಿ ಅವರಿಗೆ ಕಾಲಕಾಲಕ್ಕೆ ಅನ್ವಯವಾಗುವಂಥ ರೀತಿಯಲ್ಲಿ ಮತ್ತು ಅದೇ ರೀತಿಯ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ರಜೆಗೆ ಹಕ್ಕುಳ್ಳವರಾಗಿರತಕ್ಕದ್ದು."

## [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1972

1. ಕರ್ನಾಟಕ ರಾಜ್ಯಪತ್ರ, ದಿನಾಂಕ 01.03.1973 ರಲ್ಲಿ ಅಧಿಸೂಚನೆ ಸಂಖ್ಯೆ. ಡಿಪಿಸಿ 24 ಡಿಎಚ್‌ಬಿ 72, ದಿನಾಂಕ 17.02.1973 ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 44.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ಕ್ಕೆ ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ. ಸದರಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಅದರ ಕರಡನ್ನು ಕರ್ನಾಟಕ ರಾಜ್ಯಪತ್ರ, ದಿನಾಂಕ 10ನೇ ಆಗಸ್ಟ್ 1972ರ ಭಾಗ IV, ವಿಭಾಗ 2ಸಿ(i) ರಲ್ಲಿ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 279, ದಿನಾಂಕ 17ನೇ ಆಗಸ್ಟ್ 1972ರಲ್ಲಿ ಪ್ರಕಟಿಸಲಾಗಿತ್ತು, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1972 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ 2ನೇ ನಿಯಮದಲ್ಲಿ,–

(i) "ರೂಪಾಯಿ ಇಪ್ಪತ್ತು" ಎಂಬ ಪದಗಳಿಗೆ ಬದಲಾಗಿ "ರೂಪಾಯಿ ನಲವತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು, ಮತ್ತು

(ii) ಎರಡನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ಸದಸ್ಯನು ರೈಲು ಸಂಪರ್ಕ ಹೊಂದಿರುವ ಸ್ಥಳಗಳ ನಡುವೆ ತನ್ನ ಸ್ವಂತ ಕಾರಿನಲ್ಲಿ ರಸ್ತೆ ಪ್ರಯಾಣವನ್ನು ಕೈಗೊಳ್ಳಬಹುದು ಮತ್ತು ಎರಡೂ ಕಡೆಯ ಮಾರ್ಗಕ್ಕೆ ರಸ್ತೆ ಮೈಲೇಜನ್ನು ಕ್ಲೇಮು ಮಾಡಬಹುದು. ಅಂಥ ಪ್ರಯಾಣದ ಸಂಬಂಧದಲ್ಲಿ ಸದಸ್ಯನು, ತಾನು ತನ್ನ ಸ್ವಂತ ಕಾರಿನಲ್ಲಿ ಪ್ರಯಾಣ ಮಾಡಿದ್ದೇನೆಂದು ಪ್ರಮಾಣೀಕರಿಸತಕ್ಕದ್ದು."

## [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1974

1. ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆ, ದಿನಾಂಕ 15.05.1974 ರಲ್ಲಿ ಅಧಿಸೂಚನೆ ಸಂಖ್ಯೆ ಡಿಪಿಸಿ 140 ಡಿಎಚ್‌ಬಿ 74 ದಿನಾಂಕ 14.05.1974ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 150.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಕರಡನ್ನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ಅದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳಿಂದ 13ನೇ ಮೇ 1974 ರಂದು ಅಥವಾ ಅದಕ್ಕೂ ಮುಂಚೆ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ, ಕರ್ನಾಟಕ ರಾಜ್ಯಪತ್ರ, ವಿಶೇಷ ಸಂಚಿಕೆ ಭಾಗ IV, ವಿಭಾಗ 2ಸಿ(i), ದಿನಾಂಕ 8ನೇ ಮೇ, 1974 ರಲ್ಲಿನ ಅಧಿಸೂಚನೆ ಸಂಖ್ಯೆ ಡಿಪಿಸಿ 140 ಡಿಎಚ್‌ಬಿ 74, ದಿನಾಂಕ 8ನೇ ಮೇ 1974ರಲ್ಲಿ ಪ್ರಕಟಿಸಿರುವುದರಿಂದ;

ಮತ್ತು, ಸದರಿ ರಾಜ್ಯಪತ್ರವನ್ನು 8ನೇ ಮೇ 1974 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಿರುವುದರಿಂದ;

ಅಲ್ಲದೆ, ರಾಜ್ಯ ಸರ್ಕಾರವು ಸದರಿ ಕರಡಿಗೆ ಮೇಲೆ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಕರ್ನಾಟಕ ಗೃಹ ನಿರ್ಮಾಣ ಮಂಡಲಿ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈಗ ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1974 ಎಂದು ಕರೆಯತಕ್ಕದ್ದು

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 3ನೇ ನಿಯಮದ (1)ನೇ ಉಪನಿಯಮದ (ಎ) ಖಂಡದ (i)ನೇ ಬಾಬನ್ನು ಬಿಟ್ಟುಬಿಡತಕ್ಕದ್ದು.

**3. 4ನೇ ನಿಯಮವನ್ನು ಬಿಟ್ಟುಬಿಡುವುದು.–** ಸದರಿ ನಿಯಮದ 4ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

## [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1976

1. ಕರ್ನಾಟಕ ರಾಜ್ಯಪತ್ರ, ದಿನಾಂಕ 08.07.1976 ರಲ್ಲಿ ಅಧಿಸೂಚನೆ ಸಂಖ್ಯೆ ಎಫ್‌ಡಿ 133 ಕೆಎಚ್‌ಬಿ 75, ದಿನಾಂಕ 26.06.1976ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 180.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಒಂದು ಕರಡನ್ನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ, 1976ರ ಏಪ್ರಿಲ್ 19 ರಂದು ಅಥವಾ ಅದಕ್ಕೂ ಮೊದಲು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಕೋರಿ ಕರ್ನಾಟಕ ರಾಜ್ಯಪತ್ರ, ಭಾಗ IV, ವಿಭಾಗ 2ಸಿ(i), ದಿನಾಂಕ 25ನೇ ಮಾರ್ಚ್ 1976 ರಲ್ಲಿನ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 96, ಎಫ್‌ಡಿ 133 ಕೆಎಚ್‌ಬಿ 75, ದಿನಾಂಕ 16ನೇ ಮಾರ್ಚ್ 1976ರಲ್ಲಿ ಪ್ರಕಟಿಸಿರುವುದರಿಂದ.

ಮತ್ತು, ಸದರಿ ರಾಜ್ಯಪತ್ರವನ್ನು 25ನೇ ಮಾರ್ಚ್, 1976 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಿರುವುದರಿಂದ;

ಮತ್ತೂ ಅಲ್ಲದೆ, ಸದರಿ ಕರಡಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮುಂದಿನ ನಿಯಮಗಳನ್ನು ಈಗ ಈ ಮೂಲಕ ರಚಿಸಿದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1976 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ 3ನೇ ನಿಯಮದ (2)ನೇ ಉಪನಿಯಮದಲ್ಲಿ "ರೂಪಾಯಿ ನಲವತ್ತು" ಎಂಬ ಪದಗಳಿಗೆ ಬದಲಾಗಿ "ರೂಪಾಯಿ ಎಪ್ಪತ್ತೈದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಿ.ಪಿ. ಮುನಿಯಪ್ಪ,**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಗೃಹ ನಿರ್ಮಾಣ).

## [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1978

1. ಕರ್ನಾಟಕ ರಾಜ್ಯಪತ್ರ, ದಿನಾಂಕ 02.02.1978 ರಲ್ಲಿ ಅಧಿಸೂಚನೆ ಸಂಖ್ಯೆ ಎಚ್‌ಯುಡಿ 159 ಕೆಎಚ್‌ಬಿ 77, ದಿನಾಂಕ 25/28.01.1978ರ ಪುಟ 44 –45 ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 42.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಈ ಮುಂದಿನ ನಿಯಮಗಳ ಕರಡನ್ನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ 1978ರ ಜನವರಿ 5 ರಂದು ಅಥವಾ ಅದಕ್ಕೂ ಮೊದಲು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಕೋರಿ ಅಧಿಸೂಚನೆ ಸಂಖ್ಯೆ. ಜಿಎಸ್‌ಆರ್ 164 (ಎಚ್‌ಯುಡಿ 159 ಕೆಎಚ್‌ಬಿ 77) ದಿನಾಂಕ 8ನೇ ಡಿಸೆಂಬರ್ 1977ರ ಮೂಲಕ ಕರ್ನಾಟಕ ರಾಜ್ಯಪತ್ರ ಭಾಗ IVರ ವಿಭಾಗ 2ಸಿ(i), ದಿನಾಂಕ 8ನೇ ಡಿಸೆಂಬರ್ 1977 ರಲ್ಲಿ ಪ್ರಕಟಿಸಿರುವುದರಿಂದ;

ಮತ್ತು, ಸದರಿ ರಾಜ್ಯಪತ್ರವನ್ನು 1977ರ ಡಿಸೆಂಬರ್ 8 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಿರುವುದರಿಂದ;

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈಗ, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1978 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 7ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂಬುದಾಗಿ ಉಲ್ಲೇಖಿಸಲಾಗಿದೆ) 7ನೇ ನಿಯಮದ (2)ನೇ ಉಪನಿಯಮಕ್ಕೆ ಬದಲಾಗಿ ಈ ಮುಂದಿನ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಮಂಡಲಿಯು ಅಥವಾ ಮಂಡಲಿಯ ಪರವಾಗಿ ಅಥವಾ ಮಂಡಲಿಯ ಹೆಸರಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅಥವಾ ಯಾವುದೇ ಸಾಮಗ್ರಿ ಅಥವಾ ಸರಕುಗಳನ್ನು ಸರಬರಾಜು ಮಾಡುವ ಬಗ್ಗೆ, ಟೆಂಡರುಗಳು ಮತ್ತು ಕರಾರುಗಳ ಸಂಬಂಧದಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯು ನಿಯಮಿಸಿದ ನಿಯಮಗಳನ್ನು ಮತ್ತು

ನಮೂನೆಗಳನ್ನು ಅವು ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟು ಮಟ್ಟಿಗೆ ಅನುಸರಿಸತಕ್ಕದ್ದು."

**3. 14ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳ 14ನೇ ನಿಯಮದ (1)ನೇ ಉಪನಿಯಮಕ್ಕೆ ಬದಲಾಗಿ ಈ ಮುಂದಿನ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರಗಳ ಸಂಹಿತೆಯ ಮೇರೆಗೆ ನಿಯಮಿಸಲಾದ ನಮೂನೆಗಳು ಮತ್ತು ರಿಜಿಸ್ಟರುಗಳು, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟು ಮಟ್ಟಿಗೆ ಅವುಗಳನ್ನು ಜಮೀನುಗಳಿಗೆ ಮತ್ತು ಮಂಡಲಿಯು ನಿರ್ಮಿಸಿದ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಮಂಡಲಿಯ ಲೆಕ್ಕಪತ್ರಗಳನ್ನು ನಿರ್ವಹಿಸುವುದಕ್ಕಾಗಿ ಅಂಗೀಕರಿಸತಕ್ಕದ್ದು. ಮಂಡಲಿಯ ಇತರ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಕರ್ನಾಟಕ ಆರ್ಥಿಕ ಸಂಹಿತೆ, 1958ರ ಮತ್ತು ಸಾದಿಲ್ವಾರು ವೆಚ್ಚ ಕೈಪಿಡಿಯ ಮೂಲಕ ನಿಯಮಿಸಲಾದ ನಮೂನೆಗಳು ಮತ್ತು ರಿಜಿಸ್ಟರುಗಳು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಷ್ಟು ಮಟ್ಟಿಗೆ ಅವುಗಳನ್ನು ಅಂಗೀಕರಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಲ್.ಬಿ. ಮನ್ನಿಕಟ್ಟಿ,**
ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ, (ಗೃಹ ನಿರ್ಮಾಣ).

# [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1978

1. ಕರ್ನಾಟಕ ರಾಜ್ಯಪತ್ರ, ದಿನಾಂಕ 27.04.1978 ರಲ್ಲಿ ಅಧಿಸೂಚನೆ ಸಂಖ್ಯೆ. ಎಚ್‌ಯುಡಿ 119 ಕೆಎಚ್‌ಬಿ 76, ದಿನಾಂಕ 7/12.04.1978ನ್ನು ಪುಟ 1118 ಮತ್ತು 1119ನ್ನು ಪ್ರಕಟಿಸಲಾಗಿದೆ.

**ಎಸ್‌ಓ 1106.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಒಂದು ಕರಡನ್ನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ 1978ರ ಫೆಬ್ರವರಿ 27 ರಂದು ಅಥವಾ ಅದಕ್ಕೂ ಮೊದಲು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಕೋರಿ, 1978ರ ಫೆಬ್ರವರಿ 9ರ ಕರ್ನಾಟಕ ರಾಜ್ಯಪತ್ರ ಭಾಗ IV, ವಿಭಾಗ 2ಸಿ(i), ರಲ್ಲಿನ ಅಧಿಸೂಚನೆ ಸಂಖ್ಯೆ. ಎಚ್‌ಯುಡಿ 119 ಕೆಎಚ್‌ಬಿ 76 ದಿನಾಂಕ 28ನೇ ಜನವರಿ/ 1ನೇ ಫೆಬ್ರವರಿ 1978 ರಲ್ಲಿ ಪ್ರಕಟಿಸಲಾಗಿರುವುದರಿಂದ;

ಮತ್ತು, ಸದರಿ ರಾಜ್ಯಪತ್ರವನ್ನು 9ನೇ ಫೆಬ್ರವರಿ 1978 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಿರುವುದರಿಂದ;

ಮತ್ತೂ ಅಲ್ಲದೆ, ರಾಜ್ಯ ಸರ್ಕಾರವು ಸದರಿ ಕರಡಿಗೆ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈಗ, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1978 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 4ಎ ಹೊಸ ನಿಯಮದ ಸೇರ್ಪಡೆ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ನಿಯಮಗಳು, 1964ರ 4ನೇ ನಿಯಮದ ತರುವಾಯ ಈ ಮುಂದಿನ ನಿಯಮಗಳನ್ನು ಸೇರಿಸತಕ್ಕದ್ದು. ಎಂದರೆ:–

**4ಎ. ಮಂಡಲಿಯ ಅಧಿಕಾರಿಗಳು ಮತ್ತು ನೌಕರರ ನೇಮಕಾತಿ.–** ಮಂಡಲಿಗೆ ಈ ಕೆಳಕಂಡ ಹುದ್ದೆಗಳನ್ನು ನೇಮಕ ಮಾಡುವುದಕ್ಕೆ ಮೊದಲು ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸುವ ಅವಶ್ಯಕತೆ ಇರತಕ್ಕದ್ದು, ಎಂದರೆ:–

| | | | |
|---|---|---|---|
| 1. | ಷರಾಫ್‌ಗಳು; | 7. | ಬಿಲ್ ಕಲೆಕ್ಟರುಗಳು; |
| 2. | ಜವಾನರು; | 8. | ಕಾವಲುಗಾರ; |
| 3. | ಚಾಲಕರು; | 9. | ಮಾಲಿಗಳು; |
| 4. | ದಲಾಯಿತರು; | 10. | ಸ್ವೀಪರ್‌ಗಳು; ಮತ್ತು |
| 5. | ಬೆರಳಚ್ಚುಗಾರರು; | 11. | ಪ್ರತಿನಿಯೋಜನೆಯ ಮೇಲೆ ಸರ್ಕಾರಿ ನೌಕರರ ನೇಮಕಾತಿ. |
| 6. | ಶೀಘ್ರಲಿಪಿಗಾರರು; | | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಯು. ಅನಂತ ಪದ್ಮನಾಭರಾವ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ.

## [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1982

1. ಕರ್ನಾಟಕ ರಾಜ್ಯಪತ್ರ, ವಿಶೇಷ, ದಿನಾಂಕ 30.04.1983 ರಲ್ಲಿ ಅಧಿಸೂಚನೆ ಸಂಖ್ಯೆ ಎಚ್‌ಯುಡಿ 154 ಕೆಎಚ್‌ಬಿ 79, ದಿನಾಂಕ 20.04.1983ನ್ನು ಪ್ರಕಟಿಸಲಾಗಿದೆ.

**ಜಿಎಸ್‌ಆರ್ 103.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 10– ಎ ಪ್ರಕರಣದ (2)ನೇ ಉಪಪ್ರಕರಣದೊಂದಿಗೆ ಓದಲಾದ 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ. ಅದರ ಕರಡನ್ನು, ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, 1981ರ ನವೆಂಬರ್ 13ನೇ ದಿನಾಂಕದ ಕರ್ನಾಟಕ ರಾಜ್ಯಪತ್ರ (ವಿಶೇಷ) ದ ಭಾಗ IV, ವಿಭಾಗ 2ಸಿ(i) ರಲ್ಲಿನ ಅಧಿಸೂಚನೆ ಸಂ. ಜಿಎಸ್‌ಆರ್ 243 ದಿನಾಂಕ: 6ನೇ ನವೆಂಬರ್ 1981ರಲ್ಲಿ ಮತ್ತು ತಿದ್ದೋಲೆ ಸಂಖ್ಯೆ. ಜಿಎಸ್‌ಆರ್ 247 ದಿನಾಂಕ: 13ನೇ ನವೆಂಬರ್ 1981 ರಲ್ಲಿ ತಿದ್ದುಪಡಿಯಾದಂತೆ ಪ್ರಕಟಿಸಲಾಗಿತ್ತು.

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1982 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 5ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ನಿಯಮಗಳು, 1964ರ 5ನೇ ನಿಯಮಕ್ಕೆ (1)ನೇ ಉಪನಿಯಮಕ್ಕೆ (1)ನೇ ಉಪನಿಯಮ ಎಂಬುದಾಗಿ ಪುನಃ ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಪುನಃ ಸಂಖ್ಯೆ ನೀಡಲಾದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪನಿಯಮವನ್ನು ಸೇರಿಸತಕ್ಕದ್ದು, ಎಂದರೆ:

(2) 1957ರ ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಮಂಡಲಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗತಕ್ಕದ್ದು. ನೇಮಕಾತಿ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿಯು, ದಂಡನೆಗಳನ್ನು ವಿಧಿಸುವುದಕ್ಕೆ ಅಧಿಕಾರವುಳ್ಳ ಪ್ರಾಧಿಕಾರಿಯು ಮತ್ತು ಆ ಪ್ರಾಧಿಕಾರಿಯು ವಿಧಿಸಬಹುದಾದ ದಂಡನೆಗಳು ಮತ್ತು ಮಂಡಲಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಿಸಿದ ಅಪೀಲು ಪ್ರಾಧಿಕಾರಿಯು ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿದಂತಿರತಕ್ಕದ್ದು,-

**ಅನುಸೂಚಿ–ಎ**

**ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿಕಾರಿಗಳಿಗೆ ಕೆ.ಸಿ.ಎಸ್. (ಸಿ.ಸಿ. ಮತ್ತು ಎ) ನಿಯಮಗಳು, 1957ರ ನಿಯಮ 8ರ ಮೇರೆಗೆ ದಂಡನೆ ವಿಧಿಸಬಹುದಾದ ಪ್ರಾಧಿಕಾರಿ.**

| | ಹುದ್ದೆಗಳ ವರ್ಗ | ನೇಮಕಾತಿ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿ | ದಂಡಗಳನ್ನು ವಿಧಿಸುವುದಕ್ಕೆ ಅಧಿಕಾರವುಳ್ಳ ಪ್ರಾಧಿಕಾರಿ ಮತ್ತು ಆ ಪ್ರಾಧಿಕಾರಿಯು ವಿಧಿಸಬಹುದಾದ ದಂಡನೆಗಳು | | ಅಪೀಲು ಪ್ರಾಧಿಕಾರಿ |
|---|---|---|---|---|---|
| | | | ಪ್ರಾಧಿಕಾರಿ | ದಂಡನೆಗಳು (ನಿಯಮ 8) | |
| 1 | 2 | 3 | 4 | 5 | 6 |
| 1. | ರೆವಿನ್ಯೂ ಆಫೀಸರ್ ಜನರಲ್ ಅಸಿಸ್ಟೆಂಟ್, ಮ್ಯಾನೇಜರ್‌ಮತ್ತು ಅಧೀಕ್ಷಕರು | ಗೃಹ ನಿರ್ಮಾಣ ಆಯುಕ್ತರು | ಕಾರ್ಯದರ್ಶಿ, ಗೃಹನಿರ್ಮಾಣ ಆಯುಕ್ತರು | (ii) ರಿಂದ (iv) (v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 2. | ಪ್ರಥಮ ದರ್ಜೆ ಗುಮಾಸ್ತರುಗಳು, ಸ್ಟೆನೋಗ್ರಾಫರ್‌ಗಳು, ಇನ್ಸ್‌ಪೆಕ್ಟರ್‌ಗಳು | –ಅದೇ– | –ಅದೇ– | –ಅದೇ– | –ಅದೇ– |
| 3. | ದ್ವಿತೀಯ ದರ್ಜೆ ಗುಮಾಸ್ತರುಗಳು, ಬೆರಳಚ್ಚುಗಾರರು, ಷರಾಫರು, ಟೆಲಿಫೋನ್ ಆಪರೇಟರ್‌ಗಳು, ಬಿಲ್ ಕಲೆಕ್ಟರ್‌ಗಳು, ಇಲೆಕ್ಟ್ರಿಷಿಯನ್‌ಗಳು ಮತ್ತು ಡ್ರೈವರ್‌ಗಳು | –ಅದೇ– | –ಅದೇ– | –ಅದೇ– | –ಅದೇ– |

| 1 | 2 | 3 | 4 | 5 | 6 |
|---|---|---|---|---|---|
| 4. | ಅಟೆಂಡರ್‌ಗಳು, ದಫೇದಾರರು, ಲಿಫ್ಟ್ ಅಟೆಂಡರ್‌ಗಳು, ತೋಟಗಾರರು, ಜವಾನರು, ಕ್ಲೀನರ್‌ಗಳು, ವಾಚ್‌ಮನ್, ಸ್ವೀಪರ್‌ಗಳು, ಬ್ಲೂ ಪ್ರಿಂಟರ್ಸ್. | –ಅದೇ– | –ಅದೇ– | (i) ರಿಂದ (ii) (v) ರಿಂದ (viii) | –ಅದೇ– |

**ವಿಭಾಗೀಯ ಮತ್ತು ಉಪ ವಿಭಾಗೀಯ ಹುದ್ದೆಗಳ ಸಿಬ್ಬಂದಿಗಾಗಿ**

| | | | | | |
|---|---|---|---|---|---|
| 5. | ಪ್ರಥಮ ದರ್ಜೆ ಗುಮಾಸ್ತರುಗಳು, ಸ್ಟೆನೋಗ್ರಾಫರ್‌ಗಳು, ದ್ವಿತೀಯ ದರ್ಜೆ ಗುಮಾಸ್ತರುಗಳು, ಇನ್ಸ್‌ಪೆಕ್ಟರ್, ಬೆರಳಚ್ಚುಗಾರರು, ಡ್ರೈವರ್, ಬಿಲ್ ಕಲೆಕ್ಟರ್‌ಗಳು | ಗೃಹನಿರ್ಮಾಣ ಆಯುಕ್ತರು | ಕಾರ್ಯನಿರ್ವಾಹಕ ಇಂಜಿನಿಯರ್, ಗೃಹ ನಿರ್ಮಾಣ ಆಯುಕ್ತರು | (ii) ರಿಂದ (iv) (v)ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 6. | IVನೇ ವರ್ಗದ ಎಲ್ಲಾ ಹುದ್ದೆ | ಗೃಹನಿರ್ಮಾಣ ಆಯುಕ್ತರು | ಕಾರ್ಯನಿರ್ವಾಹಕ ಇಂಜಿನಿಯರ್, ಗೃಹ ನಿರ್ಮಾಣ ಆಯುಕ್ತರು | (i) ರಿಂದ (iv) (v) ರಿಂದ (vii) | ಗೃಹ ನಿರ್ಮಾಣ ಆಯುಕ್ತರು ಅಧ್ಯಕ್ಷರು |

## ಅನುಸೂಚಿ – ಬಿ

**ಕ.ಗೃ.ಮ.ಗೆ ಎರವಲು ಸೇವೆ ಮೇಲೆ ಬಂದಿರುವ ಅಧಿಕಾರಿಗಳಿಗೆ (ನಾನ್ ಗೆಜೆಟೆಡ್ ಅಧಿಕಾರಿಗಳು) ಕೆ.ಸಿ.ಎಸ್. (ಸಿ.ಸಿ ಮತ್ತು ಎ) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ದಂಡನೆ ವಿಧಿಸಬಹುದಾದ ಪ್ರಾಧಿಕಾರಿ.**

| ಹುದ್ದೆಗಳ ವರ್ಗ | ನೇಮಕಾತಿ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿ | ದಂಡಗಳನ್ನು ವಿಧಿಸುವುದಕ್ಕೆ ಅಧಿಕಾರವುಳ್ಳ ಪ್ರಾಧಿಕಾರಿ ಮತ್ತು ಆ ಪ್ರಾಧಿಕಾರಿಯು ವಿಧಿಸಬಹುದಾದ ದಂಡನೆಗಳು | | ಅಪೀಲು ಪ್ರಾಧಿಕಾರಿ |
|---|---|---|---|---|
| | | ಅಧಿಕಾರಿ | ದಂಡನೆಗಳು (ನಿಯಮ 8) | |
| 1 | 2 | 3 | 4 | 5 |
| 1. ಸಹಾಯಕ ಇಂಜಿನಿಯರ್, ಜೂನಿಯರ್ ಇಂಜಿನಿಯರ್, ಡ್ರಾಫ್ಟ್ಸ್‌ಮನ್, ಟ್ರೇಸರ್‌ಗಳು, (ಪ್ರಧಾನ ಕಚೇರಿಯಲ್ಲಿ) | ಗೃಹ ನಿರ್ಮಾಣ ಆಯುಕ್ತರು | ಕಾರ್ಯದರ್ಶಿ, ಗೃಹನಿರ್ಮಾಣ ಆಯುಕ್ತರು | (ii) ರಿಂದ (iv) (v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |
| 2. ಲೆಕ್ಕಪತ್ರಗಳ ಸೂಪರಿಂಟೆಂಡೆಂಟರ್‌ಗಳು, ತಾಲೂಕು ಶಿರಸ್ತೇದಾರ – ಕಂ – ಸೂಪರಿಂಡೆಂಡೆಂಟ್‌ಗಳು, ಪ್ರಥಮ ದರ್ಜೆ ಗುಮಾಸ್ತ, ಸ್ಟೆನೋಗ್ರಾಫರ್‌ಗಳು, ರೆವಿನ್ಯೂ ಇನ್ಸ್‌ಪೆಕ್ಟರುಗಳು ಮತ್ತು ಸರ್ವೇಯರ್‌ಗಳು | –ಅದೇ– | –ಅದೇ– | –ಅದೇ– | –ಅದೇ– |
| 3. ದ್ವಿತೀಯ ದರ್ಜೆ ಗುಮಾಸ್ತರು | –ಅದೇ– | –ಅದೇ– | –ಅದೇ– | –ಅದೇ– |

| 1 | 2 | 3 | 4 | 5 |
|---|---|---|---|---|
| **ವಿಭಾಗೀಯ ಮತ್ತು ಉಪ ವಿಭಾಗೀಯ ಸಿಬ್ಬಂದಿ ಅಧಿಕಾರಿಗಳಿಗಾಗಿ** | | | | |
| 4. ಸಹಾಯಕ ಇಂಜಿನಿಯರ್, ಜೂನಿಯರ್ ಇಂಜಿನಿಯರ್, ಡ್ರಾಫ್ಟ್ಸ್‌ಮನ್, ಟ್ರೇಸರ್‌ಗಳು, ಪ್ರಥಮ ದರ್ಜೆ ಗುಮಾಸ್ತರುಗಳು, ಸ್ಟೆನೋಗ್ರಾಫರ್‌ಗಳು, ದ್ವಿತೀಯ ದರ್ಜೆ ಗುಮಾಸ್ತರುಗಳು | ಗೃಹನಿರ್ಮಾಣ ಆಯುಕ್ತರು | ಕಾರ್ಯ ನಿರ್ವಾಹಕ ಇಂಜಿನಿಯರ್, ಗೃಹನಿರ್ಮಾಣ ಆಯುಕ್ತರು | (ii) ರಿಂದ (iv) (v) ರಿಂದ (viii) | ಗೃಹ ನಿರ್ಮಾಣ ಆಯುಕ್ತರು, ಅಧ್ಯಕ್ಷರು |

## ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಡಿಬೆಂಚರ್ ಹೊರಡಿಸುವ ಮೂಲಕ ಹಣ ಸಾಲ ಪಡೆಯುವುದು) ನಿಯಮಗಳು, 1967

### ನಿಯಮಗಳ ಅನುಕ್ರಮಣಿಕೆ

**ನಿಯಮಗಳು**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
   (ಎ) ಅಧಿನಿಯಮ
   (ಬಿ) ಡಿಬೆಂಚರ್
3. ಮಂಡಲಿಯು ಹಣ ಸಾಲ ಪಡೆಯುವುದು
4. ಡಿಬೆಂಚರುಗಳನ್ನು ಕಾಯ್ದಿರಿಸುವುದು
5. ಅರ್ಜಿ
6. ಚಂದಾ
7. ಡಿಬೆಂಚರುಗಳ ಮೌಲ್ಯ
8. ಯಾವ ಷರತ್ತುಗಳಿಗೆ ಒಳಪಟ್ಟು ಡಿಬೆಂಚರುಗಳನ್ನು ನೀಡತಕ್ಕುದ್ದು
   ನಮೂನೆ

## [1][ಕರ್ನಾಟಕ ಗೃಹನಿರ್ಮಾಣ ಮಂಡಲಿ (ಡಿಬೆಂಚರ್ ಹೊರಡಿಸುವ ಮೂಲಕ ಹಣ ಸಾಲ ಪಡೆಯುವುದು) ನಿಯಮಗಳು, 1967

**ಜಿ.ಎಸ್.ಆರ್. 549.–** ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಪ್ರಕರಣದ (i)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಈ ಕೆಳಕಂಡ ನಿಯಮಗಳ ಕರಡನ್ನು ಅಧಿಸೂಚನೆ ಸಂಖ್ಯೆ. ಜಿಎಸ್‌ಆರ್ 270, ದಿನಾಂಕ 15ನೇ ಜೂನ್ 1967ರಲ್ಲಿ, 1967ರ ಜೂನ್ 22ನೇ ದಿನಾಂಕ ಕರ್ನಾಟಕ ರಾಜ್ಯಪತ್ರದ ಭಾಗ iv, ವಿಭಾಗ 2-ಸಿ(i) ರಲ್ಲಿ ಪ್ರಕಟಿಸಲಾಗಿದ್ದು ಅವುಗಳನ್ನು ಈ ಮೂಲಕ ರಚಿಸುತ್ತದೆ, ಎಂದರೆ:-

1. 21-12-1967ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಅಧಿಸೂಚನೆ ಸಂಖ್ಯೆ ಡಿಪಿಸಿ 83 ಡಿಎಚ್‌ಬಿ 66 ದಿನಾಂಕ 8-12-1967.

**1. ಹೆಸರು ಮತ್ತು ಪ್ರಾರಂಭ.–** (i) ಈ ನಿಯಮಗಳನ್ನು ಕರ್ನಾಟಕ ಗೃಹನಿರ್ಮಾಣ ಮಂಡಲಿ (ಡಿಬೆಂಚರ್ ಹೊರಡಿಸುವ ಮೂಲಕ ಹಣ ಸಾಲ ಪಡೆಯುವುದು) ನಿಯಮಗಳು, 1967 ಎಂದು ಕರೆಯತಕ್ಕದ್ದು.

(ii) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಅಧಿನಿಯಮ, 1962

(ಬಿ) **"ಡಿಬೆಂಚರು"** ಎಂದರೆ ಸಾಲಪಡೆದ ಹಣಕ್ಕೆ ಮಂಡಳಿಯು ನೀಡಿದ ಭದ್ರತಾ ದಸ್ತಾವೇಜು.

**3. ಮಂಡಳಿಯು ಹಣ ಸಾಲ ಪಡೆಯುವುದು.–** (1) ಮಂಡಲಿಯು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಅಧಿನಿಯಮದ ಉದ್ದೇಶಗಳಿಗಾಗಿ, ಡಿಬೆಂಚರು ಹೊರಡಿಸುವ ಮೂಲಕ ಹಣ ಸಾಲ ಪಡೆಯಬಹುದು.

(2) ಹೊರಡಿಸಬೇಕಾದ ಡಿಬೆಂಚರ್‌ಗಳ ಒಟ್ಟು ಮೊಬಲಗು, ನೀಡಿಕೆ ಬೆಲೆ, ಡಿಬೆಂಚರುಗಳ ನಮೂನೆ ಮತ್ತು ವಾಯಿದೆ ದಿನಾಂಕ ಇವುಗಳನ್ನು ಸರ್ಕಾರದ ಪೂರ್ವಾನುಮೋದನೆ ಪಡೆದು ಕಾಲಕಾಲಕ್ಕೆ ಮಂಡಲಿಯು ನಿರ್ಧರಿಸತಕ್ಕದ್ದು.

(3) ಬಡ್ಡಿದರವು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ದರವಾಗಿರತಕ್ಕದ್ದು.

(4) ಹೊರಡಿಸಿದ ಡಿಬೆಂಚರುಗಳಿಗೆ ಅಸಲಿನ ಮರುಸಂದಾಯ ಮತ್ತು ಬಡ್ಡಿಯ ಸಂದಾಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಖಾತರಿ ನೀಡತಕ್ಕದ್ದು.

(5) ಡಿಬೆಂಚರುಗಳ ವಿಮೋಚನೆಗಾಗಿ ಋಣತೀರಿಕೆ ನಿಧಿಯೊಂದನ್ನು ರಚಿಸತಕ್ಕದ್ದು.

(6) ಈ ಡಿಬೆಂಚರುಗಳನ್ನು ಹಿಂಬರಹ ಮತ್ತು ಬಟವಾಡೆಯ ಮೂಲಕ ವರ್ಗಾವಣೆ ಮಾಡಬಹುದು.

**4. ಡಿಬೆಂಚರುಗಳನ್ನು ಕಾಯ್ದಿರಿಸುವುದು.–** (1) ಮಂಡಳಿಯು ರಾಜ್ಯ ಸರ್ಕಾರದ ಮಂಜೂರಾತಿ ಪಡೆದು ಯಾವುದೇ ನಿರ್ದಿಷ್ಟ ಬ್ಯಾಂಕು ಅಥವಾ ಬ್ಯಾಂಕರ್‌ಗೆ ನೀಡುವುದಕ್ಕಾಗಿ ಡಿಬೆಂಚರ್ ಬಾಂಡುಗಳನ್ನು ಕಾಯ್ದಿರಿಸಬಹುದು.

(2) ಮಂಡಲಿಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ದರದಲ್ಲಿ ಬ್ಯಾಂಕು, ಬ್ರೋಕರಗಳು ಮತ್ತು ಅವರ ಅಧಿಕೃತ ಏಜೆಂಟರಿಗೆ ಅವರು ಅರ್ಜಿ ಸಲ್ಲಿಸಿದ ಮೇಲೆ ಮತ್ತು ಅವರ ಮೂಲಕ ಅವರ ಮೊಹರು ಇರುವ ಅರ್ಜಿಗಳನ್ನು ಸ್ವೀಕರಿಸಿದ ಮೇಲೆ ದಲಾಲಿಯನ್ನು ಸಂದಾಯಮಾಡತಕ್ಕದ್ದು. ಪರಂತು, ಅವರಿಂದ ಸ್ವೀಕರಿಸಲಾದ ಒಟ್ಟು ಚಂದಾ ಹಣವು ಮಂಡಳಿಯು ನಿರ್ಧರಿಸಬಹುದಾದಂಥ ಮೊತ್ತಕ್ಕಿಂತ ಕಡಿಮೆಯಾಗಿರಕೂಡದು.

(3) ಮಂಡಲಿಯು ನಿರ್ಧರಿಸಬಹುದಾದಂಥ ದರಗಳಲ್ಲಿ ಒಪ್ಪಂದ ಮಾಡಿಕೊಂಡ ಕಮಿಷನನ್ನು ಮಂಡಲಿಯು ನಿಗದಿಪಡಿಸಬಹುದಾದ ಕನಿಷ್ಠ ಮೊಬಲಗಿಗೆ ಕಡಿಮೆಯಿಲ್ಲದ ಮೊತ್ತಗಳನ್ನು ಹೂಡಿರುವ ಬ್ಯಾಂಕುಗಳಿಗೆ ಮತ್ತು ದಲ್ಲಾಳಿಗಳಿಗೆ ಸಂದಾಯ ಮಾಡತಕ್ಕದ್ದು.

**5. ಅರ್ಜಿ.–** ಡಿಬೆಂಚರುಗಳ ನೀಡಿಕೆ ಕೋರಿ ಸಲ್ಲಿಸುವ ಅರ್ಜಿಗಳನ್ನು, ಈ ನಿಯಮಗಳಿಗೆ ಲಗತ್ತಿಸಿದ ನಮೂನೆಯಲ್ಲಿ ಮಂಡಲಿಗೆ ಸಲ್ಲಿಸತಕ್ಕದ್ದು.

**6. ಚಂದಾ.–** (1) ಡಿಬೆಂಚರುಗಳಿಗೆ ಚಂದಾಗಳನ್ನು, ಮಂಡಲಿಯ ಅಧ್ಯಕ್ಷನ ಹೆಸರಿಗೆ ಬರೆದ ಚೆಕ್ಕುಗಳು ಅಥವಾ ಡಿಮ್ಯಾಂಡ್ ಡ್ರಾಫ್ಟುಗಳ ಮೂಲಕ ನೀಡಬಹುದು. ಬೆಂಗಳೂರು ನಗರವನ್ನು ಹೊರತುಪಡಿಸಿ, ಇತರ ಸ್ಥಳಗಳಲ್ಲಿರುವ ಬ್ಯಾಂಕುಗಳಲ್ಲಿ ಪಡೆದ ಚೆಕ್ಕುಗಳ ಸಂಬಂಧದಲ್ಲಿ, ಮಂಡಲಿಯು ನಿಗದಿಪಡಿಸಬಹುದಾದ ಕಮಿಷನ್ ಮತ್ತು ಸಂಗ್ರಹಣಾ ಚಾರ್ಜುಗಳನ್ನು ಸಂದಾಯ ಮಾಡತಕ್ಕುದು. ಚಂದಾ ಹಣಗಳು ಪೂರ್ಣವಾಗಿ ಪ್ರಾಪ್ತವಾದ ತರುವಾಯವೇ ಡಿಬೆಂಚರುಗಳನ್ನು ನೀಡತಕ್ಕದ್ದು.

(2) ಚಂದಾ ಹಣಗಳು ನೀಡಬೇಕಾದ ಡಿಬೆಂಚರುಗಳ ಒಟ್ಟು ಮೊಬಲಗಿಗಿಂತ ಹೆಚ್ಚಾಗಿರುವಲ್ಲಿ, ಭಾಗಶಃ ಹಂಚಿಕೆ ಮಾಡಬಹುದು ಮತ್ತು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಂದಾಯ ಮಾಡಿದ ಮೊತ್ತದ ಶಿಲ್ಕನ್ನು ಸಾಧ್ಯವಾದಷ್ಟು ಬೇಗನೆ ಮರುಪಾವತಿ ಮಾಡತಕ್ಕದ್ದು. ಹಾಗೆ ಮರುಪಾವತಿಯಾದ ಮೊಬಲಗುಗಳಿಗೆ ಯಾವುದೇ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದಲ್ಲ. ಹೊರಡಿಸಿದ ಮೊತ್ತಕ್ಕಿಂತ ಅಧಿಕವಾಗಿ ಸ್ವೀಕರಿಸಿದ ಚಂದಾಹಣದ ಪೈಕಿ ಶೇಕಡಾ ಹತ್ತರವರೆಗೆ ತನ್ನಲ್ಲಿ ಉಳಿಸಿಕೊಳ್ಳುವ ಹಕ್ಕನ್ನು ಮಂಡಲಿಯು ಕಾಯ್ದಿರಿಸಿಕೊಳ್ಳಬಹುದು.

**7. ಡಿಬೆಂಚರುಗಳ ಮೌಲ್ಯ.–** ಡಿಬೆಂಚರ್‌ಗಳನ್ನು 100 ರೂ., 500 ರೂ., 1000 ರೂ., 5000 ರೂ., 10,000 ರೂ., 25,000 ರೂ., 50,000 ರೂ ಮತ್ತು 1,00,000 ರೂಪಾಯಿಗಳ ವರ್ಗಗಳಲ್ಲಿ ನೀಡತಕ್ಕದ್ದು.

**8. ಯಾವ ಷರತ್ತುಗಳಿಗೆ ಒಳಪಟ್ಟು ಡಿಬೆಂಚರುಗಳನ್ನು ನೀಡತಕ್ಕದ್ದು.–** (1) ಡಿಬೆಂಚರುಗಳ ಮೇಲಣ ಬಡ್ಡಿಯನ್ನು ಅರ್ಧ ವರ್ಷಕ್ಕೊಮ್ಮೆ ಸಂದಾಯ ಮಾಡತಕ್ಕದ್ದು, ಆ ಬಡ್ಡಿಯು ಆದಾಯ ತೆರಿಗೆ ಸಂದಾಯಕ್ಕೆ ಒಳಪಟ್ಟಿರತಕ್ಕದ್ದು.

(2) ಡಿಬೆಂಚರುಗಳು, ಅವುಗಳಲ್ಲಿ ನಮೂದಿಸಿದ ದಿನಾಂಕದಂದು ಸಮ ಮೌಲ್ಯಕ್ಕೆ ವಿಮೋಚನೀಯವಾಗಿರತಕ್ಕುದು ಮತ್ತು ಅದರ ಧಾರಕನು ಅವಧಿ ಮುಗಿದ ತರುವಾಯ ಒದಗಿಬರುವ ಬಡ್ಡಿಯ ಬಗ್ಗೆ ಮಂಡಲಿಯ ಮೇಲೆ ಯಾವುದೇ ಕ್ಲೇಮನ್ನು ಹೊಂದಿರತಕ್ಕದ್ದಲ್ಲ.

(3) ಹಾನಿಗೊಂಡ ಕಾರಣದಿಂದಾಗಿ ಚಲಾವಣೆಗೆ ಅನರ್ಹವಾದ ಡಿಬೆಂಚರುಗಳನ್ನು ಧಾರಕನು ಹಾನಿಗೊಂಡ ಅಥವಾ ವಿರೂಪಗೊಂಡ ಡಿಬೆಂಚರ್‌ಗಳನ್ನು ಒಪ್ಪಿಸಿ ಸಲ್ಲಿಸಿದ ಕೋರಿಕೆಯ ಮೇಲೆ ಅವುಗಳನ್ನು ಬದಲಾಯಿಸಿಕೊಡತಕ್ಕದ್ದು. ಪರಂತು, ಸಂಖ್ಯೆ, ಮೊಬಲಗು, ಬಡ್ಡಿಯದರ, ದಿನಾಂಕ ಮತ್ತು ಮಂಡಲಿಯ ಅಧ್ಯಕ್ಷ ಮತ್ತು ಸದಸ್ಯನ ಸಹಿಗಳಂಥ ವಾಸ್ತವಿಕತೆ ಮತ್ತು ಗುರುತಿನ ಅಗತ್ಯ ಚಿಹ್ನೆಗಳು ಇನ್ನೂ ಗುರುತಿಸುವಂತೆ ಇರಬೇಕು. ಡಿಬೆಂಚರು ಕಳೆದು ಹೋಗಿರುವ ಅಥವಾ ನಾಶವಾಗಿರುವ ಸಂಗತಿಯು ಮಂಡಲಿಯ ಅಭಿಪ್ರಾಯದಲ್ಲಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ರುಜುವಾತಾಗಿರುವಾಗ ಅವುಗಳಿಗೆ ಬದಲಾಗಿ ಸಹ ಹೊಸ ಡಿಬೆಂಚರುಗಳನ್ನು ನೀಡತಕ್ಕದ್ದು. ಅಂಥ ರುಜುವಾತನ್ನು ಒದಗಿಸದಿದ್ದಾಗ ಅಥವಾ ಹಾನಿಗೊಂಡಿರುವ ಸಂದರ್ಭದಲ್ಲಿ ಡಿಬೆಂಚರುಗಳ ಮೇಲಿನ ಅವಶ್ಯಕ ಚಿಹ್ನೆಗಳನ್ನು ಗುರುತಿಸಲು ಸಾಧ್ಯವಾಗದಿರುವಾಗ ಅಥವಾ ಡಿಬೆಂಚರು ಕಳೆದುಹೋಗಿರುವಾಗ ಅಥವಾ ಅದನ್ನು ಕೈ ತಪ್ಪಿ ಇಟ್ಟಿರುವಾಗ, ಕಳೆದು ಹೋಗಿದೆ ಎಂದು ಅಥವಾ ಗುರುತಿಸಲು ಸಾಧ್ಯವಿಲ್ಲವೆಂದು ಹೇಳಲಾದ ಡಿಬೆಂಚರಿನ ಬಗ್ಗೆ ಕ್ಲೇಮುದಾರನು ಮಂಡಲಿಯು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಜಾಹೀರಾತು ಕೊಟ್ಟಿರುವಲ್ಲಿ ಮತ್ತು ಅದನ್ನು ಇತರ ಯಾವನೇ ವ್ಯಕ್ತಿಯು ಕ್ಲೇಮು ಮಾಡದಿರುವಲ್ಲಿ ಮಾತ್ರ ಹೊಸ ಡಿಬೆಂಚರನ್ನು ನೀಡಬಹುದು.

(4) ಡಿಬೆಂಚರಿನ ಮರು ನೀಡಿಕೆ ಮಾಡುವಾಗ, ಅದೇ ಸಂಖ್ಯೆಯ ಅಡಿಯಲ್ಲಿ ಅಷ್ಟೇ ಮೊಬಲಗಿಗೆ ಮತ್ತು ಅದರ ಮೇಲೆ "ನವೀಕರಿಸಲಾಗಿದೆ" ಎಂಬ ಹೆಚ್ಚಿನ ಪದವನ್ನು ಸೇರಿಸಿ ನೀಡತಕ್ಕದ್ದು. ಹಾಗೆ ನೀಡಲಾದ ಪ್ರತಿಯೊಂದು ನವೀಕೃತ ಡಿಬೆಂಚರಿಗೆ ಒಂದು ರೂಪಾಯಿ ಫೀಜನ್ನು ವಿಧಿಸತಕ್ಕದ್ದು.

**ಅರ್ಜಿಯ ನಮೂನೆ**

**(5ನೇ ನಿಯಮ ನೋಡಿ)**

**ಕರ್ನಾಟಕ ಗೃಹ ನಿರ್ಮಾಣ ಮಂಡಳಿ**

20........................20 .....................................................ರ ವರ್ಷಗಳ ಶೇಕಡಾ ..........................ರ ಡಿಬೆಂಚರ್‌ಗಳನ್ನು ಕೋರಿ ಸಲ್ಲಿಸುವ ಅರ್ಜಿ

ಅಧ್ಯಕ್ಷರು,
ಕರ್ನಾಟಕ ಗೃಹನಿರ್ಮಾಣ ಮಂಡಲಿ,
ಬೆಂಗಳೂರು – ಇವರಿಗೆ

ಮಾನ್ಯರೆ,

20.........................20.....................ವರ್ಷಗಳ ಡಿಬೆಂಚರುಗಳ ನೀಡಿಕೆ ಬಡ್ಡಿ ಶೇಕಡಾ .................ನಂತೆ ನೀಡಿಕೆ ಬೆಲೆ................ರೂ...........................

ನಾನು / ನಾವು ಮೇಲೆ ತಿಳಿಸಿರುವ ನೀಡಿಕೆಯ............................ರೂಪಾಯಿಗಳ ಮುಖಬೆಲೆಯ ಡಿಬೆಂಚರುಗಳನ್ನು ಕೋರಿ ಈ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇನೆ/ವೆ. ಸಲ್ಲಿಸಿದ ಮೊಬಲಗಿಗೆ ಈ ಕೆಳಗೆ ಸೂಚಿಸಿರುವ ವರ್ಗಗಳ ಡಿಬೆಂಚರುಗಳನ್ನು ದಯವಿಟ್ಟು ನೀಡುವುದು.

| ವರ್ಗ | ಬಾಂಡುಗಳ ಸಂಖ್ಯೆ | ಮೊಬಲಗು |
|---|---|---|
| 100 | | |
| 500 | | |
| 1,000 | | |
| 5,000 | | |
| 10,000 | | |
| 25,000 | | |
| 50,000 | | |
| 1,00,000 | | |

ನಾನು / ನಾವು, ಕೋರಿದ ಡಿಬೆಂಚರುಗಳ ಬಗ್ಗೆ...............................ಮೂಲಕ .........................ರೂಪಾಯಿ (.................................ರೂಪಾಯಿಗಳು ಮಾತ್ರ ) ಕಳುಹಿಸುತ್ತಿದ್ದೇನೆ/ವೆ. ಠೇವಣಿಯನ್ನು ಸಂದಾಯ ಮಾಡುತ್ತಿದ್ದೇನೆ/ವೆ.

ನಾನು/ನಾವು ಅದೇ ಮೊಬಲಗಿಗೆ ಅಥವಾ ಅದಕ್ಕಿಂತ ಕಡಿಮೆ ಮೊಬಲಗಿಗೆ ಡಿಬೆಂಚರನ್ನು ಸ್ವೀಕರಿಸುವುದಾಗಿ ಒಪ್ಪಿಕೊಳ್ಳುತ್ತೇನೆ/ವೆ. ಬಡ್ಡಿಯನ್ನು ಈ ಕೆಳಕಂಡ ಸ್ಥಳದಲ್ಲಿ ಸಂದಾಯಮಾಡಬಹುದು.

1. .................................
2. .................................
3. ಬೆಂಗಳೂರಿನಲ್ಲಿರುವ ಅಧ್ಯಕ್ಷನ ಕಚೇರಿಯಲ್ಲಿ (ವಾಯಿದೆ ದಿನಾಂಕಗಳಂದು ಬಾಂಡುಗಳನ್ನು ಹಾಜರುಪಡಿಸಿ)

**ಟಿಪ್ಪಣಿ.–** ಅಗತ್ಯವಿಲ್ಲದ ಭಾಗಗಳನ್ನು ಹೊಡೆದುಹಾಕಿ

ಪೂರ್ಣ ಹೆಸರು/ಹೆಸರುಗಳು
(ಸ್ಪಷ್ಟ ಅಕ್ಷರಗಳಲ್ಲಿ).................................
ಪೂರ್ಣ ವಿಳಾಸ.....................................
....................................................

ತಮ್ಮ ವಿಶ್ವಾಸಿ

ಸಹಿ

**ಟಿಪ್ಪಣಿ.–1.** ಯಾರ ಹೆಸರಿನಲ್ಲಿ ಬಾಂಡುಗಳು ಬೇಕಾಗಿವೆಯೋ ಆ ಹೆಸರನ್ನು ಸ್ಪಷ್ಟ ಅಕ್ಷರಗಳಲ್ಲಿ ನಮೂದಿಸಬೇಕು. ಬಾಂಡುಗಳನ್ನು ಜಂಟಿ ಹೆಸರಿನಲ್ಲಿ ಹೊಂದಿರಬೇಕಾಗಿರುವಲ್ಲಿ, ಆ ಹೆಸರುಗಳನ್ನು ಬರೆಯತಕ್ಕ ಕ್ರಮವನ್ನು ನಮೂದಿಸಬೇಕು. ಸಂಸ್ಥೆಯ ಸಂದರ್ಭದಲ್ಲಿ ಬಾಂಡುಗಳನ್ನು ಸಂಸ್ಥೆಯ ಹೆಸರಿನಲ್ಲೇ ನೀಡಲಾಗುವುದು.

2. ಡಿಬೆಂಚರುಗಳ ಮೇಲಣ ಬಡ್ಡಿಯನ್ನು ಯಾವ ಬ್ಯಾಂಕು ಅಥವಾ ಕಚೇರಿ ಮತ್ತು ಸ್ಥಳದಲ್ಲಿ ಪಡೆಯಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ನಮೂದಿಸಿರಬೇಕು.

## ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವಿನಿಯಮಗಳು, 1983

### ವಿನಿಯಮಗಳ ಅನುಕ್ರಮಣಿಕೆ

**ವಿನಿಯಮಗಳು**


1. ಹೆಸರು
2. ಪರಿಭಾಷೆಗಳು
3. ನಿವೇಶನಗಳನ್ನು / ಮನೆಗಳನ್ನು ಹಂಚಿಕೆಗಾಗಿ ಪ್ರಸ್ತಾವಿಸುವುದು
4. ನಿವೇಶನಗಳ / ಮನೆಗಳ ಮೀಸಲಾತಿ

4ಎ. ಬಿಟ್ಟುಬಿಡಲಾಗಿದೆ

5. ಹಂಚಿಕೆದಾರನು ಗುತ್ತಿಗೆದಾರನಾಗಿರುವುದು
6. ಅರ್ಜಿ
7. ನೋಂದಣಿ ಅರ್ಜಿ
8. ಹಂಚಿಕೆಗಾಗಿ ಅರ್ಹತೆ
9. ಹಂಚಿಕೆಯ ಪ್ರಕ್ರಿಯೆ
10. ನಿವೇಶನಗಳ / ಮನೆಗಳ ಹಂಚಿಕೆಯ ಪ್ರಸ್ತಾವವನ್ನು ಹಿಂತೆಗೆದುಕೊಳ್ಳುವುದು
11. ಬೆಲೆಯ ಪರಿಷ್ಕರಣೆ
12. ಗುತ್ತಿಗೆ ಹಾಗೂ ಮಾರಾಟ ಆಧಾರದ ಮೇಲೆ ಹಂಚಿಕೆ ಮಾಡುವ ಬಗ್ಗೆ ಷರತ್ತುಗಳು
13. ಪೂರ್ತಿಯಾಗಿ ಮಾರಾಟದ ಆಧಾರದ ಮೇಲೆ ಮನೆಗಳ ಹಂಚಿಕೆ
14. 
15. 
16. 


### [1][ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಸಚಿವಾಲಯ

**ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ನಿರ್ಮಿಸಿದ ಮನೆಗಳ ಹಂಚಿಕೆಗೆ ಸಂಬಂಧಿಸಿದ ವಿನಿಯಮಗಳ ಪರಿಷ್ಕರಣೆ**

1. ಕರ್ನಾಟಕ ರಾಜ್ಯಪತ್ರ ಭಾಗ-I, ದಿನಾಂಕ: 14.7.1983 ರ ಪುಟ 259-266 ರಲ್ಲಿ ಪ್ರಕಟಿಸಲಾಗಿದೆ.

**ಓದಲಾಗಿದೆ.–**

1. ಸರ್ಕಾರಿ ಆದೇಶ ಸಂಖ್ಯೆ: ಡಿಪಿಸಿ 91 ಡಿಎಚ್‌ಬಿ 66 ದಿನಾಂಕ: 23ನೇ ಫೆಬ್ರವರಿ 67.
2. ಗೃಹ ನಿರ್ಮಾಣ ಕಮಿಷನರ್, ಕರ್ನಾಟಕ ಗೃಹ ನಿರ್ಮಾಣ ಮಂಡಲಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ ಕೆಎಚ್‌ಬಿ/ಎಡಿಎಂ3/121/82-83, ದಿನಾಂಕ: 18ನೇ ಮಾರ್ಚ್ 1983 ಮತ್ತು ದಿನಾಂಕ: 14ನೇ ಜೂನ್ 1983.

**ಪ್ರಸ್ತಾವನೆ.–**

ಮೇಲಿನ ಉಲ್ಲೇಖ (2) ರಲ್ಲಿ ಓದಲಾದ ಅರೆ ಸರ್ಕಾರಿ ಪತ್ರಗಳಲ್ಲಿ ಗೃಹನಿರ್ಮಾಣ ಕಮಿಷನರ್, ಕರ್ನಾಟಕ ಗೃಹ ನಿರ್ಮಾಣ ಮಂಡಲಿ, ಬೆಂಗಳೂರು, ಇವರು ಪರಿಷ್ಕೃತ ಹಂಚಿಕೆ ವಿನಿಯಮಗಳು, 1983 ಇದನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಟ್ಟಿದ್ದಾರೆ. ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ 76ನೇ ಪ್ರಕರಣದಲ್ಲಿ ಮನೆಗಳು ಮತ್ತು ಆವರಣಗಳ ಹಂಚಿಕೆಯಲ್ಲಿ ಅನುಸರಿಸಬೇಕಾದ ತತ್ವಗಳನ್ನು ಸೂಚಿಸಿ ಆ ಅಧಿನಿಯಮಕ್ಕೆ ಮತ್ತು ಅದರ ಅಡಿಯಲ್ಲಿ ಮಾಡಲಾದ ಯಾವುವೇ ನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಮಂಡಲಿಯು ಕಾಲಕಾಲಕ್ಕೆ ರಚಿಸಬೇಕೆಂದು ಉದ್ದೇಶಿಸಲಾಗಿದೆ.

**ಆದೇಶ ಸಂಖ್ಯೆ: ಎಚ್‌ಯುಡಿ 31 ಎಲ್‌ಐಎಚ್ 77, ಬೆಂಗಳೂರು, ದಿನಾಂಕ: 7ನೇ ಜುಲೈ, 1983**

ಸರ್ಕಾರಿ ಆದೇಶ ಸಂಖ್ಯೆ: ಡಿಪಿಸಿ 91 ಡಿಎಚ್‌ಬಿ 66, ದಿನಾಂಕ 23ನೇ ಫೆಬ್ರವರಿ, 1967 - ಇದನ್ನು ರದ್ದುಪಡಿಸಿ, ಸರ್ಕಾರವು, ಈ ಆದೇಶಕ್ಕೆ ಅನುಬಂಧಿಸಿರುವ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಪರಿಷ್ಕೃತ ಹಂಚಿಕೆ ವಿನಿಯಮಗಳು, 1983 - ಇವುಗಳ ಅಳವಡಿಕೆಗೆ ತನ್ನ ಅನುಮೋದನೆ ತಿಳಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಸುಜಾತ,**

ಸರ್ಕಾರದ ಅಧೀನ ಕಾರ್ಯದರ್ಶಿ,

ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ, ಗೃಹ ನಿರ್ಮಾಣ

**ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಯುಡಿ 31 ಎಲ್‌ಐಹೆಚ್ 77, ದಿನಾಂಕ 7–7–1983 ಇದರ ಪರಿಶಿಷ್ಟ**

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ 76ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಅಸ್ತಿತ್ವದಲ್ಲಿರುವ ಎಲ್ಲಾ ವಿನಿಯಮಗಳನ್ನು ರದ್ದುಪಡಿಸಿ, ಕರ್ನಾಟಕ ಗೃಹನಿರ್ಮಾಣ ಮಂಡಲಿಯು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಈ ಮೂಲಕ ಕೆಳಕಂಡ ವಿನಿಯಮಗಳನ್ನು ರಚಿಸುತ್ತದೆ, ಎಂದರೆ:–

## ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಹಂಚಿಕೆ ವಿನಿಯಮಗಳು, 1983

(ಜಿಓ. ಸಂಖ್ಯೆ. ಹೆಚ್‌ಯುಡಿ 64 ಕೆಹೆಚ್‌ಬಿ 84 ದಿನಾಂಕ 14–8–1984; ಜಿಎಸ್‌ಆರ್ 64 ಕೆಜಿಡಿ ಭಾಗ– IV 2ಸಿ(i) ವಿಶೇಷ ಸಂಖ್ಯೆ 263 ದಿನಾಂಕ 6–4–1994 ರಿಂದ ತಿದ್ದುಪಡಿಯಾದಂತೆ)

**1. ಹೆಸರು.**– ಈ ವಿನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ಹಂಚಿಕೆ) ವಿನಿಯಮಗಳು, 1983 ಎಂದು ಕರೆಯತಕ್ಕದ್ದು.

ಈ ವಿನಿಯಮಗಳು, ಈ ಕೂಡಲೇ ಜಾರಿಗೆ ಬರತಕ್ಕದು.

**2. ಪರಿಭಾಷೆಗಳು.**– ಈ ವಿನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 10);

(ಬಿ) "ಹಂಚಿಕೆ" ಎಂದರೆ ಈ ವಿನಿಯಮಗಳ ಮೇರೆಗೆ ನಿವೇಶನ/ಮನೆಯ ಮಾರಾಟ;

(ಸಿ) "ಹಂಚಿಕೆಪಡೆದವನು" ಎಂದರೆ ಈ ವಿನಿಯಮಗಳ ಮೇರೆಗೆ ಯಾರಿಗೆ ಮನೆಯನ್ನು ಹಂಚಿಕೆಮಾಡಲಾಗಿದೆಯೋ ಆ ವ್ಯಕ್ತಿ ಮತ್ತು ಅದರಲ್ಲಿ ಅಂಥ ಹಂಚಿಕೆ ಪಡೆದವನ ವಾರಸುದಾರರು ಒಳಗೊಳ್ಳುತ್ತಾರೆ ;

(ಡಿ) "ಮಂಡಲಿ" ಎಂದರೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ;

(ಇ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ ;

(ಎಫ್) "ಮನೆ" ಎಂದರೆ ಈ ವಿನಿಯಮಗಳ ಮೇರೆಗೆ ಒಂದು ಘಟಕವಾಗಿ ಅದರ ಭೂಮಿಯೊಂದಿಗೆ ಹಂಚಿಕೆಮಾಡಲು ಸಾಧ್ಯವಿರುವ ಪ್ರತ್ಯೇಕವಾಗಿರುವ, ಅರೆ ಪ್ರತ್ಯೇಕವಾಗಿರುವ ಅಥವಾ ಸಾಲು ಮನೆಗಳ ಒಂದು ಭಾಗವಾಗಿರುವ ವಾಸದ ಘಟಕ ಮತ್ತು ಅದರಲ್ಲಿ ಪ್ಲಾಟು ಸಹ ಒಳಗೊಳ್ಳುತ್ತವೆ;

(ಜಿ) "ನಿವೇಶನಗಳು" ಎಂದರೆ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವ ಅಂಗಡಿ ನಿವೇಶನಗಳು ಮತ್ತು ಕೈಗಾರಿಕಾ ನಿವೇಶನಗಳೂ ಸೇರಿ, ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ, ಕಡಿಮೆ, ಮಧ್ಯಮ ಮತ್ತು ಹೆಚ್ಚಿನ ಆದಾಯ ಗುಂಪುಗಳ ಜನರಿಗೆ ಹಂಚಿಕೆ ಮಾಡುವುದಕ್ಕಾಗಿ ಮಂಡಲಿಯು ನಿರ್ಧರಿಸಿದ ಅಳತೆಗಳಲ್ಲಿ ಬಡಾವಣೆಗಳಲ್ಲಿ ರೂಪಿಸಿದ ನಿವೇಶನಗಳು;

(ಹೆಚ್) "ಆದಾಯ" ಎಂದರೆ ಅರ್ಜಿದಾರನ /ಳ ಮತ್ತು ಅವನ ಹೆಂಡತಿ/ಅವಳ ಗಂಡ ಇವರ ಕುಟುಂಬದ ಒಟ್ಟು ಆದಾಯ ;

(ಐ) "ಆರ್ಥಿಕ ದುರ್ಬಲ ವರ್ಗ ಮತ್ತು ಕಡಿಮೆ ಆದಾಯ ಗುಂಪು" ಎಂದರೆ ಯಾವ ವ್ಯಕ್ತಿ ವರ್ಗದ ವಾರ್ಷಿಕ ಆದಾಯವು ಏಳು ಸಾವಿರದ ಎರಡು ನೂರು ರೂಪಾಯಿಗಳನ್ನು

ಅಥವಾ

ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸಬಹುದಾದಂಥ ವಾರ್ಷಿಕ ಆದಾಯವನ್ನು

– ಮೀರುವುದಿಲ್ಲವೋ ಅಂಥ ವ್ಯಕ್ತಿ ವರ್ಗ ;

(ಕೆ) "ಮಧ್ಯಮ ಆದಾಯ ಗುಂಪು" ಎಂದರೆ ಯಾವ ವ್ಯಕ್ತಿಯ ವರ್ಗದ ವಾರ್ಷಿಕ ಆದಾಯವು 7,200 ರೂಪಾಯಿಗಳಿಗಿಂತ ಹೆಚ್ಚಾಗಿದ್ದು, 18,000 ರೂಪಾಯಿಗಳನ್ನು

ಅಥವಾ

ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸಬಹುದಾದಂಥ ವಾರ್ಷಿಕ ಆದಾಯವನ್ನು

–ಮೀರುವುದಿಲ್ಲವೋ ಅಂಥ ವ್ಯಕ್ತಿ ವರ್ಗ;

(ಎಲ್) "ಹೆಚ್ಚಿನ ಆದಾಯ ಗುಂಪು" ಎಂದರೆ ಯಾವ ವ್ಯಕ್ತಿವರ್ಗದ ವಾರ್ಷಿಕ ಆದಾಯವು 18,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದು, 50,000 ರೂಪಾಯಿಗಳನ್ನು

ಅಥವಾ

ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸಬಹುದಾದಂಥ ವಾರ್ಷಿಕ ಆದಾಯವನ್ನು

–ಮೀರುವುದಿಲ್ಲವೋ ಅಂಥ ವ್ಯಕ್ತಿ ವರ್ಗ ;

(ಎಂ) "ನಿವೇಶನ ಬೆಲೆ " ಎಂದರೆ ಅಂಥ ನಿವೇಶನವನ್ನು ಆರ್ಜಿಸುವ ಆನುಷಂಗಿಕ ವೆಚ್ಚವೂ ಸೇರಿದಂತೆ ಆ ನಿವೇಶನದ ಬೆಲೆ ಮತ್ತು "ಮನೆಯ ಬೆಲೆ" ಎಂದರೆ ಮನೆಯನ್ನು ಯಾವ ನಿವೇಶನದಲ್ಲಿ ಕಟ್ಟಲಾಗಿದೆಯೋ ಆ ನಿವೇಶನದ ಬೆಲೆಯೊಂದಿಗೆ ಮನೆಯ ಮೌಲ್ಯ ಮತ್ತು ಆ ಪದದಲ್ಲಿ ಸದರಿ ಮನೆಯ ನಿರ್ಮಾಣಕ್ಕಾಗಿ ತಗಲುವ ಎಲ್ಲ ಆನುಷಂಗಿಕ ವೆಚ್ಚಗಳೂ ಒಳಗೊಳ್ಳುತ್ತವೆ. ಇದಲ್ಲದೆ ಆಡಳಿತ ಮತ್ತು ಸೇವಾ ಮಂಡಲಿಯು ವಹಿಸಬಹುದಾದಂಥ ಇತರ ವೆಚ್ಚಗಳೂ ಒಳಗೊಳ್ಳುತ್ತವೆ.

[1][(ಎನ್) "ಬಿಡಿ ನಿವೇಶನ/ಮನೆ" ಎಂದರೆ ಒಮ್ಮೆ ಹಂಚಿಕೆಯಾದ ಆದರೆ ತರುವಾಯ ಮಂಡಲಿಯಿಂದ ಹಂಚಿಕೆಯನ್ನು ರದ್ದು ಮಾಡಿದ ಅಥವಾ ಹಂಚಿಕೆ ಪಡೆದವನು ಹಿಂದಿರುಗಿಸಿರುವ ನಿವೇಶನ/ಮನೆ ಅಥವಾ ನಿವೇಶನಗಳನ್ನು ಅಥವಾ ಮನೆಗಳನ್ನು ಹಂಚಿಕೆ ಮಾಡುವುದಕ್ಕೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಯೋಜನೆಯಲ್ಲಿ ಪುನರ್ ಹೊಂದಾಣಿಕೆಯ ಕಾರಣದಿಂದ ರಚಿಸಿದ/ನಿರ್ಮಿಸಿದ ನಿವೇಶನ/ಮನೆ][1]

1. ಜಿಎಸ್‌ಆರ್ 64 ಕೆಜಿಡಿ ದಿನಾಂಕ: 6.4.1994ರ ಮೂಲಕ ಸೇರಿಸಲಾಗಿದೆ.

**3. ನಿವೇಶನಗಳನ್ನು / ಮನೆಗಳನ್ನು ಹಂಚಿಕೆಗಾಗಿ ಪ್ರಸ್ತಾವಿಸುವುದು:-** (i) ಮಂಡಲಿಯು ಯಾವುದೇ ಯೋಜನೆಯ ಅನುಸಾರ ನಿವೇಶನಗಳನ್ನು ರಚಿಸಿದರೆ ಮತ್ತು ಮನೆಗಳನ್ನು ನಿರ್ಮಿಸಿದರೆ, ಮಂಡಲಿಯು, ಈ ವಿನಿಯಮಗಳ ಮೇರೆಗೆ ಹಂಚಿಕೆಗೆ ಅರ್ಹರಾದ ವ್ಯಕ್ತಿಗಳಿಗೆ ಎಲ್ಲ ಅಥವಾ ಯಾವುವೇ ನಿವೇಶನಗಳನ್ನು/ಮನೆಗಳನ್ನು ಹಂಚಿಕೆಗಾಗಿ ಪ್ರಸ್ತಾವಿಸಬಹುದು.

(ii) ಹಂಚಿಕೆಗಾಗಿ ಪ್ರಸ್ತಾವಿಸಲಾದ ನಿವೇಶನಗಳಿಗೆ/ಮನೆಗಳಿಗೆ ಸಂಬಂಧಿಸಿದಂತೆ ಆ ನಿವೇಶನಗಳ/ಮನೆಗಳ ಸ್ಥಳ, ಅವುಗಳ ಸಂಖ್ಯೆ, ಸಂಚಕಾರ ಠೇವಣಿ ಹಣವಾಗಿ ಸಂದಾಯ ಮಾಡತಕ್ಕ ಮೊಬಲಗು/ನೋಂದಣಿ ಶುಲ್ಕ ಮತ್ತು ಮಂಡಲಿಯು ಅವಶ್ಯವೆಂದು ಭಾವಿಸುವಂಥ ಇತರೆ ವಿವರಗಳನ್ನು ನಿರ್ದಿಷ್ಟಪಡಿಸಿ,-

(ಎ) ನೋಟೀಸುಗಳನ್ನು ಅಂಟಿಸುವುದು.-

(i) ಕರ್ನಾಟಕ ಗೃಹನಿರ್ಮಾಣ ಮಂಡಳಿ ಕಛೇರಿಯ ಸೂಚನಾ ಫಲಕದ ಮೇಲೆ ;

(ii) ಹಂಚಿಕೆ ಮಾಡಬೇಕಾದ ನಿವೇಶನಗಳು/ಮನೆಗಳು ಇರುವ ಪ್ರದೇಶದಲ್ಲಿನ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ವಿಭಾಗೀಯ, ಉಪ ವಿಭಾಗೀಯ ಕಚೇರಿಗಳ ಸೂಚನಾ ಫಲಕಗಳ ಮೇಲೆ ;

(iii) ಹಂಚಿಕೆ ಮಾಡಬೇಕಾದ ನಿವೇಶನಗಳು/ಮನೆಗಳು ಇರುವ ಪ್ರದೇಶದ ತಾಲ್ಲೂಕು ಕಚೇರಿ/ತಾಲ್ಲೂಕು ಅಭಿವೃದ್ಧಿ ಮಂಡಳಿ ಕಚೇರಿಯ ಸೂಚನಾ ಫಲಕಗಳ ಮೇಲೆ

- ನೋಟೀಸುಗಳನ್ನು ಅಂಟಿಸುವ ಮೂಲಕ ಯುಕ್ತ ಪ್ರಚಾರವನ್ನು ಕೊಡತಕ್ಕದ್ದು.

(ಬಿ) ಕರ್ನಾಟಕ ರಾಜ್ಯಪತ್ರದಲ್ಲಿ ಮತ್ತು ಮಂಡಲಿಯು ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ನಿವೇಶನಗಳನ್ನು ರಚಿಸಿರುವ ಅಥವಾ ಮನೆಗಳನ್ನು ನಿರ್ಮಿಸಲಾಗಿರುವ ಪ್ರದೇಶದಲ್ಲಿ ಅತ್ಯಧಿಕ ಪ್ರಸಾರದಲ್ಲಿರುವ ಒಂದು ಕನ್ನಡ ದಿನಪತ್ರಿಕೆಯೂ ಸೇರಿದಂತೆ ಕನಿಷ್ಠ ಮೂರು ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಯುಕ್ತ ಪ್ರಚಾರ ನೀಡತಕ್ಕದ್ದು. ಆದರೆ ಅದೇ ಪ್ರದೇಶದಲ್ಲಿನ ಮನೆಗಳ/ನಿವೇಶನಗಳ ಹಂಚಿಕೆಯ ಬಗ್ಗೆ ಈ ಮೊದಲೇ ನೀಡಲಾಗಿದ್ದ ಯಾವುದೇ ಅಧಿಸೂಚನೆಗೆ ಉತ್ತರವಾಗಿ ಸಾಕಷ್ಟು ಅರ್ಜಿಗಳು ಹಂಚಿಕೆ ಕೋರಿ ಬಂದಿದ್ದ ಪಕ್ಷದಲ್ಲಿ ಮಂಡಲಿಯು ಅಂಥ ನಿವೇಶನಗಳ/ಮನೆಗಳ ಬಗ್ಗೆ ಪುನಃಪ್ರಚಾರ ಕೊಡುವುದು ಅಗತ್ಯವಾಗತಕ್ಕದ್ದಲ್ಲ.

**4. ನಿವೇಶನಗಳ/ಮನೆಗಳ ಮೀಸಲಾತಿ.-** [1][(1) ಮಂಡಲಿಯು, ತಾನಾಗಿಯೇ ಅಥವಾ ಸರ್ಕಾರದ ನಿರ್ದೇಶನಗಳ ಮೇರೆಗೆ ಯಾವುದೇ ನಿರ್ದಿಷ್ಟವರ್ಗದ ವ್ಯಕ್ತಿಗಳಿಗೆ ಹಂಚಿಕೆ ಮಾಡುವುದಕ್ಕಾಗಿ ಯಾವುದೇ ಪ್ರದೇಶದಲ್ಲಿ ನಿವೇಶನಗಳು/ಮನೆಗಳನ್ನು ಮೀಸಲಿಡಬಹುದು ಮತ್ತು ವ್ಯಕ್ತಿಗಳ ಅಂಥ ವರ್ಗವು ಯಾವ ಸ್ಥಳಗಳಲ್ಲಿ ಆ ನಿವೇಶನಗಳನ್ನು ರೂಪಿಸಲಾಗಿದೆಯೋ/ಮನೆಗಳನ್ನು ನಿರ್ಮಿಸಲಾಗಿದೆಯೋ ಆ ಸ್ಥಳಗಳು ಇರುವಂಥ ನಗರ, ಪಟ್ಟಣ ಅಥವಾ ಸ್ಥಳಗಳಲ್ಲಿನ ಯಾವುದೇ ಕಚೇರಿಯ ಅಥವಾ ಸ್ಥಾಪನೆಯ ನೌಕರರನ್ನು ಒಳಗೊಂಡಿರಬಹುದು. ಮನೆಗಳ/ನಿವೇಶನಗಳ ಬಗ್ಗೆ ಅಧಿಸೂಚಿಸಿರುವ ಪ್ರತಿಯೊಂದು ಪ್ರದೇಶದಲ್ಲಿ ಮನೆಗಳ/ನಿವೇಶನಗಳ ಪ್ರತಿಯೊಂದು ಪ್ರವರ್ಗದಲ್ಲಿ ಶೇ. 10ರವರೆಗಿನ ವಿವೇಚನಾತ್ಮಕ ಕೋಟಾವನ್ನು ಮೀಸಲಿಡತಕ್ಕದ್ದು. ಆದರೆ ಮಂಡಲಿಯು, ಆ ಕೋಟಾದ ಗರಿಷ್ಠ ಪ್ರಮಾಣದ ನಿವೇಶನ/ಮನೆಗಳನ್ನು ಸರ್ಕಾರದ ಪೂರ್ವ ಅನುಮೋದನೆ ಪಡೆದು ತನ್ನ ವಿವೇಚನೆ ಮೇರೆಗೆ ವಿಲೆ ಮಾಡತಕ್ಕದ್ದು.][1]

1. ಜಿಎಸ್‌ಆರ್ 64 ಕೆಜಿಡಿ ದಿನಾಂಕ 6-4-1994ರ ಮೂಲಕ ಸೇರಿಸಲಾಗಿದೆ.

(2) (1)ನೇ ಖಂಡದ ಮೇರೆಗೆ ನಿವೇಶನಗಳನ್ನು /ಮನೆಗಳನ್ನು ಮೀಸಲಿಟ್ಟಿರುವಲ್ಲಿ ಹಂಚಿಕೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನವು ಮಂಡಲಿಯು ಕಾಲಕಾಲಕ್ಕೆ ನಿರ್ಧರಿಸ ಬಹುದಾದಂತೆ ಅಥವಾ ಸರ್ಕಾರವು ನಿರ್ದೇಶಿಸಬಹುದಾದಂತೆ ಇರತಕ್ಕದ್ದು.

(3) ಕೆಳಕಂಡ 8 ಮತ್ತು 9ನೇ ನಿಯಮಗಳ ಉಪಬಂಧಗಳು, ಮಂಡಲಿಯ ವಿವೇಚನಾತ್ಮಕ ಕೋಟಾಕ್ಕೆ ಸಂಬಂಧಿಸಿದಂತೆ ಹೊರತುಪಡಿಸಿ (1)ನೇ ಖಂಡದ ಮೇರೆಗೆ ಮೀಸಲಿರಿಸಲಾದ ನಿವೇಶನಗಳು/ಮನೆಗಳ ಹಂಚಿಕೆಗೆ ಅಗತ್ಯ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

4ಎ. [1][xxxxxx][1]

1. ಅಧಿಸೂಚನೆ ಸಂಖ್ಯೆ: ಕೆಎಚ್‌ಬಿ/ಕೆಎಲ್‌ಟಿ-1/49/2002-2003 ದಿನಾಂಕ: 30.4.2002 ರ ಮೂಲಕ 25ನೇ ಜುಲೈ 2002 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**5. ಹಂಚಿಕೆದಾರನು ಗುತ್ತಿಗೆದಾರನಾಗಿರುವುದು.-** ಈ ವಿನಿಯಮಗಳ ಮೇರೆಗೆ ಅಧಿಸೂಚಿತವಾದ ನಿವೇಶನ/ಮನೆಗಳ ಹಂಚಿಕೆ ಪಡೆದವನನ್ನು ಗುತ್ತಿಗೆ ಕೊನೆಗೊಳ್ಳುವವರೆಗೆ ಅಥವಾ ಈ ವಿನಿಯಮಗಳ ಅನುಸಾರ ಹಂಚಿಕೆ ಪಡೆದವನಿಗೆ ನಿವೇಶನ/ಮನೆಯನ್ನು ಹಸ್ತಾಂತರಣ ಮಾಡುವವರೆಗೆ ನಿವೇಶನ/ಮನೆಯ ಗುತ್ತಿಗೆದಾರನೆಂದು ಭಾವಿಸತಕ್ಕುದು. ಗುತ್ತಿಗೆಯ ಅವಧಿಯಲ್ಲಿ ಹಂಚಿಕೆ ಪಡೆದವನು ಮಂಡಲಿಗೆ ಪ್ರತಿವರ್ಷದ ಪ್ರಾರಂಭದಲ್ಲಿ ವರ್ಷಕ್ಕೆ 10 ರೂಪಾಯಿಯನ್ನು ಮಾತ್ರ ಬಾಡಿಗೆಯಾಗಿ ಸಂದಾಯಮಾಡತಕ್ಕದ್ದು.

**6. ಅರ್ಜಿ.-** (i) ಆರ್ಥಿಕ ದುರ್ಬಲ ವರ್ಗಕ್ಕೆ, ಕಡಿಮೆ ಆದಾಯದ ಗುಂಪಿಗೆ, ಮಧ್ಯಮ ಆದಾಯದ ಗುಂಪಿಗೆ ಮತ್ತು ಹೆಚ್ಚಿನ ಆದಾಯದ ಗುಂಪಿಗೆ ಸೇರಿದ ವ್ಯಕ್ತಿಗಳು ಗುತ್ತಿಗೆ ಹಾಗೂ ಮಾರಾಟದ ಆಧಾರದ ಮೇಲೆ ನಿವೇಶನಗಳ/ಮನೆಗಳ

ಹಂಚಿಕೆ ಕೋರಿ ಸಲ್ಲಿಸಬೇಕಾದ ಅರ್ಜಿಗಳು ತತ್ಕಾಲಕ್ಕೆ ಮಂಡಲಿಯು ಅನುಮೋದಿಸಿದ ನಮೂನೆಯಲ್ಲಿರತಕ್ಕುದು. ಅವುಗಳನ್ನು ಮಂಡಲಿಯು ನಿಯಮಿಸಿದ ಮೊಬಲಗನ್ನು ಸಂದಾಯಮಾಡಿ ಮಂಡಲಿಯ ಕಚೇರಿಯಿಂದ ಪಡೆಯಬಹುದು. ಆ ಮೊಬಲಗನ್ನು ಮರುಸಂದಾಯ ಮಾಡಲಾಗುವುದಿಲ್ಲ. ಆ ಅರ್ಜಿಗಳ ಜೊತೆಗೆ:-

(ಎ) ನಗರ ಗೃಹ ನಿರ್ಮಾಣ ಇಡಬ್ಲ್ಯೂಎಸ್ ಮತ್ತು ಎಲ್ಐಜಿ (ಎ) ಮನೆಗಳ ಸಂಬಂಧದಲ್ಲಿ 1,000 ರೂಪಾಯಿ ಮತ್ತು ನಗರ ಗೃಹನಿರ್ಮಾಣದ ಇಡಬ್ಲ್ಯೂಎಸ್ ಮತ್ತು ಎಲ್ಐಜಿ (ಬಿ) ಮನೆಗಳ ಸಂಬಂಧದಲ್ಲಿ 2000 ರೂಪಾಯಿ ಮತ್ತು ಎಮ್ಐಜಿ ಮನೆಗಳ ಸಂಬಂಧದಲ್ಲಿ 5000 ರೂಪಾಯಿಗಳ ಮೊತ್ತವನ್ನು ಮತ್ತು ಹೆಚ್ಐಜಿ ಮನೆಗಳ ಸಂಬಂಧದಲ್ಲಿ 10,000 ರೂಪಾಯಿಗಳ ಮೊತ್ತವನ್ನು ಸಂಚಕಾರ ಠೇವಣಿ/ನೋಂದಣಿ ಶುಲ್ಕವಾಗಿ ಠೇವಣಿ ಇಟ್ಟ ಬಗ್ಗೆ ಬ್ಯಾಂಕ್ ಡ್ರಾಫ್ಟನ್ನು;

(ಬಿ) ಅರ್ಜಿದಾರನು ಆದಾಯ ತೆರಿಗೆ ಸಂದಾಯಮಾಡುವವನಾಗಿದ್ದಲ್ಲಿ ಅರ್ಜಿ ವರ್ಷದ ಹಿಂದಿನ ವರ್ಷದ ಆದಾಯದ ಮೇಲಣ ನಿರ್ಧರಣಾ ಆದೇಶವನ್ನು;

(ಸಿ) ಅರ್ಜಿದಾರನು ಆದಾಯ ತೆರಿಗೆ ಸಂದಾಯಮಾಡಬೇಕಾದವನಾಗಿಲ್ಲದಿದ್ದಲ್ಲಿ ಆದರೆ ಸರ್ಕಾರಿ ನೌಕರ ಅಥವಾ ಯಾವುದೇ ಸಂಸ್ಥೆಯ ನಿಯೋಜಿತನಾಗಿದ್ದು, ಜಮೀನಿನಿಂದ ಅಥವಾ ಇತರ ಮೂಲಗಳಿಂದ ಆದಾಯ ಪಡೆಯುವವನು ಆಗಿಲ್ಲದಿದ್ದರೆ ಅವನ ವಾರ್ಷಿಕ ಆದಾಯದ ಬಗ್ಗೆ ಅವನ ಮೇಲಾಧಿಕಾರಿಯಿಂದ ಪಡೆದ ಒಂದು ಪ್ರಮಾಣ ಪತ್ರವನ್ನು;

(ಡಿ) ಅರ್ಜಿದಾರನು ಆದಾಯ ತೆರಿಗೆ ಸಂದಾಯಮಾಡಬೇಕಾದವನಾಗಿಲ್ಲದಿದ್ದಲ್ಲಿ. ಆದರೆ ಸರ್ಕಾರಿ ನೌಕರ ಅಥವಾ ಯಾವುದೇ ಸಂಸ್ಥೆಯ ನಿಯೋಜಿತನಾಗಿಲ್ಲದಿದ್ದು ಜಮೀನಿನಿಂದ ಆದಾಯಪಡೆಯುತ್ತಿದ್ದರೆ ಜಮೀನಿನಿಂದ ಅವನಿಗೆ ದೊರೆಯುವ ವಾರ್ಷಿಕ ಆದಾಯದ ಸಂಬಂಧದಲ್ಲಿ ತಾಲ್ಲೂಕು ತಹಶೀಲ್ದಾರನ ದರ್ಜೆಗೆ ಕಡಿಮೆಯಲ್ಲದ ಕಂದಾಯ ಅಧಿಕಾರಿಯು ನೀಡಿದ ಒಂದು ಪ್ರಮಾಣ ಪತ್ರವನ್ನು;

(ಇ) ಅರ್ಜಿದಾರನು, ಸರ್ಕಾರಿ ನೌಕರನಾಗಿಲ್ಲದಿದ್ದರೆ ಅಥವಾ ಯಾವುದೇ ಸಂಸ್ಥೆಯ ನೌಕರನಾಗಿಲ್ಲದಿದ್ದರೆ ಮತ್ತು ಜಮೀನಿನಿಂದ ಅವನು ಯಾವುದೇ ಆದಾಯ ಪಡೆಯುತ್ತಿಲ್ಲದಿದ್ದರೆ ಅವನ ವಾರ್ಷಿಕ ಆದಾಯದ ಸಂಬಂಧವಾಗಿ ನ್ಯಾಯಿಕ ಮ್ಯಾಜಿಸ್ಟ್ರೆಟ್/ ನೋಟರಿ ಪಬ್ಲಿಕ್ ಅವರ ಮುಂದೆ ಯುಕ್ತವಾಗಿ ಪ್ರಮಾಣ ಮಾಡಿದ ಶಪಥಪತ್ರವನ್ನು;

(ಎಫ್) ಅರ್ಜಿದಾರನು, ನೌಕರನಾಗಿದ್ದು ಕೃಷಿ ಆದಾಯ ಪಡೆಯುವವನೂ ಆಗಿದ್ದಲ್ಲಿ ತನ್ನ ನಿಯೋಜಕನಿಂದ ಪಡೆದ ಪ್ರಮಾಣ ಪತ್ರವನ್ನು ಮತ್ತು ಕೃಷಿ ಆದಾಯದ ಸಂಬಂಧವಾಗಿ ತಾಲ್ಲೂಕು ತಹಶೀಲ್ದಾರನಿಂದ ಪಡೆದ ಪ್ರಮಾಣ ಪತ್ರವನ್ನು;

**ಟಿಪ್ಪಣಿ:-** ಅರ್ಜಿದಾರನ/ಳ ಹೆಂಡತಿ/ಗಂಡನಿಗೆ ತನ್ನದೇ ಆದ ಆದಾಯವಿದ್ದಲ್ಲಿ, ಸಂದರ್ಭಾನುಸಾರ ತೆರಿಗೆ ನಿರ್ಧರಣಾ ಆದೇಶ ಅಥವಾ ನಿಯೋಜಕರ ಪ್ರಮಾಣ ಪತ್ರ ಅಥವಾ ಶಪಥಪತ್ರ ಇವುಗಳಿಂದ ಯುಕ್ತವಾಗಿ ಸಮರ್ಥಿತವಾದ ಅವನ/ಅವಳ ಆದಾಯಕ್ಕೆ ಸಂಬಂಧಿಸಿದ ಪ್ರಮಾಣಪತ್ರವನ್ನು;

(ಜಿ) ಅರ್ಜಿದಾರನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಪಂಗಡಕ್ಕೆ ಸೇರಿದ್ದರೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಸಮಾಜ ಕಲ್ಯಾಣ ಅಧಿಕಾರಿ ಅಥವಾ ತಹಶೀಲ್ದಾರ್ ಅಥವಾ ವಿಧಾನಸಭಾ ಸದಸ್ಯ ಅಥವಾ ಸಂಸತ್ ಸದಸ್ಯ ಅಥವಾ ಯಾವ ಗೆಜೆಟೆಡ್ ಅಧಿಕಾರಿಯ ಕೆಳಗೆ ಅವನು/ಅವಳು ನಿಯೋಜಿತನಾಗಿರುವನೋ/ಳೋ ಆ ಗೆಜೆಟೆಡ್ ಅಧಿಕಾರಿಯಿಂದ ಪಡೆದ ಪ್ರಮಾಣಪತ್ರವನ್ನು;

(ಹೆಚ್) ಅರ್ಜಿದಾರನು, ಅಂಗವಿಕಲ ವ್ಯಕ್ತಿಯಾಗಿರುವಲ್ಲಿ, ಸಹಾಯಕ ಸರ್ಜನ್ನನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಸರ್ಕಾರಿ ವೈದ್ಯರಿಂದ ಪಡೆದ ಒಂದು ಪ್ರಮಾಣಪತ್ರವನ್ನು-

(ii) 3ನೇ ವಿನಿಯಮನದ ಅಡಿಯಲ್ಲಿ ಅರ್ಜಿಗಳನ್ನು ಕರೆದಿರುವಲ್ಲಿ, ಅಂಥ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮೊದಲು ಮತ್ತು ನಿಗದಿಪಡಿಸಿದ ಸಮಯದೊಳಗೆ ಮಂಡಲಿಯ ಕಛೇರಿಗೆ ತಲುಪುವಂತೆ ಸ್ವತಃ ಸಾದರಪಡಿಸತಕ್ಕದ್ದು ಅಥವಾ ತಲುಪೊಪ್ಪಿಗೆ ಸಹಿತ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು. ಹಾಗೆ ನಿಗದಿಪಡಿಸಿದ ದಿನಾಂಕ ಮತ್ತು ಅವಧಿಯ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸತಕ್ಕದ್ದು.

(iii) ಅರ್ಜಿದಾರನಿಗೆ ನಿವೇಶನ/ಗೃಹಗಳನ್ನು ಹಂಚಿಕೆ ಮಾಡದಿರುವಲ್ಲಿ, ಮಂಡಲಿಯು, ನಿವೇಶನಗಳ/ಗೃಹಗಳ ಹಂಚಿಕೆಯ ಬಗ್ಗೆ ತೀರ್ಮಾನ ಕೈಗೊಂಡ ತರುವಾಯ ಮಾತ್ರವೆ ಸಂಚಕಾರ ಠೇವಣಿ/ನೋಂದಣಿ ಶುಲ್ಕವನ್ನು ಮರುಪಾವತಿ ಮಾಡತಕ್ಕದ್ದು.

(iv) ಅದೇ ಪ್ರದೇಶದಲ್ಲಿ ಮಂಡಲಿಯು ಇನ್ನು ಮುಂದೆ ಕೈಗೊಳ್ಳುವ ಯೋಜನೆಗಳ ಸಂಬಂಧದಲ್ಲಿ ತನ್ನ ಅರ್ಜಿಯನ್ನು ಪರಿಗಣಿಸಬೇಕೆಂದು ಅರ್ಜಿದಾರನು ಬಯಸುವಲ್ಲಿ ಮತ್ತು ಮಂಡಳಿಗೆ ಅವನು ಸಂದಾಯ ಮಾಡಿರುವ ಸಂಚಕಾರ ಠೇವಣಿ/ನೋಂದಣಿ ಶುಲ್ಕಗಳನ್ನು ಮಂಡಲಿಯು ಇಟ್ಟುಕೊಳ್ಳಲು ಅವನು ಸಮ್ಮತಿಸಿರುವಲ್ಲಿ ಅಂಥ ಠೇವಣಿಗಳನ್ನು ಮರುಪಾವತಿ ಮಾಡತಕ್ಕದ್ದಲ್ಲ ಮತ್ತು ಅಂಥ ಠೇವಣಿಗಳಿಗೆ ಮಂಡಲಿಯು ಕಾಲಕಾಲಕ್ಕೆ ನಿಗದಿಪಡಿಸಿದ ದರಗಳಲ್ಲಿ ಅರ್ಜಿಗಳನ್ನು ಸ್ವೀಕರಿಸುವುದಕ್ಕಾಗಿ ನಿಗದಿಪಡಿಸಲಾದ ಕೊನೆಯ ದಿನಾಂಕದಿಂದ ಒಂದು ವರ್ಷದ ತರುವಾಯ ಬಡ್ಡಿ ಸಂದಾಯವಾಗತಕ್ಕದ್ದು.

(v) ಯಶಸ್ವಿಯಾಗದ ಇತರ ಅರ್ಜಿದಾರರು ಸಂದಾಯ ಮಾಡಿದ ಸಂಚಕಾರ ಠೇವಣಿ/ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದು ಮತ್ತು ಸಂಚಕಾರ ಠೇವಣಿ/ನೋಂದಣಿ ಶುಲ್ಕದ ಮೇಲೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

7. **ನೋಂದಣಿ ಅರ್ಜಿ.-** (ಎ) ನಿವೇಶನಗಳ/ಮನೆಗಳ ಹಂಚಿಕೆಗಾಗಿ ಸಲ್ಲಿಸಿದ ಅರ್ಜಿಗಳನ್ನು ಆ ಬಗ್ಗೆ ಮಂಡಲಿಯು ನಿಯಮಿಸಬೇಕಾದ ರಿಜಿಸ್ಟರಿನಲ್ಲಿ ಅರ್ಜಿಗಳ ಪೂರ್ಣ ವಿವರಗಳನ್ನು ತೋರಿಸಿ ಅವುಗಳನ್ನು ಸ್ವೀಕರಿಸಿದಾಗಲೆಲ್ಲ

ಕಾಲಾನುಕ್ರಮದಲ್ಲಿ ನೋಂದಾಯಿಸತಕ್ಕುದು. ಸ್ವೀಕರಿಸಿದ ಅರ್ಜಿಗಳನ್ನು ಕೆಳಕಂಡ 8ನೇ ನಿಯಮದ ಮೇರೆಗೆ ಪರೀಕ್ಷಿಸಲಾಗುವುದು ಮತ್ತು ಅರ್ಹರಾದ ಎಲ್ಲ ಅರ್ಜಿದಾರರಿಗೆ ಒಂದು ನೋಂದಣಿ ಪ್ರಮಾಣಪತ್ರವನ್ನು ನೀಡಲಾಗುವುದು.

(ಬಿ) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮುಕ್ತಾಯವಾದ ತರುವಾಯ ಸ್ವೀಕರಿಸುವ ಅರ್ಜಿಗಳನ್ನು ಕೆಳಕಂಡ 9ನೇ ನಿಯಮದಲ್ಲಿ ನಿಯಮಿಸಲಾದ ಪ್ರವರ್ಗಗಳಿಗೆ ಅನುಸಾರವಾಗಿ ವರ್ಗೀಕರಿಸತಕ್ಕದ್ದು. ವರ್ಗೀಕರಿಸಲಾದ ಪಟ್ಟಿಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ನೋಟೀಸು ಬೋರ್ಡಿನಲ್ಲಿ ಮತ್ತು ಮನೆಗಳ/ನಿವೇಶನಗಳ ಹಂಚಿಕೆಯ ಬಗ್ಗೆ ಚೀಟಿ ಎತ್ತುವ ಸ್ಥಳಗಳಲ್ಲೂ ಸಹ ಪ್ರಕಟಿಸತಕ್ಕದ್ದು.

**8. ಹಂಚಿಕೆಗಾಗಿ ಅರ್ಹತೆ.–** (1) ಅರ್ಜಿಯ ದಿನಾಂಕದ ನಿಕಟ ಪೂರ್ವದಲ್ಲಿ ನಿವೇಶನಗಳನ್ನು ರೂಪಿಸುವ ಅಥವಾ ಮನೆಗಳನ್ನು ನಿರ್ಮಿಸುವ ನಗರ/ ಪಟ್ಟಣ ಅಥವಾ ಇತರ ಪ್ರದೇಶದ ಪರಿಮಿತಿಯೊಳಗೆ 10 ವರ್ಷಗಳ ಅವಧಿಯವರೆಗೆ ನಿರಂತರವಾಗಿ ವಾಸಮಾಡದಿರುವ:

ಪರಂತು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾವಣೆ ಆಗಬಹುದಾದ ಮತ್ತು ಯಾವ ನಗರ/ಪಟ್ಟಣ ಅಥವಾ ಇತರ ಸ್ಥಳಗಳಲ್ಲಿ ನಿವೇಶನಗಳ/ಮನೆಗಳ ಸಲುವಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ನಗರ/ಪಟ್ಟಣ ಅಥವಾ ಇತರ ಸ್ಥಳಗಳಲ್ಲಿ ಖಾಯಂ ಆಗಿ ವಾಸ ಬಯಸುವ ರಾಜ್ಯ ಸರ್ಕಾರದ ಮತ್ತು ಇತರ ನಿಗಮಗಳ, ಸ್ಥಳೀಯ ನಿಕಾಯಗಳ ಅಥವಾ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಇತರ ಸಂಸ್ಥೆಗಳ ಉದ್ಯೋಗಿಗಳ ಸಂದರ್ಭದಲ್ಲಿ ಮಂಡಲಿಯು ಈ ಷರತ್ತನ್ನು ಸಡಿಲಗೊಳಿಸಬಹುದು.

(2) ಕರ್ನಾಟಕ ರಾಜ್ಯದಲ್ಲಿರುವ ಮಂಡಲಿ ಅಥವಾ ಯಾವುದೇ ಇತರ ಪ್ರಾಧಿಕಾರವು ನಿವೇಶನ/ಮನೆಯನ್ನು ಯಾರಿಗೆ ಅಥವಾ ಯಾರ ಗಂಡನಿಗೆ/ ಹೆಂಡತಿಗೆ ಹಂಚಿಕೆ ಮಾಡಿರುವ;

(3) ಯಾರು ಅಥವಾ ಯಾರ ಗಂಡ/ಹೆಂಡತಿ/ಅಪ್ರಾಪ್ತವಯಸ್ಸಿನ ಮಕ್ಕಳು ಕರ್ನಾಟಕ ರಾಜ್ಯದಲ್ಲಿರುವ ಯಾವುದೇ ನಗರ ಪ್ರದೇಶದಲ್ಲಿ ಪೌರಸಭೆಯಲ್ಲಿ ಸ್ವಂತ ಮನೆಯನ್ನು ಅಥವಾ ನಿವೇಶವನ್ನು ಹೊಂದಿರುವ

– ಯಾವನೇ ವ್ಯಕ್ತಿಯು ಹಂಚಿಕೆಗೆ ಅರ್ಹನಾಗತಕ್ಕದ್ದಲ್ಲ.

**ವಿವರಣೆ.–** ಈ ನಿಯಮದ ಉದ್ದೇಶಗಳಿಗಾಗಿ 'ಪ್ರಾಧಿಕಾರ' ಎಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಮೇಲ್ಟಾಟು ಮಂಡಲಿ ಅಧಿನಿಯಮ, 1976ರ ಮೇರೆಗೆ ರಚಿತವಾದ ನಗರ ಮೇಲ್ಟಾಟು ಮಂಡಲಿಗಳು, ಪೌರ ನಿಗಮಗಳು, ಪೌರಸಭಾ ಪರಿಷತ್ತುಗಳು ಅಥವಾ ಯಾವುದೇ ಇತರ ಸ್ಥಳೀಯ ಪ್ರಾಧಿಕಾರ.

**9. ಹಂಚಿಕೆಯ ಪ್ರಕ್ರಿಯೆ.–** ಪ್ರತಿಯೊಂದು ಪ್ರದೇಶದಲ್ಲಿ ಹೆಚ್ಚಿನ ವರಮಾನ ಸಮೂಹ, ಮಧ್ಯಮ ವರಮಾನ ಸಮೂಹ, ಕಡಿಮೆ ವರಮಾನ ಸಮೂಹ ಅಥವಾ ಆರ್ಥಿಕವಾಗಿ ದುರ್ಬಲರಾದವರ ಸಮೂಹಗಳಂಥ ನಿರ್ದಿಷ್ಟ ಪ್ರವರ್ಗದ ಮನೆಗಳ/ ನಿವೇಶನಗಳ ಹಂಚಿಕೆ ಕೋರಿ ಬಂದ ಎಲ್ಲಾ ಅರ್ಜಿಗಳನ್ನು ಈ ಕೆಳಕಂಡ ಪ್ರವರ್ಗಗಳಲ್ಲಿ ವರ್ಗೀಕರಿಸತಕ್ಕದ್ದು:–

(ಎ) ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು ಮತ್ತು ಹಿಂದುಳಿದ ಬುಡಕಟ್ಟು;

(ಬಿ) ರಕ್ಷಣಾ ಸಿಬ್ಬಂದಿ/ಮಾಜಿ ಸೈನಿಕ;

(ಸಿ) ಅಂಗವಿಕಲ ವ್ಯಕ್ತಿಗಳು;

(ಡಿ) ರಾಜ್ಯ ಸರ್ಕಾರಿ ನೌಕರರು (ಸ್ಥಳೀಯ ನಿಕಾಯಗಳ ಉದ್ಯೋಗಿಗಳು, ರಾಜ್ಯ ಸರ್ಕಾರದ ಉದ್ಯಮಗಳ ಉದ್ಯೋಗಿಗಳು, ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಸೇರಿ);

(ಇ) ಕೇಂದ್ರ ಸರ್ಕಾರಿ ನೌಕರರು (ರಕ್ಷಣಾ ಸಿಬ್ಬಂದಿಯನ್ನು ಹೊರತುಪಡಿಸಿ, ಆದರೆ ಸಾರ್ವಜನಿಕ ವಲಯದ ಉದ್ಯಮಗಳು, ಜೀವವಿಮಾ ನಿಗಮ ಇತ್ಯಾದಿಗಳ ಉದ್ಯೋಗಿಗಳನ್ನು ಒಳಗೊಂಡು); ಮತ್ತು

(ಎಫ್) ಇತರರು,

ಪ್ರತಿಯೊಂದು ಪ್ರದೇಶದಲ್ಲಿ ಪ್ರತಿಯೊಂದು ಪ್ರವರ್ಗಕ್ಕೆ 4(1)ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಮಂಡಲಿಯ ವಿವೇಚನಾನುಸಾರ ಕೋಟಾವನ್ನು ಕಾಯ್ದಿರಿಸಿದ ತರುವಾಯ, ಅಧಿಸೂಚಿತ ಮನೆ/ನಿವೇಶನಗಳನ್ನು ಈ ಕೆಳಕಂಡ ರೀತಿಯಲ್ಲಿ ಮೇಲ್ಕಂಡ ಪ್ರವರ್ಗಗಳಿಗೆ ಮೀಸಲಿಡತಕ್ಕದ್ದು.

| | |
|---|---|
| (ಎ) ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು/ಹಿಂದುಳಿದ ಬುಡಕಟ್ಟು | ಶೇಕಡಾ 18 |
| (ಬಿ) ಮಾಜಿ ಸೈನಿಕರು ಒಳಗೊಂಡ ರಕ್ಷಣಾ ಸಿಬ್ಬಂದಿ | ಶೇಕಡಾ 5 |
| (ಸಿ) ಕೇಂದ್ರ ಸರ್ಕಾರಿ ನೌಕರರು | ಶೇಕಡಾ 5 |
| (ಡಿ) ರಾಜ್ಯ ಸರ್ಕಾರಿ ನೌಕರರು | ಶೇಕಡಾ 15 |
| (ಇ) ಅಂಗವಿಕಲ ವ್ಯಕ್ತಿಗಳು | ಶೇಕಡಾ 2 |
| (ಎಫ್) ಇತರರು | ಶೇಕಡಾ 55 |

ಪ್ರತಿಯೊಂದು ಪ್ರವರ್ಗದ ಅಡಿಯಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆಯು ಆ ವರ್ಗಕ್ಕೆ ಮೇಲೆ ಸೂಚಿಸಿದಂತೆ ಕಾಯ್ದಿರಿಸಿದ ಮನೆಗಳ ಸಂಖ್ಯೆಯನ್ನು ಮೀರಿರುವಲ್ಲಿ ಗೃಹಮಂಡಲಿ ಕಮಿಷನರನು ಅಥವಾ ಹಂಚಿಕೆ ಬಗ್ಗೆ ಅವನಿಂದ ಅಧಿಕೃತನಾದ ಯಾವನೇ ಇತರ ಅಧಿಕಾರಿಯು ಬಹಿರಂಗವಾಗಿ ಚೀಟಿ ಎತ್ತುವ ಮೂಲಕ ಹಂಚಿಕೆಮಾಡತಕ್ಕದ್ದು, ಚೀಟಿ ಎತ್ತುವ ವಿಧಾನವನ್ನು ಗೃಹನಿರ್ಮಾಣ ಕಮಿಷನರನು ನಿರ್ಧರಿಸುವನು. ಯಾವುದೇ ಪ್ರವರ್ಗದ ಬಗ್ಗೆ ಸ್ವೀಕರಿಸಿದ ಅರ್ಜಿಗಳ ಸಂಖ್ಯೆಯು ಆ ಪ್ರವರ್ಗಕ್ಕೆ ಕಾಯ್ದಿರಿಸಿದ ಮನೆಗಳ ಸಂಖ್ಯೆಗಿಂತ ಕಡಿಮೆ ಇರುವಲ್ಲಿ, ಅರ್ಜಿಗಳ ಸಂಖ್ಯೆಯನ್ನು ಮೀರಿ ಇರುವ ಮನೆಗಳನ್ನು ಇತರ ಪ್ರವರ್ಗಗಳಿಗೆ ಮೀಸಲಾಗಿರಿಸಿದ ಕೋಟಾದಲ್ಲಿ ಸೇರಿಸಲಾಗುವುದು.

(ಎ) ಗೃಹ ನಿರ್ಮಾಣ ಕಮಿಷನರರು, ಎಲ್ಲ ಅರ್ಹ ಅರ್ಜಿದಾರರು ಒಳಗೊಳ್ಳುವ ಹಾಗೆ ಚೀಟಿ ಎತ್ತುವ ವ್ಯವಸ್ಥೆ ಮಾಡತಕ್ಕುದು. ಚೀಟಿ ಎತ್ತುವ ನಿರ್ದಿಷ್ಟ ದಿನಾಂಕ, ಸಮಯ ಮತ್ತು ಸ್ಥಳಗಳನ್ನು ನಿರ್ದಿಷ್ಟಪಡಿಸುವ ಏಳು ದಿನಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಎಲ್ಲಾ ಅರ್ಜಿದಾರಿಗೆ ಕೊಡತಕ್ಕದ್ದು.

(ಬಿ) ಚೀಟಿ ಎತ್ತುವ ಕಾಲದಲ್ಲಿ ಹಾಜರಿರಲು ಬಯಸುವ ಅರ್ಹ ಅರ್ಜಿದಾರರ ಸಮಕ್ಷಮದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ವಿಭಾಗದ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರನ ಕಚೇರಿಯಲ್ಲಿ ಅಥವಾ ಯಾವುದೇ ಇತರ ಸೂಕ್ತ ಸ್ಥಳದಲ್ಲಿ ಪ್ರತಿಯೊಂದು ಪ್ರವರ್ಗಕ್ಕೆ ಮೀಸಲಿಟ್ಟ ಮನೆಗಳ / ನಿವೇಶನಗಳ ಬಗ್ಗೆ ಪ್ರತ್ಯೇಕವಾಗಿ ಚೀಟಿ ಎತ್ತತಕ್ಕದ್ದು.

(ಸಿ) ಮನೆ/ನಿವೇಶನಗಳ ಮತ್ತು ಅರ್ಜಿದಾರರ ಸಂಬಂಧದಲ್ಲಿ ಏಕಕಾಲದಲ್ಲಿ ಚೀಟಿ ಎತ್ತತಕ್ಕದ್ದು ಮತ್ತು ಅದನ್ನು ದಾಖಲು ಮಾಡತಕ್ಕದ್ದು ಮತ್ತು ಚೀಟಿ ಎತ್ತುವಲ್ಲಿ ಸಫಲರಾದ ಅರ್ಜಿದಾರರ ಹೆಸರುಗಳನ್ನು ಆ ಅರ್ಜಿದಾರರಿಗೆ ಸಂಬಂಧಿಸಿ ಚೀಟಿ ಎತ್ತಿದ ಮನೆ/ನಿವೇಶನದ ಸಂಖ್ಯೆಯನ್ನು ಯಥಾ ಕ್ರಮದಲ್ಲಿ ಬರೆದಿಡತಕ್ಕದ್ದು.

(ಡಿ) 'ಸಿ' ಖಂಡದ ಮೇರೆಗೆ ಚೀಟಿ ಎತ್ತಿದ ತರುವಾಯ, ಹಂಚಿಕೆ ಮಾಡಲು ಲಭ್ಯವಿರುವ ಮನೆಗಳ/ನಿವೇಶನಗಳ ಸಂಖ್ಯೆಯ ಶೇಕಡಾ 10 ರಷ್ಟು ಮಟ್ಟಿಗೆ ಇನ್ನಷ್ಟು ಚೀಟಿ ಎತ್ತಬಹುದು ಮತ್ತು ಹಾಗೆ ಆಯ್ಕೆಯಾದ ವ್ಯಕ್ತಿಗಳ ಹೆಸರುಗಳನ್ನು ಪ್ರತೀಕ್ಷಾ ಪಟ್ಟಿಯಲ್ಲಿ ಇಡತಕ್ಕುದು. (ಸಿ) ಖಂಡದ ಮೇರೆಗೆ ಆಯ್ಕೆಯಾದ ವ್ಯಕ್ತಿಗಳು ಸಂದರ್ಭಾನುಸಾರ ಪ್ರಾರಂಭಿಕ ಠೇವಣಿಯನ್ನು ಸಂದಾಯಮಾಡಲು ಅಥವಾ ಮನೆ/ನಿವೇಶನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ತಪ್ಪಿದರೆ, ಆಗ ಪ್ರತೀಕ್ಷಾ ಪಟ್ಟಿಯಲ್ಲಿ ಇಡಲಾದ ವ್ಯಕ್ತಿಗಳಿಗೆ ಮನೆ/ನಿವೇಶನವನ್ನು ಹಂಚಿಕೆ ಮಾಡಲಾಗುವುದು.

ಚೀಟಿ ಎತ್ತಿ ತಯಾರಿಸಿದ ಪಟ್ಟಿಗಳನ್ನು ಮಂಡಲಿಯ ಮುಂದೆ ಇಡತಕ್ಕದ್ದು ಮತ್ತು ಮಂಡಲಿಯು ಅದನ್ನು ಅನುಮೋದಿಸತಕ್ಕದ್ದು, ಅನುಮೋದಿತ ಪಟ್ಟಿಯನ್ನು ಮಂಡಲಿಯ ಕಚೇರಿಯಲ್ಲಿ ಅಥವಾ ಮಂಡಲಿಯು ನಿರ್ದಿಷ್ಟಪಡಿಸಬಹುದಾದ ಇತರ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು.

[1][**9ಎ. ಬಿಡಿ ನಿವೇಶನಗಳ / ಮನೆಗಳ ಹಂಚಿಕೆ.**– ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು, ಪ್ರತಿಯೊಂದು ಪ್ರವರ್ಗದ ಎದುರಿಗೆ ನಿಗದಿಪಡಿಸಿರುವ ಪ್ರಮಾಣದ ಪ್ರಕಾರ ಈ ಮುಂದಿನ ಪ್ರವರ್ಗಗಳಿಗೆ ಬಿಡಿ ನಿವೇಶನ / ಮನೆಗಳನ್ನು ಹಂಚಿಕೆ ಮಾಡತಕ್ಕದ್ದು.

| ಪ್ರವರ್ಗ | ವಿವರಣೆ | ಶೇಕಡಾವಾರು |
|---|---|---|
| ಎ | ಸಾರ್ವಜನಿಕ ಹರಾಜಿನ ಮೂಲಕ | ಶೇಕಡಾ 40 |
| ಬಿ(i) | ಅಂತರ ರಾಷ್ಟ್ರೀಯ, ರಾಷ್ಟ್ರೀಯ ಅಥವಾ ರಾಜ್ಯಮಟ್ಟದಲ್ಲಿ ಯಾರ ಸೇವೆಗೆ ಯಾರ ಮನ್ನಣೆ ನೀಡಲಾಗಿದೆಯೋ ಆ ಅನಿವಾಸಿ ಭಾರತೀಯರನ್ನು ಒಳಗೊಂಡು ಕರ್ನಾಟಕದಿಂದ ಸುಪ್ರಸಿದ್ಧ ವ್ಯಕ್ತಿಗಳು | ಶೇಕಡಾ 30 |
| (ii) | ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲೆ, ವಿಜ್ಞಾನ, ಶಿಕ್ಷಣ ಮತ್ತು ಔಷಧದ ಕ್ಷೇತ್ರದಲ್ಲಿ ವಿಶೇಷವಾಗಿ ಮನ್ನಣೆ ಪಡೆದ ವ್ಯಕ್ತಿಗಳು | |
| (iii) | ಕರ್ನಾಟಕದಲ್ಲಿ ವಾಸವಾಗಿರುವ ಸಶಸ್ತ್ರ ದಳಗಳ ಮಾಜಿ ಸೈನಿಕ ಮತ್ತು ಸೇವಾ ಸಿಬ್ಬಂದಿ | |
| (iv) | 10 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ರಾಜ್ಯದಲ್ಲಿ ವಾಸವಾಗಿರುವ ಸ್ವಾತಂತ್ರ್ಯ ಯೋಧರು | ಶೇಕಡಾ 30 |
| (v) | ಸೇವೆಯಲ್ಲಿರುವಾಗ ಮೃತರಾದ ರಾಜ್ಯ ಸರ್ಕಾರಿ ನೌಕರರ ಆಶ್ರಿತರು | |
| ಸಿ | ಸರ್ಕಾರದ ವಿವೇಚನೆಯ ಮೇರೆಗೆ ಹಂಚಿಕೆ | |

1. ಅಧಿಸೂಚನೆ ಸಂಖ್ಯೆ: ಕೆಎಚ್‌ಬಿ/ಎಎಲ್‌ಟಿ-1/49/2002-2003 ದಿನಾಂಕ: 30.4.2002 ರ ಮೂಲಕ 25ನೇ ಜುಲೈ 2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**10. ನಿವೇಶನಗಳ/ಮನೆಗಳ ಹಂಚಿಕೆಯ ಪ್ರಸ್ತಾವವನ್ನು ಹಿಂತೆಗೆದುಕೊಳ್ಳುವುದು.**– (1) ಯಾವುದೇ ನಿವೇಶನ/ ಮನೆಯನ್ನು ವಿಲೆಮಾಡುವ ಯಾವುದೇ ಪ್ರಸ್ತಾವವನ್ನು ಹಿಂತೆಗೆದುಕೊಳ್ಳುವುದು ಅಥವಾ ರದ್ದುಗೊಳಿಸುವುದು ಅಥವಾ ಮಾರ್ಪಾಟು ಮಾಡುವುದು ಅವಶ್ಯವೆಂದು ಕಂಡುಬಂದರೆ ಮಂಡಲಿಯು ಅಥವಾ ಅದು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಯಾವುದೇ ಸಮಯದಲ್ಲಿ ಕಾರಣಗಳನ್ನು ದಾಖಲು ಮಾಡಿ, ಹಾಗೆ ಆ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಬಹುದು ಅಥವಾ ರದ್ದುಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

(2) (1)ನೇ ಖಂಡದ ಮೇರೆಗೆ, ಪ್ರಸ್ತಾವವನ್ನು ಹಿಂತೆಗೆದುಕೊಂಡಾಗ ಅಥವಾ ರದ್ದುಗೊಳಿಸಿದಾಗ ಅಥವಾ ಮಾರ್ಪಾಟು ಮಾಡಿದಾಗ ಸಂಬಂಧಪಟ್ಟ ಅರ್ಜಿದಾರನಿಗೆ ಇತರೆ ನಿವೇಶನಗಳು/ಮನೆಗಳಿಗಾಗಿ ಅರ್ಜಿ ಸಲ್ಲಿಸುವ ಅಯ್ಕೆ ಅವಕಾಶವನ್ನು ಕೊಡತಕ್ಕದ್ದು ಮತ್ತು ತದನುಸಾರವಾಗಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ನಿವೇಶನಗಳಿಗಾಗಿ /ಮನೆಗಳಿಗಾಗಿ ಸಲ್ಲಿಸಿದ ಇತರ ಅರ್ಜಿಗಳೊಂದಿಗೆ ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು.

**11. ಬೆಲೆಯ ಪರಿಷ್ಕರಣೆ.**– ತಾತ್ಕಾಲಿಕವಾಗಿ ನಿಗದಿಪಡಿಸಿದ ನಿವೇಶನದ/ಮನೆಯ ಬೆಲೆಯು ಇರಬೇಕಾಗಿದ್ದುದಕ್ಕಿಂತ ಕಡಿಮೆಯಾಗಿದೆ ಎಂದು ತೋರಿಸುವ ಯಾವುದೇ ಕಾರಣಕ್ಕಾಗಿ ಆ ಬೆಲೆಯನ್ನು ಯಾವುದೇ ಸಮಯದಲ್ಲಿ ಪರಿಷ್ಕರಿಸಲು ಮಂಡಲಿಯು ಸಕ್ಷಮವಾಗಿರತಕ್ಕದ್ದು. ಈ ಬಗ್ಗೆ ಮಂಡಲಿಯು ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು.

**12. ಗುತ್ತಿಗೆ ಹಾಗೂ ಮಾರಾಟ ಆಧಾರದ ಮೇಲೆ ಹಂಚಿಕೆ ಮಾಡುವ ಬಗ್ಗೆ ಷರತ್ತುಗಳು.**– (1) ಹಂಚಿಕೆ ಪಡೆದವನು ಮಂಡಲಿಗೆ ಪ್ರಾರಂಭಿಕ ಠೇವಣಿಯಾಗಿ, ಮಂಡಲಿಯು, ತಾತ್ಕಾಲಿಕವಾಗಿ ನಿರ್ಧರಿಸಿದ ಮನೆಯ ಬೆಲೆಯಲ್ಲಿ ನೋಂದಣಿ

ಶುಲ್ಕವನ್ನು ಕಳೆದ ನಂತರ ಉಳಿಯುವ ಮೊಬಲಗು ಮತ್ತು ಅನುಮತಿಸಬಹುದಾದ ಸಾಲದ ಮೊಬಲಗು ಇವೆರಡರ ನಡುವಣ ವ್ಯತ್ಯಾಸವನ್ನು ನಾಲ್ಕು ಸಮಾನಾದ ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು. ಮೊದಲನೆಯ ಕಂತು, ಹಂಚಿಕೆಯ ತಾತ್ಕಾಲಿಕ ತಿಳಿವಳಿಕೆಯ ದಿನಾಂಕದಿಂದ 30 ದಿವಸಗಳೊಳಗೆ ಸಂದಾಯಮಾಡಬಹುದು ಮತ್ತು ಆ ತರುವಾಯದ 3 ಕಂತುಗಳನ್ನು ಅದರಲ್ಲಿ ಸೂಚಿಸಲಾದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸಂದಾಯ ಮಾಡಬಹುದು.

(2) ಹಂಚಿಕೆ ಪಡೆದವನು ತಾತ್ಕಾಲಿಕವಾಗಿ ನಿರ್ಧರಿಸಲಾದ ಮನೆಯ ಬೆಲೆ ಮತ್ತು ಮನೆಯ ಪರಿಷ್ಕೃತ ಬೆಲೆ–ಇವೆರಡರ ನಡುವಣ ವ್ಯತ್ಯಾಸವನ್ನು ಮನೆಯು ಪೂರ್ಣಗೊಂಡು ಅಧಿಭೋಗಕ್ಕೆ ಸಿದ್ಧವಾದ ತರುವಾಯ ನೀಡಲಾಗುವ ಹಂಚಿಕೆಯ ಅಂತಿಮ ತಿಳಿವಳಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ ಏಕ ಗಂಟಿನಲ್ಲಿ ಸಂದಾಯ ಮಾಡತಕ್ಕದ್ದು.

(3) ಮನೆಯ ಪ್ರಾರಂಭಿಕ ಠೇವಣಿ/ಪರಿಷ್ಕೃತ ಬೆಲೆಯ ಸಂದಾಯಕ್ಕಾಗಿ, ಮೇಲ್ಕಂಡ (1) ಮತ್ತು (2)ನೇ ಖಂಡಗಳಲ್ಲಿ ಅನುಮತಿಸಲಾದ ಅವಧಿಯನ್ನು, ಗೃಹ ನಿರ್ಮಾಣ ಕಮಿಷನರರ ವಿವೇಚನಾನುಸಾರ, ನೋಂದಣಿ ಶುಲ್ಕ/ಮುಂಗಡ ಹಣದ ಠೇವಣಿಯ ಶೇಕಡಾ 25 ರಷ್ಟಕ್ಕೆ ಸಮನಾದ ದಂಡವನ್ನು ಸಂದಾಯಮಾಡುವುದಕ್ಕೆ ಒಳಪಟ್ಟು ಇನ್ನು 30 ದಿವಸಗಳವರೆಗೆ ವಿಸ್ತರಿಸಬಹುದು.

(4) ಮೇಲ್ಕಂಡ (1)ನೇ ಖಂಡದಲ್ಲಿ ನಮೂದಿಸಿದ ಅಥವಾ (2)ನೇ ಖಂಡದ ಮೇರೆಗೆ ವಿಸ್ತರಿಸಲಾದ ಸಮಯದೊಳಗೆ ಪ್ರಾರಂಭಿಕ ಠೇವಣಿಯನ್ನು/ಮನೆಯ ಪರಿಷ್ಕೃತ ಬೆಲೆಯನ್ನು ಸಂದಾಯ ಮಾಡದಿದ್ದರೆ ಹಂಚಿಕೆ ಪಡೆದವನು ಮನೆ/ನಿವೇಶನದ ಹಂಚಿಕೆಯನ್ನು ಕ್ಲೇಮು ಮಾಡುವ ತನ್ನ ಹಕ್ಕನ್ನು ಕಳೆದುಕೊಳ್ಳತಕ್ಕದ್ದು ಮತ್ತು ಹಂಚಿಕೆಯನ್ನು ರದ್ದುಪಡಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಅವನು ಸಂದಾಯ ಮಾಡಿರುವ ಮುಂಗಡ ಠೇವಣಿ ಹಣದ/ನೋಂದಣಿ ಶುಲ್ಕದ ಶೇಕಡಾ 25 ರಷ್ಟು ಮಂಡಲಿಗೆ ಮುಟ್ಟುಗೋಲಾಗತಕ್ಕದ್ದು.

(5) ಮನೆಯ ಪರಿಷ್ಕೃತ ಬೆಲೆಯನ್ನು ಸಂದಾಯಮಾಡಿದ ತರುವಾಯ, ಹಂಚಿಕೆ ಪಡೆದವನು ಮಂಡಲಿಯು ನಿಗದಿಪಡಿಸಬಹುದಾದಂಥ ಅವಧಿಯೊಳಗೆ ಮಂಡಲಿಯು ನಿಯಮಿಸಿದ ನಮೂನೆಯಲ್ಲಿ ಒಂದು ಒಪ್ಪಂದವನ್ನು ಬರೆದುಕೊಡತಕ್ಕದ್ದು. ಮಂಡಲಿಯು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಗುತ್ತಿಗೆ ಹಾಗೂ ಮಾರಾಟದ ಒಪ್ಪಂದವನ್ನು ಬರೆದುಕೊಡದಿದ್ದರೆ, ಹಂಚಿಕೆ ಪಡೆದವನು ಸಂದಾಯಮಾಡಿದ ಮುಂಗಡ ಹಣದ ಠೇವಣಿಯ/ನೋಂದಣಿ ಶುಲ್ಕದ ಶೇಕಡಾ 50 ರಷ್ಟು ಮುಟ್ಟುಗೋಲಾಗತಕ್ಕದ್ದು:

ಪರಂತು, ಮುಂಗಡ ಹಣದ ಠೇವಣಿಯ/ನೋಂದಣಿ ಶುಲ್ಕದ ಶೇಕಡಾ 50 ರಷ್ಟರ ಮುಟ್ಟುಗೋಲಿಗೆ ಒತ್ತಾಯಪಡಿಸದೆ, ಗುತ್ತಿಗೆ ಹಾಗೂ ಮಾರಾಟದ ಒಪ್ಪಂದವನ್ನು ಬರೆದುಕೊಡಲು ಸೂಕ್ತ ಕಾರಣಗಳಿಗಾಗಿ ಇನ್ನೂ ಒಂದು ತಿಂಗಳ ಅವಧಿಗಾಗಿ ಈಗಾಗಲೇ ಅನುಮತಿಸಲಾದ ಅವಧಿಯನ್ನು ಗೃಹ ನಿರ್ಮಾಣ ಕಮಿಷನರರು ವಿಸ್ತರಿಸಬಹುದು. ವಿಸ್ತರಿಸಲಾದ ಅವಧಿಯಲ್ಲೂ ಗುತ್ತಿಗೆ ಹಾಗೂ ಮಾರಾಟದ ಒಪ್ಪಂದವನ್ನು ಬರೆದುಕೊಡದಿದ್ದರೆ, ಮನೆಯ ಹಂಚಿಕೆಯನ್ನು ರದ್ದು ಪಡಿಸಿರುವುದಾಗಿ ಭಾವಿಸತಕ್ಕದ್ದು.

(6) ಮನೆಯ ಬೆಲೆಯ ಬಾಕಿಯನ್ನು, ಗುತ್ತಿಗೆ ಹಾಗೂ ಮಾರಾಟದ ಒಪ್ಪಂದದ ದಿನಾಂಕದಿಂದ ಹಂಚಿಕೆ ಪಡೆದವನಿಗೆ ಮಂಡಲಿಯು ನೀಡಿದ ಮತ್ತು ಕಾಲಕಾಲಕ್ಕೆ ಮಂಡಲಿಯು ನಿಗದಿಪಡಿಸಬಹುದಾದ ಬಡ್ಡಿದರಗಳಲ್ಲಿ ಹಾಗೂ ಈ ಮುಂದೆ ನಮೂದಿಸಿದ ಆರ್ಚರ್ಸ್ ಕೋಷ್ಟಕದ ಪ್ರಕಾರ ಸಮಾನ ಮಾಸಿಕ ಕಂತುಗಳಲ್ಲಿ, ಮರುಸಂದಾಯವಾಗತಕ್ಕ ಸಾಲವೆಂದು ಪರಿಗಣಿಸತಕ್ಕುದು:

| | |
|---|---|
| 1. ಆರ್ಥಿಕವಾಗಿ ದುರ್ಬಲ ವರ್ಗ/ಕಡಿಮೆ ವರಮಾನ ಸಮೂಹ(ಎ) ದವರಿಗೆ ನಗರ ಗೃಹ ನಿರ್ಮಾಣ | 20 ವರ್ಷಗಳು |
| 2. ಆರ್ಥಿಕವಾಗಿ ದುರ್ಬಲ ವರ್ಗ/ಕಡಿಮೆ ವರಮಾನ ಸಮೂಹ(ಬಿ) ದವರಿಗೆ ನಗರ ಗೃಹ ನಿರ್ಮಾಣ | 15 ವರ್ಷಗಳು |
| 3. ಮಧ್ಯಮ ವರ್ಗದವರಿಗೆ ಗೃಹನಿರ್ಮಾಣ ಯೋಜನೆ | 12 ವರ್ಷಗಳು |
| 4. ಹೆಚ್ಚಿನ ವರಮಾನ ಸಮೂಹದವರಿಗೆ ಗೃಹನಿರ್ಮಾಣ ಯೋಜನೆ | 10 ವರ್ಷಗಳು |

(7) ಹಂಚಿಕೆ ಪಡೆದವನು, ಮೂಲತಃ ನಮೂದಿಸಿದ ಅವಧಿಗಿಂತ ಕಡಿಮೆ ಅವಧಿಯಲ್ಲಿ ಮನೆಯ ಬೆಲೆಯ ಬಾಕಿಯನ್ನು ಮರುಸಂದಾಯ ಮಾಡುವ ಮೂಲಕ ಮಾಸಿಕ ಸಮ ಕಂತುಗಳನ್ನು ಬದಲಾವಣೆ ಮಾಡಬಯಸುವ ಸಂದರ್ಭದಲ್ಲಿ, ಅವನು, ನಿಯಮಿತ ಒಪ್ಪಂದವನ್ನು ಬರೆದುಕೊಡುವ ಸಮಯದಲ್ಲಿ ಅವನು ಚಲಾಯಿಸಿದ ಮೊದಲ ಆಯ್ಕೆಯ ಅವಕಾಶವನ್ನು ಹೊರತುಪಡಿಸಿ, ಮರುಸಂದಾಯದ ಇಡೀ ಅವಧಿಯು ಚಾಲ್ತಿಯಲ್ಲಿರುವಾಗ ಮಾಸಿಕ ಸಮ ಕಂತುಗಳ ಸಂಖ್ಯೆಯನ್ನು ಮತ್ತು ಮೊಬಲಗಿನ ಪ್ರಮಾಣವನ್ನು ಬದಲಾಯಿಸುವ ಬಗ್ಗೆ ಗರಿಷ್ಠ ಎರಡು ಆಯ್ಕೆಯ ಅವಕಾಶಗಳನ್ನು ಚಲಾಯಿಸಬಹುದು. ಹಂಚಿಕೆ ಪಡೆದವನು ಚಲಾಯಿಸಬಹುದಾದ ಅಂಥ ಯಾವುದೇ ಆಯ್ಕೆಯ ಅವಕಾಶವು ಮರುಸಂದಾಯದ ಅವಧಿಯನ್ನು ಕಡಿಮೆ ಮಾಡುವುದಕ್ಕಾಗಿ ಇರತಕ್ಕುದೇ ಹೊರತು ಅದನ್ನು ವಿಸ್ತರಿಸುವುದಕ್ಕಾಗಿ ಇರತಕ್ಕುದಲ್ಲ, ಅಂಥ ಸಂದರ್ಭಗಳಲ್ಲಿ ಮಾರಾಟದ ಬೆಲೆಯ ಬಾಕಿಯ ವಸೂಲಿಯನ್ನು ಈ ಕೆಳಕಂಡಂತೆ ವಿನಿಯಮಿಸಲಾಗುವುದು:–

(ಎ) ಬಡ್ಡಿ ಸಹಿತ ಬೆಲೆಯ ಮೊಬಲಗಿನ ವಸೂಲಿಯ ವಿಧಾನವು ಆರ್ಚರ್ಸ್ ಕೋಷ್ಟಕದ ಪ್ರಕಾರ ಮಾಸಿಕ ಸಮಕಂತುಗಳಲ್ಲಿ ಮುಂದುವರಿಯತಕ್ಕುದು ;

(ಬಿ) ಆಯ್ಕೆಯ ಅವಕಾಶವನ್ನು ಚಲಾಯಿಸುವ ದಿನಾಂಕಕ್ಕೆ ಮೊದಲು ಬಾಕಿ ಇದ್ದ ಬೆಲೆಯ ಬಾಕಿ ಮೊಬಲಗನ್ನು ಲೆಕ್ಕ ಹಾಕುವ ಉದ್ದೇಶಗಳಿಗಾಗಿ, ಮಾರಾಟ ಬೆಲೆಯ ಹೊಸ ಬಾಕಿ ಎಂದು ಪರಿಗಣಿಸತಕ್ಕುದು ಮತ್ತು ಅದು ಮುಂದಿನ ಲೆಕ್ಕದ ದಿನಾಂಕದಿಂದ ಜಾರಿಗೆ ಬರುವುದು ;

(ಸಿ) ಆಯ್ಕೆಯ ಅವಕಾಶವನ್ನು ಚಲಾಯಿಸುವುದಕ್ಕೆ ಮುಂಚೆ ಹಂಚಿಕೆ ಪಡೆದವನಿಂದ ಸ್ವೀಕರಿಸಿದ ಬಡ್ಡಿಯ ದರ ಮತ್ತು ಬಡ್ಡಿಯ ಮೊಬಲಗು ಈ ಕೆಳಕಂಡ (8)ನೇ ಖಂಡದ ಉಪಬಂಧಗಳಿಗೆ ಒಳಪಟ್ಟು ಬದಲಾಗದೆ ಮತ್ತು ವ್ಯತ್ಯಾಸಗೊಳ್ಳದೆ ಉಳಿಯುವುದು.

(8) ಹಂಚಿಕೆ ಪಡೆದವನಿಗೆ ಮೇಲೆ ವಿವರಿಸಲಾಗಿರುವ ಅಥವಾ ಗುತ್ತಿಗೆ ಹಾಗೂ ಮಾರಾಟದ ಒಪ್ಪಂದದಲ್ಲಿ ಒಪ್ಪಿಕೊಂಡಿರುವ ಅವಧಿಗಿಂತ ಕಡಿಮೆ ಅವಧಿಯಲ್ಲಿ ಬಡ್ಡಿ ಸಹಿತ ಸಾಲದ ಮೊಬಲಗನ್ನು ಮರುಸಂದಾಯಮಾಡಲು ಅವಕಾಶವಿರತಕ್ಕುದು. ಹಂಚಿಕೆಪಡೆದವನು, (5)ನೇ ಖಂಡದಲ್ಲಿ ನಮೂದಿಸಿದ ಅವಧಿಯ ಅರ್ಧದಷ್ಟು ಅವಧಿಯೊಳಗೆ ತನ್ನ ಪೂರ್ಣ ಹೊಣೆಗಾರಿಕೆಯಿಂದ ಮುಕ್ತನಾಗಲು ಸುಸ್ತಿ ಬಾಕಿ ಇರುವ ಕಂತುಗಳ ಮೇಲಣ ದಂಡದ ಬಡ್ಡಿಯೂ ಸೇರಿ ಬಡ್ಡಿ ಸಮೇತ ಪೂರ್ಣ ಮೊಬಲಗನ್ನು ಮರು ಸಂದಾಯಮಾಡಿದರೆ, ಅವನು ಸಂದಾಯಮಾಡಬೇಕಾದ ಪೂರ್ಣ ಸಾಲದ ಮೊಬಲಗಿನ ಮೇಲೆ ಶೇಕಡಾ $^1/_2$ ರಷ್ಟು ಬಡ್ಡಿಯ ಸೋಡಿ ಪಡೆಯಲು ಹಕ್ಕುಳ್ಳವನಾಗಿರತಕ್ಕುದು. ಬಡ್ಡಿಯಲ್ಲಿನ ಶೇಕಡಾ ಸೋಡಿಯ ಪ್ರಯೋಜನವನ್ನು ಅಂತಿಮ ಲೆಕ್ಕಗಳಲ್ಲಿ ಹೊಂದಾಣಿಕೆ ಮಾಡತಕ್ಕುದು.

(9) ಹಂಚಿಕೆ ಪಡೆದವನು, ಯಾವುದೇ ಮಾಸಿಕ ಕಂತನ್ನು ಸಂದಾಯ ಮಾಡಲು ತಪ್ಪಿದರೆ, ಅವನು ತಿಂಗಳಿಗೆ ಶೇಕಡಾ 2 ರಷ್ಟು ದಂಡದ ಬಡ್ಡಿ ಸಂದಾಯಮಾಡಲು ಬದ್ಧನಾಗಿರತಕ್ಕುದು. ಹಾಗೆ ಮೂರು ತಿಂಗಳಿಗೂ ಮೀರಿ ಸಂದಾಯ ಮಾಡುವಲ್ಲಿ ತಪ್ಪಿದರೆ, ಮಂಡಲಿಯು, ಹಂಚಿಕೆ ಪಡೆದವನಿಗೆ ಯಾವುದೇ ನಷ್ಟಪರಿಹಾರವನ್ನು ಕೊಡದೆ ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962ರ 45ನೇ ಪ್ರಕರಣದ ಮೇರೆಗೆ ಮನೆ/ನಿವೇಶನವನ್ನು ಪುನಃ ವಶಪಡಿಸಿಕೊಳ್ಳತಕ್ಕುದು ಮತ್ತು ಈ ವಿನಿಯಮಗಳಿಗೆ ಅನುಸಾರವಾಗಿ ಅದನ್ನು ಮರುಹಂಚಿಕೆ ಮಾಡತಕ್ಕುದು.

(10) ಹಂಚಿಕೆ ಪಡೆದವನು, ಹಂಚಿಕೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ತಪ್ಪು ನಿರೂಪಣೆ ಅಥವಾ ಸುಳ್ಳು ಹೇಳಿಕೆಯನ್ನು ನೀಡಿರುವುದು ಯಾವುದೇ ಸಮಯದಲ್ಲಿ ಕಂಡುಬಂದರೆ ಮಂಡಲಿಯು, ನಿವೇಶನ/ಮನೆಯ ಹಂಚಿಕೆಯನ್ನು ರದ್ದುಪಡಿಸುವ ಮತ್ತು ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಹಕ್ಕನ್ನು ಹೊಂದಿರತಕ್ಕುದು.

(11) ಹಂಚಿಕೆ ಪಡೆದವನು, ತಾನು ಬರೆದುಕೊಟ್ಟ ಒಪ್ಪಂದದಲ್ಲಿ ನಿರೂಪಿಸಿದ ಎಲ್ಲ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಮಂಡಲಿಯ ಅಧಿನಿಯಮ, ನಿಯಮಗಳು ಮತ್ತು ವಿನಿಯಮಗಳ ಉಪಬಂಧಗಳನ್ನು ಅನುಸರಿಸತಕ್ಕುದು ಮತ್ತು ಪಾಲಿಸತಕ್ಕುದು.

**13. ಪೂರ್ತಿಯಾಗಿ ಮಾರಾಟದ ಆಧಾರದ ಮೇಲೆ ಮನೆಗಳ ಹಂಚಿಕೆ.–** ಮಂಡಲಿಯು, ಪೂರ್ತಿಯಾಗಿ ಮಾರಾಟದ ಆಧಾರದ ಮೇಲೆ ಮನೆ/ನಿವೇಶನಗಳನ್ನು ಹಂಚಿಕೆ ಮಾಡಲು ಅಧಿಸೂಚಿಸಿರುವಲ್ಲಿ, ಹಂಚಿಕೆ ಪಡೆದವನು, ಗುತ್ತಿಗೆ ಹಾಗೂ ಮಾರಾಟದ ಒಪ್ಪಂದವನ್ನು ಬರೆದುಕೊಡುವುದಕ್ಕೆ ಮುಂಚೆ, ಮಂಡಲಿಯು ನಿರ್ಧರಿಸಿದಂತೆ ಮನೆಯ ಪೂರ್ಣ ಬೆಲೆಯನ್ನು ಸಂದಾಯಮಾಡತಕ್ಕುದು. 13ನೇ ನಿಯಮದ (1) ರಿಂದ (5)ರ ವರೆಗಿನ ಷರತ್ತುಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಹಂಚಿಕೆ ಪಡೆದ ಇವರಿಗೂ ಅನ್ವಯವಾಗುವುದು.

**14.** ಹಂಚಿಕೆ ಮಾಡಲಾದ ನಿವೇಶನ/ಮನೆಗಳನ್ನು ಹಂಚಿಕೆ ಪಡೆದವನು, 10 ವರ್ಷಗಳಾಗಿರತಕ್ಕಂಥ ಗುತ್ತಿಗೆ ಅವಧಿಯಲ್ಲಿ, ಅದಕ್ಕಿಂತ ಕಡಿಮೆ ಅವಧಿಯೊಳಗೆ ಬಡ್ಡಿ ಸಹಿತ ಪೂರ್ಣ ಬೆಲೆಯನ್ನು ಅವನು ಸಂದಾಯ ಮಾಡಿದಾಗ್ಯೂ, ಮಾರಾಟ, ವರ್ಗಾವಣೆ, ಅಡಮಾನ, ದಾನ ಅಥವಾ ಇತರ ರೀತಿಯಲ್ಲಿ ವರ್ಗಾಯಿಸತಕ್ಕುದಲ್ಲ ಅಥವಾ ಪರಭಾರೆ ಮಾಡತಕ್ಕದ್ದಲ್ಲ:

ಪರಂತು, ಮಂಡಲಿಯಿಂದ ತೆಗೆದುಕೊಂಡ ಬಾಕಿ ಸಾಲವನ್ನು ಬಡ್ಡಿಯೊಂದಿಗೆ ತೀರಿಸುವ ಉದ್ದೇಶಕ್ಕಾಗಿ ಅಥವಾ ಮಂಡಲಿಯು ಹಂಚಿಕೆ ಮಾಡಿದ ಮನೆಯ ಸುಧಾರಣೆಯ ಉದ್ದೇಶಕ್ಕಾಗಿ ರಾಜ್ಯ/ಕೇಂದ್ರ ಸರ್ಕಾರದಿಂದ ಮತ್ತು ಮಂಡಲಿಯು ಮನ್ನಣೆ ಮಾಡಿದ ಹಾಗೂ ಗೃಹನಿರ್ಮಾಣದ ಉದ್ದೇಶಕ್ಕಾಗಿ ಸಾಲಗಳನ್ನು ಕೊಡುವ ಇತರ ಸಂಸ್ಥೆಗಳಿಂದ ಸಾಲವನ್ನು ಪಡೆಯುವುದಕ್ಕಾಗಿ ಮಂಡಲಿಯು ಹಂಚಿಕೆ ಮಾಡಿದ ನಿವೇಶನ/ಮನೆಯನ್ನು ಅಡಮಾನ ಮಾಡಲು ಅನುಮತಿಸಬಹುದು.

[1][**14ಎ.** 14ನೇ ವಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಗುತ್ತಿಗೆದಾರನು, 14ನೇ ವಿನಿಯಮವನ್ನು ಉಲ್ಲಂಘಿಸಿ ನಿವೇಶನ / ಮನೆಯನ್ನು ಪರಭಾರೆ ಮಾಡಿರುವಲ್ಲಿ, ಮಂಡಳಿಯು, ಅಂಥ ನಿವೇಶನ / ಮನೆಯ ಖರೀದಿದಾರನ ಅರ್ಜಿಯ ಮೇಲೆ, ರಾಜ್ಯ ಸರ್ಕಾರ/ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ನಿರ್ದಿಷ್ಟಪಡಿಸಿದ ದರಗಳಲ್ಲಿ ನೋಂದಣಿಯ ಉದ್ದೇಶಕ್ಕಾಗಿ, ಕಾಲಕಾಲಕ್ಕೆ ನಿವೇಶನದ ಮೌಲ್ಯ/ ಮನೆಯ ಮೌಲ್ಯದ ಶೇಕಡಾ ಇಪ್ಪತ್ತೈದಕ್ಕೆ ಸಮನಾದ ಮೊತ್ತವನ್ನು ಖರೀದಿದಾರನು ಸಂದಾಯ ಮಾಡುವುದಕ್ಕೆ ಒಳಪಟ್ಟು, ಅಂಥ ಪರಭಾರೆಯನ್ನು ಸಕ್ರಮಗೊಳಿಸುವುದಕ್ಕೆ ಆದೇಶಿಸಬಹುದು ಮತ್ತು ಅಂಥ ಖರೀದಿದಾರನಿಗೆ ಸ್ವಾಮ್ಯವನ್ನು ಹಸ್ತಾಂತರಿಸಬಹುದು.][1]

1. ಅಧಿಸೂಚನೆ ಸಂಖ್ಯೆ: ಕೆಎಚ್‌ಬಿ/ಎಎಲ್‌ಟಿ-1/1512/2002-2003 ದಿನಾಂಕ: 5.4.2002 ರ ಮೂಲಕ 22.8.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. (ಪಿಡಿ 85)

**15.** ಹಂಚಿಕೆ ಮಾಡಿದ ನಿವೇಶನ/ಮನೆಯ ಇಡೀ ಬೆಲೆಯನ್ನು ಬಡ್ಡಿಯೊಂದಿಗೆ ಪೂರ್ಣವಾಗಿ ಸಂದಾಯಮಾಡುವವರೆಗೆ ಮತ್ತು ಕನಿಷ್ಠ 10 ವರ್ಷಗಳ ಗುತ್ತಿಗೆ ಅವಧಿಯು ಮುಗಿಯುವವರೆಗೆ ಆ ನಿವೇಶನ/ಮನೆಯ ಸಂಬಂಧದಲ್ಲಿ ಹಂಚಿಕೆ ಪಡೆದವನ ಹೆಸರಿಗೆ ಯಾವುದೇ ಕ್ರಯಪತ್ರವನ್ನು ಬರೆದುಕೊಡತಕ್ಕದ್ದಲ್ಲ:

ಪರಂತು, ಮಂಡಲಿಯು, 5 ವರ್ಷಗಳ ತರುವಾಯ ಹಂಚಿಕೆ ಪಡೆದವನ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಡಲು ಅನುಮತಿಸಬಹುದು: ಪರಂತು, ಹಂಚಿಕೆ ಪಡೆದವನು, ಹೆಚ್ಚಿನ ವರಮಾನ ಸಮೂಹದ ಮನೆಗಳ ಸಂದರ್ಭದಲ್ಲಿ ಮನೆಯ ಬೆಲೆಯ ಶೇಕಡಾ 25 ರಷ್ಟು, ಮಧ್ಯಮ ವರಮಾನ ಸಮೂಹದ ಮನೆಗಳ ಸಂದರ್ಭದಲ್ಲಿ ಮನೆಯ ಬೆಲೆಯ ಶೇಕಡಾ 15 ರಷ್ಟು, ಕಡಿಮೆ ವರಮಾನ ಸಮೂಹದ ಮನೆಗಳ ಸಂದರ್ಭದಲ್ಲಿ ಮನೆಯ ಬೆಲೆಯ ಶೇಕಡಾ 10 ರಷ್ಟು ಮತ್ತು ಆರ್ಥಿಕವಾಗಿ ದುರ್ಬಲರಾದವರ ವರ್ಗದ ಮನೆಗಳ ಸಂದರ್ಭದಲ್ಲಿ ಮನೆಯ ಬೆಲೆಯ ಶೇಕಡಾ 5 ರಷ್ಟಕ್ಕೆ ಸಮನಾದ ಜುಲ್ಮಾನೆಯೊಂದಿಗೆ ಮನೆಯ ಇಡೀ ಬೆಲೆಯನ್ನು ಸಂದಾಯಮಾಡಿರಬೇಕು.

[1][**15ಎ.** ಈ ವಿನಿಯಮದಲ್ಲಿ ಇರುವುದು ಯಾವುದೂ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಥವಾ ಯಾವುದೇ ಫರ್ಮು, ಕಂಪನಿ, ನಿಗಮ, ಮುಂತಾದವುಗಳಿಂದ ನಿರ್ವಹಿಸಲಾದ, ಜಂಟಿ ಉದ್ಯಮ ಪಾಲುದಾರನಿಗೆ ಸೇರಿದ ಜಮೀನಿನಲ್ಲಿ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗಿರುವಲ್ಲಿ ಅಥವಾ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಮತ್ತು ಜಂಟಿ ಉದ್ಯಮ ಪಾಲುದಾರ ಅಥವಾ ಪಾಲುದಾರರು ಸರ್ಕಾರದಿಂದ ಅನುಮೋದಿಸಲಾದ ಒಂದು ಜಂಟಿ ಉದ್ಯಮ ಯೋಜನೆಯಲ್ಲಿ ಬಂಡವಾಳ ತೊಡಗಿಸಲು ವಂತಿಗೆ ನೀಡಿರುವಲ್ಲಿ ಯಾವುವೇ ಸಹಕಾರಿ ಗೃಹ ನಿರ್ಮಾಣ ಸಂಘ, ನಿಗಮ, ಕಂಪನಿ, ಸಂಸ್ಥೆ, ಸಂಘ, ಖಾಸಗಿ ಉದ್ಯಮ ಅಥವಾ ಒಂದು ಖಾಸಗಿ ಫರ್ಮು ಜೊತೆಗೂಡಿ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಿಂದ ವೃದ್ಧಿಗೊಳಿಸಲಾದ ಜಂಟಿ ಉದ್ಯಮ ಯೋಜನೆಗಳಿಗೆ ಅನ್ವಯವಾಗತಕ್ಕದ್ದಲ್ಲ.][1]

1. ಅಧಿಸೂಚನೆ ಸಂಖ್ಯೆ: ಕೆಎಚ್‌ಬಿ/ಎಎಲ್‌ಟಿ-1/49/2002-2003 ದಿನಾಂಕ: 30.4.2002 ರ ಮೂಲಕ 25ನೇ ಜುಲೈ 2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**16.** ಕರ್ನಾಟಕ ಗೃಹನಿರ್ಮಾಣ ಮಂಡಲಿ (ಹಂಚಿಕೆ) ವಿನಿಯಮಗಳು, 1967 ಇವು ಈ ಮೂಲಕ ನಿರಸಿತವಾಗಿವೆ :

ಪರಂತು, ಸದರಿ ವಿನಿಯಮಗಳ ಮೇರೆಗೆ ಹಂಚಿಕೆಗಾಗಿ ಸ್ವೀಕರಿಸಿದ ಮತ್ತು ಇತ್ಯರ್ಥವಾಗದೆ ಉಳಿದಿರುವ ಅರ್ಜಿಗಳನ್ನು ಈ ವಿನಿಯಮಗಳಿಗೆ ಅನುಸಾರವಾಗಿ ವಿಲೆ ಮಾಡತಕ್ಕದ್ದು.

ಸಹಿ

**ಆರ್. ಎಸ್. ಸುಜಾತ**

ಸರ್ಕಾರದ ಉಪ ಕಾರ್ಯದರ್ಶಿ,
ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ
(ಗೃಹನಿರ್ಮಾಣ).

## ಕರ್ನಾಟಕ ಗೃಹನಿರ್ಮಾಣ ಮಂಡಲಿ (ಹಂಚಿಕೆ) ವಿನಿಯಮಗಳು, 1983

**ಓದಲಾಗಿದೆ.–** 1. ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಯುಡಿ 31 ಎಲ್‌ಐಹೆಚ್ 77, ದಿನಾಂಕ 7ನೇ ಜುಲೈ, 1983.

2. ಗೃಹ ನಿರ್ಮಾಣ ಕಮಿಷನರ್, ಕರ್ನಾಟಕ ಗೃಹ ನಿರ್ಮಾಣ ಮಂಡಲಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ ಕೆಹೆಚ್‌ಬಿ/ಆರ್‌ಸಿ/ಪಿಎಸ್/ 194/83–84 ದಿನಾಂಕ 24–1–1984.

**ಪ್ರಸ್ತಾವನೆ.–** ಮೇಲ್ಕಂಡ (1)ನೇ ಸಂಖ್ಯೆಯಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಗೃಹನಿರ್ಮಾಣ ಮಂಡಲಿಯ ಪರಿಷ್ಕೃತ ಹಂಚಿಕೆ ವಿನಿಯಮಗಳನ್ನು ಪ್ರಕಟಿಸಲಾಗಿತ್ತು. ಈ ವಿನಿಯಮಗಳಿಗನುಸಾರವಾಗಿ, ಪ್ರತಿಯೊಂದು ಪ್ರವರ್ಗಗಳ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆಯು, ಆ ವರ್ಗಗಳಿಗಾಗಿ ಕಾಯ್ದಿರಿಸಿದ ಮನೆಗಳ ಸಂಖ್ಯೆಗಿಂತ ಹೆಚ್ಚಾಗಿರುವಲ್ಲಿ, ಹಂಚಿಕೆಯನ್ನು ಚೀಟಿ ಎತ್ತುವ ಮೂಲಕ ಮಾಡತಕ್ಕುದು. ಆದಾಗ್ಯೂ, ಮನೆಗಳು/ನಿವೇಶನಗಳನ್ನು ಅಧಿಸೂಚಿಸಲಾಗಿರುವ ಪ್ರತಿಯೊಂದು ಪ್ರದೇಶದಲ್ಲಿ ಸರ್ಕಾರದ ಪೂರ್ವಾನುಮೋದನೆ ಪಡೆದು ಮಂಡಲಿಯು ತನ್ನ ವಿವೇಚನಾನುಸಾರ ವಿಲೆ ಮಾಡಬಹುದಾದ ಗರಿಷ್ಠ 10ರ ಮಿತಿಗೆ ಒಳಪಟ್ಟು, ಪ್ರತಿಯೊಂದು ಪ್ರವರ್ಗದಲ್ಲಿ ಶೇಕಡಾ 10 ರಷ್ಟು ವಿವೇಚನಾನುಸಾರ ಕೋಟಾ ಇರತಕ್ಕದ್ದು.

ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಗೃಹನಿರ್ಮಾಣ ಕಮಿಷನರನು ಮೇಲ್ಕಂಡ (2)ನೇ ಸಂಖ್ಯೆಯಲ್ಲಿ ಓದಲಾದ ಅವನ ಪ್ರತದಲ್ಲಿ ಪ್ರತಿಯೊಂದು ಪ್ರವರ್ಗದ ವಿವೇಚನಾನುಸಾರ ಕೋಟಾವನ್ನು ಶೇಕಡಾ 10ರಿಂದ ಶೇ 20ಕ್ಕೆ ಹೆಚ್ಚಿಸುವ ಮತ್ತು ಈ ಕೋಟಾದ ವ್ಯಾಪ್ತಿಯಲ್ಲಿ ಬರುವ ಮನೆಗಳು/ನಿವೇಶನಗಳನ್ನು ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಮಂಡಲಿಯು ತನ್ನ ವಿವೇಚನಾನುಸಾರವಾಗಿ ವಿಲೆ ಮಾಡಬಹುದು ಎಂಬ ಪ್ರಸ್ತಾವವನ್ನು ಕಳುಹಿಸಿರುವನು.

ಸರ್ಕಾರವು, ಮಂಡಲಿಯ ವಿವೇಚನಾನುಸಾರ ಕೋಟಾವನ್ನು ಹೆಚ್ಚಿಸುವ ಪ್ರಸ್ತಾವವನ್ನು ಪರಿಶೀಲಿಸಿತು.

### ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಯುಡಿ 14, ಕೆಹೆಚ್‌ಬಿ 84, ಬೆಂಗಳೂರು
### ದಿನಾಂಕ 14ನೇ ಆಗಸ್ಟ್ 1984

ಸರ್ಕಾರವು, 1983ರ ಜುಲೈ 7ನೇ ದಿನಾಂಕದ ಸರ್ಕಾರಿ ಆದೇಶದಲ್ಲಿ ಅನುಮೋದಿಸಲಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಹಂಚಿಕೆ) ವಿನಿಯಮಗಳು, 1983ರ 4ನೇ ನಿಯಮದ (1)ನೇ ಉಪನಿಯಮಕ್ಕೆ ಈ ಕೆಳಕಂಡುದನ್ನು ಪ್ರತಿಯೋಜಿಸುವ ಮೂಲಕ ತಿದ್ದುಪಡಿ ಮಾಡಿದೆ.

(4) (1) ಮಂಡಲಿಯು, ಸ್ವತಃ ಅಥವಾ ಸರ್ಕಾರದ ನಿರ್ದೇಶನಗಳ ಮೇರೆಗೆ ಯಾವುದೇ ನಿರ್ದಿಷ್ಟ ವರ್ಗದ ವ್ಯಕ್ತಿಗಳಿಗೆ ಯಾವುದೇ ಪ್ರದೇಶದಲ್ಲಿ ಹಂಚಿಕೆಮಾಡಲು ನಿವೇಶನಗಳನ್ನು/ಮನೆಗಳನ್ನು ಕಾಯ್ದಿರಿಸಬಹುದು ಮತ್ತು ಅಂಥ ವ್ಯಕ್ತಿಗಳ ವರ್ಗವು ನಿವೇಶನಗಳನ್ನು ರಚಿಸಲಾಗಿರುವ/ಮನೆಗಳನ್ನು ನಿರ್ಮಿಸಲಾಗಿರುವ ನಗರ, ಪಟ್ಟಣ ಅಥವಾ ಇತರ ಪ್ರದೇಶಗಳಲ್ಲಿರುವ ಯಾವುದೇ ಕಚೇರಿಯಲ್ಲಿ ಅಥವಾ ಸ್ಥಾಪನೆಯಲ್ಲಿರುವ ನೌಕರರನ್ನು ಒಳಗೊಂಡಿರಬಹುದು. ಮನೆಗಳು/ನಿವೇಶನಗಳನ್ನು ಅಧಿಸೂಚಿಸಲಾಗಿರುವ ಪ್ರತಿಯೊಂದು ಪ್ರದೇಶದಲ್ಲಿ, ಮಂಡಲಿಯು ತನ್ನ ವಿವೇಚನಾನುಸಾರ ವಿಲೆ ಮಾಡಬಹುದಾದ ಪ್ರತಿಯೊಂದು ಪ್ರವರ್ಗದ ಮನೆಗಳು/ನಿವೇಶನಗಳನ್ನು ಶೇಕಡಾ 20ರ ವರೆಗೆ ವಿವೇಚನಾನುಸಾರ ಕೋಟಾವನ್ನು ಕಾಯ್ದಿರಿಸತಕ್ಕದ್ದು.

## [1][ಕರ್ನಾಟಕ ಗೃಹನಿರ್ಮಾಣ ಮಂಡಲಿ (ಹಂಚಿಕೆ) (ನಾಲ್ಕನೇ ತಿದ್ದುಪಡಿ) ವಿನಿಯಮಗಳು, 1993

1. ಕರ್ನಾಟಕ ರಾಜ್ಯಪತ್ರ ಭಾಗ–IV , ವಿಭಾಗ 2ಸಿ(i) (ವಿಶೇಷ) ಸಂಖ್ಯೆ 263, ದಿನಾಂಕ: 6.4.1994ರಲ್ಲಿ ಪ್ರಕಟಿಸಲಾಗಿದೆ.

### ಅಧಿಸೂಚನೆ
### ಸಂಖ್ಯೆ: ಎಚ್‌ಯುಡಿ 712 ಕೆಎಚ್‌ಬಿ, 93 ಬೆಂಗಳೂರು, ದಿನಾಂಕ: 31ನೇ ಮಾರ್ಚ್ 1994

**ಜಿ.ಎಸ್.ಆರ್. 64:–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10)ರ 76ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಹಂಚಿಕೆ) ವಿನಿಯಮಗಳು, 1983ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಹಂಚಿಕೆ) ವಿನಿಯಮಗಳ (ನಾಲ್ಕನೇ ತಿದ್ದುಪಡಿ) ನಿಯಮಗಳು, 1993 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕೂಡಲೇ ಜಾರಿಗೆ ಬರತಕ್ಕದ್ದು.

**2. 4ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಹಂಚಿಕೆ) ವಿನಿಯಮಗಳು, 1993ರ 4ನೇ ನಿಯಮದ (1)ನೇ ಉಪನಿಯಮಕ್ಕೆ ಬದಲಾಗಿ ಈ ಮುಂದಿನ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**"4. ನಿವೇಶನಗಳ / ಮನೆಗಳ ಮೀಸಲಾತಿ.–** (1) ಮಂಡಲಿಯು ತಾನಾಗಿಯೇ ಅಥವಾ ಸರ್ಕಾರದ ನಿರ್ದೇಶನಗಳ ಮೂಲಕ ಯಾವುದೇ ನಿರ್ದಿಷ್ಟ ವರ್ಗದ ವ್ಯಕ್ತಿಗಳಿಗೆ ಹಂಚಿಕೆ ಮಾಡುವುದಕ್ಕಾಗಿ ಯಾವುದೇ ಪ್ರದೇಶದಲ್ಲಿ ನಿವೇಶನಗಳು /

ಮನೆಗಳನ್ನು ಮೀಸಲಿಡಬಹುದು ಮತ್ತು ವ್ಯಕ್ತಿಗಳ ಅಂಥ ವರ್ಗವು ಯಾವ ಸ್ಥಳಗಳಲ್ಲಿ ಆ ನಿವೇಶನಗಳನ್ನು ರೂಪಿಸಲಾಗಿದೆಯೋ / ಮನೆಗಳನ್ನು ನಿರ್ಮಿಸಲಾಗಿದೆಯೋ ಆ ಸ್ಥಳಗಳಲ್ಲಿ ಇರುವಂಥ ನಗರ, ಪಟ್ಟಣ ಅಥವಾ ಇತರ ಸ್ಥಳಗಳಲ್ಲಿನ ಯಾವುದೇ ಕಚೇರಿಯ ಅಥವಾ ಸ್ಥಾಪನೆಯ ನೌಕರರನ್ನು ಒಳಗೊಂಡಿರಬಹುದು. ಮನೆಗಳ / ನಿವೇಶನಗಳ ಬಗ್ಗೆ ಅಧಿಸೂಚಿಸಿರುವ ಪ್ರತಿಯೊಂದು ಪ್ರದೇಶದಲ್ಲಿ ಮನೆಗಳ / ನಿವೇಶನಗಳ ಪ್ರತಿಯೊಂದು ವರ್ಗದಲ್ಲಿ ಶೇ. 10ರ ವರೆಗಿನ ವಿವೇಚನಾತ್ಮಕ ಕೋಟಾವನ್ನು ಮೀಸಲಿಡತಕ್ಕುದು. ಆದರೆ ಮಂಡಲಿಯು, ಆ ಕೋಟಾದ ಗರಿಷ್ಠ ಪ್ರಮಾಣದ ನಿವೇಶನ / ಮನೆಗಳನ್ನು ಸರ್ಕಾರದ ಪೂರ್ವಾನುಮೋದನೆ ಪಡೆದು ತನ್ನ ವಿವೇಚನೆ ಮೇರೆಗೆ ವಿಲೆ ಮಾಡತಕ್ಕದ್ದು."

**3. 2ನೇ ನಿಯಮದ ತಿದ್ದುಪಡಿ.**– ಮೂಲ ವಿನಿಯಮಗಳ 2ನೇ ನಿಯಮದ (ಎಂ) ಖಂಡದ ತರುವಾಯ, ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎನ್) "ಬಿಡಿ ನಿವೇಶನ / ಮನೆ" ಎಂದರೆ ಒಮ್ಮೆ ಹಂಚಿಕೆಯಾದ ಆದರೆ ತರುವಾಯ ಮಂಡಲಿಯಿಂದ ಹಂಚಿಕೆಯನ್ನು ರದ್ದು ಮಾಡಿದ ಅಥವಾ ಹಂಚಿಕೆ ಪಡೆದವನು ಹಿಂದಿರುಗಿಸಿರುವ ನಿವೇಶನ / ಮನೆ ಅಥವಾ ನಿವೇಶನಗಳನ್ನು ಅಥವಾ ಮನೆಗಳನ್ನು ಹಂಚಿಕೆ ಮಾಡುವುದಕ್ಕೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಯೋಜನೆಯಲ್ಲಿ ಪುನರ್ ಹೊಂದಾಣಿಕೆಯ ಕಾರಣದಿಂದ ರಚಿಸಿದ / ನಿರ್ಮಿಸಿದ ನಿವೇಶನ / ಮನೆ."

**4. 4ಎ ಹೊಸ ನಿಯಮದ ಸೇರ್ಪಡೆ.**– ಮೂಲ ವಿನಿಯಮಗಳ 4ನೇ ನಿಯಮದ ತರುವಾಯ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"**4ಎ. ಬಿಡಿ ನಿವೇಶನಗಳು / ಮನೆಗಳ ಹಂಚಿಕೆ.**– ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು, ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಬಿಡಿ ನಿವೇಶನ / ಮನೆಯನ್ನು ವಿಲೆ ಮಾಡತಕ್ಕದ್ದು."

**5. ನಿರಸನ ಮತ್ತು ಉಳಿಸುವಿಕೆಗಳು.**– ಆದೇಶ ಸಂಖ್ಯೆ ಎಚ್‌ಯುಡಿ 14 ಕೆಎಚ್‌ಬಿ 84, ದಿನಾಂಕ: 14ನೇ ಆಗಸ್ಟ್, 1984, ಆದೇಶ ಸಂಖ್ಯೆ: ಎಚ್‌ಯುಡಿ 293 ಕೆಎಚ್‌ಬಿ 88, ದಿನಾಂಕ 15ನೇ ಫೆಬ್ರವರಿ, 1989 ಮತ್ತು ಆದೇಶ ಸಂಖ್ಯೆ ಎಚ್‌ಯುಡಿ 293 ಕೆಎಚ್‌ಬಿ 88, ದಿನಾಂಕ: 19ನೇ ಏಪ್ರಿಲ್, 1991 – ಇವುಗಳ ಮೂಲಕ ಜಾರಿಗೆ ಕೊಡಲಾದ ಮೂಲ ವಿನಿಯಮಗಳ ಎಲ್ಲಾ ಹಿಂದಿನ ತಿದ್ದುಪಡಿಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು ಸದರಿ ನಿಯಮದ ಹಿಂದಿನ ಜಾರಿಯನ್ನು ಅಥವಾ ಅದರ ಅಡಿಯಲ್ಲಿ ಕ್ರಮಬದ್ಧವಾಗಿ ಮಾಡಿದ ಅಥವಾ ಮಾಡಲು ಎಡೆಗೊಟ್ಟ ಯಾವುದೇ ಕೃತ್ಯವನ್ನು ಬಾಧಿಸತಕ್ಕದ್ದಲ್ಲ ಅಥವಾ ಸದರಿ ನಿಯಮದ ಅಡಿಯಲ್ಲಿ ಆರ್ಜಿಸಿದ ಅಥವಾ ಗುರಿಯಾದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆಗೆ ಪರಿಣಾಮ ಬೀರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಎಚ್. ನಂಜೇಗೌಡ**
ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ, (ಗೃಹ ನಿರ್ಮಾಣ).

# ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರರ) (ಗೃಹ ನಿರ್ಮಾಣ ಮಂಡಲಿಯ ಸೇವೆಗಳಲ್ಲಿ ಲೀನಗೊಳಿಸುವಿಕೆ) ನಿಯಮಗಳು, 1985

**ವಿಷಯಸೂಚಿ**

**ವಿನಿಯಮಗಳು**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
   (ಎ) ನಿರಂತರ ಸೇವೆ
   (ಬಿ) ನೇಮಕಾತಿ ಸಮಿತಿ
   (ಸಿ) ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ
3. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರನ್ನು ಗೃಹ ನಿರ್ಮಾಣ ಮಂಡಲಿಯ ಸೇವೆಯಲ್ಲಿ ಲೀನಗೊಳಿಸುವುದು
4. ಲೀನಗೊಂಡ ವ್ಯಕ್ತಿಗಳ ರಜೆ, ಸಂಬಳ, ನಿವೃತ್ತಿ ವೇತನ ಮತ್ತು ಸೇವಾ ಜೇಷ್ಠತೆ
5. ಇತರ ನಿಯಮಗಳ ಅನ್ವಯ

# ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರರ) (ಗೃಹ ನಿರ್ಮಾಣ ಮಂಡಲಿಯ ಸೇವೆಗಳಲ್ಲಿ ಲೀನಗೊಳಿಸುವಿಕೆ) ನಿಯಮಗಳು, 1985

**ಜಿಎಸ್‌ಆರ್ 102.–** ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10)ರ 10 ಎ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಓದಿಕೊಂಡ 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರರ) (ಗೃಹ ನಿರ್ಮಾಣ ಮಂಡಲಿಯ ಸೇವೆಗಳಲ್ಲಿ ಲೀನಗೊಳಿಸುವಿಕೆ) ನಿಯಮಗಳು, 1985ರ ಕರಡನ್ನು, ಅಧಿಸೂಚನೆ ಸಂಖ್ಯೆ ಹೆಚ್‌ಯುಡಿ 182 ಕೆಹೆಚ್‌ಬಿ 81, ದಿನಾಂಕ 2ನೇ ಫೆಬ್ರವರಿ 1985 ರಲ್ಲಿ ಅಧಿಸೂಚನೆ ಪ್ರಕಟವಾದ ಮೂವತ್ತು ದಿನಗಳ ಒಳಗಾಗಿ ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೋರಿ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV, 2(ಸಿ) (i), ದಿನಾಂಕ 4ನೇ ಫೆಬ್ರವರಿ, 1985 ರಲ್ಲಿ ಪ್ರಕಟಿಸಿರುವುದರಿಂದ,

ಮತ್ತು, ಸರ್ಕಾರವು, ಸದರಿ ಕರಡಿನ ಮೇಲೆ ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಈಗ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10)ರ 74ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರರ) (ಗೃಹ ನಿರ್ಮಾಣ ಮಂಡಲಿಯ ಸೇವೆಗಳಲ್ಲಿ ಲೀನಗೊಳಿಸುವಿಕೆ) ನಿಯಮಗಳು, 1985 ಎಂದು ಕರೆಯತಕ್ಕದ್ದು.

(2) ಇದು, [1][ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ][1] ಜಾರಿಗೆ ಬರತಕ್ಕದ್ದು.

1. ಅಧಿಸೂಚನೆ ಸಂಖ್ಯೆ 182 ಕೆಎಚ್‌ಬಿ 81, ದಿನಾಂಕ: 16.4.1985, ಕರ್ನಾಟಕ ರಾಜ್ಯಪತ್ರ, ದಿನಾಂಕ: 18.4.1985 ರಲ್ಲಿ ಪ್ರಕಟಿಸಲಾಗಿದೆ.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ನಿರಂತರ ಸೇವೆ"** ಎಂದರೆ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನು ತಾನು ನೇಮಕವಾದಂದಿನಿಂದ ಯಾವುದೇ ಭಂಗವಿಲ್ಲದೆ ಮುಂದುವರೆದಂಥ ಸೇವೆ. ಸಕ್ಷಮ ಪ್ರಾಧಿಕಾರವು ಕ್ರಮಬದ್ಧವಾಗಿ ಮಂಜೂರು ಮಾಡಿದ ರಜೆಯು ಮಾತ್ರ ನಿರಂತರ ಸೇವೆಯಲ್ಲಿ ಸೇರುತ್ತದೆ;

(ಬಿ) **"ನೇಮಕಾತಿ ಸಮಿತಿ"** ಎಂದರೆ 3ನೇ ನಿಯಮದ (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ನೇಮಕಾತಿ ಸಮಿತಿ;

(ಸಿ) **"ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ"** ಎಂದರೆ ಸಾಮಾನ್ಯ ಉಸ್ತುವಾರಿಯಿಂದ ವಿಭಿನ್ನವಾಗಿರುವ ಕಾಮಗಾರಿಯ ಅಥವಾ ನಿರ್ದಿಷ್ಟ ಯೋಜನೆಯ ಅಂಥ ಕಾಮಗಾರಿಗಳ ವಾಸ್ತವಿಕ ನಿರ್ವಹಣೆಯ ಮೇಲೆ ಅಥವಾ ಅಂಥ ಕಾಮಗಾರಿಗಳು ಅಥವಾ ಉಪಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಂಡಲಿಯ ಕೆಲಸ, ಸಾಮಗ್ರಿ ಮತ್ತು ಯಂತ್ರೋಪಕರಣಗಳ ಅಧೀನ ಉಸ್ತುವಾರಿಯ ಮೇಲೆ ನಿಯೋಜಿಸಿಕೊಂಡಂಥ ಸಿಬ್ಬಂದಿ.

**3. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರನ್ನು ಗೃಹ ನಿರ್ಮಾಣ ಮಂಡಲಿಯ ಸೇವೆಗಳಲ್ಲಿ ಲೀನಗೊಳಿಸುವುದು.–** (1) ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ನೇಮಕಾತಿ) ನಿಯಮಗಳಲ್ಲಿ ಮತ್ತು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿ ಏನೇ ಒಳಗೊಂಡಿದ್ದರೂ, 1978ರ ಜುಲೈ 1ನೇ ದಿನಾಂಕಕ್ಕಿಂತ ಮುಂಚೆ ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿಯಾಗಿ ನೇಮಕಗೊಂಡ ಮತ್ತು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ನಿರಂತರ ಸೇವೆಯನ್ನು ಸಲ್ಲಿಸಿದ ಹಾಗೂ ನಿಯತ ಕಾಲಿಕ ವೇತನ ಶ್ರೇಣಿಯನ್ನು ಹೊಂದಿದ ಪೂರ್ಣಕಾಲಿಕ ನೌಕರನಾಗಿರುವ ಪ್ರತಿಯೊಬ್ಬ ಸದಸ್ಯನು, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಸೇವೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಹುದ್ದೆಗಳ ಪ್ರವರ್ಗದಲ್ಲಿ ಲೀನಗೊಳಿಸತಕ್ಕುದು: ಪರಂತು, ಅಂಥ ಸದಸ್ಯನು ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ 30 ದಿನಗಳ ಒಳಗಾಗಿ ಲಿಖಿತದಲ್ಲಿ ಅಂಥ ಲೀನಗೊಳಿಸುವಿಕೆಗಾಗಿ ತನ್ನ ಆಯ್ಕೆಯನ್ನು ಚಲಾಯಿಸಿದ ಮತ್ತು ಆಯ್ಕೆ ಸಮಿತಿಯಿಂದ ಅಂಥ ಲೀನಗೊಳಿಸುವಿಕೆಗೆ ಸೂಕ್ತವೆಂದು ಕಂಡುಬಂದ ಹಾಗೂ ಅವನು ದೈಹಿಕವಾಗಿ ಸಮರ್ಥನೆಂದು ಕಂಡು ಬಂದ ಹೊರತು ಅವನನ್ನು ಲೀನಗೊಳಿಸತಕ್ಕದ್ದಲ್ಲ.

(2) ಲೀನವನ್ನು, ನಿರಂತರ ಸೇವೆಯ ಅವಧಿಗನುಗುಣವಾಗಿ ಸರ್ಕಾರವು ನಿರ್ಧರಿಸಬಹುದಾದಂಥ ಸಂಖ್ಯೆಯ ಐದು ವಾರ್ಷಿಕ ಕಂತುಗಳಲ್ಲಿ ಮಾಡತಕ್ಕದ್ದು.

(3) ಆಯ್ಕೆ ಸಮಿತಿಯು,-

(1) ಗೃಹ ಮಂಡಲಿ ಆಯುಕ್ತರು, ಕರ್ನಾಟಕ ಗೃಹ ನಿರ್ಮಾಣ ಮಂಡಲಿ;

(2) ಮುಖ್ಯ ಇಂಜಿನಿಯರ್, ಕರ್ನಾಟಕ ಗೃಹ ನಿರ್ಮಾಣ ಮಂಡಲಿ;

(3) ಕಾರ್ಯದರ್ಶಿ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ;

(4) ಸಂಬಂಧಪಟ್ಟ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್

– ಇವರುಗಳನ್ನು ಒಳಗೊಂಡಿರತಕ್ಕುದು.

**4. ಲೀನಗೊಂಡ ವ್ಯಕ್ತಿಗಳ ರಜೆ, ಸಂಬಳ, ನಿವೃತ್ತಿ ವೇತನ ಮತ್ತು ಜ್ಯೇಷ್ಠತೆ.–** ಈ ನಿಯಮಗಳ ಅಡಿಯಲ್ಲಿ ಲೀನಗೊಂಡ ವ್ಯಕ್ತಿಯ ರಜೆ ಮತ್ತು ನಿವೃತ್ತಿ ವೇತನವನ್ನು ನಿರ್ಧರಿಸುವುದಕ್ಕಾಗಿ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನಾಗಿ ಸಲ್ಲಿಸಿದ ಸೇವೆಯನ್ನು (ಕರ್ನಾಟಕ ಸಿವಿಲ್ ಸೇವಾ ನಿಯಮಗಳ ನಿಯಮ 248 ಎ ಮೂಲಕ ಅನುಮತಿಸಿರುವಷ್ಟರ ಮಟ್ಟಿಗೆ) ಪರಿಗಣಿಸತಕ್ಕುದ್ದು. ಆದರೆ, ಜ್ಯೇಷ್ಠತೆಯ ಉದ್ದೇಶಕ್ಕಾಗಿ ಈ ನಿಯಮಗಳ ಅಡಿಯಲ್ಲಿ ಲೀನಗೊಳಿಸಿದ ದಿನಾಂಕದಿಂದ ಸಲ್ಲಿಸಿದ ಸೇವೆಯನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**5. ಇತರ ನಿಯಮಗಳ ಅನ್ವಯ.–** ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966 ರಲ್ಲಿ ಒಳಗೊಂಡ ಉಪಬಂಧ ಹಾಗೂ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಇತರ ನೌಕರರಿಗೆ ಅನ್ವಯವಾಗುವ ಭಾರತ ಸಂವಿಧಾನದ 309ನೇ ಅನುಚ್ಛೇದದ ಉಪಬಂಧದ ಅಡಿಯಲ್ಲಿ ರಚಿಸಿದ ಗೃಹ ನಿರ್ಮಾಣ ಮಂಡಲಿ ಸೇವಾ ಷರತ್ತುಗಳನ್ನು ವಿನಿಯಮಿಸುವ ಎಲ್ಲಾ ಇತರ ನಿಯಮಗಳು, ಈ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಈ ನಿಯಮಗಳ ಮೇರೆಗೆ ಲೀನಗೊಂಡ ವ್ಯಕ್ತಿಗೆ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ. ವೀರಭದ್ರಯ್ಯ,**
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ (ವಸತಿ).

## ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರರ) (ಗೃಹನಿರ್ಮಾಣ ಮಂಡಲಿಯ ಸೇವೆಯಲ್ಲಿ ಲೀನಗೊಳಿಸುವಿಕೆ) ನಿಯಮಗಳು, 1999

ನಿಯಮಗಳ ಅನುಕ್ರಮಣಿಕೆ

ನಿಯಮಗಳು:


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರನ್ನು ಗೃಹ ನಿರ್ಮಾಣ ಮಂಡಲಿಯ ಸೇವೆಯಲ್ಲಿ ಲೀನಗೊಳಿಸುವುದು
4. ಲೀನಗೊಂಡ ವ್ಯಕ್ತಿಗಳ ರಜೆ, ಸಂಬಳ, ನಿವೃತ್ತಿ ವೇತನ ಮತ್ತು ಜ್ಯೇಷ್ಠತೆ
5. ಇತರ ನಿಯಮಗಳ ಅನ್ವಯ

ಅನುಸೂಚಿ

## ಕರ್ನಾಟಕ ಸರ್ಕಾರ

ಸಂಖ್ಯೆ. ಡಿಡಿಹೆಚ್ 694 ಕೆಹೆಚ್‌ಬಿ 93 | ಕರ್ನಾಟಕ ಸರ್ಕಾರದ ಸಚಿವಾಲಯ-II
ಬೆಂಗಳೂರು, 8ನೇ ಜುಲೈ 1999

### ಅಧಿಸೂಚನೆ

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10)ರ 74ನೇ ಪ್ರಕರಣದೊಂದಿಗೆ ಓದಿಕೊಂಡಂತೆ 10ಎ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ರಚಿಸಲು ಉದ್ದೇಶಿಸಿರುವ ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರರು) (ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಸೇವೆಯಲ್ಲಿ ಲೀನಗೊಳಿಸುವ) ನಿಯಮಗಳು, 1999ರ ಕರಡನ್ನು ಅಧಿಸೂಚನೆ ಸಂಖ್ಯೆ ಡಿಓಹೆಚ್ 694 ಕೆಹೆಚ್‌ಬಿ 93, ದಿನಾಂಕ 4ನೇ ಮಾರ್ಚ್, 1999 ರಲ್ಲಿ ಅಧಿಸೂಚನೆ ಪ್ರಕಟವಾದ ಮೂವತ್ತು ದಿನಗಳೊಳಗಾಗಿ ಅದರಿಂದ ಬಾಧಿತರಾಗಬಹುದಾದಂಥ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಕೋರಿ 1999 ರ ಮಾರ್ಚ್ 6ನೇ ದಿನಾಂಕದ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV 2ಸಿ (i) ರಲ್ಲಿ ಪ್ರಕಟಿಸಿರುವುದರಿಂದ;

ಮತ್ತು, ಸರ್ಕಾರವು ಸದರಿ ಕರಡಿನ ಮೇಲೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10)ರ 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಎಂದರೆ:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ನೌಕರ) (ಗೃಹ ನಿರ್ಮಾಣ ಮಂಡಲಿ ಸೇವೆಗಳಲ್ಲಿ ಲೀನಗೊಳಿಸುವಿಕೆ) ನಿಯಮಗಳು, 1999 ಎಂದು ಕರೆಯತಕ್ಕದ್ದು.

(2) ಅವು [1][ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ][1] ಜಾರಿಗೆ ಬರತಕ್ಕದ್ದು.

1. ಕರ್ನಾಟಕ ರಾಜ್ಯ ಪತ್ರ ಭಾಗ IV, 2ಸಿ(i) (ವಿಶೇಷ ಸಂಚಿಕೆ) ಸಂಖ್ಯೆ 863 ದಿನಾಂಕ: 17.7.1999 ರಲ್ಲಿ ಪ್ರಕಟಿಸಲಾಗಿದೆ.

**2. ಪರಿಭಾಷೆಗಳು.**- ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು,-

(ಎ) "ನಿರಂತರ ಸೇವೆ" ಎಂದರೆ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನು ತಾನು ನೇಮಕವಾದಾಗಿನಿಂದ ಯಾವುದೇ ಭಂಗವಿಲ್ಲದೆ ಮುಂದುವರೆದಂಥ ಸೇವೆ. ಸಕ್ಷಮ ಪ್ರಾಧಿಕಾರವು ಕ್ರಮಬದ್ಧವಾಗಿ ಮಂಜೂರು ಮಾಡಿದ ರಜೆಯು ಮಾತ್ರ ನಿರಂತರ ಸೇವೆಯಲ್ಲಿ ಸೇರುತ್ತದೆ;

(ಬಿ) "ಪರಿಶೋಧನಾ ಸಮಿತಿ" ಎಂದರೆ 3ನೇ ನಿಯಮದ (3)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಪರಿಶೋಧನಾ ಸಮಿತಿ;

(ಸಿ) "ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ" ಎಂದರೆ ಸಾಮಾನ್ಯ ಉಸ್ತುವಾರಿಯಿಂದ ವಿಭಿನ್ನವಾಗಿರುವ ನಿರ್ದಿಷ್ಟ ಕಾಮಗಾರಿಯ ಅಥವಾ ನಿರ್ದಿಷ್ಟ ಯೋಜನೆಯ ಅಂಥ ಕಾಮಗಾರಿಗಳ ವಾಸ್ತವಿಕ ನಿರ್ವಹಣೆಗೆ ಅಥವಾ ಅಂಥ ಕಾಮಗಾರಿಗಳು ಅಥವಾ ಉಪಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಂಡಲಿಯ ಕೆಲಸ, ಸಾಮಗ್ರಿ ಮತ್ತು ಯಂತ್ರೋಪಕರಣಗಳ ಅಧೀನ ಉಸ್ತುವಾರಿಗೆ ನಿಯೋಜಿಸಿಕೊಂಡಂಥ ಸಿಬ್ಬಂದಿ.

**3. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರನ್ನು ಗೃಹ ನಿರ್ಮಾಣ ಮಂಡಲಿಯ ಸೇವೆಗಳಲ್ಲಿ ಲೀನಗೊಳಿಸವುದು.**- (1) ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು, 1993 ರಲ್ಲಿ ಏನೇ ಒಳಗೊಂಡಿದ್ದರೂ, 01.07.1978 ರಂದು ಅಥವಾ ಆ ತರುವಾಯ ಆದರೆ, 01.07.1984 ಕ್ಕಿಂತ ಮುಂಚಿತವಾಗಿ ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿಯಾಗಿ ನೇಮಕಗೊಂಡ ಹಾಗೂ ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ನಿರಂತರ ಸೇವೆ ಸಲ್ಲಿಸಿದ ಮತ್ತು ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ (ಇದರಲ್ಲಿ ಇನ್ನು ಮುಂದೆ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನೆಂದು ಉಲ್ಲೇಖಿಸಿದೆ) ನಿಯತಕಾಲಿಕ ವೇತನ ಶ್ರೇಣಿಯನ್ನು ಹೊಂದಿರುವ ಪೂರ್ಣಕಾಲಿಕ ನೌಕರನಾದ ಪ್ರತಿಯೊಬ್ಬ ನೌಕರನನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಸೇವೆಯಲ್ಲಿ ಕರ್ನಾಟಕ ಸರ್ಕಾರವು ಅಧಿಸೂಚನೆ ಹೊರಡಿಸಬಹುದಾದಂಥ ಹುದ್ದೆಗಳ ಪ್ರವರ್ಗದಲ್ಲಿ ಲೀನಗೊಳಿಸತಕ್ಕದ್ದು.

ಪರಂತು, ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಲಿಖಿತದಲ್ಲಿ ಅಂಥ ಲೀನಗೊಳಿಸುವಿಕೆಗಾಗಿ ತನ್ನ ಆಯ್ಕೆಯನ್ನು ಚಲಾಯಿಸಿದ ಹೊರತು ಮತ್ತು ಪರಿಶೋಧನಾ ಸಮಿತಿಯಿಂದ ಅಂಥ ಲೀನಗೊಳಿಸುವಿಕೆಗೆ ಯುಕ್ತವೆಂದು ಕಂಡುಬಂದರೆ ಹಾಗೂ ಅವನು ದೈಹಿಕವಾಗಿ ಸಮರ್ಥನಾಗಿದ್ದರೆ ಮಾತ್ರ ಅವನನ್ನು ಲೀನಗೊಳಿಸತಕ್ಕದ್ದು.

(2) ಲೀನಗೊಳಿಸುವಿಕೆಯನ್ನು ನಿರಂತರ ಸೇವೆಯ ಅವಧಿಗನುಗುಣವಾಗಿ ಸರ್ಕಾರವು ನಿರ್ಧರಿಸಬಹುದಾದಂಥ ಸಂಖ್ಯೆಯ ಐದು ವಾರ್ಷಿಕ ಕಂತುಗಳಲ್ಲಿ ಮಾಡಾತಕ್ಕದ್ದು.

(3) ಪರಿಶೋಧನಾ ಸಮಿತಿಯು,-

(i) ಗೃಹ ಮಂಡಲಿ ಆಯುಕ್ತರು, ಕರ್ನಾಟಕ ಗೃಹ ಮಂಡಲಿ;

(ii) ಮುಖ್ಯ ಇಂಜಿನಿಯರ್, ಕರ್ನಾಟಕ ಗೃಹ ಮಂಡಲಿ;

(iii) ಕಾರ್ಯದರ್ಶಿ, ಕರ್ನಾಟಕ ಗೃಹ ಮಂಡಲಿ;

(iv) ಸಂಬಂಧಪಟ್ಟ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್

– ಇವರುಗಳನ್ನು ಒಳಗೊಂಡಿರತಕ್ಕದ್ದು.

(4) ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೊಳಪಟ್ಟು, ಪರಿಶೋಧನಾ ಸಮಿತಿಯು, ಆಯ್ಕೆಗಾಗಿ ತನಗೆ ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(5) ಪರಿಶೋಧನಾ ಸಮಿತಿಯು, ದೈಹಿಕವಾಗಿ ಸಮರ್ಥರಾದಂಥ ಹಾಗೂ ಜ್ಯೇಷ್ಠತೆಯ ಆಧಾರದ ಮೇಲೆ ಲೀನಗೊಳಿಸಲು ಸೂಕ್ತವಾಗಿರುವಂಥ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರ ಪಟ್ಟಿಯನ್ನು ಸಿದ್ಧಪಡಿಸತಕ್ಕುದು ಹಾಗೂ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ಸರ್ಕಾರವು, ನಿರಂತರ ಸೇವೆಯ ಅವಧಿಗನುಗುಣವಾಗಿ ನಿರ್ಧರಿಸಬಹುದಾದಂಥ ಸಂಖ್ಯೆಯ ಕಂತುಗಳಲ್ಲಿ ಲೀನಗೊಳಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ಅಧಿಸೂಚಿಸತಕ್ಕದ್ದು.

(6) ಪ್ರತಿಯೊಬ್ಬ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನನ್ನು, ಅವನು ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನೆಂದು ನೇಮಕವಾದ ಹುದ್ದೆಗೆ ಸಮಾನವಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಸೇವೆಯಲ್ಲಿನ ಹುದ್ದೆಯಲ್ಲಿ ಲೀನಗೊಳಿಸತಕ್ಕುದು ಮತ್ತು ಅವನಿಗೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಲ್ಲಿ ಸಮನಾದ ಹುದ್ದೆಯನ್ನು ಹೊಂದಿರುವ ಒಬ್ಬ ನೌಕರನಿಗೆ ಗ್ರಾಹ್ಯವಾಗುವ ವೇತನ ಶ್ರೇಣಿಯನ್ನು ಅಥವಾ ಅವನು ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನಾಗಿ ಕಾರ್ಯನಿರ್ವಹಿಸುವಾಗ ಪಡೆಯುವ ವೇತನ ಶ್ರೇಣಿಯನ್ನು, ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಡೆಯಲು ಅನುಮತಿಸತಕ್ಕುದು. ಆದರೆ, ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿಯಲ್ಲಿ ಇರುವ ವರ್ಕ್ ಇನ್ಸ್‌ಪೆಕ್ಟರ್ ಸಂಬಂಧದಲ್ಲಿ, ಅವನನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಲ್ಲಿನ ವರ್ಕ್ ಇನ್ಸ್‌ಪೆಕ್ಟರ್‌ಗೆ ಅನ್ವಯವಾಗುವ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯಲ್ಲಿ ಲೀನಗೊಳಿಸತಕ್ಕದ್ದು. ನಿಯತ ಕಾರ್ಯಸಂಸ್ಥೆಯಲ್ಲಿ ಸಾಕಷ್ಟು ಸಂಖ್ಯೆಯ ಖಾಲಿ ಹುದ್ದೆಗಳು ಇರದಿದ್ದರೆ, ಹಣಕಾಸು ಇಲಾಖೆಯಲ್ಲಿ ಸರ್ಕಾರದ ನಿರ್ದಿಷ್ಟ ಅನುಮೋದನೆ ಪಡೆದುಕೊಂಡು ಅಗತ್ಯವಿರುವಷ್ಟು ಸಂಖ್ಯೆಯ ಸಂಖ್ಯಾತಿರಿಕ್ತ ಹುದ್ದೆಗಳನ್ನು ಸೃಜಿಸುವ ಮೂಲಕ ಖಾಲಿ ಹುದ್ದೆಗಳನ್ನು ಹೆಚ್ಚಿಸಬಹುದು ಮತ್ತು ಆ ಹುದ್ದೆಗಳ ಅವಧಿಯು ಪದಧಾರಕನು ಸಲ್ಲಿಸುವ ಸೇವಾವಧಿ ಮುಗಿಯುವವರೆಗೂ ಇರತಕ್ಕದ್ದು.. ಕೆಲಸಕ್ಕೆ ತಕ್ಕ ಹಣ ಪಡೆಯುವ ಸಿಬ್ಬಂದಿ ಸಂಖ್ಯೆಯನ್ನು ನಿಯತಕಾರ್ಯ ಸಂಸ್ಥೆಯಲ್ಲಿ ಲೀನಗೊಳಿಸುವಷ್ಟರ ಮಟ್ಟಿಗೆ ನೌಕರರ ಸಂಖ್ಯೆಯನ್ನು ಕಡಿಮೆಗೊಳಿಸತಕ್ಕದ್ದು.

ಪರಂತು, ಮೀಸಲಾತಿಗಳಿಗೆ ಅವಕಾಶವಿರುವ ಸರ್ಕಾರದ ಆದೇಶದ ಅಡಿಯಲ್ಲಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಅಭ್ಯರ್ಥಿಗಳಿಂದ ಭರ್ತಿಮಾಡಲು ಮೀಸಲಿರಿಸಿದ ಯಾವುದೇ ಹುದ್ದೆಗೆ ಪ್ರತಿಯಾಗಿ ಲೀನಗೊಳಿಸಬೇಕಾದ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರ ಪೈಕಿ ಈ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಲಭ್ಯವಿದ್ದ ಹೊರತು ಈ ನಿಯಮಗಳ ಅಡಿಯಲ್ಲಿ ನೇಮಕಾತಿಯನ್ನು ಮಾಡತಕ್ಕದ್ದಲ್ಲ. ಅನ್ಯಥಾ ಅಂಥ ಹುದ್ದೆಗಳನ್ನು, ಆ ವರ್ಗಗಳಿಂದ ನೇಮಕಾತಿ ಪ್ರಕ್ರಿಯೆಯ ಮೂಲಕ ಭರ್ತಿಮಾಡಬೇಕಾದ ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸತಕ್ಕದ್ದು.

**4. ಲೀನಗೊಂಡ ವ್ಯಕ್ತಿಗಳ ರಜೆ, ಸಂಬಳ, ನಿವೃತ್ತಿ ವೇತನ ಮತ್ತು ಜ್ಯೇಷ್ಠತೆ.–** ಈ ನಿಯಮಗಳ ಅಡಿಯಲ್ಲಿ ಲೀನಗೊಂಡ ವ್ಯಕ್ತಿಯ ರಜೆ ಮತ್ತು ನಿವೃತ್ತಿ ವೇತನವನ್ನು ನಿರ್ಧರಿಸುವುದಕ್ಕಾಗಿ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರನಾಗಿ ಸಲ್ಲಿಸಿದ ಸೇವೆಯನ್ನು (ಕರ್ನಾಟಕ ಸಿವಿಲ್ ಸೇವಾ ನಿಯಮಗಳ 248ಎ ನಿಯಮದ ಮೂಲಕ ಅನುಮತಿಸಿರುವಷ್ಟರ ಮಟ್ಟಿಗೆ) ಪರಿಗಣಿಸತಕ್ಕದ್ದು. ಆದರೆ, ಜ್ಯೇಷ್ಠತೆಯ ಉದ್ದೇಶಕ್ಕಾಗಿ, ಈ ನಿಯಮಗಳ ಅಡಿಯಲ್ಲಿ ಲೀನಗೊಂಡ ದಿನಾಂಕದಿಂದ ಸಲ್ಲಿಸಿದ ಸೇವೆಯನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**5. ಇತರ ನಿಯಮಗಳ ಅನ್ವಯ.–** ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಮತ್ತು ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978ರ ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆಯೆಂದು ಭಾವಿಸಲಾದ ಇತರ ಎಲ್ಲಾ ನಿಯಮಗಳ ಮತ್ತು ಕರ್ನಾಟಕ ಗೃಹ ಮಂಡಳಿಯ ನೌಕರರಿಗೆ ಅನ್ವಯವಾಗುವ ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1993ರ ಉಪಬಂಧಗಳು ಈ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಈ ನಿಯಮಗಳ ಅಡಿಯಲ್ಲಿ ಲೀನಗೊಂಡ ಕೆಲಸಕ್ಕೆ ತಕ್ಕ ಹಣ ಪಡೆಯುವ ನೌಕರರಿಗೆ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಿ. ಕೃಷ್ಣಯ್ಯ,**
ಸರ್ಕಾರದ ಅಧೀನ ಕಾರ್ಯದರ್ಶಿ,
ವಸತಿ ಇಲಾಖೆ.

## ಅನುಸೂಚಿ

### ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಲ್ಲಿ ಲೀನಗೊಳಿಸುವ ಕೆಲಸಕ್ಕೆತಕ್ಕ ಹಣ ಪಡೆಯುವ ನೌಕರರ ಹೆಸರು.

| ಕ್ರ.ಸಂ. | ಹೆಸರು |
|---|---|
| 1. | ಚಿಕ್ಕಮುನಿಯಪ್ಪ |
| 2. | ಎ. ಬೋರಯ್ಯ |
| 3. | ಎಚ್.ಎಂ. ಮಹಾದೇವಯ್ಯ |
| 4. | ಎಚ್. ಕೃಷ್ಣ |
| 5. | ಜಿ. ಮರಿಯಪ್ಪ |
| 6. | ಎಚ್.ಎಸ್. ಗಂಗಾಧರಯ್ಯ |
| 7. | ಸಿ. ಚಿಕ್ಕಯ್ಯ |
| 8. | ಹಿರಿಯಪ್ಪ |
| 9. | ರಂಗಪ್ಪ |
| 10. | ಬಿ.ಎಂ. ದಾಸಯ್ಯ |
| 11. | ಶಿವಯ್ಯ |
| 12. | ಎಸ್. ಕೋನಯ್ಯ |
| 13. | ಚಿನ್ನಮ್ಮ |
| 14. | ಚೆಲುವಮ್ಮ |
| 15. | ಯರಪ್ಪಾ |
| 16. | ಹರಿಕೃಷ್ಣ |
| 17. | ವೆಂಕಟರಾಮಯ್ಯ |
| 18. | ಗಂಗಮ್ಮ |
| 19. | ಟಿ.ಕೆ. ರಾಮಯ್ಯ |
| 20. | ಚಿನ್ನಸ್ವಾಮಿ |
| 21. | ಎಚ್.ಎಂ. ಮಹಾದೇವಯ್ಯ |
| 22. | ಲೀಲಾಮೃತಚಾರ್ |
| 23. | ಎಸ್. ನಾರಾಯಣ |
| 24. | ಚನ್ನಪ್ಪ |
| 25. | ಕೆ. ಅರವಿಂದ ನೀಗ್ಲೆ |
| 26. | ಎಂ.ಬಿ. ಜವರೇಗೌಡ |
| 27. | ಆರ್. ಲೋಕೇಶಮೂರ್ತಿ |
| 28. | ಜಿ. ಗೋವಿಂದೇಗೌಡ |
| 29. | ಎಸ್.ವಿ. ಸೋಮಣ್ಣ |
| 30. | ಕೆ. ಹೊಂಗಯ್ಯ |
| 31. | ಸೈಯದ್ ಜುಬೇರ್ ಅಹ್ಮದ್ |
| 32. | ಇಮಾಮಹುಸೇನ |
| 33. | ಗುರಪ್ಪ |
| 34. | ಬಾಬುರಾವ್ |
| 35. | ವೆಂಕಟಸ್ವಾಮಿ |
| 36. | ಜಿ. ಮಾರಪ್ಪ |
| 37. | ಲಿಂಗಪ್ಪ |
| 38. | ವಿ.ಎ. ಯರಗಟ್ಟಿ |
| 39. | ವಿ.ಎಂ. ನಾಗನಗೌಡ |
| 40. | ಪಿ.ಟಿ. ಸೋಮಯ್ಯ |
| 41. | ಸಿ. ಹನುಮಂತು |
| 42. | ಕುಪ್ಪಸ್ವಾಮಿ |
| 43. | ಆರ್.ಎಸ್. ಮಾನೆ |
| 44. | ಕೆ.ಎಂ. ಮುನಿವೆಂಕಟಸ್ವಾಮಿ |
| 45. | ರಾಮಯ್ಯ ಎಂ.ಸಿ. |
| 46. | ಮಹಾದೇವಯ್ಯ |

ಡಿ. ಕೃಷ್ಣಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ, ವಸತಿ ಇಲಾಖೆ.

# [1][ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಇಲಾಖಾ ಪರೀಕ್ಷೆ ನಿಯಮಗಳು

1. ಅಧಿಸೂಚನೆ ಸಂಖ್ಯೆ ಪಿಹೆಚ್‌ಎಸ್ 33 ಜೆಎಚ್‌ಎ 60, ದಿನಾಂಕ: 20.1.1962 ಇದನ್ನು ಕರ್ನಾಟಕ ರಾಜ್ಯ ಪತ್ರ ದಿನಾಂಕ; 25.1.1962 ರಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1955 (1955ರ ಕರ್ನಾಟಕ ಅಧಿನಿಯಮ 20)ರ 13(5)ನೇ ಪ್ರಕರಣದೊಂದಿಗೆ ಓದಿಕೊಂಡ 61ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಲಾಗಿದೆ ಮತ್ತು ನಿಯಮಿಸಲಾಗಿದೆ.

**1. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ನೌಕರರು ಈ ಕೆಳಕಂಡ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.–**

| | |
|---|---|
| Iನೇ ದರ್ಜೆ ಗುಮಾಸ್ತ | ಅಕೌಂಟ್ಸ್ (ಹೈಯರ್) |
| IIನೇ ದರ್ಜೆ ಗುಮಾಸ್ತ | ಅಕೌಂಟ್ಸ್ (ಲೋಯರ್) |

ಮಂಡಲಿಗೆ ನೇರನೇಮಕಾತಿಗೊಂಡವರು ಮಾತ್ರ ಮೇಲೆ ನಮೂದಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. IIನೇ ದರ್ಜೆಯಿಂದ Iನೇ ದರ್ಜೆಗೆ ಬಡ್ತಿ ಹೊಂದಲು ಅಧಿಕಾರಿಗಳು ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿಲ್ಲ. Iನೇ ದರ್ಜೆಗಿಂತ ಮೇಲೆ ಬಡ್ತಿ ಹೊಂದಲು ನೌಕರರು ಅವರನ್ನು ಬಡ್ತಿಗೆ ಪರಿಗಣಿಸುವುದಕ್ಕೆ ಮುಂಚೆ ಅಕೌಂಟ್ಸ್ (ಹೈಯರ್) ಮತ್ತು ಜನರಲ್ ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.

**ಟಿಪ್ಪಣಿ.–** 'ಜನರಲ್ ಲಾ' ಪರೀಕ್ಷೆಗೆ ಸಂಬಂಧಪಟ್ಟಂತೆ ಕಾನೂನು ಪದವೀಧರರು ಪತ್ರಿಕೆ IIನ್ನು ಮಾತ್ರ ತೆಗೆದುಕೊಳ್ಳಬೇಕು; ಪತ್ರಿಕೆ II ನ್ನು ಗೆಜೆಟೆಡ್ ಅಧಿಕಾರಿಗಳಿಗೆ ಮಾತ್ರ ನಿಗದಿಪಡಿಸಿದೆ.

2. ನೌಕರರು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು 1962ರ ಜನವರಿ 1 ರಿಂದ (ಅಥವಾ ಮಂಡಲಿಯು ನೇಮಕಮಾಡಿದ ದಿನಾಂಕದಿಂದ) ಎರಡು ವರ್ಷಗಳ ಅವಧಿಯನ್ನು ನೀಡಲಾಗಿದೆ. ಈ ಅವಧಿಯಲ್ಲಿ ಅವರು ಮುಂದಿನ ಉನ್ನತ ದರ್ಜೆಗೆ ಬಡ್ತಿಯನ್ನು ಹೊಂದಲು ಅರ್ಹರಾಗಿರುತ್ತಾರೆ.

3. 1964ರ ಜನವರಿ 1ರ ಒಳಗೆ 45 ವರ್ಷಗಳ ವಯಸ್ಸು ಪೂರ್ಣಗೊಳಿಸಿದಂಥ ಅಧಿಕಾರಿಗಳು, ವೇತನ ಬಡ್ತಿಗಳನ್ನು ಪಡೆಯುವ ಉದ್ದೇಶಕ್ಕಾಗಿ ಹಾಗೂ ಅವರು ವಿನಾಯಿತಿ ಪಡೆದ ದರ್ಜೆಯಲ್ಲಿ ಖಾಯಂ ಆಗಲು, ಗೊತ್ತುಪಡಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದರಿಂದ ವಿನಾಯಿತಿ ಪಡೆಯುತ್ತಾರೆ. ಆದರೆ, ಬಡ್ತಿಗೆ ಅದು ಅನ್ವಯಿಸುವುದಿಲ್ಲ.

4. ಗೊತ್ತುಪಡಿಸಿದ ಪರೀಕ್ಷೆಗಳನ್ನು ಉತ್ತೀರ್ಣರಾಗಲು ಅನುಮತಿಸಿದ ಅವಧಿಯಲ್ಲಿ ಎಂದರೆ, 1964ರ ಜನವರಿ 1ರ ವರೆಗೂ, ನೌಕರನನ್ನು, ಅವನು ಗೊತ್ತುಪಡಿಸಿದ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣನಾಗುವವರೆಗೆ ಮತ್ತು ಉತ್ತೀರ್ಣನಾದ ಹೊರತು ಅಥವಾ ಅವನು ಪ್ಯಾರಾ 3 ರಲ್ಲಿ ಹೇಳಲಾದ ವಿನಾಯಿತಿಯನ್ನು ಪಡೆಯುವವರೆಗೆ ಮತ್ತು ಪಡೆದ ಹೊರತು ಖಾಯಂಗೊಳಿಸತಕ್ಕದ್ದಲ್ಲ.

5. 2 ವರ್ಷಗಳ ಅವಧಿಯಲ್ಲಿ ಇಲಾಖಾ ಪರೀಕ್ಷೆಗಳನ್ನು ಉತ್ತೀರ್ಣರಾಗಲು ವಿಫಲವಾದಲ್ಲಿ ವೇತನ ಬಡ್ತಿಗಳನ್ನು ತಡೆಹಿಡಿಯತಕ್ಕದ್ದಲ್ಲ.

6. ನೌಕರನನ್ನು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಲು ಅಗತ್ಯಪಡಿಸಿದ್ದು, ಆದರೆ ಈ ಪರೀಕ್ಷೆಗಳಲ್ಲಿ ಉತ್ತೀರ್ಣನಾಗದಿದ್ದರೆ ಅವನ ವೇತನ ಬಡ್ತಿಗಳನ್ನು ಎರಡು ವರ್ಷಗಳು ಎಂದರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅನುಮತಿಸಿದ ಕಾಲದ ತರುವಾಯ,–

(ಎ) ಅವನು ಅರ್ಹನಾಗುವವರೆಗೂ; ಅಥವಾ

(ಬಿ) 45 ವರ್ಷ ಪೂರ್ಣವಾಗುವವರೆಗೂ ತಡೆಹಿಡಿಯತಕ್ಕದ್ದಲ್ಲ. ಎರಡೂ ಪ್ರಕರಣಗಳಲ್ಲಿ ತಡೆಹಿಡಿಯಲಾದ ವೇತನ ಬಡ್ತಿಗಳು ಸಂದಾಯವಾಗತಕ್ಕುದು. ಮತ್ತು ಯಾವುದೇ ವೇತನ ಬಡ್ತಿಗಳು ತಡೆಹಿಡಿಯದಿದ್ದರೆ ಹೇಗೋ ಹಾಗೆ ಅವನಿಗೆ ಭವಿಷ್ಯತ್ತಿನ ವೇತನ ಬಡ್ತಿಗಳು ಪ್ರಾಪ್ತವಾಗತಕ್ಕದ್ದು; ಆದರೆ, ಯಾವುದೇ ವೇತನ ಬಡ್ತಿಗಳನ್ನು ತಡೆಹಿಡಿಯದಿದ್ದರೆ ಹೇಗೋ ಹಾಗೆ ಅವನಿಗೆ ಪ್ರಾಪ್ತವಾಗುವ ಬಾಕಿಯನ್ನು ಸಂದಾಯ ಮಾಡತಕ್ಕದ್ದಲ್ಲ. 45 ವರ್ಷ ಪೂರ್ಣಗೊಂಡ ಮೇಲೆ, ವೇತನ ಬಡ್ತಿಗಳ ಮಂಜೂರಾತಿಗಾಗಿ ಮತ್ತು ಖಾಯಂ ಆಗಲು ಅವನು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗುವುದರಿಂದ ವಿನಾಯಿತಿ ಪಡೆದಿದ್ದಾನೆಂದು ಭಾವಿಸತಕ್ಕದ್ದು, ಆದರೆ ಇದು ಬಡ್ತಿಗೆ ಅನ್ವಯಿಸತಕ್ಕದ್ದಲ್ಲ.

7. ಗೊತ್ತುಪಡಿಸಿದ ಅವಧಿಯೊಳಗಾಗಿ ನಿಗದಿಪಡಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ತಪ್ಪಿದ ಸಂದರ್ಭದಲ್ಲಿ 2ನೇ ಪ್ಯಾರಾದಲ್ಲಿ ಹೇಳಿದಂತೆ ಮುಂದಿನ ಉನ್ನತ ದರ್ಜೆಗೆ ಬಡ್ತಿ ಹೊಂದಿದ ನೌಕರನು ಅವನು ತಾತ್ಕಾಲಿಕವಾಗಿ ಯಾವ ದರ್ಜೆಯಿಂದ ಬಡ್ತಿ ಹೊಂದಿದನೋ ಆ ಹುದ್ದೆಗೆ ಹಿಮ್ಮರಳುತ್ತಾನೆ ಮತ್ತು ಅರ್ಹ ವ್ಯಕ್ತಿಗಳಿಂದ ಆ ಹುದ್ದೆಗೆ ಬಡ್ತಿ ನೀಡತಕ್ಕದ್ದು.

8. ಸರ್ಕಾರಿ ನೌಕರರಿಗಾಗಿ, ಸರ್ಕಾರವು ಗೊತ್ತುಪಡಿಸಿರುವ ಕನ್ನಡ ಪರೀಕ್ಷೆಯಲ್ಲಿ ಸಹ ನೌಕರರು ಉತ್ತೀರ್ಣರಾಗಬೇಕು. ಮೇಲ್ಕಂಡ ನಿಯಮಗಳು ಈ ಪ್ರಕರಣದಲ್ಲಿ ಸಹ ಅನ್ವಯವಾಗುತ್ತವೆ.

9. ನೌಕರರು ಗೃಹ ಮಂಡಲಿಯು ನಡೆಸುವ ಇಲಾಖಾ ಪರೀಕ್ಷೆಗಳಾದ (ಎ) ಪ್ರೇಸೀಸ್ ರೈಟಿಂಗ್ ಮತ್ತು ಆಫೀಸ್ ಮ್ಯಾನುಯಲ್ (ಬಿ) ಗೃಹ ಮಂಡಲಿ ಅಧಿನಿಯಮ ಮತ್ತು ಅದರ ಮೇರೆಗಿನ ನಿಯಮಗಳು – ಇವುಗಳಲ್ಲಿ ಉತ್ತೀರ್ಣರಾಗಬೇಕು.

10. ಮೇಲ್ಕಂಡ ನಿಯಮಗಳು ಲಿಪಿಕ ಮತ್ತು ಕಾರ್ಯನಿರ್ವಾಹಕ ಈ ಎರಡೂ ವೃಂದಗಳ ನೌಕರರಿಗೆ ಅನ್ವಯಿಸುತ್ತವೆ. ಆದರೆ, ಎರವಲು ಸೇವೆಯ ನೌಕರರಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ. ಯಾವ ಇಲಾಖೆಗಳಿಂದ ಅವರನ್ನು ಎರವಲು ತೆಗೆದುಕೊಳ್ಳಲಾಗಿದೆಯೋ ಆ ಇಲಾಖೆಗಳ ನಿಯಮಗಳಿಗೆ ಅವರು ಒಳಪಟ್ಟಿರುತ್ತಾರೆ.

* * *

The above translation of the Karnataka Housing Board Act, 1962, (Karnataka Act 10 of 1963) and Karnataka Housing Board Rules, 1961 shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಪಿ.ಆರ್. 975

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.